S.T. Aralelimath

# ಸುಭಾಷಿತ ಸಂಗ್ರಹ

(ಭಾಗ-೨)

ಶ್ರೀ ಶ್ರೀ ಆನಂದಮೂರ್ತಿ

ಪ್ರಕಾಶಕರು:
ಆಚಾರ್ಯ ನಾರಾಯಣಾನಂದ ಅವಧೂತ
**ಪ್ರಕಾಶನ ಸಚಿವ,**
ಆನಂದ ಮಾರ್ಗ ಪ್ರಚಾರಕ ಸಂಘ (ರಜಿ.)
**ಆನಂದ ನಗರ,**
ಪೋ. ಬಾಗಲತಾ.  ಜಿ. ಪುರೂಲಿಯ (ಪ. ಬಂಗಾಲ)

ನವಂಬರ 1984

ಪ್ರಥಮ ಮುದ್ರಣ:
**ಕ್ರಯ: ೮-೦೦**

ಅನುವಾದಕರು:
**ಎಸ್. ಆರ್. ಪಾಟೀಲ** ಬಿ. ಈ.

(ಗ್ರಂಥಕರ್ತರಿಂದ ಎಲ್ಲ ಹಕ್ಕುಗಳು ಕಾಯ್ದಿರಿಸಲ್ಪಟ್ಟಿವೆ)

ಮುದ್ರಣ:
ಫ. ಶಿ. ಭಾಂಡಗೆ
ತ್ವರಿತ ಮುದ್ರಣಾಲಯ
ಗಂಗಾಪೂರಪೇಟ, ಗದಗ—582 101

# ರೋಮನ್ ಸಂಸ್ಕೃತ

ಬೇರೆ ಬೇರೆ ಭಾಷೆಗಳ ಸರಿಯಾದ ಉಚ್ಚಾರಣೆ ಮಾಡುವುದನ್ನೂ ಮತ್ತು ಸರಳ ಲೇಖನ ಪ್ರಯೋಜನವನ್ನೂ ಮನದಂದು, ಕೆಳಗೆ ನೀಡಲಾದ ಪದ್ಧತಿಯಲ್ಲಿ ರೋಮನ್ ಸಂಸ್ಕೃತ ವರ್ಣಮಾಲೆಯನ್ನು ಹೊಂದಿಸಲಾಗಿದೆ.

ಅ ಆ ಇ ಈ ಉ ಊ ಋ ೠ ಲೃ ಲೄ ಏ ಐ ಓ ಔ ಅಂ ಅಃ
**अ आ इ ई उ ऊ ऋ ॠ ऌ ॡ ए ऐ ओ औ अं अः**
a a′ i ii u u′ r rr lr lrr e ae o ao am′ ah

ಕ ಖ ಗ ಘ ಙ ಚ ಛ ಜ ಝ ಞ ಟ ಠ ಡ ಢ ಣ
**क ख ग घ ङ च छ ज झ ञ ट ठ ड ढ ण**
ka kha ga gha uṋa ca cha ja jha iṋa t′a t′ha d′a d′ha n′a

ತ ಥ ದ ಧ ನ ಪ ಫ ಬ ಭ ಮ ಯ ರ ಲ ವ ಶ
**त थ द ध न प फ ब भ म य र ल व श**
ta tha da dha na pa pha ba bha ma ya ra la va sha

ಷ ಸ ಹ ಕ್ಷ
**ष स ह क्ष**
s′a sa ha ks′a

ಅँ ಜ್ಞ ಋಷಿ ಛಾಯಾ ಜ್ಞಾನ
**अँ ज्ञ ऋषि छाया ज्ञान**
aṋ jiṇa rs′i cha′ya′ jiṋa′na

## ಸಂಸ್ಕೃತ ತತೋऽಹಂ

## संस्कृत ततोऽहं

Sam′skrta tato′ham

A′nanda Ma′rga Praca′raka Sam′gha

a a′ b c d d′ e g h i j k l m m′ n n′ ṋ o p r s s′ t t′ u u′ v y.

ಸಮಗ್ರ ವಿಶ್ವದಲ್ಲಿ ಬಹಳ ಪ್ರಸಾರ ಹೊಂದಿದ, ರೋಮನ್ ಲಿಪಿಯ ಈ ೨೯ ಅಕ್ಷರಗಳಿಂದ ಸಂಸ್ಕೃತ ಭಾಷೆಯ ಸರಿಯಾದ ಉಚ್ಚಾರಣೆ ಮಾಡುವುದು ಸಾಧ್ಯವಿದೆ. ಇದರಲ್ಲಿ ಒತ್ತಕ್ಷರಗಳ ಗೊಂದಲವಿಲ್ಲ. ಅರಬ್ಬೀ, ಫಾರಸೀ ಮತ್ತು ಇತರೇತರ ಭಾಷೆಗಳಲ್ಲಿ f, q, qh, z, ಇತ್ಯಾದಿ ಅಕ್ಷರಗಳ ಪ್ರಯೋಜನವಿರುತ್ತದೆ; ಸಂಸ್ಕೃತದಲ್ಲಿಲ್ಲ.

ಶಬ್ದದ ಮಧ್ಯೆ ಇಲ್ಲವೆ ಕೊನೆಯಲ್ಲಿ ‘ಡ’ (ड-da) ಮತ್ತು ‘ಢ’ (ढ-dha) ಅನುಕ್ರಮವಾಗಿ ‘ಡ’ (ड़-r′a) ಮತ್ತು ‘ಢ’ (ढ़-r′ha) ರೂಪದಲ್ಲಿ ಉಚ್ಚಾರಿತವಾಗುತ್ತವೆ. ‘ಯ’ (ಎಲ್ಲಿ ‘ಯ’ದ ಉಚ್ಚಾರವು ಇಅ ಎಂದಾಗುವುದೋ) ದಂತೆ ಅವು ಸ್ವತಂತ್ರ ವರ್ಣಗಳಲ್ಲ. ಪ್ರಯೋಜನಾನುಸಾರ ಮತ್ತು ಅಸಂಸ್ಕೃತ ಶಬ್ದಗಳನ್ನು ಬರೆಯುವ ಕಾಲಕ್ಕೆ r′a ಮತ್ತು r′ha ಗಳನ್ನು ವ್ಯವಹರಿಸಬಹುದಾಗಿದೆ.

## ಚರಮ ನಿರ್ದೇಶ

ಯಾರು ನಿತ್ಯವೂ ಎರಡು ವೇಳೆ ಸಾಧನೆ ಮಾಡುವರೋ, ಅಂತ್ಯ ಸಮಯಕ್ಕೆ ಅವರ ಮನದಲ್ಲಿ ಪರಮ–ಪುರುಷನ ಭಾವನೆಯು ಅವಶ್ಯವಾಗಿ ಮೂಡುವುದು. ಈ ಪ್ರಕಾರ, ಅವನಿಗೆ ಮುಕ್ತಿ–ಪ್ರಾಪ್ತಿಯು ನಿಶ್ಚಯವಾಗಿ ಲಭಿಸಿಯೇ ತೀರುತ್ತದೆ. ಆದ್ದರಿಂದ, ಪ್ರತಿಯೊಬ್ಬ ಆನಂದಮಾರ್ಗಿಯು, ದಿನದ ಎರಡೂ ಹೊತ್ತು, ಸಾಧನೆ ಮಾಡಲೇಬೇಕಾಗುತ್ತದೆ. ಪರಮ–ಪುರುಷನ ನಿರ್ದೇಶನವೇ ಇದಾಗಿದೆ. ಯಮ–ನಿಯಮಗಳ ಪಾಲನೆಯಿಲ್ಲದೆ, ಸಾಧನೆಯು ಸಾಧ್ಯವಿಲ್ಲ. ಆದ್ದರಿಂದ, ಯಮ–ನಿಯಮಗಳ ಪಾಲನೆ ಮಾಡುವುದೂ ಸಹ, ಪರಮ–ಪುರುಷನ ನಿರ್ದೇಶನವೇ ಆಗಿದೆ. ಈ ನಿರ್ದೇಶನವನ್ನು ಅಮಾನ್ಯ ಮಾಡುವುದೆಂದರೆ, ಕೋಟ್ಯಂತರ ವರುಷಗಳ ವರೆಗೆ, ಪಶು ಜೀವನದ ಕಷ್ಟದ ಬೆಂಕಿಯಲ್ಲಿ ಬೆಂದು ಬೇಗುದಿಗೊಳ್ಳುವುದಾಗಿದೆ. ಯಾವ ಮನುಷ್ಯನೂ, ಅಂಥ ಕಷ್ಟದ ಬೆಂಕಿಯಲ್ಲಿ ಬಿದ್ದು, ದಗ್ಧವಾಗದಿರಲಿ; ಹಾಗಾದರೆ, ಪರಮ ಪುರುಷನ ಸ್ನೇಹದ ನೆರಳಲ್ಲಿ ಎಲ್ಲರೂ ಬಂದು, ಶಾಶ್ವತ ಶಾಂತಿಯ ಲಾಭ ಪಡೆಯಲಿ; ಆದ್ದರಿಂದ, ಸರ್ವ ಮನುಷ್ಯರನ್ನೂ ಆನಂದ ಮಾರ್ಗದ ಕಲ್ಯಾಣ–ಪಥದತ್ತ ತರುವ ಪ್ರಯತ್ನ ಮಾಡುವುದು, ಪ್ರತಿಯೋರ್ವ ಆನಂದಮಾರ್ಗಿಯ ಕರ್ತವ್ಯವಾಗಿದೆ. ಎರಡನೆಯವರಿಗೆ ಸತ್-ಪಥ ತೋರಿಸುವುದು ಸಾಧನೆಯ ಅಂಗವೇ ಆಗಿದೆ.

ಶ್ರೀ ಶ್ರೀ ಆನಂದಮೂರ್ತಿ

# ಪರಿವಿಡಿ


| ಕ್ರ.ಸಂಖ್ಯೆ | ವಿಷಯ | ಪುಟ |
|---|---|---|
| ೧. | ವೇದದಲ್ಲಿ ಬ್ರಹ್ಮವಿಜ್ಞಾನ–೧ | ೧ |
| ೨. | ವೇದದಲ್ಲಿ ಬ್ರಹ್ಮವಿಜ್ಞಾನ–೨ | ೧೭ |
| ೩. | ವೇದದಲ್ಲಿ ಬ್ರಹ್ಮವಿಜ್ಞಾನ–೩ | ೩೮ |
| ೪. | ವೇದದಲ್ಲಿ ಬ್ರಹ್ಮವಿಜ್ಞಾನ–೪ | ೬೪ |
| ೫. | ವೇದದಲ್ಲಿ ಬ್ರಹ್ಮವಿಜ್ಞಾನ–೫ | ೯೪ |


# ಒಂದು ನಿವೇದನೆ

ಮಾರ್ಗೀಯ ಕಾರ್ಯಕರ್ತರ ಒಟ್ಟಾರೆ ಪ್ರಯತ್ನದಿಂದ 'ಸುಭಾಷಿತ ಸಂಗ್ರಹ'ದ ಎರಡನೆಯ ಭಾಗವು ಪ್ರಕಾಶಿತವಾಗಿದೆ. ಈ ಗ್ರಂಥದಲ್ಲಿ 'ವೇದದಲ್ಲಿ ಬ್ರಹ್ಮವಿಜ್ಞಾನ' ಎಂಬ ಶೀರ್ಷಿಕೆಯ ಐದು ನಿಬಂಧಗಳಿವೆ. ನಾನು ವೇದಗಳ ವ್ಯಾಖ್ಯಾನಕಾರನೇನೂ ಅಲ್ಲ. ಬೇರೆ ಬೇರೆ ಮೌಲಿಕ ವಿಷಯಗಳೊಂದಿಗೆ ವೇದದ ಬೇರೆ ಬೇರೆ ಅಂಶಗಳ ಬೇರೆ ಬೇರೆ ಶ್ಲೋಕಗಳ ಬುನಾದಿಯ ಮೇಲೆ ನಾನು ಸ್ವಲ್ಪ ದಾರ್ಶನಿಕ ವ್ಯಾಖ್ಯೆ ಮಾಡಿದ್ದೇನಷ್ಟೇ; ಎಂದು ಇಲ್ಲಿ ಪ್ರಸ್ತಾಪಿಸುವುದು ಅಸಂಗತವಲ್ಲವಷ್ಟೇ?

ವೇದದಲ್ಲಿ ಏನೆಲ್ಲವೂ ಇದೆ; ವೇದವು ಅಪೌರುಷೇಯ: ಎಂಬೀ ಮತವಾದದ ಧಾರಕನೂ ನಾನಲ್ಲ; ವಾಹಕನೂ ನಾನಲ್ಲ; ಪರಿಪೋಷಕನೂ ನಾನಲ್ಲ. ನಾನು ಆನಂದ ಮಾರ್ಗದರ್ಶನದ ವ್ಯಾಖ್ಯೆ ಮಾಡಿದ್ದೇನೆ. ಮತ್ತು ಆ ಪ್ರಸಂಗದಲ್ಲಿ ಯಾವ ಶಾಸ್ತ್ರದ ಉಕ್ತಿ ಇಲ್ಲವೆ ಶ್ಲೋಕ ಇಲ್ಲವೆ ಋಕ್ ನನ್ನೆದುರು ಬಂದಿತೋ, ಅದನ್ನೇ ಶ್ರೋತೃಗಳಿಗೆ ಕೇಳಿಸಿರುವೆ. ಮತ್ತು ಅದರ ಆವಶ್ಯಕ ಅರ್ಥವನ್ನೂ ಸಹ ತಿಳಿಸಿರುವೆ. ಈ ಶ್ಲೋಕ ಇಲ್ಲವೆ ಉಕ್ತಿಗಳು ಎಷ್ಟೊಂದು ಭಾವವನ್ನು ನೀಡುವವೋ, ಅದಕ್ಕಿಂತ ಹೆಚ್ಚು ಮಾತುಗಳನ್ನು ನಾನು ಅನೇಕ ಕಡೆಗಳಲ್ಲಿ ಹೇಳಿರುವೆ. ಈ ಹೆಚ್ಚಿನ ಮಾತುಗಳು ಆ ಶ್ಲೋಕಗಳಲ್ಲಿ ಇಲ್ಲ. ಇವು ಆನಂದ ಮಾರ್ಗದ ಹೃದಯದ ನುಡಿಗಳು. ಇನ್ನು ಅನೇಕ ಕಡೆಗಳಲ್ಲಿ ಅನೇಕ ಶ್ಲೋಕಗಳ ಅರ್ಥವನ್ನು ಬಹು ಸಂಕ್ಷೇಪವಾಗಿ ನೀಡಿರುವೆ. ಅನೇಕ ಸ್ಥಾನಗಳಲ್ಲಿ ಆನಂದ ಮಾರ್ಗದ ದರ್ಶನದ ವ್ಯಾಖ್ಯೆಯನ್ನು ಇದಕ್ಕಿಂತ ಹೆಚ್ಚಾಗಿ ಹೇಳುವ ಅವಶ್ಯಕತೆ ಇರಲಿಲ್ಲ. ಆದ್ದರಿಂದ ನಾನು ಹಾಗೆ ಹೇಳಲಿಲ್ಲ.

ಈ ನಿಬಂಧಗಳು ನಮ್ಮ ಲಿಖಿತ ನಿಬಂಧಗಳಲ್ಲ; ಎಂದು ಇಲ್ಲಿ ಹೇಳುವುದು ಅನುಚಿತವಾಗಲಾರದು. ಪೂರ್ಣಿಮೆಯ ಮಹಾ ಚಕ್ರದಲ್ಲಿ, ನಾನು ಯಾವ ಭಾಷೆಯಲ್ಲಿ ಏನಿನಿತು ವ್ಯಾಖ್ಯಾನಿಸಿರುವೆನೋ,ಅವುಗಳನ್ನೇ ಇಲ್ಲಿ ಬಂಗಾಳಿಯಲ್ಲಿ, ಲಿಖಿತ, ಭಾಷೆಯಲ್ಲಿ ನೀಡಲಾಗಿದೆ. ಈ ಅಭಿಭಾಷಣಗಳಲ್ಲಿ ಬಹಳಷ್ಟನ್ನು ಹಿಂದಿಯಲ್ಲಿಯೇ ನೀಡಲಾಗಿದೆ. ಆದ್ದರಿಂದ, 'ಸುಭಾಷಿತ ಸಂಗ್ರಹ'ದ ಹಿಂದೀ ಸಂಸ್ಕರಣಕ್ಕೆ ಸರಿಯಾಗಿ ಅನುವಾದವೆಂದು ಕರೆಯಲಾರೆವು.

ನಿವೇದನಮಿತಿ,

ಗ್ರಂಥಕಾರ,

(ಹಿಂದೀ ಅನುವಾದ ಗ್ರಂಥಕ್ಕೆ ಬರೆದ ನಿವೇದನೆಯಿಂದ)

# ೧
# ವೇದದಲ್ಲಿ ಬ್ರಹ್ಮವಿಜ್ಞಾನ

ಆದಿ ಮಾನವನು ಮನದಲ್ಲಿ ಮೊತ್ತ ಮೊದಲು ಆರಾಧನೆಯ ವಾಸನೆಯು ಮೂಡಿದಾಗ, ಅವನು ಆರಂಭದಿಂದ ಜ್ಞಾನ ಸಂಪನ್ನ ಮತ್ತು ಶಕ್ತಿಶಾಲೀ ವ್ಯಕ್ತಿಯನ್ನು ತನಗೆ ಆರಾಧ್ಯರೆಂದು ಒಪ್ಪಿಕೊಂಡನು. ಈ ಅವಸ್ಥೆಗಿಂತ ಮೊದಲಂತೂ ಪ್ರಕೃತಿ ಪೂಜೆ ಅಂದರೆ ಜಡದ ಉಪಾಸನೆಯು ಪ್ರಚಲಿತವಿತ್ತು. ಬೆಟ್ಟ, ಹೊಳೆ, ಗಿಡಬಳ್ಳಿ, ಅರಣ್ಯ–ಸಾಗರ, ಉಷೆ–ಸಂಧ್ಯೆ ಇಲ್ಲವೆ ಗುಡುಗು–ಮಿಂಚುಗಳನ್ನು ಉಪಾಸಿಸಿದರೂ, ಅವನ ಮನದ ಹಸಿವು ಹಿಂಗಲಿಲ್ಲ. ಆಗ ಈಶ್ವರ ಆರಾಧನೆಯ ಹಾದಿಯಲ್ಲಿ, ಈ ವ್ಯಕ್ತಿ ಪೂಜೆಯ ಮಾಧ್ಯಮದಿಂದ, ಅವನು ತನ್ನ ಮೊದಲ ಹೆಜ್ಜೆಯನ್ನಿಟ್ಟನು. ಖಂಡ ವಸ್ತುವಿನ ಮೇಲೆ ಪೂರ್ಣ ಬ್ರಹ್ಮತ್ವವನ್ನು ಆರೋಪಿಸಿ, ಒಂದು ತರದ ಅವತಾರ ವಾದವು ಹುಟ್ಟಿಕೊಂಡಿತು.ಮತ್ತು ಪರಂಪರೆಯನ್ನನುಸರಿಸಿದ ಭಾವದಿಂದ ಧರ್ಮದ ಹೆಸರಿನಲ್ಲಿ, ಮಾನವ ಸಮಾಜದಲ್ಲಿ, ಬಹು ದಿನಗಳ ತನಕ, ಈ ಅವತಾರವಾದವು ನಡೆದು ಬಂದಿದೆ. ಆದರೆ ಮಾನವನ ಪ್ರಾಣದ ಹಸಿವು ಅನಂತವಾಗಿದೆ. ಜ್ಞಾನ ಮಂದಿರದಲ್ಲಿ ಸ್ವ-ರೂಪದಲ್ಲಿ, ಪ್ರತಿಷ್ಠಾಪಿತವಾಗುವ ಇಚ್ಛೆಯು ಸಾವಕಾಶವಾಗಿ, ಅವನನ್ನು ದರ್ಶನದ ಹಾದಿಯಲ್ಲಿ ತಂದಿರಿಸಿತು. ಈ ದಾರ್ಶನಿಕ ಜ್ಞಾನ ಚರ್ಚೆಯ ಫಲವಾಗಿ ಅವನ ವಿಚಾರಧಾರೆಯೂ ಸಹ, ಕ್ರಮೇಣ ಬದಲಾಯಿತು. ಅವನು ವಿಚಾರಿಸಲು ಪ್ರಾರಂಭಿಸಿದನು. ಖಂಡ ಸಾಂತದ ಪೂಜೆಯಿಂದ ಆ ಅನಾದಿ, ಅಖಂಡ, ಆನಂದ ಸ್ವರೂಪದಲ್ಲಿ ತಲುಪಿ ನೆಲೆಸುವುದು ಯಾವ ರೀತಿ ಸಂಭವವಿದೆ? ಅನಾದಿ, ಅನಂತ, ಅವ್ಯಕ್ತ, ವ್ಯಾಪಕ ಸತ್ತೆಯ ಅನುಭೂತಿಗೋಸುಗ ಅವನ ಹಸಿದ ಚಿತ್ತದಲ್ಲಿ, ಆ ಸುಪ್ರಭಾತದಲ್ಲಿ, ವಿರಾಟ

ಆಲೋಚನೆ, ಪ್ರಬಲ ಅಂತರ್ ಮಂಥನಗಳಾಗಲು ಶುರುವಾಯಿತು. ಮಾನವು ಯಾವುದಕ್ಕೆ ಸರ್ವಸತ್ತೆಯನ್ನು ನೀಡಿ, ಗ್ರಹಿಸುವುದೋ ಅದು ಹೇಗಿದೆ?

ಪ್ರಾಚೀನ ಕಾಲದಲ್ಲಿ, ಬ್ರಹ್ಮ ಭಾವನೆಯ ಪ್ರಥಮ ಮೊಳಕೆಯನ್ನು ಋಗ್ವೇದದಲ್ಲಿ ನೋಡಬಹುದು. ಯಜುರ್ವೇದದಲ್ಲಿ ಇದೇ ಮೊಳಕೆಯು ಅಸಂಖ್ಯೆ ರೆಂಬೆ–ಕೊಂಬೆಗಳನ್ನೊಳಗೊಂಡು ಒಟ್ಟಾರೆ ವಿಶಾಲ ವೃಕ್ಷವಾಗಿ ಪರಿಣಮಿಸಿತು. ಅಂದಿನ ಆ ಶುಭ ಘಳಿಗೆಯಲ್ಲಿ, ಮಾನವ ಮನೀಕ್ಷಯ ಬೇಡದೇ ಬಂದ ಜ್ಞಾನ ಜ್ಯೋತಿಯಿಂದ, ಕಂಡುದುದೇನಂದರೆ–ಈ ವಾಸ್ತವ ಜಗತ್ತಿನಲ್ಲಿ ನಾವು ಪಡೆಯುವುದೆಲ್ಲವೂ, ಆ ವಿರಾಟ ಆನಂದ ಸ್ವರೂಪದ, ಆ ವಿರಾಟ ಸತ್ತೆಯ ಖಂಡ ವಿಕಾಸ ಮಾತ್ರ; ಎಂದು. ಇವುಗಳಲ್ಲಾವುದೂ ಅವನ ಪೂರ್ಣ ರೂಪವಲ್ಲ. ಆದರೆ, ಯಾವುದು ಖಂಡವಾಗಿದೆಯೋ ಅದನ್ನು ಸಹ ಉಪೇಕ್ಷಿಸುವಂತಿಲ್ಲ. ಖಂಡ ಸತ್ತೆಯೂ ಅವನ ಹೊರಗೇನಿಲ್ಲ. ಅದೂ ಸಹ ವಿರಾಟನ ಅವಿಭಾಜ್ಯ ಅಂಗವೇ. ಸಾಧಾರಣ ಮಾನವನು ಗೂಢ ಬ್ರಹ್ಮ ತತ್ತ್ವವನ್ನು ಗ್ರಹಿಸುವಲ್ಲಿ ಸಮರ್ಥನಾಗಲಾರನು. ಆದ್ದರಿಂದ ಜಪ-ಯಜ್ಞಾದಿ ಬಹಿರ್ಮುಖೀ ಕ್ರಿಯಾ ಕಲಾಪಗಳನ್ನು ಧರ್ಮ ಸಾಧನೆಯೆಂದು ಬಗೆದು, ಅವುಗಳನ್ನು ಜೋಪಾನವಾಗಿ ಇಟ್ಟುಕೊಳ್ಳುವ ಪ್ರಯತ್ನ ಮಾಡಿದನು.ಆದರೆ ಜ್ಞಾನಿಗಳಾದ ತತ್ತ್ವದರ್ಶಿಗಳು ಇದರ ಹೂರಣವನ್ನು ಹೊರಗೆಳೆದರು. ಈ ಖಂಡ ಸತ್ತೆಯ ಉಪಾಸನೆಯು, ಈ ಜಡದ ಉಪಾಸನೆಯ ಪರಿಣಾಮವಾಗಿ, ವಿಕಾಸ ಗೊಂಡ ಚೈತನ್ಯ ಹೊಂದಿದ ಮಾನವನು, ಮರಳಿ ಜಡತ್ವದ ಹಾದಿಯಲ್ಲಿಯೇ ಹಿನ್ನಡೆಯುತ್ತಿದ್ದಾನೆಂದು ಅವರು ಕಂಡರಿತರು. ಇದಲ್ಲದೆ, ಇದು ಹೀಗೆ ಸಾಗಿ, ಒಂದು ದಿನ ಅವನು ತನ್ನನ್ನೇ ಜಡದಲ್ಲಿ ಪರಿಣಮಿಸಿಕೊಳ್ಳುವನೆಂದೂ ಅವರಿಗೆ ತಿಳಿಯಿತು. ಮಾನವನು ಶಾರೀರಿಕ ಅಗತ್ಯಗಳ ಪೂರ್ತಿಗಾಗಿ, ಜಡವನ್ನು ತ್ಯಾಗ ಮಾಡುವ ಮಾತು ದೂರವಿರಲಿ; ಜಡವನ್ನು ಪಡೆಯುವ ಪ್ರಯತ್ನವನ್ನೂ ಸಹ ತ್ಯಾಗ ಮಾಡಲಾರೆನು. ಆದರೆ ಅನ್ನ, ಬಟ್ಟೆ, ಮತ್ತಿತರ ಶಾರೀರಿಕ ಅವಶ್ಯಕತೆಗಳು ತುಂಬಿ ಬಂದ ಮೇಲೂ ಸಹ ಮಾನವನ ಪ್ರಾಣದ ಹಸಿವು ಹಿಂಗದು. ಕೆಲವೊಂದು ಕ್ಷೇತ್ರಗಳಲ್ಲಿ ಮಾನವನು, ಅನ್ನ ಬಟ್ಟೆಗಳು ಪ್ರಾಣ ಧರ್ಮವಿರೋಧಿಯಾಗಿದ್ದರೂ ಸಹ, ಬಟ್ಟೆಯಿಲ್ಲದೆ ಎಷ್ಟೋ ವರ್ಷ ಕಳೆಯ ಬಲ್ಲನು. ಇಲ್ಲವೆ ಸ್ವೇಚ್ಛೆಯಿಂದ ತೊಲಗಿ ಹೋಗಬಲ್ಲನು. ಆದ್ದರಿಂದ ಸ್ಥೂಲ ಪ್ರಯೋಜನಗಳನ್ನು ಪೂರ್ತಿಗೊಳಿಸುವ ಉದ್ದೇಶದಿಂದ, ಮನುಷ್ಯನ ಕೆಲಸವಾಗದು. ಮತ್ತು ಒಂದು ವೇಳೆ, ಹಾಗಾಗುವುದಾದರೆ, ಅವನು



ಎಂದೆಂದಿಗೂ ಆನಂದದಿಂದ ವಂಚಿತನಾಗಿರಬೇಕಾಗುವುದು. ಮರುಭೂಮಿಯ ಹಾಹಾಕಾರದಲ್ಲಿ, ಅವನು ಎಂದೆಂದಿಗೂ ತಲೆಯ ಭಾರ ಹೊತ್ತು ಅಂಡಲೆಯ ಬೇಕಾಗುತ್ತದೆ.

ಯಾವಾಗ ಖಂಡದ ತ್ಯಾಗವು ಸಂಭವವಿಲ್ಲವೋ, ಮತ್ತು ಅಖಂಡದ ಭಾವನೆಯನ್ನು ಹೊಂದಲೇಬೇಕಾಗುವುದೋ, ಆಗ ಪ್ರತಿಯೊಂದು ಖಂಡವೂ ಆ ವಿರಾಟನ ರೂಪಮಾತ್ರವಾಗಿದೆಯೆಂಬ ಅರಿವನ್ನು ಎಂದೆಂದಿಗೂ ಚಿತ್ತದಲ್ಲಿ ಜಾಗ್ರತವಿರಿಸಿಕೊಂಡು, ಸೀಮಿತದ ವ್ಯವಹಾರ ಮಾಡುತ್ತ ಹೋದರೆ, ಸೀಮಿತವನ್ನು ಕುರಿತು ಆಸಕ್ತಿಯುಂಟಾಗದು. ಆಸಕ್ತಿಯ ಪ್ರೇಯಮುಖೀ ಗತಿಯು ಶ್ರೇಯೋಭಿಮುಖೀ ಗತಿಯಲ್ಲಿ ಪರಿವರ್ತಿಸುತ್ತದೆ. ಪ್ರತಿಯೊಂದು ವಸ್ತುವಿನಲ್ಲಿ ಬ್ರಹ್ಮಭಾವವನ್ನು ಆರೋಪಿಸಿ, ಸರ್ವವಸ್ತುಗಳ ಕ್ಷುದ್ರತೆಯನ್ನು ತಳೆದ ಮೇಲೆ, ಮಾನವನು ಅದರಿಂದ ಬ್ರಹ್ಮಾನಂದದ ಉಪಲಬ್ಧಿಯನ್ನು ಹೊಂದುತ್ತಾನೆ; ಬ್ರಹ್ಮಾನಂದವನ್ನೇ ಉಪಭೋಗಿಸುತ್ತಾನೆ. ಯಜುರ್ವೇದದ ವಾಜಸನೇಯೀ ಸಂಹಿತೆಯಲ್ಲಿ ಹೀಗೆ ಹೇಳಲಾಗಿದೆ.

"ಈಶಾವಾಸ್ಯಮಿದಂ ಸರ್ವಂ ಯತ್ ಕಿಂಚಿತ್ ಜಗತ್ಯಾಂ ಜಗತ್,
ತೇನ ತ್ಯಕ್ತೇನ ಭುಂಜೀಥಾ ಮಾ ಗೃಧಃ ಕಸ್ಯಸ್ವಿದ್ಧನಮ್"

ಈ ಜಗತ್ತು ಪರಿವರ್ತನಶೀಲವಾಗಿದೆ; ಗತಿಶೀಲವಾಗಿದೆ. 'ಗಮ್' ಧಾತುವಿಗೆ 'ಕ್ವಿಪ್' ಪ್ರತ್ಯಯ ಸೇರಿಸಿ, ಜಗತ್ ಶಬ್ದವಾಗಿದೆ. ಇದರ ಅರ್ಥವೇ ಗತಿಶೀಲ. ಈ ವಿಶ್ವಬ್ರಹ್ಮಾಂಡವು ಬ್ರಹ್ಮನ ಮಾನಸಿಕ ವಿಕಾಸವಾಗಿದೆ. ಕಲ್ಪನೆಯಂತೂ ಅಸ್ಥಿರ ಮತ್ತು ಗತಿಶೀಲವಾಗಿದೆ. ಆದ್ದರಿಂದ ಸಗುಣ ಬ್ರಹ್ಮನ ಮಾನಸಿಕ ವಿಕಾಸವಾದ, ಈ ಜಗತ್ತು ಸಹ ಅಸ್ಥಿರ ಮತ್ತು ಚಂಚಲವಾಗಿದೆ. ಇಂದು ಯಾವುದು ಅತ್ಯಂತ ಸುಂದರವಾಗಿದೆಯೋ, ಅದು ನಾಳೆಯೂ ಸಹ ಅಷ್ಟೇ ಸುಂದರವಾಗಿ ಉಳಿಯುವದು; ಎಂದು ಹೇಳಲಾರೆವು. ಇಂದು ಯಾವ ಸಿಹಿ ತಿಂಡಿಯು ತಿನ್ನಲಿಕ್ಕೆ ಒಳ್ಳೇ ರುಚಿ ಕಟ್ಟಾಗಿದೆಯೋ ಅದೇ ತಿಂಡಿಯು ಕೆಲ ದಿನಗಳು ಕಳೆದಬಳಿಕ ಅದು ತಿನ್ನಲೂ ನಿರುಪಯೋಗಿಯಾಗಿಬಿಡುತ್ತದೆ. ಅದರ ರೂಪವೂ ಸಹ ಮೊದಲಿನಂತೆ ಉಳಿಯದು. ಇದೇ ಪ್ರಕಾರ ಪ್ರತಿಯೊಂದು ಖಂಡ ವಸ್ತುವು ಪರಿವರ್ತನಶೀಲವಾಗಿದೆ. ಮತ್ತು ಈ ಕಾರಣದಿಂದ ಖಂಡದ ಆನಂದವು ಶಾಶ್ವತವಾಗಿರಲಾರದು. ಆದ್ದರಿಂದ ಸಾಧಕನು ಏನು ಮಾಡಬೇಕು? ಪ್ರತಿಯೊಂದು ಖಂಡ ವಸ್ತುವಿನಲ್ಲಿಯೂ ಈಶ್ವರ ಭಾವನೆಯನ್ನು ಅರ್ಪಿಸಬೇಕಾಗುವುದು. ಸರ್ವವೂ ಪರಮಾತ್ಮನ ವಿಕಾಸವೇ. ನೆಲ–ಜಲ, ಮನೆ–

ಮಾರು, ಬೆಟ್ಟ–ಹೊಳೆ–ಮಾನ–ಅಪಮಾನ, ದಿನ-ರಾತ್ರಿ ಇವೆಲ್ಲವೂ ಅವನವೇ ಆಗಿವೆ. ಮತ್ತು ಅವನೇ ಖಂಡ ರೂಪದಲ್ಲಿ ಪ್ರಕಾಶಿತನಾಗಿದ್ದಾನೆ. ಅವನು ನೀಡಿದ ವಸ್ತುಗಳನ್ನು ಅವನ ಜ್ಞಾನವೆಂದು ತಿಳಿದು ಸರಿಯಾದ ಭಾವದಿಂದ ವ್ಯವಹರಿಸುತ್ತ ನಡೆ. ಈ ಭೋಗವನ್ನೂ ಸಹ ಅವನೇ ಭೋಗಿಸಬೇಕಾಗುತ್ತದೆ. ಖಂಡದ ಮೋಹವನ್ನು ತ್ಯಜಿಸಿ, ಅಖಂಡದೊಂದಿಗೆ ಸಂಪರ್ಕ ಸಾಧಿಸು. ಈ ಭಾವ ತಾಳಿ ತಾನು ಮುನ್ನಡೆದಾಗ, ಎರಡನೆಯ ವಸ್ತುವನ್ನು ಗ್ರಹಿಸುವ ಇಚ್ಛೆಯು ಸಂಪೂರ್ಣವಾಗಿ ದೂರಾಗುತ್ತದೆ. ನಮ್ಮ ಮಾರ್ಗದಲ್ಲಿ ಈಶ್ವರನಿಗೆ ಎಲ್ಲವನ್ನು ಅರ್ಪಿಸುವ ವಿಶೇಷ ಕೌಶಲವಿದೆ. ವಸ್ತುವಿನಲ್ಲಿ ಈಶ್ವರೀಯ ಅವರ್ಣ ನೀಡುವದರ ಅರ್ಥವೇ ಸೀಮೆಯನ್ನು ತ್ಯಜಿಸಿ, ಅಸೀಮದತ್ತ ಪ್ರಭಾವಿತನಾಗಿ ಹೋಗುವದು. ನೀನು ಮಗುವಿಗೆ ಉಣ್ಣುಸುವೆಯಾ? ಅಥವಾ ತಿನ್ನಿಸುವೆಯಾ? ಇಲ್ಲ; ಇಲ್ಲ; ಬ್ರಹ್ಮನ ಪುತ್ರರೂಪಿ ವಿಕಾಸಕ್ಕೆ ತಿನ್ನಿಸುತ್ತಿರುವಿ.

ನೀನು ಗದ್ದೆಯನ್ನು ನೇಗಿಲಿಂದ ಊಳುತ್ತೀಯಾ? ಇಲ್ಲ; ಇಲ್ಲ; ಈ ಭೂಮಿಯು ಬ್ರಹ್ಮನ ಸೀಮಿತವಿಕಾಸವಾಗಿದೆ. ನೀನು ನೇಗಿಲು ಹೊಡೆದು ಅದರ ಸೇವೆ ಮಾಡುತ್ತಿರುವೆ. ನಿಜವಾಗಿ ವಸ್ತುವಿಗೆ ಈಶ್ವರೀಯ ಭಾವನೆ ನೀಡಿದ ಬಳಿಕ, ವಸ್ತು ಭೋಗವು ಆಗುವದು. ಏಕೆಂದರೆ, ಆ ಕಾಲಕ್ಕೆ ವಸ್ತುವು ಆ ವಸ್ತು ರೂಪಿಯಾದ ಪರಮ ಬ್ರಹ್ಮನಲ್ಲಿಯೇ ಸೇರಿ ಹೋಗುತ್ತದೆ. ಯಾರು ಈ ತರದ ನಿಜವಾದ ವೈರಾಗ್ಯದಲ್ಲಿ ಪ್ರತಿಷ್ಠಿತರಾಗಿರುವರೋ, ಅವರ ಮನಸ್ಸಿಗೆ ಯಾವುದೇ ವಿಷಯವು ಅಂಟಿಕೊಳ್ಳಲಾರದು. ಇಂಥ ವ್ಯಕ್ತಿಯು ಎಲ್ಲದರ ಒಳಗೆ ಇರುವಾಗಲೂ ಸಹ, ಎಲ್ಲದರ ಹೊರಗೂ ಇರುತ್ತಾನೆ. ದೇಹವು ಕಳಚಿದ ಬಳಿಕ ಅವನು ಪರಮ ಪಥದಲ್ಲಿ ಶಾಶ್ವತ ಶಾಂತಿ ಪಡೆಯುತ್ತಾನೆ.

ಸ್ನಾನ ಜೇ ಕರಿವೊ ಜಲ ನಾ ಭೂಯಿವೊ, ಏಲಾಯಿಯಾ ದಿಯಾ ಕೇಶ
ಸಮುದ್ರೆ ಪಶಿವೊ ನೀರೆ ನಾ ತಿತಿವೊ, ನಾಹಿ ದುಃಖ ಶೋಕ ಕ್ಲೇಶ
ರಜನೀ ದಿವಸ ರವೊ ಪರವಶ, ಸ್ವಪ್ನೆ ರಾಖಿವೊ ಲೇಹಾ
ಏಕತ್ರೇ ಥಾಕಿವೊ ನಾಹಿ ಪರಶಿವೊ, ಭಾವಿನೀ ಭಾವೇರ ದೇಹಾ,

ಅವರು ಕಾರ್ಯ ಮಾಡುತ್ತಾರೆ. ಆದರೆ ಅದರ ಬಂಧನದಲ್ಲಿ ಸಿಗುವದಿಲ್ಲ. ಓರ್ವ ಮಹಾ ಪುರುಷನು ಹೀಗೆ ಹೇಳಿದ್ದಾನೆ.

"ರಾಂಘುನಿ ಹೋಯಿವಿ ವ್ಯಂಜನ ಬಾಂಟಿವಿ,
ಹಾಂಡಿ ನಾ ವ್ಯಯಿವಿ ಆಯ
ಸಾಪೇರ ಮುಖೇತೇ ಭೇಕೇ ರೆ ನಾಚಾಬಿ, ಸಾಪ ನ ಗಿಲಿವೆ ತಾಯ



ಅಮಿಯ ಸಾಗರೆ ಸಿನಾನ ಕರವಿ, ಕೇಶ ನಾ ಬಿಜವೆ ತಾಯ
ಮಾಕಡ ಸಾರ ಜಾಲೆ ಹಾಥೀರೆ ಬಾಂಧಿವಿ, ಫಿರೀತಿ ಮಿಲಿವೆ ತಾಯ"

ಇಲ್ಲಿ ಕ್ಷುದ್ರನಾದ ಜೀವರೂಪಿ ಸಾಧಕನು ಗುಂಗಾಡುವಿನಂತಿದ್ದಾನೆ. ಮತ್ತು ತನ್ನ ಭಕ್ತಿ ರೂಪಿ-ತಂತುವನ್ನು ನಿರ್ಮಿಸಿ ಆನೆಯಿಂದ ವಿರಾಟ ಸತ್ತೆಯನ್ನು ಯಾವಾಗ ಕಟ್ಟಿ ಹಾಕುವನೋ, ಆಗ ಈಶ್ವರ ಪ್ರೇಮವು ವಾಸ್ತವದಲ್ಲಿ ಒಂದ ವಸ್ತು ಎಂಬುದನ್ನು ಸಾಧಕನು ತಿಳಿಯುತ್ತಾನೆ.

ಜೀವನದೊಂದಿಗೆ ಕರ್ಮ ಬಂಧನವು ಓತ–ಪ್ರೋತ ಭಾವದಿಂದ ಇರುತ್ತದೆ. ಆದರೆ ಒಂದು ವೇಳೆ, ಮಾನವನು ಪ್ರತಿಯೊಂದು ವಸ್ತುವಿನಲ್ಲಿ ಬ್ರಹ್ಮ ಭಾವನೆಯನ್ನು ಆರೋಪಿಸಿ ಕಾರ್ಯ ಮಾಡಿದರೆ, ವಿಷಯಾನುರಕ್ತನಾಗುವದಿಲ್ಲವಾದ ಕಾರಣ, ಕರ್ಮ ಬಂಧನವು ಅವನನ್ನು ಕಟ್ಟಿ ಹಾಕಲಾರದು. ಈ ಜೀವನವೂ ಸಹ,ಕರ್ಮ ಬಂಧನಕ್ಕೆ ಕಾರಣವಾಗಲಾರದು. ಮತ್ತು ಕರ್ಮ ಬಂಧನವು ಮುಂದಿನ ಜೀವನದ ಹೇತುವೂ ಆಗಲಾರದು. ಇದನ್ನು ಹೊರತು ಪಡಿಸಿ ಉಳಿದುದೆಲ್ಲ ದೀರ್ಘ–ಆಯುಸ್ಸು, ದೀರ್ಘ–ಕರ್ಮ ಬಂಧನ ಮತ್ತು ಅಧಿಕ ದುಃಖದ ಕಾರಣವಾಗುವದು. ಹೀಗೆ ಜನ್ಮ ಜನ್ಮಾಂತರಕ್ಕೋಸುಗ ಮರಳಿ ತಿರುಗುತ್ತ ಸತ್ತು ಹೋಗುತ್ತಾರೆ.

"ಕುರ್ವನ್ನೇವೇಹ ಕರ್ಮಾಣಿ ಜಿಜೀವಿಷೇಚ್ಛತಂ ಸಮಾಃ
ಏವಂ ತ್ವಯಿ ನಾನ್ಯಥೇತೋಽಸ್ತಿ ನ ಕರ್ಮ ಲಿಪ್ಯತೇ ನರೇ"

ಈ ಭಾವದಿಂದ ಮನದಲ್ಲಿ ಎಂದೆಂದಿಗೂ ಬ್ರಹ್ಮ ಭಾವನೆಯನ್ನು ಅನುಶೀಲಿಸುತ್ತ,ನೂರು ವರ್ಷಗಳ ತನಕ ಜೀವಿಸುವ ಬಯಕೆಯನ್ನು ಇರಿಸು. ನೀನು ಕರ್ಮಬಂಧನದಲ್ಲಿ ಕಟ್ಟಿ ಬೀಳಲಾರೆ. ಕರ್ಮಬಂಧನದಿಂದ ಪಾರಾಗಿ ಉಳಿಯಲು ಇದೊಂದೇ ಹಾದಿ.

ತಮ್ಮ ಎಲ್ಲ ಕಾರ್ಯಗಳಲ್ಲಿ ಬ್ರಹ್ಮಭಾವನೆಯ ಪ್ರಯೋಗ ಮಾಡುವುದು ಕೇವಲ ಆಧ್ಯಾತ್ಮಿಕ ಸಾಧಕರಿಗೋಸುಗ ಮಾತ್ರ ಸಾಧ್ಯವಾದೀತು. ಆತ್ಮಸಾಧನೆಯಿಂದ ಮಾತ್ರ ಇದು ಸಂಭವನೀಯವಾಗಿದೆ. ಕೇವಲ ಮನದ ಸಾಧನೆಯಿಂದ ಈ ಬ್ರಾಹ್ಮೀ ಭಾವದಲ್ಲಿ ಪ್ರತಿಷ್ಠಿತವಾಗುವುದು, ತೀರ ಅಸಂಭವ. ಏಕೆಂದರೆ ಮನಸ್ಸು ಯಾವಾಗಲೂ ಇಂದ್ರಯಗಳಿಂದ ಕಲಕಿ ಧಾವಿಸತೊಡಗುತ್ತದೆ. ಆತ್ಮ ಸಾಧನೆಯನ್ನು ಮಾಡದೆ ಕೇವಲ ಮನದ ಸಾಧನೆಯನ್ನಷ್ಟೇ ಮಾಡುವವರು ನಿಜವಾಗಿ ಅಂದಕಾರದತ್ತ ಸಾಗಿರುತ್ತಾರೆ. ಅನಿಶ್ಚಿತವಾದ ಭವಿಷ್ಯದತ್ತ ಸಾಗಿರುತ್ತಾರೆ.

ಅಸೂರ್ಯಾ ನಾಮ ತೇ ಲೋಕಾ ಅಂಧೇನ ತಮಸಾವೃತಾಃ
ತಾಂಸ್ತೇ ಪ್ರೇತ್ಯಾಭಿಗಚ್ಛಂತಿ ಯೇಕೇ ಚಾತ್ಮಹನೋ ಜನಾಃ"

ಯಾರ ಗತಿಯು ಈ ರೀತಿ ಇಂದ್ರಿಯವೃತ್ತಿ ಮೂಲಕ ಜಡಾಭಿಮುಖಿಯಾಗಿದೆಯೋ,ಯದಾರ್ಥದಲ್ಲಿ ಅವರು ಆತ್ಮಘಾತುಕರೇ ಸರಿ.ಏಕೆಂದರೆ ಅವರು ತಮ್ಮ ಕಾರ್ಯಗಳ ಮೂಲಕ ತಮ್ಮ ಆತ್ಮನನ್ನೇ ನಿರಾಕರಿಸುತ್ತಾರೆ. ಆತ್ಮನ ಅಸ್ತಿತ್ವವನ್ನು ಅವರು ಬಾಯಿ ಮಾತಿನಲ್ಲಿ ಒಪ್ಪಲಿ, ಒಪ್ಪದಿರಲಿ, ಆ ಜನರ ಕಾರ್ಯಗಳು ಮಾತ್ರ ಆತ್ಮಿಕ ಉನ್ನತಿಯ ಹಾದಿಯಲ್ಲಿಲ್ಲ. ಇನ್ನು ಕೆಲವು ಜನರು ಬಾಯಿಮಾತಿನಲ್ಲಿ ಬ್ರಹ್ಮನನ್ನು ಒಪ್ಪುತ್ತಾರೆ. ಬಾಯಿಮಾತಿನಲ್ಲಿ ಆತ್ಮನನ್ನು ಒಪ್ಪುತ್ತಾರೆ. ಇದನ್ನು ಕುರಿತು ಅನೇಕ ತರ್ಕವಿತರ್ಕ ನಡೆಸುತ್ತಾರೆ. ಮತ್ತು ಧರ್ಮರಕ್ಷೆಯ ಹೆಸರಿನಿಂದ ರಕ್ತಪಾತ ನಡೆದರೂ ಸಹ ಹಿಂಜರಿಯರು, ಆದರೆ ವ್ಯಕ್ತಿಗತ ಜೀವನದಲ್ಲಿ ಮಾತ್ರ ಎಂದೆಂದಿಗೂ ಭೋಗ್ಯವಸ್ತುಗಳ ಬೆಂಬತ್ತಿ ಓಡುತ್ತಾರೆ. ಬೆಳಕಿನಿಂದ ಕತ್ತಲೆಯತ್ತ ಹೋಗುವ ಜನರಂತೆ, ಇವರ ಪಾಡು ಉನ್ನತ ಮಾನವ ಜೀವನದಿಂದ ಪಶುಜೀವನದತ್ತ ಇವರ ಗತಿ ಇರುತ್ತದೆ. ಈ ಕಾರಣದಿಂದ ಈ ಜನರು ಮಾನವ ಶರೀರ ಪಡೆದರೂ ಸಹ, ಮಾನವೋಚಿತ ಕರ್ಮ ಮಾಡುವ ಆಗ್ರಹವನ್ನು ಹೊಂದಿರುವುದಿಲ್ಲ. ಬ್ರಹ್ಮಸಾಧನೆಯೊಂದೇ ಮಾನವನ ಕರ್ತವ್ಯವಾಗಿದೆ.

ತಾತ್ತ್ವಿಕವಾಗಿ ಅತ್ಮ ಮತ್ತು ಪರಮಾತ್ಮ ಎರಡೂ ಒಂದೇ ವಸ್ತುವಾಗಿವೆ. ಇರುವ ಬೇಧವು ಮಾನಸಿಕ ವಿಷಯದಲ್ಲಿಯಷ್ಟೇ. ಜೀವ ಮನವು ಯಾವಾಗ ತನ್ನ ವಿಷಯ ರೂಪದಲ್ಲಿ ಅನಂತವನ್ನು ಗ್ರಹಿಸುವುದೋ, ಆ ಕೂಡಲೇ ಪರಮಾತ್ಮನೆನಿಸುತ್ತಾನೆ. ಈಗ ಒಂದು ಪ್ರಶ್ನೆ ಏಳುತ್ತದೆ ಏನೆಂದರೆ– ಸ್ವರೂಪದಿಂದ ಪರಮಾತ್ಮನು ಅನಂತನಾಗಿದ್ದಾನೆ. ಅಂದ ಮೇಲೆ, ಅವನಲ್ಲಿ ಜೀವ ಭಾವ ರೂಪೀ ವಿಕೃತಿಯು ಹೇಗೆ ಬಂತು? ಜೀವಾತ್ಮನೊಂದಿಗೆ ಈ ತೋರುವ ಪ್ರಪಂಚದ ಸಂಪರ್ಕವಾದರೂ ಏನು? ತನ್ನ ವಿಷಯವನ್ನು ಸೀಮಿತದಿಂದ ಅಸೀಮಿತದತ್ತ ಕೊಂಡೊಯ್ಯುವುದು, ಖಂಡದಿಂದ ಅಖಂಡದತ್ತ ಕೊಂಡೊಯ್ಯುವುದು, ಜೀವಿಯ ಧರ್ಮ. ಅವನ ಈ ಧರ್ಮವು ಸುಖ ಪ್ರಾಪ್ತಿಯ ಪ್ರೇರಣೆಯಿಂದ ಉದ್ಭವಿಸಿದೆ. ತನ್ನನ್ನು ಕಾಪಾಡಿಕೊಂಡು ಉಳಿಸಿಕೊಳ್ಳುವ ಪ್ರೇರಣೆಯಿಂದಾಗಿಯೇ ಉದ್ಭೂತವಾಗಿದೆ. ಭೋಗ್ಯ ವಿಷಯವು ಅನಂತವಾಗಿರುವ ವರೆಗೆ ಶಾಶ್ವತ ಸುಖವನ್ನು ಪಡೆಯಲಾರೆವು. ಮತ್ತು ಭಾವನೀಯ ಮತ್ತು ಅಭಾವನೀಯ ವಸ್ತು ಸಮೂಹದಲ್ಲಿ ಪರಮಾತ್ಮನೊಬ್ಬನೇ



ಅನಾದಿ ಮತ್ತು ಅನಂತ. ಆದ್ದರಿಂದ, ಪರಮಾತ್ಮನೊಬ್ಬನನ್ನುಳಿದು ಬೇರಾವ ಸತ್ತೆಯಿಂದಲೂ ಅನಂತ ಸುಖವನ್ನು ಗಳಿಸುವ ಸಂಭವವಿಲ್ಲ. ಖಂಡವಸ್ತುವನ್ನು ಪಡೆಯುವುದರಿಂದ ಸುಖಭೋಗಕ್ಕಿಂತ ಅದನ್ನು ಕಳೆದುಕೊಂಡೆವಲ್ಲಾ! ಎಂಬ ದುಃಖವೇ ಹೆಚ್ಚಾಗಿರುತ್ತದೆ. ಈ ಜಗತ್ತನ್ನು ದುಃಖಮಯವೆಂದು ನೋಡುವುದಕ್ಕೆ ಕಾರಣವಾಗಿ ಈ ಕಳೆದುಕೊಂಡೆವಲ್ಲಾ" ಎಂಬ ದುಃಖವನ್ನು ಹೊರತುಪಡಿಸಿ ಬೇರಾವುದೂ ಇಲ್ಲ. ಆದರೆ ಜ್ಞಾನಿಯು ಈ ಕಳೆದುಕೊಂಡೆವಲ್ಲಾ". ಎಂಬ ದುಃಖದಿಂದ ವಿಚಲಿತನಾಗದು. ಏಕೆಂದರೆ, ಸಕಲ ದುಃಖದ ಮೂಲ ಕಾರಣವೆಂದರೆ, ತಾನೇ ಸೃಷ್ಟಿಸಿದ ಸಂಸ್ಕಾರಗಳೇ; ಎಂದು ಅವನು ತಿಳಿದಿರುತ್ತಾನೆ.

ಸುಖ ಇಲ್ಲವೆ ದುಃಖದ ಭೋಗದಿಂದ ಹುಟ್ಟಿದ ಸಂಸ್ಕಾರವು ಪರಮಾತ್ಮನನ್ನು ಜೀವಾತ್ಮನ ಭಾವದಲ್ಲಿ ತಂದಿರಿಸಿದೆ; ಪೂರ್ಣ ದೇಹದಲ್ಲಿ ಅನಂತ ಅಣುತ್ವದ ಮುದ್ರೆಯನ್ನೊತ್ತಲಾಗಿದೆ. ಇದರ ಆಧಿಕಾರಣವೂ ಸಹ ವಿರಾಟನ ವೃದ್ಧಾವಸ್ಥೆಯ ಸಂಸ್ಕಾರವೇ ಆಗಿದೆ. ವಾಸ್ತವಿಕವಾಗಿ ಇದನ್ನು ಪರಮಾತ್ಮನ ವಿಕೃತಿಯೆಂದು ಕರೆಯದೆ, ಕ್ರಿಯೇ ಮತ್ತು ಪ್ರತಿಕ್ರಿಯೆಗಳ ಮಾನಸಿಕ ಪ್ರತಿಫಲನವೆಂದು ಕರೆಯುವುದೇ ಹೆಚ್ಚು ಯುಕ್ತಿ ಸಂಗತವಾಗಿದೆ.

ಜೀವ ಭಾವವು ಆಪೂರ್ಣವಿದೆ. ಅದು ಪೂರ್ಣತೆಯಲ್ಲಿ ನೆಲೆಸುವ ವರೆಗೆ ಅದರ ದುಃಖವು ದೂರವಾಗದು. ಸಾಧಕನ ದುಃಖಭೋಗವು ಅವನು ತಾನೇ ಸೃಷ್ಟಿಸಿದ ಸಂಸ್ಕಾರದಿಂದ ಹುಟ್ಟಿಕೊಂಡಿದೆಯೆಂಬುದನ್ನು ಈ ಮೊದಲು ಹೇಳಿದ್ದೇನಷ್ಟೇ? ಅದರ ಮೇಲೆ ಆ ಸಂಸ್ಕಾರಗಳನ್ನು ಭೋಗಿಸಿ ತೀರಿಸಲು ಭಯಭೀತನಾಗುವುದು ಉಚಿತವಲ್ಲ. ಮತ್ತು ಇದಕ್ಕೋಸುಗ ಬ್ರಹ್ಮನನ್ನು ದೋಷಿಯೆಂದು ಬಗೆಯುವುದೂ ಉಚಿತವಲ್ಲ. 'ಎಲೈ ಭಗವಂತ; ನಿನ್ನ ಮನದಲ್ಲಿ ಹೀಗೆಯೇ ಇದ್ದಿತೇ? ಇಷ್ಟೊಂದು ಪೂಜಾ–ಪಾಠ, ದಾನ–ಧ್ಯಾನಗಳನ್ನು ಮಾಡಿದ ಮೇಲೂ ಸಹ ಇದೇ ಪರಿಣಾಮವೇ?" ಎಂದು ಹೇಳುವುದನ್ನು ಜನರು ಕೇಳಿ ಕೇಳಿ ರೂಢಿಸಿಕೊಂಡಿದ್ದಾರೆ. ಈ ತರದ ಮಾತುಗಳು ಮೂಢ ಜನರಿಗೇ ಸರಿ. ಈ ಮಾತು ಮಹಾಪಾಪ. ಕ್ಲೇಶವನ್ನು ಭೋಗಿಸುವ ಕಾಲದಲ್ಲಿ, ಸಾಧಕನು ತಾನು ಮೊದಲು ಮಾಡಿದ ಅಪರಾಧಗಳಿಗೋಸುಗ ತನ್ನನ್ನೇ ಧಿಕ್ಕರಿಸಿಕೊಂಡು, ಭವಿಷ್ಯದಲ್ಲಿಯಾದರೂ ಕ್ಲೇಶ ಭೋಗದಿಂದ ಪಾರಾಗಿ ಉಳಿಯಬೇಕೆಂದು, ಎಲ್ಲ ರೀತಿಯ ಕೀಳು–ಕರ್ಮಗಳಿಂದ ದೂರವಾಗುತ್ತಾನೆ. ಎಲ್ಲಿಯ ತನಕ ದುಃಖದ ಜ್ವಾಲೆಯು ನಿವೃತ್ತವಾಗುವುದಿಲ್ಲವೋ, ಸಂಸ್ಕಾರಗಳು ಕ್ಷಯಿ

ಸುವದಿಲ್ಲವೋ) ಅಲ್ಲಿಯ ತನಕ, ದುಃಖ ಭೋಗವು ಅನಿವಾರ್ಯ; ಎಂಬ ಮಾತನ್ನು ಎಲ್ಲರೂ ನೆನಪಿಟ್ಟುಕೊಳ್ಳಬೇಕು. ಆದ್ದರಿಂದ ನಿಮ್ಮ ಸಂಸ್ಕಾರಗಳಿಗೋಸುಗ ಬೇರೆಯುವರ ಮೇಲೆ ದೋಷ ಹೊರಿಸಬೇಡಿ; ಎಂದು ನಾನು ಹೇಳುತ್ತಿದ್ದೇನೆ. ನಿಮ್ಮ ಸಂಸ್ಕಾರವು ನಿಮ್ಮ ದೋಷಪೂರ್ಣ ಆಚರಣೆಯ ಪ್ರತಿ ಛಾಯೆಯಷ್ಟೇ.ಬಿಂಬದ ಕೊರಳಿಗೆ ಎಂಥಮಾಲೆಯನ್ನು ತೊಡಿಸುವಿರೋ, ಪ್ರತಿಬಿಂಬದಲ್ಲಿ ಅದೇ ರೀತಿ ಕಾಣದೇನು? ಕವಿ ವಿದ್ಯಾಪತಿ ಹೀಗೆ ಹೇಳುತ್ತಾರೆ.

"ಯುಗ ಯುಗ ಜೀವ ಥು ಬಸಥು ಲಾಖ ಕೋಸ,
ಹಮರ ಅಭಾಗ ಸಖಿ ಹುನಕ ಕೌನ ದೋಷ."

ದುಃಖದಲ್ಲೆಂದೂ ಗಾಬರಿ ಪಡಬೇಡಿರಿ. ದುಃಖವನ್ನು ಅರಿತುಕೊಂಡು ಬುದ್ಧಿವಂತರಂತೆ, ಅನಂತರದ ಜೀವನದಲ್ಲಿ ಆಚರಿಸಿರಿ. ಆ ಅನಾದಿ, ಅನಂತ ಸತ್ತೆಯನ್ನೇ ಮನದ ವಿಷಯ ರೂಪದಲ್ಲಿ ಗ್ರಹಿಸಿ, ಅದಕ್ಕನುಸರಿಸಿ ಆಚರಿಸಿರಿ.

"ಅನೇಜದೇಕಂ ಮನಸೋ ಜವೀಯೋ,
ನೈನದ್ದೇವಾ ಆಪ್ನುವನ್ ಪೂರ್ವಮರ್ಷತ್
ತದ್ಧಾವತೋऽನ್ಯಾನತ್ಯೇತಿ ತಿಷ್ಠತ್
ತಸ್ಮಿನ್ನಾಪೋ ಮಾತರಿಶ್ವಾ ದಧಾತಿ"
ಅದೊಂದೇ ಗತಿ ರಹಿತವಾದ ಸತ್ತೆ.

ದೇಶ ಭೇದವಿಲ್ಲವಾದರೆ ಗತಿಯೂ ಇಲ್ಲ. ಇಂದು ಯಾವುದರಲ್ಲಿ ಎಲ್ಲ ದೇಶಗಳಿವೆಯೋ, ಅದು ಸಾರ್ವದೇಶಿಕ ಸತ್ತೆಯಾಗಿದೆ. ಅದಕ್ಕೆ ಗತಿಯೆಲ್ಲಿದೆ? ಮತ್ತು ಇದನ್ನೇ ಬೇರೆ ರೀತಿಯಲ್ಲಿ ಹೇಳುವುದಾದರೆ, ಅದು ಮನಕ್ಕಿಂತ ಹೆಚ್ಚು ದ್ರುತಗಾಮಿಯಾಗಿದೆ. ಏಕೆಂದರೆ, ಅವನ ಮಾನಸ ದೇಹದಲ್ಲಿ, ಅಂದರೆ, ಅವನ ಕಲ್ಪನೆಯ ಗತಿಯಿಂದಲೇ, ಜಗತ್ತಿನ ಸರ್ವಸತ್ತೆಗಳು ಗತಿಶೀಲವಾಗಿವೆ. ಮತ್ತು ಗತಿಯ ಪ್ರೇರಣೆ ಪಡೆದಿವೆ. ಇಂದ್ರಿಯಗಳು ಅವನನ್ನು ಹಿಡಿದುಕೊಳ್ಳಲಾರವು. ಏಕೆಂದರೆ, ಇಂದ್ರಿಯಗಳ ಗತಿಯು ವಿಷಯದತ್ತ ಇದೆ. ಮತ್ತು ವಿಷಯಗಳು (ತಥಾಕಥಿತ ಜಡ) ಅವನ ಮಾನಸಿಕ ಸ್ಫುರಣದ ಬಹಿರ್ಮುಖೀ ರೂಪದಲ್ಲಿವೆ. (ಸಂಚಾರ ಸಂವೇದನೆ) ಅವನಾದರೋ ಆನಂದ ಘನ ಸತ್ತೆಯ ಸ್ವರೂಪದಲ್ಲಿ ಮಾನಸಿಕ ಸ್ತರದ ಊರ್ಧ್ವದಲ್ಲಿ ಹೊಳೆಯುತ್ತಿರುತ್ತಾನೆ. ಈ ಪ್ರಜ್ಞಾಪನ ಸತ್ತೆಯ ಕಾರಣದಿಂದಾಗಿಯೇ ಜಗತ್ತಿನಲ್ಲಿ ಪ್ರಾಣ ಶಕ್ತಿ ಮತ್ತು ಕ್ರಿಯಾ ಶಕ್ತಿಗಳಿರುತ್ತವೆ. ಅದೇ ಮೇರೆಗೆ, ಎಲ್ಲ ಪ್ರಕಾರದ ಜಗದ ಕರ್ಮಗಳು, ಹೇಗಿರಬೇಕೋ ಹಾಗೆ, ಇರುತ್ತವೆ.




ತದೇಜತಿ ತನ್ನೈಜತಿ ತದ್ ದೂರೇ ತದ್ವಂತಿಕೇ
ತದಂತರಸ್ಯ ಸರ್ವಸ್ಯ ತದು ಸರ್ವಾಸ್ಯಸ್ಯ ಬಾಹ್ಯತಃ

ಅವನು ಬಯಸುವನೇನು? ಇಲ್ಲ; ಇಲ್ಲ; ಹಾಗೇನಿಲ್ಲ. ಅವನು ಸ್ಥಾಣುವಿನಂತಿದ್ದಾನೆ. ಅವನು ಬಹು ದೂರವಿದ್ದಾನೇನು? ಇಲ್ಲ; ಅವನು ಅತ್ಯಂತ ನಿಕಟದಲ್ಲಿಯೇ ಇದ್ದಾನೆ. ಅವನೇ ನಮ್ಮ ಪ್ರಾಣದ ಪ್ರಾಣ; ನಮ್ಮ ನಿಮ್ಮೆಲ್ಲರ ಒಳಗೂ, ಹೊರಗೂ ಸಮಾನ ಭಾವದಿಂದ ಇದ್ದಾನೆ. ಯಾವಾಗ ಸಾಧಕನು ಆ ಆನಂದಘನ ಸತ್ತೆಯನ್ನು ಸರಿಯಾಗಿ ತಿಳಿಯುವನೋ, ಆಗ ಅವನ ಬ್ರಾಹ್ಮೀ ಸ್ಥಿತಿ ನೆಲೆಗೊಳ್ಳುತ್ತವೆ. ಆಗ ಒಳಹೊರಗುಗಳೆಲ್ಲ ಒಂದೇ ಆಗುತ್ತವೆ. ಆಗ ಮನಸ್ಸು ಕ್ಷುದ್ರದ ಆಕರ್ಷಣೆಯಿಂದ ದೂರ ಸರಿಯುತ್ತದೆ. ಮತ್ತು ಪರಮ ಬ್ರಹ್ಮನನ್ನು ಅವನು ಯಥಾರ್ಥ ದೃಷ್ಟಿಯಿಂದ ತಿಳಿದುಕೊಳ್ಳುತ್ತಾನೆ. ಶರೀರವು ನಶ್ವರ ಲೋಕದಲ್ಲಿ ಬಿದ್ದುಕೊಂಡಿರುತ್ತದೆ. ಮತ್ತು ಆತ್ಮವು ಪರಮಾತ್ಮನಲ್ಲಿ ಸೇರಿಕೊಳ್ಳುತ್ತದೆ. ಆಮೇಲೆ ಮನವು ಯಾರದು? ಎಂದು ಪರಿಚಯಿಸಿಕೊಳ್ಳಬೇಕಾಗಿಲ್ಲ. ಚಂಡೀದಾಸ ಕವಿಯು ಹೀಗೆ ಹೇಳಿದ್ದಾರೆ.

"ಶ್ರೀ ರಾಧಾರಕೀ ಹೋಇಲೋ ಅಂತರೇ ವ್ಯಥಾ,
ಬಸಿಯಾ ವಿರಲೇ ಥಾಕಏ ಏಕಲೇ, ನಾ ಸುನೇ ಕಾಹಾರ ಔ ಕಥಾ
ಸದಾ ಈ ಘೇಯಾನೇ, ಚಾಹೇ ಮೇಘ ಪಾನೇ,
ನಾ ಚಲೇ ನಯನ ತಾರಾ
ವಿರತಿ ಆಹಾರೇ, ರಾಂಗಾ ವಾಸ ಪರೇ, ಯೇಮತಿ ಯೋಗಿನೀ ಪಾರಾ"
ಏಲಾಇಯಾ ಬೇನೋ, ಫೂಲೇರ ಗಾಢನಿ ದೇಖವಿಖಸಾವ ಚೂಲಿ;
ಹಸಿತ ನ ಯಾನೇ, ಚಾಹೇ ಮೇಘ ಪಾನೇ, ಕಿ ಕಹೇ ದೂ ಹಾತ-ತೂಲಿ,
ಏಕ ದಿಠಿ ಕರಿ, ಮಯೂರ–ಮಯೂರೀ, ಕಂಠೆ ಕರೇ ನಿರೀಕ್ಷಣೇ,
ದ್ವಿಜ ಚಂಡೀದಾಸ ಕಯ, ನವ ಪರಿಚಯ, ಕಾಲಿಯಾ ಬಂಧೂರ ಸನೇ.


ಈ ತೋರುವ ಜಗತ್ತಿನ, ಸೂಕ್ಷ್ಮದಿಂದ ಸ್ಥೂಲದತ್ತಣ ವಿಕಾಸವನ್ನು ಸಂಚರ ಎನ್ನುತ್ತೇವೆ. ಸೃಷ್ಟ ಜೀವ ಮತ್ತು ಜಗತ್ತಿನ, ಸ್ಥೂಲದಿಂದ ಸೂಕ್ಷ್ಮದತ್ತಣ ಅಗ್ರಗತಿಯನ್ನು ಪ್ರತಿಸಂಚರವೆಂದು ಕರೆಯುತ್ತಾರೆ.

## ಸಂಚರ




೧) ಪ್ರಾಣ ಕೇಂದ್ರದಲ್ಲಿ ಸೃಷ್ಟಿಯ ಸ್ಫುರಣ
೨) ಸೃಷ್ಟಿ (ಸೃಷ್ಟಿಕಾರಿ ಭಾವದ ಹೆಸರೇ ಬ್ರಹ್ಮ.)
೩) ಪರಿವರ್ತನಶೀಲ ಇರವು ಇಲ್ಲವೆ ಸ್ಥಿತಿ
ಭಾವದ ಹೆಸರು ವಿಷ್ಣು (ಇಲ್ಲವೆ ಪಾಲನಕಾರೀ).

## ಪ್ರತಿಸಂಚರ




೧) ತಮದ ಜಡತೆಯಿಂದ ಸಂಹಾರದತ್ತಣ ಗರೆ.
(ಸಂಹಾರ ಕಾರಿ ಭಾವದ ಹೆಸರು ಮಹೇಶ್ವರ).
೨) ಪರಿವರ್ತನಶೀಲ ಇರವು ಇಲ್ಲವೆ ಸ್ಥಿತಿ.



ಇದೇ ರೀತಿ, ಸೂಕ್ಷ್ಮದಿಂದ ಸ್ಥೂಲ ಮತ್ತು ಸ್ಥೂಲದಿಂದ ಸೂಕ್ಷ್ಮದತ್ತ ಸೃಷ್ಟಿ ಚಕ್ರವು ತಿರುಗುತ್ತಿರುತ್ತದೆ. ಜೀವಿಗಳ ಗತಿಯು ಸ್ಥೂಲದಿಂದ ಸೂಕ್ಷ್ಮದತ್ತ ಇದೆ. ಬ್ರಹ್ಮದಿಂದ ಹೊರಟು, ಬ್ರಹ್ಮದತ್ತ ಮರಳುವ ಮಾರ್ಗಕ್ಕೇ ಬ್ರಹ್ಮಚಕ್ರವೆನ್ನುತ್ತಾರೆ. ಈ ಚಕ್ರವು ಸಂಚರ ಮತ್ತು ಪ್ರತಿಸಂಚರ ಕ್ರಿಯೆಯಲ್ಲಿ ತಿರುಗುತ್ತಿರುತ್ತದೆ.

ಜೀವಿಯು ವಿದ್ಯಾ ಮಾಯೆಯ ಮೂಲಕ ಬ್ರಹ್ಮನತ್ತ ಮುನ್ನಡೆಯುತ್ತಾನೆ. ಮತ್ತು ಅವನ ಕಲ್ಪನೆಯ ಪ್ರತಿಸಂಚರ ಕ್ರಿಯೆಯನ್ನು ತನ್ನ ಸಾಧನೆಯ ಮೂಲಕ ತ್ವರಿತಗೊಳಿಸುತ್ತಾನೆ. ಜೀವಿಯು ಅವಿದ್ಯಾಮಾಯೆಯನ್ನು ಆರಾಧಿಸಿ ಅವನ ಕಲ್ಪನಾ ಧಾರೆಯ ಸಂಚರ ಕ್ರಿಯೆಯನ್ನು ದೀರ್ಘಗೊಳಿಸುತ್ತಾನೆ. ಮತ್ತು ಹಾಗೆಯೇ ವಿಳಂಬಿಸುತ್ತಾನೆ. ವಿದ್ಯೆಯು ಜ್ಞಾನಪ್ರಧಾನವಾಗಿದೆ. ಮತ್ತು ಅವಿದ್ಯೆಯು ಕರ್ಮಪ್ರಧಾನವಾಗಿದೆ. ಸಾಧಕನ ಜೀವನದಲ್ಲಿ ಜ್ಞಾನ ಕರ್ಮಗಳೆರಡರಲ್ಲೂ ಸಮತೆ ಇರಬೇಕಾದ ಅವಶ್ಯಕತೆಯಿದೆ. ಇಲ್ಲವಾದರೆ, ಬ್ರಹ್ಮಾಭಿಮುಖೀ ಗತಿಯು ಕಠಿಣವಾಗುತ್ತದೆ.

"ಅಂಧಂ ತಮಃ ಪ್ರವಿಶಂತಿ ಯೇಽ ವಿದ್ಯಾಮುಪಾಸತೇ
ತತೋ ಭೂಯ ಇವ ತೇ ತಮೋ ಯ ಉ ವಿದ್ಯಾಯಾಂ ರತಾಃ"

ಯಾರು ಕೇವಲ ಅವಿದ್ಯೆಯನ್ನು ಉಪಾಸಿಸುವರೋ, ಅವರು ಕ್ರಮೇಣವಾಗಿ, ಅಂಧಕಾರದತ್ತ ನುಗ್ಗುತ್ತಾರೆ. ಮತ್ತು ಯಾರು ಕೇವಲ ವಿದ್ಯೆಯನ್ನು ಉಪಾಸಿಸುವರೋ, ಅವರು ಅದಕ್ಕಿಂತ ಹೆಚ್ಚಿನ ಅಂಧಕಾರವನ್ನು ಪ್ರವೇಶಿಸುತ್ತಾರೆ.

"ಅನ್ಯ ದೇವಾ ಹುರ್ವಿದ್ಯಾಯಾನ್ಯದಾಹುರವಿದ್ಯಯಾ
ಇತಿ ಶುಶ್ರುಮ ಧೀರಾಣಾಂ ಯೇ ನಸ್ತದ್ವಿಚ ಚಕ್ಷಿರೇ"

ವಿದ್ಯೆ ಮತ್ತು ಅವಿದ್ಯೆ ಇವೆರಡರ ಫಲಗಳು ತೀರ ಬೇರೆ ಬೇರೆಯಾಗಿವೆ. ವಿದ್ಯೆಯನ್ನು ಆಶ್ರಯಿಸಿದವನ ಗತಿ ಮತ್ತು ಅವಿದ್ಯೆಯನ್ನು ಆಶ್ರಯಿಸಿದವನ ಗತಿಗಳಲ್ಲಿ ಯಾವುದೇ ಸಾಮಂಜಸ್ಯವಿಲ್ಲ. ಸ್ಥಿತಧೀ ವ್ಯಕ್ತಿಯು ಮತ್ತು ಅನುಭೂತಿ ಸಿದ್ಧ ಸಾಧಕನು ಎಲ್ಲವನ್ನೂ ಚೊಕ್ಕಟವಾಗಿ ವಿಚಾರಿಸಿ ತಿಳಿದಿರುತ್ತಾರೆ. ವಿದ್ಯೆ ಮತ್ತು ಅವಿದ್ಯೆಗಳನ್ನು ಕುರಿತು ನಮಗೆ ಈ ರೀತಿ ಹೇಳುತ್ತ ಬಂದಿದ್ದಾರೆ: ಕೇವಲ ವಿದ್ಯೆಯ ಇಲ್ಲವೆ ಅವಿದ್ಯೆಯ ಅನುಶೀಲನೆಯನ್ನಷ್ಟೇ ಮಾಡುವುದರಿಂದ ಮೋಕ್ಷಪ್ರಾಪ್ತಿಯು ಸಂಭವಿಸದು. ಮೋಕ್ಷ ಪ್ರಾಪ್ತಿಗೋಸುಗ, ವಿದ್ಯೆ ಮತ್ತು ಅವಿದ್ಯೆಗಳ ಸಮತ್ವವು ತುಂಬಾ ಅವಶ್ಯವಾಗಿದೆ. ಅಂದರೆ ಎಲ್ಲ ವಸ್ತು

ಗಳೊಂದಿಗೆ ಯೋಗ್ಯ ವ್ಯವಹಾರ ಮಾಡಬೇಕಾಗುವುದು. ಬ್ರಹ್ಮಾಭಿಮುಖೀ ಗತಿಯು ವಿದ್ಯಾಪ್ರಧಾನವಾಗುತ್ತ ಹೋಗಬೇಕಾಗುತ್ತದೆ. ಆದರೆ ವ್ಯಾವಹಾರಿಕ ಜಗತ್ತಿನಲ್ಲಿ ಅವಿದ್ಯೆಯನ್ನು ಪೂರ್ಣವಾಗಿ ಬಿಟ್ಟು ನಡೆಯುವುದು ತೀರ ಅಸಂಭವ. ಅದಕ್ಕೂ ಭಾವನೆಯನ್ನು ಆರೋಪಿಸಿ, ತನ್ನ ಜೀವನದ ಸಾಧನೆಯೊಂದಿಗೆ ನಡೆಯಬೇಕಾಗುತ್ತದೆ. ಇಲ್ಲಿ, ವಿದ್ಯೆ ಮತ್ತು ಅವಿದ್ಯೆಗಳ ಸಮತೆಯೆಂದರೆ, ವಸ್ತುವಿನ ಭೋಗ ಕಾಲದಲ್ಲಿ ಸಾಮಂಜಸ್ಯ ಪೂರ್ಣ ಆಚರಣೆಯೆಂದು, ಅಭಿಪ್ರಾಯ.

"ವಿದ್ಯಾಂಚಾವಿದ್ಯಾಂಚ ಯಸ್ತದ್ವೇದೋಭಯಂ ಸಹ,
ಅವಿದ್ಯೆಯಾ ಮೃತ್ಯುಂ ತೀರ್ತ್ವಾ ವಿದ್ಯಯಾಮೃತಮಶ್ನುತೇ"

ಆದ್ದರಿಂದ, ನಿಜವಾಗಿ ತತ್ತ್ವಜ್ಞನಾದ ಸಾಧಕನೇ ಸಂಚರ ಮತ್ತು ಪ್ರತಿ ಸಂಚರ ವಿಜ್ಞಾನವನ್ನು ಸರಿಯಾಗಿ ತಿಳಿಯುತ್ತಾನೆ. ಅವನು ಸೃಷ್ಟಿ ಸ್ಥಿತಿ ಮತ್ತು ತತ್ತ್ವಗಳಲ್ಲಿ ಯಾವುದನ್ನೂ ಒಪ್ಪದಿರನು. ಇವನು ಕರ್ಮವನ್ನು ಒಪ್ಪದಿರನು. ಅವನು ವಾಸ್ತವ ಭಾವದಿಂದ ಕರ್ಮಸಾಧನೆಯನ್ನು ಮಾಡಿ, ಮೃತ್ಯುವನ್ನು ಅತಿಕ್ರಮಿಸುತ್ತಾನೆ. ಮತ್ತು ಪ್ರಜ್ಞೆಯ ಮೂಲಕ ಅಮೃತತ್ವವನ್ನು ಪಡೆಯುತ್ತಾನೆ.

"ಯಸ್ತು ಸರ್ವಾಣಿ ಭೂತಾನಿ ಆತ್ಮನ್ಯೇವಾನುಪಶ್ಯತೇ
ಸರ್ವ ಭೂತೇಷು ಚಾತ್ಮಾನಂ ತತೋ ನ ವಿಜುಗುಪ್ಸತೇ"

ಪ್ರತಿಯೊಂದು ವಸ್ತುವಿನಲ್ಲಿ ತನ್ನನ್ನೂ, ಮತ್ತು ತನ್ನಲ್ಲಿ ಪ್ರತಿಯೊಂದು ವಸ್ತುವನ್ನೂ, ನೋಡುವವನ ಮನದಲ್ಲಿ ಯಾರನ್ನೂ ಕುರಿತು ಅಸಹ್ಯೆಯ (ಘೃಣಾ) ಭಾವವಿರಲಾರದು. ಬ್ರಹ್ಮಜ್ಞರ ಎಲ್ಲಕ್ಕಿಂತ ದೊಡ್ಡ ಲಕ್ಷಣವೆಂದರೆ, ಘೃಣಾತ್ಯಾಗವೇ ಸರಿ. ಸರ್ವ ಭೂತಗಳನ್ನು ಸಮಭಾವದಿಂದ ಕಾಣುವುದರ ಫಲಸ್ವರೂಪವಾಗಿ, ಗುಪ್ತ ರೂಪದಿಂದ, ಸಹ ಯಾವುದೇ ಪಾಪ ಕ್ರಿಯೆಯನ್ನು ಮಾಡುವ ಸಂಭವವು ಅವನಲ್ಲಿರಲಾರದು.

"ಯಸ್ಮಿನ್ ಸರ್ವಾಣಿ ಭೂತಾನಿ ಆತ್ಮೈವಾಭೂದ್ವಿಜಾನತಃ
ತತ್ರ ಕೋ ಮೋಹಃ ಕಃ ಶೋಕ ಏಕತ್ವಮನುಪಶ್ಯತಃ"

ಯಾವಾಗ,ನಮ್ಮ ಆತ್ಮವು ಸರ್ವಭೂತಗಳಲ್ಲಿ ವ್ಯಾಪಿಸಿದೆಯೆಂಬ ಭಾವವು ಸುಸ್ಪಷ್ಟವಾಗುವುದೋ, ಆಗ ಏನನ್ನಾಗಲಿ ಇನ್ನೂ ಪಡೆಯಬೇಕೆಂಬ ಬಯಕೆಯಾಗಲಿ, ಇಲ್ಲವೆ ಏನನ್ನೋ ಕಳೆದುಕೊಂಡು ಬಿಟ್ಟೆನಲ್ಲಾ ಎಂಬ ಭಯವಾಗಲಿ ಇರವು. ಎಲ್ಲ ವಸ್ತುಗಳಲ್ಲಿ ಏಕತ್ವದ ಅರಿವು ಮೂಡಿದ ಮೇಲೆ, ಮೋಹ



ಮತ್ತು ಶ್ಲೋಕಗಳಿಗೆ ತಮ್ಮ ಇರವಿನ ಉಳಿವಿಗಾಗಿ, ಯಾವುದೇ ಉಪಕರಣಗಳು ಬೇಕಾಗುವುದಿಲ್ಲ.

"ಸ ಪರ್ಯಗಾಚ್ಛುಕ್ರಮ ಕಾಯಮವ್ರಣ
ಮಸ್ನಾವಿರಂ ಶುದ್ಧ ಮ ಪಾಪವಿದ್ಧಮ್ ।
ಕವಿರ್ಮನೀಷೀ ಪರಿಭೂಃಸ್ವಯಂಭೂ
ರ್ಯಾಥಾ ತಥ್ಯತೋಽರ್ಥಾನ್ ವ್ಯದಧಾಚ್ಛಾಶ್ವತೀಭ್ಯಃ ಸಮಾಭ್ಯಃ ॥"

ಆ ಪರಮ ಬ್ರಹ್ಮನ ಸ್ವರೂಪವು ಸರ್ವವ್ಯಾಪಕವಾಗಿದೆ. ಸಾಧಕನು ಅವನ ಮಧ್ಯದಲ್ಲಿಯೇ ಇರುತ್ತಾನೆ. ಮತ್ತು ಅವನ ಭಾವವನ್ನೇ ತಾಳಿ ಕೊನೆಗೆ ಅವನೇ ಆಗುತ್ತಾನೆ. ಅವನ ಆ ಭಾವದ ಮಧ್ಯೆ ಸರ್ವಾರ್ಥಸಿದ್ಧನ ತೇಜ ಮತ್ತು ಸರ್ವಜ್ಞತೆಗಳ ಬೀಜವಿರುತ್ತದೆ— "ತತ್ರ ನಿರತಿಶಯಂ ಸರ್ವಜ್ಞ ಬೀಜಮ್." ಪರಮಾತ್ಮನಿಗೇ ಯಾವುದೇ ಸ್ಥೂಲ ಕಾಯವಿಲ್ಲ. ಅವನು ಎಲ್ಲ ದೃಷ್ಟಿಯಿಂದಲೂ ದೋಷ ರಹಿತನು; ಶುದ್ಧನು; ನಿಷ್ಪಾಪನು; ತೇಜಸ್ವಿಯು; ದ್ರಷ್ಟಾರನು; ಆತ್ಮಜಯಿಯೂ ಮತ್ತು ಸ್ವಯಂಭೂ ಸಹ ಆಗಿದ್ದಾನೆ. ಅವನನ್ನು ಬೇರಾವುದಕ್ಕೂ ಹೋಲಿಸಲಾರೆವು. 'ನ ತಸ್ಯ ಪ್ರತಿಮಾ ಅಸ್ತಿ'; ಅಂದರೆ ಅವನ ಯಾವುದೇ ಪ್ರತಿಮೆಯು ಇರಲಾರದು. ಅವನಲ್ಲಿ ಅನಂತ ಕ್ಷಮೆಯಿದೆ; ಆದಿಕಾಲದಿಂದಲೂ ಅವನು ಜೀವಿಗಳಿಗೆ ಏನೆಲ್ಲವನ್ನೂ ನೀಡುತ್ತ ಬಂದಿದ್ದಾನೆ.ಮತ್ತು ಮುಂದೆ ಸಹ, ನೀಡುತ್ತ ಸಾಗುವನು. ಆ ವಿರಾಟ ಪುರುಷನ ಭಾವವು ಸರಿಯಾಗಿ ಈ ರೀತಿಯೇ ಇದೆ. ಯಾರು ಅವನ ಸೃಷ್ಟಿಯ ಒಂದು ಮಿಣುಕು ನೋಟವನ್ನು ಕಂಡು ಬಹಿರ್ಮುಖೀ ಭಾವ ಹೊಂದಿ, ಸ್ಪಷ್ಟ ವಸ್ತುಗಳತ್ತ ನುಗ್ಗುವರೋ, ಅಂದರೆ ಯಾರು ಸೃಷ್ಟ ವಸ್ತುಗಳಲ್ಲಿ ಸಿಲುಕಿ ವಂಚಿತರಾಗಿರುವರೋ, ಅವರು ಈ ಸೃಷ್ಟಿಯ ಹಿಂದೆ, ಯಾವ ಮಹಾ ಸೃಷ್ಟಾ ಇರುವನೆಂಬುದನ್ನೇ ಮರೆತಿರುತ್ತಾರೆ. ಬರೀ ಸೃಷ್ಟಿಯನ್ನು ಕಂಡು, ಅದರ ಅಧೀಶ್ವರನನ್ನು ಮರೆಯುವುದು ಮೂರ್ಖತನವಲ್ಲದೆ ಬೇರಿನ್ನೇನು? ತಾಯಿ ಊಟವನ್ನು ತಯ್ಯಾರಿಸುತ್ತಾಳೆ. ಮಗು ತಾಯಿಗಾಗಿ ಅಳಲು ಪ್ರಾರಂಭಿಸುತ್ತದೆ. ತಾಯಿ ಬಂದು ಮಗುವಿನ ಕೈಯಲ್ಲಿ ಆಟಿಗೆ–ಸಾಮಾನು ಕೊಡುತ್ತಾಳೆ. ಮತ್ತು ಮಗುವು ಆಟಿಗೆ ಸಾಮಾನು ಕಂಡು, ಎಷ್ಟು ಮುಗ್ಧವಾಗುವುದೆಂದರೆ, ಅದು ಒಮ್ಮಿಂದೊಮ್ಮೆ ತಾಯಿಯನ್ನೇ ಮರೆಯುತ್ತದೆ. ಆದರೆ ಯಾವ ಮಕ್ಕಳು ಆಟಿಗೆ–ವಸ್ತು ಪಡೆದ ಮೇಲೂ ಸಹ ತಾಯಿಯನ್ನು ಮರೆಯುದಿಲ್ಲವೋ, ಅವುಗಳ ಅಳು ನಿಲ್ಲಲಾರದು. ತಾಯಿಯು ಅಂಥ ಮಕ್ಕಳನ್ನು ಕಂಕುಗಳಲ್ಲಿ

ಎತ್ತಿಕೊಳ್ಳುತ್ತಾಳೆ. ಎದೆಯ ಮೊಲೆಯೂಡಿಸುತ್ತಾಳೆ. ಮಗುವು ಸಹ ಒಂದು ಕೈಯಲ್ಲಿ ಆಟಿಗೆಯನ್ನು ಹಿಡಿದುಕೊಂಡು,ಇನ್ನೊಂದು ಕೈಯಿಂದ ತಾಯಿಯನ್ನು ತಬ್ಬಿಕೊಳ್ಳುತ್ತದೆ. ಯಾವ ಬುದ್ಧಿವಂತ ಸಾಧಕರು ಈ ಸೃಷ್ಟಿರೂಪದ ಆಟಿಗೆಯನ್ನು ಕಂಡು ಇದರಲ್ಲಿಯೇ ಮಗ್ನರಾಗಿ ಸೃಷ್ಟಿಕರ್ತನನ್ನು ಮರೆಯುವುದಿಲ್ಲವೋ, ಮತ್ತು ಈಶ್ವಪ್ರಾಪ್ತಿಯ ಪ್ರಯತ್ನವನ್ನು ಬಿಡುವುದಿಲ್ಲವೋ ಅಂಥವರ,ಕೈಗಳನ್ನು ಸ್ವತಃ ಹಿಡಿಯುವ ಹೊಣೆ ಭಗವಂತನದಾಗಿದೆ.

"ಅಂಧಂ ತಮಃ ಪ್ರವಿಶಂತಿಯೇಽಸಂಭೂತಿಮುಪಾಸತೇ,
ತತೋ ಭೂಯ ಇವ ತೇ ತಮೋ ಯ ಉ ಸಂಭೂತ್ಯಾಂ ರತಾಃ"

ಸಂಭೂತಿಯ, ಅಂದರೆ ಸೃಷ್ಟಿಯ ಮಿಣುಕು ಕಂಡು ಯಾರು ಕೇವಲ ಅದರತ್ತ ಓಡುವರೋ, ಮತ್ತು ಅಸಂಭೂತಿ ಅಂದರೆ ಸೃಷ್ಟಿಯ–ವಿನಾಶದ ಸಂಭವವನ್ನು ಕಂಡು, ಯಾರು ಭಯದಿಂದ ಅದರ ಚಿಂತೆಯನ್ನೇ ಮಾಡುವರೋ, ಇವರೀರ್ವರ ಗತಿಗಳೂ ಅಂಧಕಾರಮಯ ಲೋಕಕ್ಕೆ ಕರೆದೊಯ್ಯುತ್ತವೆ. ಸಾಧಕನು ಸಂಭೂತಿ–ಅಸಂಭೂತಿಗಳನ್ನೂ, ಸೃಷ್ಟಿ ವಿನಾಶಗಳನ್ನೂ ಸಮದೃಷ್ಟಿಯಿಂದ ನೋಡುತ್ತಾನೆ. ಪೂರ್ಣವಾಗಿ ಸಂಭೂತಿಯ ಉಪಾಸನೆಯನ್ನೇ ಮಾಡುವ ವಿಜ್ಞಾನಿಗಳು (Scientists) (ಇಂದು ವಿನಾಶದ ಭಯದಿಂದ ಸಂತ್ರಸ್ತರಾಗಿದ್ದಾರೆ.) ಮತ್ತು ಸಂಸಾರ ತ್ಯಜಿಸಿದ ಸನ್ಯಾಸಿಗಳು, ಇವರೀರ್ವರೂ ಹಿಡಿದ ಹಾದಿ ಸರಿಯಲ್ಲ. ಈ ಹಾದಿಯು ಮೋಕ್ಷದ ಹಾದಿಯಲ್ಲ. ಯಾರು ಇವರೀರ್ವರ ನಡುವೆ ಸಾಮಂಜಸ್ಯವಿರಿಸಿಕೊಂಡು ನಡೆಯುವರೋ, ಅವರು ಮಾತ್ರ ಅಮೃತತ್ತ್ವವನ್ನು ಪಡೆಯುತ್ತಾರೆ.

"ಸಂಭೂತಿಂ ಚ ವಿನಾಶಂ ಚ ಯಸ್ತದ್ವೇದೋ ಭಯಂ ಸಹ
ವಿನಾಶೇನ ಮೃತ್ಯುಂ ತೀರ್ತ್ವಾ ಸಂಭೂತ್ಯಾಮೃತಮಶ್ನುತೇ"

ಸೃಷ್ಟಿ ಮತ್ತು ವಿನಾಶದ ಸ್ವರೂಪವನ್ನು ತಿಳಿದವರು, ಮೃತ್ಯುವಿಗಿಂತ ಶ್ರೇಷ್ಠವಾದ ಸ್ಥಾನವನ್ನು ಪಡೆಯುತ್ತಾರೆ. ತೋರುವ ಜಗತ್ತು ಈ ಸೃಷ್ಟಿ ಮತ್ತು ವಿನಾಶಗಳ ಲೀಲೆಯಿಂದ ತುಂಬಿದೆ. ಮತ್ತು ಈ ಸೃಷ್ಟಿಯಿಂದ ವಿನಾಶದತ್ತ ಇರುವ ಗತಿಯೇ,ಚಲಿಸುವ ಅವಸ್ಥೆಯೇ, ನಿಜವಾದ ದೃಷ್ಟಿಯಿಂದ, ಸ್ಥಿತಿಯೆಂದು ಪ್ರತೀತವಾಗುತ್ತದೆ. ಆದ್ದರಿಂದ ಸೃಷ್ಟಿ ಮತ್ತು ವಿನಾಶಗಳನ್ನು ತಿಳಿಯುವವರು ಸಂಸಾರ ಚಕ್ರವನ್ನು ಸಂಪೂರ್ಣವಾಗಿ ತಿಳಿದಿರುತ್ತಾರೆ. ಮತ್ತು ಈ ಚಕ್ರದ ಹೊರಗೆ ಬಂದು, ಸ್ಥಿತಿಯ ಲಾಭವನ್ನು ಕೇವಲ ಅವರು ಮಾತ್ರ ಪಡೆಯುವ ಸಂಭವವಿದೆ.



ಈ ಅಮೃತತ್ವದ ಅರ್ಜನೆಯ, ಈ ಬ್ರಹ್ಮೋಪಲಬ್ಧಿಯ ಹಾದಿಯಲ್ಲಿನ ಕೊನೆಯ ಪ್ರತಿಬಂಧಕವೆಂದರೆ ಹಿರಣ್ಮಯ ಕೋಶವಾಗಿದೆ. ಹಿರಣ್ಮಯ ಕೋಶವಿರುವ ತನಕ, ಸಾಧಕನು ಪರಮಾತ್ಮನನ್ನು ಪಡೆಯಲಾರನು. ಸೃಷ್ಟಿಯ ಸೆಳೆತ, ಮತ್ತು ವಿನಾಶದ ಭಯಗಳೆರಡೂ ಸಾಧಕನನ್ನು ಎಂದೆಂದಿಗೂ ಚಂಚಲಗೊಳಿಸುತ್ತವೆ. ಪರಮಾತ್ಮನು ಹಿರಣ್ಮಯ ಕೋಶಕ್ಕಿಂತ ಊರ್ಧ್ವಕ್ಕೆ ತನ್ನ ಸ್ವರೂಪದಲ್ಲಿ ನೆಲೆಸಿರುತ್ತಾನೆ.

ಹಿರಣ್ಮಯೇನ ಪಾತ್ರೇಣ ಸತ್ಯಸ್ಯಾಪಿಹಿತಂ ಮುಖಮ್
ತತ್ತ್ವಂ ಪೂಷನ್ನಪಾವೃಣು ಸತ್ಯಧರ್ಮಾಯ ದೃಷ್ಟಯೇ

ಎಲೈ ಪರಮಾತ್ಮ ; ನಾವು ಸತ್ಯ ಲೋಕದಲ್ಲಿ ನಿಮ್ಮ ಲೋಕದಲ್ಲಿ ಸ್ಥಿತಿ ಲಾಭ ಪಡೆಯುವಂತಾಗಲಿ; ಇದಕ್ಕೋಸುಗ ಈ ಹಿರಣ್ಮಯ ಕೋಶದ,ಹೊಳೆವ ಕಾಂತಿಯ ಆವರಣವನ್ನು ನಾವು ಸರಿಸಿ ಆಚೆಗೆ ತಳ್ಳಬೇಕು. ಇದರಿಂದ, ನಮ್ಮ ಮನವು ಹಿರಣ್ಮಯ ಕೋಶದ ಮೆರುಗಿನಿಂದ ಆಕರ್ಷಿತವಾಗದಿರಲಿ. ಈಶೋಪನಿಕ್ಷತ್ತಿನಲ್ಲಿ ಬ್ರಹ್ಮನನ್ನು ಕುರಿತು ಇದಿಷ್ಟನ್ನೇ ಹೇಳಲಾಗಿದೆ.

ಮಾನವನು ಸಾಧನೆಯ ಮೂಲಕ ಯಾವಾಗ ಸ್ಥೂಲದಿಂದ ಸೂಕ್ಷ್ಮದತ್ತ ಹೋಗಹತ್ತುವನೋ,ಆಗ ಅವನ ಎಲ್ಲ ಬಂಧನಗಳೂ ಸಾವಕಾಶವಾಗಿ ತಂತಾನೇ ಸಡಿಲಾಗಿ ಕಳಚಲಾರಂಭಿಸುತ್ತವೆ. ಮತ್ತು ಆ ಶುದ್ಧ ಆತ್ಮಸ್ವರೂಪದ ಪ್ರಾಪ್ತಿಗೋಸುವ ಕಟ್ಟ ಕಡೆಯ ಆಕೃತಿಯು ಮೂಡುತ್ತದೆ. ಆಗ ಹಿರಣ್ಮಯ ಕೋಶವು ನಾಶವಾಗುತ್ತದೆ. ಕಾಮಮಯ ಕೋಶ, ಮನೋಮಯ ಕೋಶ, ಅತಿಮಾನಸ ಕೋಶ, ವಿಜ್ಞಾನಮಯಕೋಶ ಮತ್ತು ಹಿರಣ್ಮಯಕೋಶದ ವರೆಗಿನ ಯಾವ ಯಾವಸ್ತರಗಳಿವೆಯೋ,ಇವುಗಳಲ್ಲಿ ಒಂದೊಂದು ಮನದ ಯಾವುದಾದರೊಂದು ಮೂಲೆಯಲ್ಲಿ ಪ್ರತ್ಯಕ್ಷವಿರಲಿ; ಪರೋಕ್ಷವಾಗಿರಲಿ, ಏನಾದರೊಂದು ಸೀಮಿತ ವಿಷಯವಿದ್ದೇ ಇರುತ್ತದೆ. ಮತ್ತು ಆ ವಿಷಯವೇ ಇವುಗಳ ಬಂಧನಕ್ಕೆ ಕಾರಣವಾಗುತ್ತದೆ. "ಮನ ಏವ ಮನುಷ್ಯಾಣಾಂ ಕಾರಣಂ ಬಂಧಮೋಕ್ಷಯೋಃ"— ಮನವನ್ನು ನಿರ್ವಿಷಯಗೊಳಿಸಿದ ಮೇಲೆ ಮಾತ್ರ ಮಾನವನು ಮೋಕ್ಷವನ್ನು ಪಡೆಯುತ್ತಾನೆ. ಹೇಗೆಂದರೆ, ಕಬ್ಬಿಣದ ಕಠಾರಿಯಿಂದ ನಿಷ್ಠುರ ಕಾರ್ಯಗಳನ್ನು ಮಾಡಬಹುದು; ಮತ್ತು ಜೀವಿಗಳ ಬಂಧನವನ್ನು ಕತ್ತರಿಸಿ ಹಾಕಬಹುದು. ಅದೇ ರೀತಿ, ಮನವು ವೈಷಯಿಕ ಅಥವಾ ನಿರ್ವೈಷಯಿಕ ಗತಿಯನ್ನನುಸರಿಸಿ, ಬಂಧನ ಇಲ್ಲವೆ ಮುಕ್ತಿಗಳೆರಡರ ಕಾರಣವೂ ಆಗಬಲ್ಲದು.

ಎಲ್ಲ ಖಂಡ ವಸ್ತುಗಳೂ ಹೊರಗಿನ ವಸ್ತುಗಳೇ ಆಗಿವೆ. ಖಂಡವನ್ನು

ಕುರಿತು ಪ್ರೇಮವೆಂದೂ ಶಾಶ್ವತವಾಗಿರಲಾರದು. ಏಕೆಂದರೆ, ಮನಸ್ಸು ಯಾವಾಗಲೂ ಒಂದು ವಿಷಯದಿಂದ ಇನ್ನೊಂದರತ್ತ ಓಡುತ್ತಿರುತ್ತದೆ. ಆದ್ದರಿಂದ, ಖಂಡದ ಬಗೆಗೆ ಯಾವ ಪ್ರೇಮವಿದೆಯೋ, ಅದನ್ನೇ ಅಖಂಡದೊಂದಿಗೆ ಸೇರಿಸು. ಖಂಡಕ್ಕೆ ಆತ್ಮ ಇಲ್ಲವೆ ಭಗವಾನ ಎಂದು ತಿಳಿಯುವ ತಪ್ಪು ಮಾಡಿ ಕುಳಿತು ಬಿಡಬೇಡ. ಆತ್ಮಸ್ವರೂಪವನ್ನು ತಲುಪುವುದರಲ್ಲಿಯೇ, ಅಸೀಮನ ಪ್ರೇಮವೂ ಸಹ ಸಂಭವವಿದೆ. ತಪ್ಪಿಯೂ ಸಹ, ನಿನ್ನನ್ನು ಕ್ಷುದ್ರನೆಂದು ತಿಳಿದು ಜಡತ್ವದತ್ತ ನುಗ್ಗಬೇಕು. ಅನಂತ ಪ್ರೇಮದಲ್ಲಿಯೇ ನಿರತನಾಗು. ನಿಮ್ಮ ಆತ್ಮವೇ ಪರಮಾತ್ಮನಲ್ಲಿ ರೂಪಾಂತರವಾಗುತ್ತದೆ. ಸಾಂಸಾರಿಕ ಸುಖವಾವುದೂ ಅನಂತವಾಗಿಲ್ಲ. ಆ ಪರಮ ಸುಖಸಾಗರ ಪರಮಾತ್ಮನಲ್ಲಿ ನಿನ್ನನ್ನು ಸಂಪೂರ್ಣವಾಗಿ ಸಮರ್ಪಿಸಿಕೊ. ಆಗ ಮಾತ್ರ ಆನಂದವೆಂದರೇನೆಂಬುದನ್ನು ನೀನು ಅರಿಯಬಲ್ಲೆ. ಇಲ್ಲಿ ಆನಂದ ಪ್ರಾಪ್ತಿಯ ಮಾರ್ಗವಿದೆ; ಇಲ್ಲಿ ಆತ್ಮ ನಿವೇದನೆಯ ಸಾಧನವೂ ಇದೆ. ಇದನ್ನೇ ಕೇವಲ ಭಕ್ತಿ ಎನ್ನುತ್ತಾರೆ. ಸಂಸಾರದಲ್ಲಿ ನಿನ್ನ ಕರ್ತವ್ಯವನ್ನು ಚೊಕ್ಕಟವಾಗಿ ನಿರ್ವಹಿಸುತ್ತ ನಡೆ. ಸಕಲ ಕಾರ್ಯಗಳಲ್ಲಿ ತೊಡಗಿದ್ದಾಗಲೂ ಸಹ, ನಿನ್ನ ಸ್ವರೂಪದ ಚಿಂತನ ಮಾಡುತ್ತ ನಡೆ, ಆಗ ಮಾತ್ರ ಯಥಾರ್ಥ ಸಾಧನೆಯಾದೀತು; ಸ್ವರೂಪ ಚಿಂತನ ಮಾಡುತ್ತ ಸಾಗಿದ ಬಳಿಕ,ಒಂದು ದಿನ ಸ್ವರೂಪ ಸ್ಥಿತಿಯು ಬಂದೇ ತೀರುತ್ತದೆ. ಮತ್ತು ಅದುವೇ ಸಾಧಕನ ಪರಮ ಲಕ್ಷ್ಯವಾಗಿದೆ. ಆತ್ಮವು ಸ್ವರೂಪತಃ ಪಾಪ ದೂರವಾಗಿದೆ. ತಾನೇ ಗೆಯ್ದ ಕರ್ಮಗಳಿಂದಾಗಿಯೇ ಮನಸ್ಸು ಸಂಸ್ಕಾರದ ಕಟ್ಟುಪಾಡಿಗೆ ಸಿಲುಕುತ್ತದೆ. ಇದರ ಫಲವಾಗಿ, ಜೀವವು ಜನನ–ಮರಣಗಳ ದಾಸನಾಗುತ್ತದೆ. ಸಾಧನೆಯಿಂದ ಮನೋಶುದ್ಧಿಯನ್ನು ಹೊಂದಿ, ಸಂಸ್ಕಾರಗಳು ಕ್ಷಯಿಸಿದೊಡನೆಯೇ ಜನನಮರಣ ಚಕ್ರಕ್ಕಿಂತ ಊರ್ಧ್ವಸ್ತರ ತಲುಪುತ್ತೇವೆ. ಅಲ್ಲಿ ಶಾಶ್ವತವಾದ ಅಮೃತ ಲೋಕವಿದೆ. ಅಲ್ಲಿ ಆತ್ಮ ಪರಮಾತ್ಮರಲ್ಲಿ ಯಾವ ಭೇದವೂ ಇರದು.

ಮುಂಗೇರ: ಶ್ರಾವಣೀ ಪೂರ್ಣಿಮಾ–೧೯೫೫

## ೨
# ವೇದದಲ್ಲಿ ಬ್ರಹ್ಮವಿಜ್ಞಾನ

ವೇದವು ಮಾನವ ಮನೀಷೆಯ ಹೊಸ ವಿಕಾಸವಾಗಿದೆ. ಶಬ್ದೋತ್ಪತ್ತಿಗನುಸರಿಸಿ ವೇದ ಶಬ್ದದ ಅರ್ಥವು ಜ್ಞಾನ ಎಂದಾಗುತ್ತದೆ. ಈ ಜ್ಞಾನವೇ ಅಲ್ಲಲ್ಲಿ ದೇಶಿಕ, ಕಾಲಿಕ ಇಲ್ಲವೆ ಪಾತ್ರಿಕ ಸತ್ತೆಗಳನ್ನು ಅವಲಂಬಿಸಿರುತ್ತದೆ. ಬೇರೆಡೆಯಲ್ಲಿ ಎಲ್ಲ ಅವಲಂಬನೆಗಳಿಂದ ಮುಕ್ತವಾಗಿ ಆತ್ಮ–ಸಂಪೂರ್ಣದ ಅನುಭೂತಿಯಾಗಿರುತ್ತದೆ. ಮೊದಲನೆಯ ಜ್ಞಾನಕ್ಕೆ, ಅದರ ವಸ್ತು ಸಾಪೇಕ್ಷತೆಯಿಂದಾಗಿ, ಆಪೇಕ್ಷಿಕ ಜ್ಞಾನ ಇಲ್ಲವೆ ಅಪರಾ ಜ್ಞಾನವೆನ್ನುತ್ತಾರೆ. ಇನ್ನು ಎರಡನೆಯದಕ್ಕೆ ಪರಾ ಜ್ಞಾನ ಇಲ್ಲವೆ ಪಾರಮಾರ್ಥಿಕ ಜ್ಞಾನವೆನ್ನುತ್ತಾರೆ. ಇಲ್ಲಿ ವೇದ ಶಬ್ದಕ್ಕೆ ಈ ಪಾರಮಾರ್ಥಿಕ ಜ್ಞಾನವೆಂದೇ ಪ್ರಯೋಗಿಸಲಾಗಿದೆ.

ಕಳೆದ ಶ್ರಾವಣ ಪೂರ್ಣಿಮೆಯಂದು ನಾನು ಶುಕ್ಲ ಯಜುರ್ವೇದ ಕುರಿತು ಸ್ವಲ್ಪ ಹೇಳಿದ್ದೆ. ಈ ಬಾರಿ ಅಥರ್ವವೇದ ಕುರಿತು ಸ್ವಲ್ಪ ಹೇಳುತ್ತೇನೆ. ಹಲಕೆಲವು ಪಂಡಿತರು ಸಹ, ಅಥರ್ವವೇದದಲ್ಲಿ ಸಾರವಸ್ತುವೇನೂ ಇಲ್ಲ. ಏನಾದರೂ ಸ್ವಲ್ಪ ಇದ್ದರೆ, ಅದು ಇತಿಹಾಸ ಪೂರ್ವ ಯುಗದ ಮಾನವನು ರಚಿಸಿದ ಭೂತಪ್ರೇತಗಳ ಅಷ್ಟಿಷ್ಟು ಮಂತ್ರವಷ್ಟೇ; ಎಂದು ಹೇಳುವುದನ್ನು ನಾನು ಕೇಳಿದ್ದೇನೆ. ಇಂಥ ವಿಚಾರದಲ್ಲಿರುವ ಸತ್ಯವೆಷ್ಟು? ಈ ಚರ್ಚೆಯನ್ನು ನೀವೇ ಮಾಡಿರಿ.

ಭೃಗುಪುತ್ರನಾದ ವೈದರ್ಭಿಯು ಮಹಾಜ್ಞಾನಿಯಾದ ಪಿಪ್ಪಲಾದ ಋಷಿಯ ಬಳಿಸಾರಿ, ಅವನೊಂದಿಗೆ ಜಿಜ್ಞಾಸೆಯನ್ನು ಮಾಡಿದನು. ಏನೆಂದರೆ,

“ಅರಾ ಇವ ರಥನಾಭೌ ಪ್ರಾಣೇ ಸರ್ವಂ ಪ್ರತಿಷ್ಠಿತಮ್
ಋಚೋ ಯಜೂಂಷಿ, ಸಾಮಾನಿ ಯಜ್ಞಃ ಕ್ಷತ್ರಂ ಬ್ರಹ್ಮ ಚ”

ಯಾವ ರೀತಿ, ರಥದ ಗಾಲಿಯ ಹಲ್ಲುಗಳು ಗಡ್ಡಿಯಲ್ಲಿ (ಚಕ್ರನಾಭಿಯಲ್ಲಿ)

ಸೇರಿರುವುವೋ, ಸರಿಯಾಗಿ ಅದೇ ರೀತಿ ವಿಶ್ವಬ್ರಹ್ಮಾಂಡದ ಪ್ರತಿಯೊಂದು ವಸ್ತುವೂ ಬ್ರಹ್ಮನನ್ನೇ ಕೇಂದ್ರವಾಗಿಸಿಕೊಂಡು ಇವೆ. ಈ ಬ್ರಹ್ಮ ಚಕ್ರದ ಪ್ರಾಣಬಿಂದು ಇಲ್ಲವೆ ಸ್ಫೋಟವು ಆಬ್ರಹ್ಮಸ್ತಂಬ ಎಂದರೆ ಬ್ರಹ್ಮನಿಂದ ಹುಲ್ಲು ಕಡ್ಡಿಯವರೆಗೆ, ಎಲ್ಲ ವಸ್ತುಗಳ ಮೂಲಾಧಾರವಾಗಿದೆ. ಋುಕ್–ಸಮೂಹ, ಯಜು–ಸಮೂಹ, ಸಾಮ ಸಮೂಹ ವಿಪ್ರೋಚಿತ ಇಲ್ಲವೆ ಕ್ಷತ್ರೋಚಿತ ಸೇವಾ ನಿರತರಾದ ವ್ಯಕ್ತಿ ಸಮೂಹಗಳೆಲ್ಲವೂ ಚಕ್ರನಾಭಿಯನ್ನೇ ಅವಲಂಬಿಸಿವೆ.

"ಪ್ರಜಾಪತಿಶ್ಚರಸಿ ಗರ್ಭೇ ತ್ವಮೇವ ಪ್ರತಿ ಜಾಯಸೇ
ತುಭ್ಯಂ ಪ್ರಾಣ ಪ್ರಜಾಸ್ತ್ವಿಮಾ ಬಲಿಂ ಹರಂತಿ,
ಯಃ ಪ್ರಾಣೈಃ ಪ್ರತಿತಿಷ್ಠಸಿ."

ಪಜಾ ಶಬ್ದದ ಅರ್ಥವೆಂದರೆ ಸೃಷ್ಟ ವಸ್ತು ಎಂದು. ಈ ಅರ್ಥದಲ್ಲಿ ಬ್ರಹ್ಮನು ಅವಶ್ಯವಾಗಿ ಪ್ರಜಾಪತಿಯಾಗಿದ್ದಾನೆ. ಏಕೆಂದರೆ, ಅವನು ಪ್ರತಿಯೊಂದು ಸೃಷ್ಟ–ವಸ್ತುವಿನ ನಿಯಂತ್ರಕನಾಗಿದ್ದಾನೆ. ಈ ಪ್ರಜಾಪತಿ ಬ್ರಹ್ಮನೇ ಭ್ರೂಣ ರೂಪದಲ್ಲಿ ಗರ್ಭದಲ್ಲಿ ಚರಿಸುತ್ತಾನೆ. ಅದೇ ರೀತಿ, ಯಾವಾಗ ಅದೇ ಭ್ರೂಣವು ಜನ್ಮ ಗ್ರಹಿಸುತ್ತದೆಯೋ, ಆಗ ಯಥಾರ್ಥವಾಗಿ ಅದಕ್ಕೆ ಆ ಭ್ರೂಣದ ಜನ್ಮವೆನ್ನದೆ, ಬ್ರಹ್ಮನದೇ ಪ್ರತಿ ಜನ್ಮವೆಂದು ಕರೆಯುವುದು ಹೆಚ್ಚು ಉಪಯುಕ್ತವಾಗಿದೆ. ಏಕೆಂದರೆ, ಈ ಸಮಗ್ರ ಸೃಷ್ಟಿಯು ಬ್ರಹ್ಮನ ವಿಕಾಸವಾಗಿದೆ. ಹೇಗೆಂದರೆ, ಚಂದ್ರನು ಒಬ್ಬನೇ. ಆದರೆ ಗೋಷ್ಪದಗಳಲ್ಲಿ ಪ್ರತಿಬಿಂಬಿಸಿ, ಅವನು ಅಸಂಖ್ಯ ಚಂದ್ರರ ರೂಪದಲ್ಲಿ ಹೊಳೆಯುತ್ತಾನೆ. ಯಾವುದೇ ಹೊಸ ಚಂದ್ರನ ಜನ್ಮವೇನೂ ಆಗಲಿಲ್ಲ. ಓರ್ವನೇ ಚಂದ್ರನು ಬೇರೆ ಬೇರೆ ಆಧಾರಗಳಲ್ಲಿ ಪ್ರತಿಜಾತನಾಗಿರುವನಷ್ಟೇ. ಸರಿಯಾಗಿ ಅದೇ ರೀತಿ, ಓರ್ವನೇ ಬ್ರಹ್ಮನು ಅನಂತ, ಅಸಂಖ್ಯ ಮಾನಸ ಆಧಾರಗಳಲ್ಲಿ ಅನಂತ ಜೀವ ರೂಪದಲ್ಲಿ ತೋರಿ ಬರುತ್ತಾನೆ. ಬ್ರಹ್ಮನು ಆನಂದ ಸ್ವರೂಪನಾಗಿದ್ದಾನೆ. ಆದ್ದರಿಂದ ಜೀವ ಸಮೂಹವು ಸಹ, ತನ್ನ ಇಂದ್ರಿಯಗಳ ಸಹಾಯದಿಂದ ಯಾವಾಗಲೂ ತನ್ನ ಸ್ವರೂಪದಲ್ಲಿ ಅಂದರೆ, ಆನಂದ ಪ್ರಾಪ್ತಿಯತ್ತ ಧಾವಿಸುತ್ತದೆ. ಆದ್ದರಿಂದ, ಈ ಕ್ಷೇತ್ರದಲ್ಲಿ, ಜೀವಸಮೂಹವು ಅವನಿಂದ ಪ್ರೇರಣೆ ಪಡೆದು ಅವನನ್ನು ಪಡೆಯಲೋಸುಗ, ಅರಿತೋ ಅರಿಯದೆಯೋ, ತಮ್ಮನ್ನು ತಾವೇ ಅವನತ್ತ ಕರೆದೊಯ್ಯುವರೆಂದು ಹೇಳಲಾಗುತ್ತದೆ. ಅಥರ್ವ ವೇದದಲ್ಲಿ ಅನೇಕ ಕಡೆಗೆ ಪುರುಷನ ಅರ್ಥದಲ್ಲಿ ಪ್ರಾಣ ಶಬ್ದವನ್ನೂ ಮತ್ತು ಪ್ರಕೃತಿಯ ಅರ್ಥದಲ್ಲಿ ರಯಿ ಶಬ್ದವನ್ನೂ ಬಳಸಲಾಗಿದೆ.



"ದೇವಾನಾಮಸಿ ಬಹಿತಮಃ ಪಿತೃಣಾಂ ಪ್ರಥಮಾ ಸ್ವಧಾ
ಋುಷಿನಾಂ ಚರಿತಂ ಸತ್ಯಮಥರ್ವಾಂಗಿರಸಾಮಸಿ"

ಇಲ್ಲಿ ದೇವ ಶಬ್ದದ ಅರ್ಥವು ಭಾವವಾಹಕ ಅರ್ಥಾತ್ ಇಂದ್ರಿಯ ಮತ್ತು ಸ್ನಾಯು ಪುಂಜ. ಈ ಪಿಂಡ ಶರೀರವು ಇಂದ್ರಿಯ ಹಾಗೂ ಸ್ನಾಯುಗಳ ಮೂಲಕವೇ ಭಾವವನ್ನು ಗ್ರಹಿಸುತ್ತದೆ. ಮತ್ತು ವ್ಯಕ್ತಗೊಳಿಸುತ್ತದೆ. ಆದ್ದರಿಂದ ಇವೆಲ್ಲವುಗಳನ್ನು ಜೀವ ದೇಹದ ದೇವ ಎನ್ನುತ್ತಾರೆ. ಆದರೆ ಇಂದ್ರಿಯ ಚಕ್ರ ಅಥವಾ ಸ್ನಾಯು ಪುಂಜಗಳು ತಮ್ಮ ಅಸ್ಥಿತ್ವರಕ್ಷೆ ಮತ್ತು ಕ್ರೀಯಾಶೀಲತೆಗೋಸುಗ, ಪೂರ್ಣರೂಪದಿಂದ (ಬೆನ್ನೆಲುಬು) ಮೇರು ದಂಡವನ್ನು ಅವಲಂಬಿಸಿವೆ. ಈ ಮೇರು ದಂಡವೇ ಭಾವಗ್ರಹಣ ಮತ್ತು ವ್ಯಕ್ತಿಕಾರಣಗಳ ಪ್ರಭಾವದ ಕಾರಣವಾಗುತ್ತದೆ. ಆದ್ದರಿಂದ ಮೇರು ದಂಡವಿಲ್ಲದಿದ್ದರೆ, ಜೀವಿಯು ಗತಿಯೇ ಇಲ್ಲದ ಜಡಪಿಂಡದಂತಾಗುವನು. ಜೀವಿಯ ದೇವತೆಗಳಿಗೋಸುಗ ಬೆನ್ನೆಲುಬು ಯಾವ ರೀತಿ ಅಂತಿಮ ಆಶ್ರಯವಾಗಿದೆಯೋ ಅದೇ ರೀತಿ ಇಡೀ ಬ್ರಹ್ಮಾಂಡಕ್ಕೋಸುಗ ಬ್ರಹ್ಮನೂ ಸಹ ಆಶ್ರಯವಾಗಿದ್ದಾನೆ, ಎಂದು ಶ್ಲೋಕದಲ್ಲಿ ಹೇಳಲಾಗಿದೆ. ಒಂದು ವೇಳೆ ಬ್ರಹ್ಮನನ್ನು ಬಿಟ್ಟುಕೊಟ್ಟರೆ, ಇಡೀ ವಿಶ್ವವು ಅಸ್ತಿತ್ವಹೀನವಾಗುತ್ತದೆ. ವಿಶ್ವದ ಕಲ್ಪನೆಯ ಬೀಜದ ಕುರುಹು ಸಹ ಉಳಿಯದು. ಪ್ರಾಚೀನ ಪದ್ಧತಿಯನ್ನನುಸರಿಸಿ, ಪಿತೃ ಕಾರ್ಯವು ಸ್ವ–ಧಾ ಮಂತ್ರದಿಂದ ಕೂಡಿದೆ. ಆದ್ದರಿಂದ ಸ್ವ–ಧಾ ಮಂತ್ರದ ಮೂಲಕ ಪ್ರಥಮ ಪಿಂಡವನ್ನು ಪಡೆಯುವ ಪೂರ್ವ ಪುರುಷನು ಅನಂತರ ಪಿಂಡ ಪಡೆಯುವರಿಗೋಸ್ಕರ ಎಷ್ಟೊಂದು ಮಹತ್ವ ಪೂರ್ಣವಾಗಿರುವನೋ, ಅಷ್ಟೇ ಮಹತ್ವ ಪೂರ್ಣವಾಗಿ ಸಂಸಾರದ ಸಕಲ ವಸ್ತುಗಳ ಧಾರಾವಾಹಿ ಕತೆಯಲಿ ಬ್ರಹ್ಮನು ಸಹ ಮೊದಲ ಬಿಂದುವಾಗಿದ್ದಾನೆ; ಎಂದು ಹೇಳುತ್ತಾರೆ. ಋುಷಿಗಳಿಗೋಸುಗ ಅವನು ಸತ್ಯಾಚರಣೆಯಷ್ಟು ಪವಿತ್ರನಾಗಿದ್ದಾನೆ. "ಋುಷಿ" ಶಬ್ದವನ್ನು ತಮ್ಮ ತಮ್ಮ ಸಾಧನೆಗಳ ಮೂಲಕ ಹೊಸ ಹೊಸ ವಸ್ತುಗಳ ಆವಿಷ್ಕಾರ ಮಾಡಿ ಮಾನವ ಸಂಸ್ಕೃತಿಯ ಮುನ್ನಡೆಯನ್ನು ತ್ವರಿತಗೊಳಿಸುವ, ಆ ಮಹಾನುಭಾವರನ್ನು ಕುರಿತು ಬಳಸಲಾಗುತ್ತಿದೆ. ಸತ್ಯವೇ ಈ ಋುಷಿಗಳ ಮೂಲಕ ಜೀವನ ವ್ರತದ ರೂಪದಲ್ಲಿ ಗ್ರಹೀತವಾಗಿದೆ. ಏಕೆಂದರೆ, ಸತ್ಯಾಶ್ರಯೀ ಆಗಿರದಿದ್ದರೆ ಮನಕ್ಷೆಯ ಶ್ರೇಯೋಮುಖಿ ವಿಕಾಸವು ಆಗಲಾರದು. ಇಲ್ಲಿ ಸತ್ಯ ಶಬ್ದದ ವಾಸ್ತವಿಕ ಅರ್ಥವನ್ನು ಕುರಿತು ಸಹ ಸ್ವಲ್ಪ ಆಲೋಚಿಸುವಾ! ಸತ್ಯ, ತಥ್ಯ, ಸಮ್ಯಕ್ ಮತ್ತು ಋುತ ಈ ನಾಲ್ಕು ಶಬ್ದಗಳನ್ನು ಜನರು ಬಹುತೇಕ ಒಂದೇ

ಅರ್ಥದಲ್ಲಿ ಮಾಡುತ್ತಿರುತ್ತಾರೆ. ಆದರೆ ವಾಸ್ತವದಲ್ಲಿ ಈ ನಾಲ್ಕೂ ಶಬ್ದಗಳಲ್ಲಿ ಗುರುತರ ಅರ್ಥಭೇದವಿದೆ. "ತಥ್ಯ" ಶಬ್ದದ ಆಂಗ್ಲ ಅರ್ಥವು (fact) (ನಿಶ್ಚಿತ ಘಟನೆ), ಸಮ್ಯಕ್ ಶಬ್ದದ ಆಂಗ್ಲ ಅರ್ಥವು (correct) (ಸರಿ ಇಲ್ಲವೆ ದೋಷ ರಹಿತ), ಮತ್ತು ಅದೇ ಮೇರೆಗೆ ಋತ ಶಬ್ದದ ಆಂಗ್ಲ ಪರ್ಯಾಯ ಶಬ್ದವು Truth ಎಂದಿದೆ. ಆದರೆ ಬೇರಾವುದೇ ಭಾಷೆಯಲ್ಲಿ ಶಬ್ದದ ಪರ್ಯಾಯ ಶಬ್ದವು ಇಲ್ಲ. ಸತ್ಯ ಶಬ್ದದ ದಾರ್ಶನಿಕ ಅರ್ಥವೆಂದರೆ ಅ-ಪರಿಣಾಮ ಅಂದರೆ ವಿಕಾರರಹಿತ ಎಂದಿದೆ. ಇನ್ನೂ ಸ್ಪಷ್ಟವಾಗಿ ಹೇಳುವದಾದರೆ, ದೇಶ, ಕಾಲ ಮತ್ತು ಪಾತ್ರಗಳಿಗೆ ಸಂಬಂಧಿಸಿದ ವಿಭಿನ್ನತೆಗಳ ಸೊಡರು ತಟ್ಟದಂತೆ ಮೇಲೆ ಇದೆ. ಮನುಷ್ಯನ ಜೀವನವು ಶೈಶವದ ನಂತರ ಕಿಶೋರಾವಸ್ಥೆ, ಅದಾದ ಬಳಿಕ ಯೌವನ ಮತ್ತೆ ಪ್ರೌಢತ್ವ ಮತ್ತು ಊವಾರ್ಧಕ್ಯ ಈ ಪ್ರಕಾರ ಪರಿವರ್ತಿತವಾಗುತ್ತಿದೆ. ಮತ್ತು ಈ ರೀತಿ ಇದು ಮುನ್ನಡೆಯುತ್ತಿದೆ. ಆದ್ದರಿಂದ ಮನುಷ್ಯನ ಈ ಜೀವನವಾಗಲಿ ಮತ್ತು ಅದನ್ನು ಧರಿಸುವ ಶರೀರವಾಗಲಿ ಸತ್ಯವಲ್ಲ. 'ಸತ್ಯ' ಶಬ್ದದ ಇನ್ನೊಂದು ದಾರ್ಶನಿಕ ಅರ್ಥವಿದೆ. ಅದೇಂದರೆ,'ಚಿದ್‌ಸ್ವರೂಪ' ಸಾಧನೆಯ ಕ್ಷೇತ್ರದಲ್ಲಿ ಸತ್ಯ ಶಬ್ದದ ಅರ್ಥವು ಹೀಗಿದೆ. "ಪರಹಿತಾರ್ಥಂ ವಾಂಙ್ ಮನಸೋ ಯತಾರ್ಥತ್ವಂ ಸತ್ಯಂ." ಆದ್ದರಿಂದ ಇಲ್ಲಿ ಸತ್ಯ ಶಬ್ದದ ಏನಾದರೊಂದು ಅರ್ಥವನ್ನು ಏಕಾದರೂ ಗ್ರಹಿಸಲೊಲ್ಲರೇಕೆ? ಕಲ್ಯಾಣ ಧರ್ಮೀಯರಾದ ಋಷಿಗಳು ಸತ್ಯಾಶ್ರಯಿಗಳಾಗಲೇಬೇಕಿತ್ತು. ಶ್ರೆಯೋಮುಖಿ ಅ–ಪರಿಣಾಮಿ ಸತ್ತೆಯನ್ನು ಪರಾಗತಿಯ ರೂಪದಲ್ಲಿ ತಿಳಿಯುವದನ್ನು ಕಲಿಯದವರ ಸೃಷ್ಟಿಯು ಸೃಷ್ಟಿಯೇ ಅಲ್ಲ. ಅದು ಅನಾಸೃಷ್ಟಿ ಮಾತ್ರ.

ಪ್ರಾಚೀನ ಕಾಲದಲ್ಲಿ ಬ್ರಹ್ಮ ಸಾಧನೆಯ ಮೂಲಕ ಬ್ರಹ್ಮನ ಕೃಪೆಯಿಂದ ಮಹರ್ಷಿ ಅಥರ್ವರಿಗೇ ಮೊತ್ತಮೊದಲು ಬ್ರಹ್ಮ ವಿದ್ಯೆಯು ಪ್ರಾಪ್ತವಾಗಿತ್ತು. ಅದನ್ನು ಅವನು ಮಹರ್ಷಿ ಅಂಗಿರಾನಿಗೆ, ಅಂಗೀರಾ ಸತ್ಯಾಬಾಹನಿಗೆ ಮತ್ತು ಸತ್ಯಾಬಾಹನು ಅಂಗಿರಸನಿಗೆ ಕಲಿಸಿದರು. ಆದ್ದರಿಂದ ಋಷಿಗಳು ಇಲ್ಲಿ ಹೀಗೆ ಹೇಳುತ್ತಾರೆ. ಏನೆಂದರೆ, ಅಂಗಿರಸ ಮುಂತಾದವರೆದುರು ಬ್ರಹ್ಮವಿಜ್ಞಾನದ ಪ್ರವಕ್ತಾ ರೂಪದಲ್ಲಿ ಅಥರ್ವಾನ ಸ್ಥಾನವು ಎಷ್ಟು ಮಹತ್ವ ಪೂರ್ಣವಾಗಿತ್ತೋ, ಸಂಸಾರದ ಎಲ್ಲ ಸತ್ತೆಗಳಿಗೋಸುಗ ಸರ್ವ ಸ್ಥಿತಿಗಳ ಮೂಲಾಧಾರವಾದ ಬ್ರಹ್ಮನ ಸ್ಥಿತಿಯೂ ಸರಿಯಾಗಿ ವಷ್ಟೇ ಮಹತ್ವ ಪೂರ್ಣವಾಗಿದೆ.



"ಇಂದ್ರಸ್ತ್ವಂ ಪ್ರಾಣ ತೇಜಸಾ ರುದ್ರೋಽಸಿ ಪರಿರಕ್ಷಿತಾ
ತ್ವಮಂತರಿಕ್ಷೇ ಚರಸಿ ಸೂರ್ಯಸ್ತ್ವಂ ಜ್ಯೋತಿಷಾಂಪತಿಃ"

ಇಂದ್ರ ಶಬ್ದದ ಅರ್ಥವೆಂದರೆ ಶ್ರೇಷ್ಠ ಇಲ್ಲವೆ ರಾಜ ಎಂದು. ಜೀವ ಸಮೂಹವನ್ನು ಸಂಜೀವಿತಗೊಳಿಸುವ ಪ್ರಾಣಶಕ್ತಿಯ ನಿಯಂತ್ರಕನು ಬ್ರಹ್ಮನೇ ಆಗಿದ್ದಾನೆ. ಆದ್ದರಿಂದ ಅವನು ಯಾವಾಗ ತನ್ನ ಅಭಿವ್ಯಕ್ತಿಯ ಮೂಲಕ ನಮ್ಮ ಪ್ರಾಣ ಸಮೂಹವನ್ನು, ಶಕ್ತಿಸಮೂಹವನ್ನು ನಿಯಂತ್ರಿಸುವನೋ, ಆಗ ಅವನಿಗೆ ಇಂದ್ರ ಎನ್ನುತ್ತೇವೆ. ಅವನು ಯಾವಾಗ ನಮ್ಮ ಪರಮ ಮಿತ್ರನಂತೆ ತನ್ನ ಸ್ನೇಹ ಕೋಮಲ ಸ್ಪರ್ಶದ ಮೂಲಕ ದಾರುಣ ವಿನಾಶದ ಮುಖದಿಂದ ನಮ್ಮನ್ನು ರಕ್ಷಿಸುವನೋ ಆಗ ಅವನನ್ನು ರುದ್ರ ಎನ್ನುತ್ತೇವೆ. ಅವನ ಇರವು ಎಲ್ಲೆಡೆಗೆ ಇದೆ. ಕೆಲವೆಡೆ ಹೊರಹೊಮ್ಮಿದ ರೂಪದಲ್ಲಿದೆ; ಕೆಲವೆಡೆ ಭಾವ ರೂಪದಲ್ಲಿದೆ. ಇನ್ನೂ ಕೆಲವೆಡೆ ಸ್ಥೂಲ ವೈಯಕ್ತಿಕ ಸತ್ತೆಯ ರೂಪದಲ್ಲಿ ಅವನು ನಮ್ಮ ನಾಲ್ಕೂ ನಿಟ್ಟಿನಲ್ಲಿ ವಿರಾಜಿಸುತ್ತಿದ್ದಾನೆ. ಅವನ ಸತ್ತೆಯು ಅಭಿವ್ಯಕ್ತವಾಗದ ಸ್ಥಾನವು ವಿಶ್ವ ಬ್ರಹ್ಮಾಂಡದಲ್ಲಿ ಎಲ್ಲಿಯೂ ಇಲ್ಲ. ನಾವು ಮೇಲಿನಿಂದ ನೋಡಿದಾಗ, ಯಾವುದು ಶೂನ್ಯವೆಂದು ಭಾಸವಾಗುವುದೋ, ಅದರಲ್ಲಿಯೂ ಸಹ ಅವನ ಸತ್ತೆಯು ತುಂಬಿದೆ. ಮಾನವನ ಬುದ್ಧಿಗೆ ಎಟುಕದ ಕಡೆಗೆ, ಕಲ್ಪನೆಯು ಎಲ್ಲಿಯ ವರೆಗೆ ಅಪ್ಪಳಿಸಿ ಹಿಂತಿರುಗುವುದೋ, ಅಲ್ಲಿಯೂ ಸಹ ಅವನು ವಿರಾಜಮಾನನಾಗಿದ್ದಾನೆ.

"ಜಲೇ ಹರಿ; ಸ್ಥಲೇ ಹರಿ; ಅನಲೇ ಅನಿಲೇ ಹರಿ
ಗ್ರಹ ತಾರಾ ಸೂರ್ಯ ಹರಿ, ಹರಿಮಯ ವಿ ತ್ರಿ ಸಂಸಾರ"

ಈ ಜಗತ್ತಿನಲ್ಲಿ ಸೂರ್ಯನ ರೂಪದಲ್ಲಿ ಅವನ ಮಹಿಮೆಯೇ ಹೊಳೆಯುತ್ತಿದೆ. ಆ ಸ್ನಾಯು ಪುಂಜಗಳ ಬೆನ್ನೆಲುಬು, ಪಿತೃ ಪುರುಷರ ಸ್ವಧಾ, ಋಷಿಗಳ ಸತ್ಯ, ಇಂದ್ರ, ರುದ್ರ, ಸೂರ್ಯ ಮುಂತಾದವರೆಲ್ಲ ಬೇರೆ ಬೇರೆ ಸತ್ತೆಗಳೇನು? ಇಲ್ಲ. ಇಂಥ ಮಾತೇನೂ ಇಲ್ಲ. ಅವನೇ ಏನೆಲ್ಲವೂ ಆಗಿದ್ದಾನೆ. ಅವನೇ ಏನೆಲ್ಲವೂ ಆಗಿದ್ದಾನೆ; ಅವನೇ ಏನೆಲ್ಲವೂ ಆಗಿದ್ದಾನೆ. ಓರ್ವ ವ್ಯಕ್ತಿಯ ಹೆಸರು ಧ್ರುವಜ್ಯೋತಿ ಎಂದು ಇರುವ ಹಾಗೆಯೇ ಅವನೂ ಇದ್ದಾನೆ. ಅವನನ್ನು ಮಗನು 'ಅಪ್ಪಾ' ಎಂದು ಕರೆಯುತ್ತಾನೆ. ಏಕೆಂದರೆ, ಅವನಲ್ಲಿ ಮಗನು ತಂದೆಯ ರೂಪದ ವಿಕಾಸವನ್ನು ಕಾಣುತ್ತಾನೆ. ತಂದೆಯು ಅವನನ್ನು 'ಮಗೂ' ಎಂದು ಕರೆಯುತ್ತಾನೆ. ಏಕೆಂದರೆ, ಅವನು ಅವನಲ್ಲಿ ಪುತ್ರ ರೂಪಿ ವಿಕಾಸವನ್ನು ಕಾಣುತ್ತಾನೆ. ಶಾಲೆಯಲ್ಲಿ ವಿದ್ಯಾರ್ಥಿಗಳು ಅವನನ್ನು 'ಮಾಸ್ತರ' ಎಂದು

ಕರೆಯುತ್ತಾರೆ. ಏಕೆಂದರೆ, ಅವರು ಅವನಲ್ಲಿ ಶಿಕ್ಷಕ ರೂಪಿ ವಿಕಾಸವನ್ನು ಕಾಣುತ್ತಾರೆ. ಮತ್ತು ಟಾಂಗಾ ಹೊಡೆಯುವವನೊಬ್ಬನು ಅವನನ್ನು 'ಏ ಟೊಪ್ಪಿಗೆ' ಎಂದು ಕರೆದು ಚೀರುತ್ತಾನೆ. ಏಕೆಂದರೆ, ಅವನು ಅವನಲ್ಲಿ ಟೊಪ್ಪಿಗೆಯನ್ನೇ ಮುಖ್ಯ ವಸ್ತುವಾಗಿ ಕಾಣುತ್ತಾನೆ. ಆದರೆ ವಾಸ್ತವದಲ್ಲಿ 'ಅಪ್ಪಾ' 'ಮಾಸ್ತರ' ಇಲ್ಲವೆ 'ಏ ಟೊಪ್ಪಿಗೆ' ಇವರೆಲ್ಲ ಬೇರೆ ಬೇರೆ ವ್ಯಕ್ತಿಗಳಾಗಿದ್ದಾರೇನು? ಇಲ್ಲ. ವಾಸ್ತವವಾಗಿ ಅವರು ಒಬ್ಬ ಧ್ರುವ ಜ್ಯೋತಿಯನ್ನೇ ಬೇರೆ ಬೇರೆ ದೃಷ್ಟಿಕೋನದಿಂದ ಕಂಡ ಪರಿಣಾಮವೇ ಇದು.

"ಯದಾತ್ವಮಭಿವರ್ಷಸ್ಯ ಥೇಮಾಃ ಪ್ರಾಣತೇ ಪ್ರಜಾಃ
ಆನಂದ ರೂಪಾಸ್ತಿಷ್ಠಂತಿ ಕಾಮಾಯಾನ್ನಂ ಭವಿಷ್ಯತೀತಿ"

ಜಗತ್ತಿನಲ್ಲಿ ಜಡ ಎಂದು ಕರೆಯುವ ಯಾವ ವಸ್ತುವೂ ಇಲ್ಲ. ಇರುವುವೆಲ್ಲವೂ ಚೇತನವೇ. ಈ ಚೇತನವು ಕೆಲವೆಡೆ ಸಘನವಾಗಿದೆ; ಬೇರೆಡೆ ಅಘನವಾಗಿದೆ. ಚೈತನ್ಯವು ಘನಾವಸ್ಥೆಯಲ್ಲಿದ್ದಾಗ, ನಾವು ಅಂತಿಮ ವಿಚಾರದಿಂದ ಅದನ್ನು ಚೇತನ ಎನ್ನುತ್ತೇವೆ. ಮತ್ತು ಚೈತನ್ಯವು ಅಘನಾವಸ್ಥೆಯಲ್ಲಿದ್ದಾಗ ಅಂದರೆ ಪ್ರಕೃತಿಯ ಪ್ರಾಧಾನ್ಯವೇ ಹೆಚ್ಚಾಗಿರುವಾಗ, ಅದನ್ನು ನಾವು ಜಡ ಎನ್ನುತ್ತೇವೆ. ಈ ತಥಾಕಥಿತ ಜಡ ಇಲ್ಲವೆ ಚೇತನಗಳಲ್ಲಿ ಇರುವ ಅಂತರವು ಇಷ್ಟೇ. ತನ್ನ ಘನಾವಸ್ಥೆಯ ಕಾರಣ, ತಥಾಕಥಿತ ಚೇತನವು ತನ್ನನ್ನು ತಾನೇ ನಿಯಂತ್ರಿಸಿಕೊಳ್ಳಬಲ್ಲದು. ಆದರೆ ಚೈತನ್ಯವು ಘನಾವಸ್ಥೆಯಲ್ಲಿ ಇಲ್ಲದ ಕಾರಣ, ತಥಾಕಥಿತ ಜಡವು ಪೂರ್ಣವಾಗಿ ಪ್ರಕೃತಿಯ ಇಚ್ಛೆಯಿಂದ ಅರ್ಥಾತ್ ಬ್ರಾಹ್ಮೀ ಮನದ ಕಲ್ಪನಾಧಾರೆಯನ್ನನುಸರಿಸಿ, ನಡೆಯುವುದಕ್ಕೆ ಬಾಧ್ಯವಾಗುತ್ತದೆ. ಆದರೆ ಇದರಲ್ಲಿ ಒಂದು ಪ್ರಶ್ನೆಯೇಳಬಹುದು. ಏನೆಂದರೆ, ತಥಾಕಥಿತ ಜಡವು ಬ್ರಾಹ್ಮೀ ಮನದ ಇಚ್ಛೆಯಿಂದ ನಡೆಸಲ್ಪಡುವ ವರೆಗೆ,ಬ್ರಹ್ಮನ ಕೃಪೆಯು ಮಾತ್ರ ಈ ಜಡದ ಮೇಲಿರುವುದು. ಇನ್ನು ಚೇತನವು ತನ್ನ ಚಿಂತೆಯನ್ನು ತಾನೇ ಮಾಡಿಕೊಳ್ಳಲು ಶಕ್ತವಾಗಿರುವಾಗ, ಬ್ರಹ್ಮನೇಕೆ ಅದರ ಚಿಂತೆಯ ಗೊಡವೆಗೆ ಹೋದಾನು? ಅವನ ಮೇಲೆ ಬ್ರಹ್ಮನ ಕೃಪಾ ವರ್ಷವು ಸುರಿಯುವ ಕಾರಣವೇನಿಲ್ಲ. ಪೃಥ್ವಿಯು ಜಡವಾಗಿದೆ. ಆದ್ದರಿಂದ ಅವನು ಅದರ ಹಾದಿಯನ್ನು ನಿಶ್ಚಯಿಸಿದನು. ಅದರಿಂದಾಗಿಯೇ ಅದು ಧೂಮಕೇತುವಿನಂತೆ ಪೆಟ್ಟು ತಿಂದು ಚೂರುಚೂರಾಗದೆ ಉಳಿದಿದೆ. ಆದರೆ ಚೇತನವು ಮಾನವನಿಗೆ ಬೇಕಾದ ವಸ್ತುವನ್ನು ತಿನ್ನುವ ಅಧಿಕಾರ ನೀಡಿದೆ; ಅದು ವಿಷವಾಗಿರಲೂಬಹುದು; ಅಮೃತವಾಗಿರಲೂಬಹುದು. ಹಾಗಾದರೆ, ಜೀವಿಗಳ ಈ ಚೇತನೆಯು



ಅಪರಿಗೋಸುಗ ಅಭಿಶಾಪವಾಗಿದೆಯೇ?

ಇಲ್ಲ; ಇಲ್ಲ; ಬ್ರಹ್ಮಾನೆದುರು ಚೇತನ ಅಚೇತನಗಳ ಯಾವ ಭೇದವೂ ಇಲ್ಲ. ಇವುಗಳಲ್ಲಾವುದನ್ನು ಕುರಿತೂ ಪಕ್ಷಪಾತವಿಲ್ಲ. ಅಚೇತನವು ಸ್ವಯಂ ಯಾವ ಕಾರ್ಯವನ್ನೂ ಮಾಡದು. ಆದ್ದರಿಂದ ಅದು ಶುಭ ಕರ್ಮಗಳಿಗಾಗಿ ಪುಣ್ಯ ಮತ್ತು ಅಶುಭ ಕರ್ಮಗಳಿಗಾಗಿ, ಪ್ರತ್ಯವಾಯಗಳಿಗಾಗಿ ಭಾಗಿಯಾಗದು. ಚೇತನವು ತನ್ನ ಕರ್ಮಗಳಿಗನುಸರಿಸಿ ಶುಭ ಇಲ್ಲವೆ ಅಶುಭ ಕರ್ಮಫಲವನ್ನು ಪಡೆಯುತ್ತದೆ; ಸುಖ ದುಃಖಗಳನ್ನು ಭೋಗಿಸುತ್ತದೆ. ಕರ್ಮ ಫಲಕ್ಕನುಸರಿಸಿ, ಯಾರಿಗೆ ಏನನ್ನು ಭೋಗಿಸಬೇಕಾಗಿದೆಯೋ, ಅದನ್ನು ಭೋಗಿಸಲಿ; ಇದಕ್ಕೋಸುಗ ಅವರೇಕೆ ತಮ್ಮ ಕರ್ತವ್ಯದಿಂದ ವಿಮುಖರಾಗಬೇಕು? ಮಗುವಿಗೆ ಜನ್ಮ ನೀಡಿದವನೇ ಅದಕ್ಕೋಸುಗ ತಾಯಿಯ ಮೊಲೆಯಲ್ಲಿ ಹಾಲನ್ನೂ ಕರುಣಿಸುತ್ತಾನೆ. ತಂದೆಯ ಸ್ನೇಹ, ಸೋದರನ ಪ್ರೇಮ, ಇವುಗಳೆಲ್ಲ ಅವನ ಕೃಪೆಯೇ ಅಲ್ಲವೇನು? ವೈಶಾಖದ ಕಡು ಬೇಗೆಯ ನಂತರ ಮಳೆ ಸುರಿದು ಧರೆಯು ತಣ್ಣಗಾಗುವುದೂ ಸಹ ಅವನ ಕೃಪೆಯೇ. ಇದರಿಂದ ಅಚೇತನಗಳಾದ ಕಲ್ಲು, ಕಬ್ಬಿಣ, ಬಂಗಾರ ಮುಂತಾದವು, ದುಃಖ ಇಲ್ಲವೆ ಆನಂದಗಳನ್ನು ಭೋಗಿಸುವುದಿಲ್ಲ. ಕೇವಲ ಚೇತನ ಪ್ರಾಣಿಸಮೂಹವು ಮಾತ್ರ ಆನಂದವನ್ನು ಪಡೆಯುತ್ತದೆ. ಈ ವರ್ಷಾಧಾರೆಯಿಂದ ಆ ಜನರಿಗೆ ಬೇಕಾದ ಭೋಗ್ಯ ವಸ್ತುಗಳು ಬೆಳೆಯುತ್ತವೆ. ಮತ್ತು ಈ ವಸ್ತುಗಳನ್ನು ಬಳಸಿ, ಅವರು ಆನಂದ ಸ್ವರೂಪದ ಖಂಡ ಖಂಡದ ಉಪಭೋಗ ಮಾಡುತ್ತಾರೆ. ಅನುಭವ ಹೊಂದುತ್ತಾರೆ. ಅಂದ ಮೇಲೆ ಅವನು ನಿಮ್ಮನ್ನು ಮರೆತಿಲ್ಲ. ನಿಮ್ಮ ಮೇಲೆ ಅವನ ಕೃಪೆ ಅಪಾರವಾಗಿದೆ. ನೀವು ಪಡೆಯಬೇಕಾದುದಕ್ಕಿಂತಲೂ ಈ ಕೃಪೆಯು ಇನ್ನೂ ಅಧಿಕವಿದೆ.

"ವ್ರಾತ್ಯಸ್ತ್ವಂ ಪ್ರಾಣೈಕ ಋಷಿರತ್ತಾ ವಿಶ್ವಸ್ಯ ಸತ್ಪತಿಃ
ವಯಮಾದ್ಯಸ್ಯ ದಾತಾರಃ ಪಿತಾ ತ್ವಂ ಮಾತಾರಿಶ್ವನಃ"

ವ್ರಾತ್ಯ ಶಬ್ದದ ಅರ್ಥವೆಂದರೆ ಪತಿತ. ಸಮಾಜಶಾಸ್ತ್ರ ವಿಧಾನಗಳಿಗನುಸರಿಸಿ, ಒಬ್ಬ ವಿಪ್ರನು ವಿಪ್ರೋಚಿತ ಕರ್ಮಗಳನ್ನು ಮಾಡದಿದ್ದರೆ, ಅವನು ವ್ರಾತ್ಯನಾಗುತ್ತಾನೆ. ಸರಿಯಾಗಿ ಅದೇ ರೀತಿ, ಒಂದು ವೇಳೆ ಕ್ಷತ್ರಿಯ ಇಲ್ಲವೆ ವೈಶ್ಯರು ತಮ್ಮ ತಮ್ಮ ವರ್ಣಗಳಿಗನುಸರಿಸಿ ಕಾರ್ಯ ಮಾಡದಿದ್ದರೆ ಅವರು ವ್ರಾತ್ಯರಾಗುತ್ತಾರೆ. ಕೇವಲ ಶೂದ್ರರ ಸಂಬಂಧದಲ್ಲಿ ವ್ರಾತ್ಯತ್ವದ ಪ್ರಶ್ನೆಯೇಳದು. ಏಕೆಂದರೆ ಶಾಸ್ತ್ರ ಸಂಸ್ಕಾರವಿಲ್ಲದ ವ್ಯಕ್ತಿಯನ್ನೇ ಶೂದ್ರರೆನ್ನುತ್ತಾರೆ. ವ್ರಾತ್ಯ ಬ್ರಾಹ್ಮಣ, ವ್ರಾತ್ಯ ಕ್ಷತ್ರಿಯ, ವ್ರಾತ್ಯ-ವೈಶ್ಯರ ಕ್ರಿಯೆಗಳು

ಆಯಾ ವರ್ಣಕ್ಕೆ ತಕ್ಕವುಗಳಾಗಿರದ ಕಾರಣ, ಅವರನ್ನು ವರ್ಣಾಶ್ರಮದೊಳಗಿನ ಶೂದ್ರರಿಗಿಂತಲೂ ಕೀಳಾಗಿ ಎಣಿಸುತ್ತಾರೆ. ಇಲ್ಲಿ ಬ್ರಹ್ಮನನ್ನು ವ್ರಾತ್ಯ ಎನ್ನಲಾಗಿದೆ. ಏಕೆಂದರೆ, ಅವನು ವರ್ಣಾಶ್ರಮದ ಸರ್ವ ಸಂಸ್ಕಾರಗಳ ಹೊರಗಿದ್ದಾನೆ. ಯಾವ ಸಂಸ್ಕಾರವೂ ಅವನನ್ನು ಬಂಧಿಸದು. ಸಂಸ್ಕಾರ–ಬದ್ಧ ಸರ್ವ ಶಕ್ತಿಗಳೂ ಅವನ ಮಹಾತ್ಮ್ಯೆಯೆದರು ಶಿರಬಾಗುತ್ತವೆ. ಅಜ್ಞಾನ ಬೋಧಿನೀ ತಂತ್ರದಲ್ಲಿ ಹೀಗೆ ಹೇಳಲಾಗಿದೆ.

"ವರ್ಣಾಶ್ರಮಾಭಿಮಾನೇನ ಶ್ರುತಿ ದಾಸ್ಯೇ ಭವೇನ್ನರಃ
ವರ್ಣಾಶ್ರಮ ವಿಹೀನಶ್ಚ ವರ್ತತೇ ಶ್ರುತಿ ಮೂರ್ದಣಿ"

ಮಾನವರಲ್ಲಿ, ವರ್ಣಕ್ಕೆ ಸಂಬಂಧಿಸಿದ (ಜಾತಿ ವೈಷಮ್ಯ, ಅರ್ಥ ವೈಷಮ್ಯ ಇಲ್ಲವೆ ದೇಶ ವೈಷಮ್ಯ,ಇಲ್ಲವೆ ಶಿಕ್ಷಣ ವೈಷಮ್ಯ ಇಲ್ಲವೆ ಬೇರಾವುದೇ ಪ್ರಕಾರದ ವೈಷಮ್ಯ) ಸಂಸ್ಕಾರಗಳಿದ್ದರೆ, ಅದು ವರೆಗೆ ಅವನು ಅಭೇದಾತ್ಮಕ ಅಖಂಡೈಕರಸ ಮಯ ಬ್ರಹ್ಮನನ್ನು ಯಾವ ರೀತಿಯಿಂದಲೂ ಅನುಭವಿಸಲಾರನು;ಅವನನ್ನು ಪಡೆಯಲಾರನು. ಅವನು ಎಲ್ಲಿಯವರೆಗೆ ಜಾತೀಯ ಅಭಿಮಾನ ಹೊಂದಿರುವನೋ, ಎಲ್ಲಿಯವರೆಗೆ ಧನದ ಅಭಿಮಾನ ಹೊಂದಿರುವನೋ ಅಲ್ಲಿಯವರೆಗೆ ತನ್ನನ್ನು ಶಾಸ್ತ್ರೀಯ ವಿಧಾನದ ದಾಸನಾಗಿರಿಸುತ್ತಾನೆ.ಒಂದಿಲ್ಲೊಂದು ವರ್ಣವನ್ನು ಅವನು ತನ್ನ ಚಿತ್ತದ ಅವಲಂಬನೆಯಾಗಿ ಇಟ್ಟುಕೊಳ್ಳುತ್ತಾನೆ. ಸಾಧನೆಯ ಮೂಲಕ ಚಿತ್ತದ ಸಮ್ಯಕ್ ವಿಕಾಸದಿಂದ ಅಥವಾ ಪರಮಪದದಲ್ಲಿ ತನ್ನ ಚಿತ್ತವನ್ನು ಸಂಪೂರ್ಣವಾಗಿ ವಿಲಯನಗೊಳಿಸುವುದರಿಂದ, ಯಾವಾಗ ಅವನು ವರ್ಣಾತೀತ ಬ್ರಹ್ಮನೊಂದಿಗೆ ಒಂದಾಗುವನೋ, ಆಗ ಅವನು ಶಾಸ್ತ್ರೀಯ ವಿಧಾನದ ಶಿಖರವನ್ನು ತಲುಪುತ್ತಾನೆ. ಭೇದ ಮೂಲಕ ವಿಧಾನದ ಸ್ಥಾನವು ಆ ಕಾಲಕ್ಕೆ ಅವನ ಅಡಿಯ ಕೆಳಗೆ ಉಳಿಯುತ್ತದೆ. ವರ್ಣ ಹೀನನಾಗುವ ಈ ಸಾಧನೆಯೇ ನಿಜವಾದ ಸಾಧನೆ.

ಋಷಿಯು ಇಲ್ಲದಾಗ ಅಗ್ನಿಯ ರಕ್ಷೆಯ ಭಾರವನ್ನು ಸಾಮಾನ್ಯವಾಗಿ ಅವನ ಹೆಂಡತಿಯು ಹೊರುತ್ತಾಳೆ. ಮತ್ತು ಋಷಿ ಪತ್ನಿಯೂ ಇಲ್ಲದಾಗ ಋಷಿಯ ಮಗನು ಈ ರಕ್ಷಣೆಯ ಹೊಣೆ ಹೊರುತ್ತಾನೆ.ಏಕರ್ಷಿ ಅಗ್ನಿಯ ರಕ್ಷಣೆಯನ್ನು ಋಷಿಗಣವೇ ಖುದ್ದಾಗಿ ನಿರ್ವಹಿಸುವ ಪ್ರಯತ್ನ ಮಾಡುತ್ತಿದ್ದರು. ಸಾಧಾರಣವಾಗಿ,ಯಾವ ವಿವಾಹಿತ ಸ್ತ್ರೀಯರು ಗಂಡನೊಂದಿಗೆ ಸಮಾನ ಸಾಮಾಜಿಕ ಮತ್ತು ಧಾರ್ಮಿಕ ಅಧಿಕಾರಗಳನ್ನು ಹೊಂದಿರುತ್ತಿದ್ದರೋ ಅವರನ್ನು ಜಾಯಾ ಎನ್ನುತ್ತಿದ್ದರು. ಇನ್ನು ಸಾಮಾಜಿಕ ಇಲ್ಲವೆ ಧಾರ್ಮಿಕ ಅಧಿಕಾರಗಳಲ್ಲಾವುದೊಂದನ್ನು ಸಹ ಪಡೆಯದೆ, ಕೇವಲ ಅವರ ಹೊಟ್ಟೆಯ ಮಗುವಿಗೆ



ಪಿತೃಕುಲದ ಮರ್ಯಾದೆ ಪಡೆಯುವವರಿಗೆ ಭಾರ್ಯಾ ಎನ್ನುತ್ತಿದ್ದರು.

ವೇದದಲ್ಲಿ ಏಕರ್ಷಿ ಎಂಬ ಹೆಸರಿನ ಪವಿತ್ರ ಅಗ್ನಿಯ ಉಲ್ಲೇಖವಿದೆ. ಅತ್ಯಂತ ಪ್ರಯತ್ನದಿಂದ ಈ ಅಗ್ನಿಯನ್ನು ರಕ್ಷಿಸುತ್ತಾರೆ. ಆದ್ದರಿಂದ ಜನ ಸಾಮಾನ್ಯರು ಈ ಅಗ್ನಿಯನ್ನು ಅತ್ಯಂತ ಶ್ರದ್ಧೆಯಿಂದ ನೋಡುತ್ತಿದ್ದರು. ಇನ್ನುಳಿದ ಅಗ್ನಿಗಳಿಗಿಂತಲೂ ಈ ಏಕರ್ಷಿ ಅಗ್ನಿಗೆ ಹೆಚ್ಚಿನ ಮಾನ ನೀಡುತ್ತಿದ್ದರು. ಈಗ ನೋಡಿರಿ. ಒಂದೆಡೆಗೆ ಇವರನ್ನು ವ್ರಾತ್ಯ ಇಲ್ಲವೆ ಪತಿತ ಎಂದು ಕರೆಯುತ್ತಾರೆ. ಇನ್ನೊಂದೆಡೆಗೆ ಅವರನ್ನೇ ಏಕರ್ಷಿಗೆ ಸಮಾನ ಪೂಜನೀಯರೆಂದು ಕರೆಯುತ್ತಾರೆ. ಎಲ್ಲ ಸಂಸ್ಕಾರಗಳ ಹೊರಗೆ ಇರುತ್ತಿರುವ ಕಾರಣ, ಯಾವುದೇ ಗುಣದ ಮೂಲಕ ಅವನನ್ನು ಬಂಧಿಸಲಾಗದು. ಮತ್ತು ಶ್ರೇಷ್ಠ ಸಮಾಜದಲ್ಲಿ ಶ್ರೇಷ್ಠತಮನಾಗಿರುವ ಕಾರಣ,ಈ ಏಕರ್ಷಿಯ ಪಾವಿತ್ರ್ಯವೂ ಸಹ ಅಪರಿಮಿತವಾಗಿರುತ್ತದೆ.

ಈ ಬ್ರಹ್ಮನೇ ಸಂಸಾರದ ಎಲ್ಲ ವಸ್ತುಗಳ ಭಕ್ಷಕ ಇಲ್ಲವೆ ಸಂಹಾರಕನೂ ಅಹುದು. ಏಕೆಂದರೆ ವಿಶ್ವಕಲ್ಪನೆಯು ಇವನ ಮಾನಸ ಧಾತುವಿನಲ್ಲಿಯೇ ಉದ್ಭೂತವಾಗಿ, ಮರಳಿ ಅವನಲ್ಲಿಯೇ ವಿಲೀನವಾಗುತ್ತದೆ. ಅಂದರೆ ಒಂದೆಡೆಗೆ ಬ್ರಹ್ಮನ ರೂಪದಲ್ಲಿ, ತನ್ನ ಕಲ್ಪಿತ ಜಗತ್ತನ್ನು ಸೃಷ್ಟಿಸುತ್ತ ನಡೆದಿದ್ದಾನೆ. ಇನ್ನೊಂದೆಡೆಗೆ, ನಿರ್ಮಮ ಸಂಹಾರಕರ್ತನ ರೂಪದಿಂದ, ಅದನ್ನು ಅಳಿಸಿ ಹಾಕುತ್ತ ನಡೆದಿದ್ದಾನೆ. ಜಗತ್ತಿನ ಎಲ್ಲ ವಸ್ತುಗಳೂ ಎಲ್ಲ ಸತ್ತೆಗಳೂ ಅವನ ತಿನಿಸುಗಳಾಗಿವೆ; ಅವನ ಅನ್ನವಾಗಿವೆ. ಮತ್ತು ಎಲ್ಲರೂ ಒಂದಿಲ್ಲೊಂದು ದಿನ ತಮ್ಮ ತಮ್ಮ ಸತ್ತೆಗಳನ್ನು ಅವನಲ್ಲಿ ಆಹುತಿ ನೀಡಲೇಬೇಕಾಗುತ್ತದೆ. ಈ ಜೀವ ಸಮೂಹವು ಅವನಿಗೆ ಭಕ್ಷ್ಯವಸ್ತುಗಳನ್ನು ಕೊಡುವುದಾಗಿವೆಯೆಂದು ಹೇಳುತ್ತಾರೆ. ಜನರು ಅವನಿಗೆ ಏನನ್ನು ದಾನ ಮಾಡಬಹುದು? ತಮ್ಮ ಅಹಂ-ಬೋಧೆಯನ್ನು ದಾನವೀಯುತ್ತಾರೆ; ತಮ್ಮ ಕ್ಷುದ್ರ ಸ್ವಾರ್ಥದ ವ್ಯರ್ಥ ವಿಡಂಬನೆಯ ಸತ್ತೆಯನ್ನು ದಾನವೀಯುತ್ತಾರೆ.

ಈ ಪರಮಾತ್ಮನೇ ಮಾತರಿಶ್ವನ ತಂದೆಯೂ ಆಗಿದ್ದಾನೆ. ಮಾತರಿಶ್ವ ಎಂದರೆ ವಾಯುವೇ ಒಳಗಿದ್ದು ಮತ್ತು ಹೊರಗಿದ್ದು, ಹತ್ತು ರೂಪಗಳಲ್ಲಿ ರೂಪಯತನಾಗಿ ಜೀವಿಯ ಅಸ್ತಿತ್ವವನ್ನು ರಕ್ಷಿಸುತ್ತಾನೆ. ಆದ್ದರಿಂದ, ಜೀವಿಯ ಸರ್ವಬೋಧೆಗಳಿಗೆ ಈ ಮಾತರಿಶ್ವನೇ ಆಧಾರಭೂಮಿಯಾಗಿದ್ದಾನೆ. ಮತ್ತು ಬ್ರಹ್ಮನು ಈ ಮಾತರಿಶ್ವನ ಪರಿಚಾಲಕನಾಗಿದ್ದಾನೆ. ಅವನ ತಂದೆಯಾಗಿದ್ದಾನೆ. ವಾಯುವು ಜೀವನ ಪ್ರಾಣನು; ಮತ್ತು ಬ್ರಹ್ಮನು ಪ್ರಾಣದ

ಪ್ರಾಣನು.

"ಯಾ ತೇ ತನುರ್ವಾಚಿ ಪ್ರತಿಷ್ಠಿತಾ ಯಾ ಶ್ರೋತ್ರೇ ಯಾ ಚ ಚಕ್ಷುಷಿ.
ಯಾ ಚ ಮನಸಿ ಸಂತತಾ ಶಿವಾಂ ತಾಂ ಕುರು ಮೋತ್ಕ್ರಮೀಃ"

ನಾವು ನುಡಿದಾಗ ನಮ್ಮ ಆ ಮಾತು ನಿನ್ನ ರೂಪದ ಒಂದು ವಿಕಾಸವಷ್ಟೇ. ನಾವು ಕೇಳುವುದೆಲ್ಲ ನಿನ್ನ ರೂಪದ ಶಾಬ್ದಿಕ ವಿಕಾಸವಷ್ಟೇ. ಕಣ್ಣಿನ ಸಹಾಯದಿಂದ ಕಂಡುಬರುವುದೆಲ್ಲ ನಿನ್ನ ರೂಪಾತ್ಮಕ ವಿಕಾಸವಷ್ಟೇ. ಮನದಾಳದಲ್ಲಿ ಮಾಡುವ ಚಿಂತನೆಯೆಲ್ಲ,ಮಾಡುವ ವಿಚಾರವೆಲ್ಲ, ಪಾಪ-ಪುಣ್ಯಗಳನ್ನರಿತು, ಯಾವುದೊಂದು ಸಿದ್ಧಾಂತಕ್ಕೆ ತಲುಪುವುದೆಲ್ಲ ನಿನ್ನದೇ ಆಗಿದೆ. ನಿನ್ನ ಹೊರಗಾವುದೂ ಇಲ್ಲ. ಅಂದರೆ ನಮ್ಮ ಜ್ಞಾನೇಂದ್ರಿಯಗಳು ಗ್ರಹಣ ಮಾಡುವುದೆಲ್ಲ ನೀನೇ ವ್ಯಾಪಿಸಿ ತುಂಬಿದ ಜಗತ್ತಿನಿಂದ ಬಂದುದೇ ಸರಿ. ಮತ್ತು ನಮ್ಮ ಕರ್ಮೇಂದ್ರಿಯಗಳು ಕಾರ್ಯಗೆಯ್ಯುವುದು, ಇಲ್ಲವೆ ಬಿಡುವುದು ಎಲ್ಲವೂ ನಿನ್ನ ವಿಶೇಷ ಅಭಿವ್ಯಕ್ತಿಗಳಷ್ಟೇ. ಎಲೈ ಕರುಣಾಮಯಿ ಬ್ರಹ್ಮ! ನಿನ್ನ ಪ್ರೇರಣೆಯಿಂದ ನಮ್ಮ ಗತಿಯು ಶುಭ ಹಾಗೂ ಶಿವತ್ವದತ್ತ ಉನ್ಮುಖವಾಗಿದೆ. ನಾವು ಏನಿನಿತು ಹೇಳಲಿ; ಏನಿನಿತು ಕೇಳಲಿ, ಏನಿನಿತು ಕಾಣಲಿ, ಸರ್ವವೂ ನಿನ್ನ ಭಾವನೆಯಿಂದ ಪ್ರಭಾವಿತವಾಗಿ, ಶ್ರೇಯ ವಸ್ತುವಿನಲ್ಲಿ ಪರಿಣಮಿಸಲಿ; ಹೀಗಾಗಿ ನಾವು ಯಾವುದೇ ಕೀಳು ವಸ್ತುವನ್ನು ನೋಡದಂತಾಗಲಿ. ಆ ಕುರಿತು ಮಾತನಾಡದಂತಿರಲಿ; ನಾವು ಪ್ರತಿಕ್ಷಣವೂ ನಮ್ಮ ದ್ರಷ್ಟವ್ಯ, ಶ್ರೋತವ್ಯ ಮತ್ತು ವಕ್ತವ್ಯವೆಂದು ಯಾವುದನ್ನು ತಿಳಿದಿರುವೆವೋ, ಅದುವೆಲ್ಲ ನೀನೇ.ಎಲೈ ಪರಮ ಬ್ರಹ್ಮ! ನೀನು ನಮ್ಮ ಬಗ್ಗೆ ಕೃಪಣನಾಗಬೇಡ. ನೀನು ನಮ್ಮನ್ನು ಶುಭ ಹಾದಿಯಿಂದ ಕರೆದುಕೊಂಡು ನಡೆ. ಕಲ್ಯಾಣದ ಹಾದಿಗೆ ನಮ್ಮನ್ನು ಹಚ್ಚು. ಸಮ್ಯಕ್ ರೂಪದಿಂದ ನಮ್ಮೆಲ್ಲ ಗತಿಯನ್ನು ನಿಯಂತ್ರಿಸು.

"ಪ್ರಾಣ್ಯಸ್ಯೇದಂ ವಶೇ ಸರ್ವಂ ತ್ರಿದಿವೇ ಯತ್ ಪ್ರತಿಷ್ಠಿತಮ್,
ಮಾತೇವ ಪುತ್ರಾನ್ ರಕ್ಷಸ್ವ ಪ್ರಜ್ಞಾಂ ಚ ವಿಧೇಹಿ ನ ಇತಿ"

ಈ ವಿಶ್ವದಲ್ಲಿರುವ ಸೃಷ್ಟ ವಸ್ತುಗಳೆಲ್ಲ ಪರಮಾತ್ಮನ ವಶದಲ್ಲಿವೆ. ಸ್ಥೂಲ, ಸೂಕ್ಷ್ಮ ಮತ್ತು ಕಾರಣ ಜಗತ್ತಿನ ಪ್ರತಿಯೊಂದು ವಸ್ತುವನ್ನು ಅವನೇ ನಿಯಂತ್ರಿಸುತ್ತಾನೆ. ಅವನ ಮಹಿಮೆಗೆ, ಸಕಲ ಸಂಸಾರವೂ ತನ್ನನ್ನೇ ತಾನು ಸಮರ್ಪಿಸಿಕೊಂಡಿದೆ. ಎಲೈ ಪರಮಾತ್ಮ! ನೀನು ನಮಗೆ ಬ್ರಹ್ಮವಿದ್ಯೆಯ ಶಿಕ್ಷಣ ನೀಡಿ ಶುಭ ಹಾದಿಯಲ್ಲಿ ನಡೆಸು; ನಾವು ಏಕಾಂತ ಭಾವದಿಂದ ನಿನ್ನನ್ನೇ



ಆಶ್ರಯಿಸಿದ್ದೇವೆ. ಯಾವ ಪ್ರಕಾರ ತಾಯಿಯು ತನ್ನ ಮಕ್ಕಳನ್ನು ರಕ್ಷಿಸುವಳೋ, ನೀನಾದರೂ ಅದೇ ರೀತಿ, ಹೀನತೆ, ದೈನ್ಯತೆ, ತುಚ್ಛತೆ ಮುಂತಾದವುಗಳಿಂದ ನಮ್ಮನ್ನು ರಕ್ಷಿಸು. ಶ್ರೀ ಮತ್ತು ಪ್ರಜ್ಞೆಗಳಲ್ಲಿ ನಮ್ಮನ್ನು ಪ್ರತಿಷ್ಠಿಸು. ಪಿಪ್ಪಲಾದ ಋಷಿಯು ಭಾರದ್ವಾಜನ ಮಗನಾದ ಸುಕೇಶಾನಿಗೆ ಹೀಗೆ ಹೇಳಿದ್ದಾನೆ.

"ಅರಾ ಇವ ರಥನಾಭಿ ಕಲಾ ಯಸ್ಮಿನ್ ಪ್ರತಿಷ್ಠಿತಾಃ
ತಂ ವೇದ್ಯಂ ಪುರೂಕ್ಷಂ ವೇದ ಯಥಾ ಮಾ ವೋ,
ಮೃತ್ಯುಃ ಪರಿವ್ಯಥಾಃ"

ಯಾವ ರೀತಿ, ಗಾಲಿಯ ಗಡ್ಡಿಯು ಹಲ್ಲುಗಳ ಸಮೂಹವನ್ನು ನಿಯಂತ್ರಿಸುವುದೋ, ಅದೇ ರೀತಿ ಪರಮ ಬ್ರಹ್ಮನು ಈ ವಿಶ್ವ ಸಂಸಾರದ ಹದಿನಾರು ಕಲೆಗಳನ್ನು ನಿಯಂತ್ರಿಸುತ್ತಾನೆ. ಈ ಹದಿನಾರು ಕಲೆಗಳ ಅಂದರೆ ಹತ್ತು ಇಂದ್ರಿಯಗಳು ಪಂಚಪ್ರಾಣಗಳು (ಪ್ರಾಣ, ಅಪಾನ, ಸಮಾನ ಉದಾನ ಮತ್ತು ವ್ಯಾನ) ಮತ್ತು ಅಹಂ ತತ್ತ್ವ ಇವುಗಳ ನಿಯಂತ್ರಕನಾಗಿದ್ದಾನೆ. ಈ ಹದಿನಾರು ಕಲೆಗಳೂ ಸಂಪೂರ್ಣವಾಗಿ ಅವನನ್ನೇ ಆಶ್ರಯಿಸಿವೆ. ಈ ಹದಿನಾರು ಕಲೆಗಳೇ ಜನನ–ಮರಣ, ಇಲ್ಲವೆ ಆಯುಸ್ಸಿನ ಹ್ರಾಸ-ವೃದ್ಧಿಗಳ ಕಾರಣವಾಗಿವೆ. ಅವುಗಳನ್ನು ತಿಳಿಯಲು ಯತ್ನಿಸು. ಪರಾಜ್ಞಾನದ ಸಹಾಯದಿಂದ ಅವುಗಳನ್ನು ಪರಿಚಯಿಸುಕೊ. ಅವುಗಳನ್ನು ಅರಿಯುವುದರಲ್ಲಿ ನೀನು ಶಕ್ತನಾದರೆ, ನೀನು ಮೃತ್ಯುವಿನಿಂದ ಅರ್ಥಾತ್ ಎಲ್ಲ ಬಗೆಯ ಅಧೋಗತಿಯಿಂದ ಪಾರಾಗಿ ಉಳಿಯಬಲ್ಲೆ. ಆಗ ನೀನು ಮೃತ್ಯುವನ್ನು ಅತಿಕ್ರಮಿಸುವೆ. ಮೃತ್ಯುವನ್ನು ಅತಿಕ್ರಮಿಸಲೋಸುಗ, ಪರಮಾತ್ಮನೇ ಪರಮ ಔಷಧವಾಗಿದ್ದಾನೆ. ಮೃತ್ಯುವನ್ನು ತಡೆಯುವುದು ಕೇವಲ ಅಮೃತಸ್ವರೂಪವಾದ ಬ್ರಹ್ಮರಸವಷ್ಟೇ. ಆದ್ದರಿಂದ, ವೈದಿಕ ಋಷಿಯು ಅಮೃತ ಸಿಂಧು ಬ್ರಹ್ಮನನ್ನು ಉದ್ದೇಶಿಸಿ, ಹೀಗೆ ಹಾಡಿದ್ದಾನೆ:

"ಅಸದೋ ಮಾ ಸದ್ಗಮಯ; ತಮಸೋ ಮಾ ಜ್ಯೋತಿರ್ಗಮಯ.
ಮೃತ್ಯುರ್ಮಾ ಅಮೃತೋರ್ಗಮಯ, ಆವಿರಾವಿಃ ಮಯ್ಯೈಧಿ."

ಎಲೈ ಪರಮ ಬ್ರಹ್ಮ; ನೀನು ನಮ್ಮ ಈ ಮೃತ್ಯುಲೋಕದಿಂದ ಅಮೃತ ಲೋಕಕ್ಕೆ ಹೋಗುವ ಹಾದಿಯನ್ನು ತೋರಿಸು.

"ಆವಿಃ ಸನ್ನಿಹಿತಂ ಗುಹಾಚರನ್ನಾಮ ಮಹತ್ ಪದಮತ್ರೈತತ್
ಸಮರ್ಪಿತಂ.

ಏಜತ್ ಪ್ರಾಣನ್ನಿಮಿಷಚ್ಚ ಯದೇತಜ್ಜಾನಥ ಸದಸದ್ವರೇಣ್ಯಂ,
ಪರಂ ವಿಜ್ಞಾನಾದ್ ಯದ್ವರಿಷ್ಠಂ ಪ್ರಜಾನಾಮ್."

ಅಥರ್ವ ವೇದದಲ್ಲಿ ಪರಮಾತ್ಮನನ್ನು ಕುರಿತು ಇನ್ನೂ ಬಹಳಷ್ಟು ಬೇರೆಡೆಗೆ ಹೇಳಲಾಗಿದೆ. ಅದು ಸ್ವಯಂ ಪ್ರಕಾಶದ ಸ್ತೋತ್ರವಾಗಿದೆ. ಅಂದರೆ, ಸದ್ವಸ್ತುಗಳಲ್ಲಿಯೇ (ಜಗತ್ತಿನಲ್ಲಿ ಅಸದ್ ಎಂಬ ಯಾವ ವಸ್ತುವೂ ಇಲ್ಲ. ಸಾಧಾರಣವಾಗಿ ನಾವು ಯಾವುದನ್ನು ಅಸದ್ ಎನ್ನುತ್ತೇವೆಯೋ, ಅದು ಸತ್ ವಸ್ತುವಿನದೇ ಮಾಯಾಧೀನ ಅವಸ್ಥೆಯಷ್ಟೇ.) ನೆಲೆಸಿದೆ. ಅಂದರೆ ಸಕಲ ಸದ್ವಸ್ತುಗಳೆಲ್ಲ ಅವನೇ ಆಗಿದ್ದಾನೆ. ಆದ್ದರಿಂದ ನಮ್ಮ ಅಹಂ ಸಹ ಅವನಿಂದ ಬೇರಾಗಿಲ್ಲ.

ಅವನು ನಮ್ಮ ಪ್ರಾಣಗಳ ಪ್ರಾಣನಾಗಿದ್ದಾನೆ. 'ನಾನು'ವಿನ 'ನಾನು' ಆಗಿದ್ದಾನೆ. ಅದೇ ರೀತಿ ಆತ್ಮನ ಆತ್ಮನಾಗಿದ್ದಾನೆ. ಅವನಿಗಿಂತ ನಮಗೆ ಹೆಚ್ಚು ನಿಕಟವಾಗಿರುವ ಬೇರಾವ ವಸ್ತುವನ್ನೂ ನಾವರಿಯೆವು. ಅವನು ಗುಹಾಚಾರನಾಗಿದ್ದಾನೆ. ಇಲ್ಲಿ ಗುಹಾಚಾರ ಶಬ್ದದ ಅರ್ಥವು ಪರ್ವತ ಕಂದರ ವಾಸಿ ಎಂದಲ್ಲ. ಇಲ್ಲಿ ಗುಹೆಯೆಂದರೆ ಹೃದಯ ಇಲ್ಲವೆ ಅಂತಃಕರಣ ಎಂದು ಅರ್ಥ. ಆದ್ದರಿಂದ ಅವನು ಗುಹಾಚಾರನು. ಅವನು ಹೃದಯವಾಸಿಯೂ ಅಹುದು. ಅದೇಕೆ? ಹೃದಯದ ಅಧಿಷ್ಠಾತೃ ದೇವತೆಯೇ ಸರಿ.

ಜೀವಿಯು ಯಾವಾಗಲೂ ಆಪತ್ತು ಇಲ್ಲದ ಆಶ್ರಯದ ಶೋಧದಲ್ಲಿ ತೊಡಗಿರುತ್ತಾನೆ. ಅವನಿಗೆ ಶಾಶ್ವತವಾದ ಸುರಕ್ಷಿತತೆಯನ್ನು ಒದಗಿಸುವ ಯಾವುದೇ ಆಶ್ರಯವಿಲ್ಲ. ಜೀವಿಗಳ ಏಕಮಾತ್ರ ದೊಡ್ಡ ಆಶ್ರಯವೆಂದರೆ ಅವನೊಬ್ಬನೇ. ಅವನಿಗಿಂತ ಮಹತ್ತರವಾದುದಾಗಲಿ, ಶ್ರೇಷ್ಠವಾದುದಾಗಲಿ, ಬೇರೊಂದಿಲ್ಲ. ಅವನು ಗತಿಶೀಲನು. ಈಗ ಒಂದು ಪ್ರಶ್ನೆ ಏಳುತ್ತದೆ. ಏನೆಂದರೆ, ಅವನು ಸರ್ವವ್ಯಾಪಿಯಾಗಿದ್ದಾನೆ. ಅಂದಮೇಲೆ, ಅವನ ಗತಿಯೆಂದರೆ ಎಲ್ಲಿಂದ ಎಲ್ಲಿಯ ವರೆಗೆ? ಆದರೆ ನಿಜವಾಗಿ ಅವನು ಗತಿಶೀಲನಾಗಿದ್ದಾನೆ. ಮತ್ತು ಅವನ ಮಾನಸ ದೇಹದ ಕಲ್ಪನಾ ಧಾರೆಯಲ್ಲಿ ಅವನ ಗತಿಯು ಇದೆ. ಈ ಜಗತ್ತು ಅವನ ಮಾನಸ ದೇಹದಲ್ಲಿ ಸೃಷ್ಟಿಗೊಂಡ ಕಲ್ಪನಾವಿಲಾಸವಷ್ಟೇ. ಒಂದು ವೇಳೆ, ವಾಸ್ತವದಲ್ಲಿ ಅವನು ಕಲ್ಪಿಸದಿದ್ದರೆ ಅವನ ಮಾನಸ ದೇಹದಲ್ಲಿ ಕಲ್ಪನೆಯ ಸಂವೇದನೆಗಳು ಜಾಗ್ರತವಾಗುತ್ತಿರಲಿಲ್ಲ; ಆಗ ಜಗತ್ತಿನ ಸೃಷ್ಟಿಯೂ ಆಗುತ್ತಿರಲಿಲ್ಲ. ಪ್ರಾಣ ಅಪಾನಾದಿಗಳಿಂದ ಜೀವದೇಹದಲ್ಲಿ ಯಾವ ಪಂಚ–ವಾಯುಗಳ ಕ್ರಿಯೆಯು ನಡೆಯುವುದೋ, ಮತ್ತು ಯಾವ



ಕಾರಣದಿಂದ ಜೀವಿಯು ಜೀವಂತವಾಗಿರುವನೋ, ಆ ಪ್ರಾಣಶಕ್ತಿ ಅಥವಾ ವಾಯುವೂ ಸಹ ಅವನೇ ಆಗಿದ್ದಾನೆ. ಕಣ್ಣು ರೆಪ್ಪೆಗಳ ನಿಮಿಷ ಕ್ರಿಯೆಯು ಪ್ರತಿ ಮುಹೂರ್ತದಲ್ಲೂ ಮಾನವನ ಅತಿಸೂಕ್ಷ್ಮ ತನ್ಮಾತ್ರೆಗಳನ್ನು ಗ್ರಹಿಸುವ ಶಕ್ತಿಯನ್ನು ಉಳಿಸಿಕೊಂಡಿರುತ್ತದೆ. ಅದೂ ಸಹ ಅವನೇ ಆಗಿದ್ದಾನೆ. ವಾಸ್ತವದಲ್ಲಿ ಆ ಪ್ರಾಣ ಶಕ್ತಿ ನಿಮಿಷ ಕ್ರಿಯೆಗಳ ಹಿಂದೆ ಅಡಗಿರುವ ಪರಮ ಸತ್ಯದ ರೂಪದಲ್ಲಿ ಜೀವ–ಮಾನಸದಲ್ಲಿ ಅವನ ಅಸ್ತಿತ್ವವೇ ಧ್ವನಿಸುತ್ತದೆ. ಅವನ ಅಸ್ತಿತ್ವದ ಪ್ರೇರಣೆಯಿಂದ ರಕ್ತನಾಳಗಳೂ ಮತ್ತು ಸ್ನಾಯು ಮಂಡಲಗಳೂ ಉದ್ಬೋಧಿತವಾಗುತ್ತವೆ; ಸ್ಪಂದಿತವಾಗುತ್ತವೆ. ಈ ಸಂಸಾರದಲ್ಲಿ ನಾವು ಸದ್ ಇಲ್ಲವೆ ಅಸದ್ ವಸ್ತುಗಳ ರೂಪದಲ್ಲಿ ಯಾವ ವಸ್ತುಗಳನ್ನು ಅರಿತುಕೊಳ್ಳುತ್ತೇವೆಯೋ, ಅವೆಲ್ಲವುಗಳೂ ಅವನ ಅವಸ್ಥಾಭೇದಗಳಷ್ಟೇ. ಸದ್ವಸ್ತು ಎಂದಾಗ ಯಾವ ಪುರುಷ ಸತ್ತೆಯ ಬೋಧವಾಗುವುದೋ, ಆ ಪುರುಷ ಸತ್ತೆಯ ವರೆಗಷ್ಟೇ ಬ್ರಹ್ಮಭಾವನೆಯು ಸೀಮಿತವಾಗಿಲ್ಲ. ಯಾವ ವಿರಾಟ ಪ್ರಕೃತಿಯು ಪುರುಷ ಸತ್ತೆಯನ್ನು, ಸ್ಥೂಲ ದೃಷ್ಟಿಯಿಂದ, ಅಸದ್ ವಸ್ತುವಿನಲ್ಲಿ ಪರಿಣಮಿಸುವಂತೆ ಮಾಡುವುದೋ ಆ ಪ್ರಕೃತಿಯೂ ಸಹ ಅವನೇ ಆಗಿದ್ದಾನೆ.

"ತ್ವಮೇಕೋ ದ್ವಿತ್ವಮಾಪನ್ನೋ ಶಿವಶಕ್ತಿ ವಿಭಾಗಶಃ"

ಬ್ರಹ್ಮನು ಸರ್ವಶ್ರೇಷ್ಠನಾಗಿದ್ದಾನೆ. ಅವನಿಗಿಂತ ಹಿರಿದಾದುದು ಮತ್ತೇನೂ ಇಲ್ಲ. 'ಯದಜ್ಯೇನಾಧಿರೋಹತಿ',ಲೌಕಿಕದ ಮೂಲಕ ಬ್ರಹ್ಮನನ್ನು ಹೊಂದಲಾರೆವು. ಪಾಂಡಿತ್ಯವೂ ಸಹ ಅವನನ್ನು ಹಿಡಿಯಲು ಅಸಮರ್ಥವಾಗಿದೆ; ಸ್ಪರ್ಶಿಸಲು ಸಹ ಅಕ್ಷಮವಾಗಿದೆ. ಅವನು ಜ್ಞಾನಾತೀತ. ಇತ್ತ ಮಾನವನ ಜ್ಞಾನವು ಖಂಡ ಜ್ಞಾನವಷ್ಟೇ. ಅವನು ಎಲ್ಲರಿಗೂ ಪೂಜನೀಯನಾಗಿದ್ದಾನೆ. ಸಕಲ ಸೃಷ್ಟ ವಸ್ತುಗಳ ತಲೆಯ ಮೇಲೆ ಅವನು ತನ್ನ ಮಹಿಮೆಯಿಂದ ಕುಳಿತಿದ್ದಾನೆ. ನಿನ್ನ 'ಅಹಂ' ಬೋಧದ ಜ್ಞಾತನೇ ಅವನು. ಅವನನ್ನು ಅರಿಯುವ ಪ್ರಯತ್ನ ಮಾಡು.

"ಯದರ್ಚಿಮದ್ ಯದಣುಭ್ಯೋಣು ಚ ಯಸ್ಮಿನ್
ಲೋಕಾ ನಿಹಿತಾ ಲೋಕಿನಶ್ಚ
ತದೇತದಕ್ಷರಂ ಬ್ರಹ್ಮ ಸ ಪ್ರಾಣಸ್ತದು ವಾಂಙ್ಮನಃ
ತದೇತತ್ ಸತ್ಯಂ ತದಮೃತಂ ತದ್ವೇದ್ಧವ್ಯಂ ಸೋಮ್ಯ ವಿದ್ಧಿ"

ಅವನು ಜ್ಯೋತಿ ರೂಪನಾಗಿದ್ದಾನೆ ಅವನು ಅಣುವಿನ ಅಣುವಾಗಿದ್ದಾನೆ; ಪರಮಾಣುವಿನ ಪರಮಾಣುವಾಗಿದ್ದಾನೆ. ಅವನು ಎಷ್ಟೊಂದು ಸೂಕ್ಷ್ಮನಾಗಿರುವನೆಂದರೆ, ಮನವು ಆ ಸೂಕ್ಷ್ಮತೆಯ ಚಿಹ್ನೆಯನ್ನು ಸಹ ಅರಿಯಲಾರದು. ಇನ್ನೂ ಒಂದು ಭಾವನೆಯಿಂದ ಅವನು ಎಷ್ಟು ವಿರಾಟನಾಗಿರುವನೆಂದರೆ, ಸಮಗ್ರ ಬ್ರಹ್ಮಾಂಡವೇ ಅವನ ನಡುವೆ ನೆಲೆಸಿದೆ. ಅವನು ಸತ್ಯಸ್ವರೂಪ; ಅದೇ ರೀತಿ ಅಮೃತಸ್ವರೂಪ. ಎಲೈ ಸೋಮ್ಯ, ಎಲೈ ಸಾಧಕ; ಅವನೇ ನಿನ್ನ ವಾಕ್ಯ. ಅವನೇ ನಿನ್ನ ಮನ. ನೀನು ನಿನ್ನ ಸಾಧನೆಯ ಏಕಾಗ್ರತೆಯ ಮೂಲಕ ನಿನ್ನ ಆತ್ಮಿಕ ಶಕ್ತಿಯಿಂದ ಅವನನ್ನು ಅರಿ.

"ಧನುರ್ಗೃಹೀತ್ವೌಪನಿಷದಂ ಮಹಾಸ್ತ್ರಂ ಶರಣಂ
ಹ್ಯುಪಾಸಾನಿಶಿತಂ ಸಂಧಯೀತ.
ಆಯಮ್ಯ ತದ್ಭಾವಗತೇನ ಚೇತಸಾ ಲಕ್ಷ್ಯಂ
ತದೇವಾಕ್ಷರಂ ಸೋಮ್ಯ ವಿದ್ಧಿ."

ಎಲೈ ಸೋಮ್ಯ ಸಾಧಕ; ಸಾಧನ–ಪದ್ಧತಿಯೇ (ಯಾವುದರ ಮೂಲಕ ಬ್ರಹ್ಮನ ಸಾನ್ನಿಧ್ಯವು ಲಭಿಸುವುದೋ, ಅದನ್ನೇ ಉಪನಿಷದ್ ಎನ್ನುತ್ತಾರೆ. ಆದ್ದರಿಂದ ಇಲ್ಲಿ ಉಪನಿಷದ್ ಎಂದರೆ ಸಾಧನಾ ಪದ್ಧತಿಯೆಂದೇ ಬೋಧವಾಗುತ್ತದೆ) ನಿಮ್ಮ ಮಹಾಸ್ತ್ರ ಧನುಸ್ಸಾಗಿದೆ. ಉಪಾಸನೆಯ ಮೂಲಕ ತೀಕ್ಷ್ಣಗೊಳಿಸಿ ಮನರೂಪೀ ಬಾಣವನ್ನು ಅದಕ್ಕೆ ಹೆದೆಯೇರಿಸು. ಈಗ ಚಿತ್ತವನ್ನು ಅವನ ಭಾವದಲ್ಲಿ ಲೀನಗೊಳಿಸಿ, ಧನುಸ್ಸನ್ನು ಠೇಂಕಾರಗೊಳಿಸು. ಮತ್ತು ನಿನ್ನ ಲಕ್ಷ್ಯನಾದ ಆ ಅಕ್ಷರ ಪರಮಾತ್ಮನನ್ನು ಪಡೆ. (ಇದು ಸವಿಕಲ್ಪ ಸಮಾಧಿಯ ಅವಸ್ಥೆಯಾಯಿತು)

"ಪ್ರಣವೋಧನುಃ ಶರೋ ಹ್ಯಾತ್ಮಾ ಬ್ರಹ್ಮ ತಲ್ಲಕ್ಷ್ಯಮುಚ್ಯತೇ.
ಅಪ್ರಮತ್ತೇನ ವೇದ್ಧವ್ಯಂ ಶರವತ್ ತನ್ಮಯೋ ಭವೇತ್"

ಎಲೈ ಸೋಮ್ಯ. ಪ್ರಣವ ಅಂದರೆ ಓಂಕಾರವೇ ನಿನ್ನ ಧನುಸ್ಸಿನ ಮೂರ್ತರೂಪವಾಗಿದೆ. ಇಲ್ಲಿ ಧನುಷ್ಟಂಕಾರದ ಅರ್ಥವೆಂದರೆ,ಪ್ರಾಣಾಯಾಮ ಕ್ರಿಯೆ. ಅರ್ಥಾತ್ ಪ್ರಾಣ ಮತ್ತು ಆತ್ಮಶಕ್ತಿಯನ್ನು ಕಲಕುವುದು. ಒಂದು ವೇಳೆ ನೀನು ಬಾಣದ ರೂಪದಲ್ಲಿ, ಆತ್ಮವನ್ನು ಬಳಸಿದರೆ ಮತ್ತು ಅನನ್ಯಚಿತ್ತದಿಂದ, ಬ್ರಹ್ಮರೂಪಿ ಲಕ್ಷ್ಯದತ್ತ ಅದನ್ನು ನಡೆಸಿದರೆ, ತಲುಪುವಂತೆಯೇ, ನಿಮ್ಮ ಆತ್ಮವೂ ಸಹ, ಪರಮಾತ್ಮನೊಂದಿಗೆ ಒಂದಾಗುತ್ತದೆ.



"ಯಸ್ಮಿನ್ ದ್ಯೌಃ ಪೃಥಿವೀ ಚಾಂತರಿಕ್ಷವೋತಂ ಮನಃ
ಸಃ ಪ್ರಾಣೈಶ್ಚ ಸರ್ವೈಃ
ತಮೇವೈಕಂ ಜಾನಥ ಆತ್ಮನಮನ್ಯಾ ವಾಚೋ
ವಿಮುಂಚಥಾಮೃತ ಸ್ಯೈಷ ಸೇತುಃ"

ಯಾರು ಆಕಾಶ, ಪೃಥ್ವಿ ಮತ್ತು ಅಂತರಿಕ್ಷೆಗಳನ್ನು ಕಟ್ಟಿಹಾಕಿರುವನೋ, ಮನಸ್ಸು, ಪಂಚಪ್ರಾಣ ಮತ್ತು ಇಂದ್ರಿಯ ಸಮೂಹಗಳು ಯಾರ ನಡುವೆ ನೆಲೆಸಿರುವವೋ,ಎಲೈ ಸಾಧಕ; ನೀನು ಕೇವಲ ಅವನನ್ನೇ ತಿಳಿಯುವ ಪ್ರಯತ್ನ ಮಾಡು. ಅವನನ್ನು ಪಡೆಯುವ ಪ್ರಯತ್ನವನ್ನು ಹೊರತುಪಡಿಸಿ ಬೇರೆ ಎಲ್ಲ ಅವಾಂತರದ ಮಾತುಗಳನ್ನು ತ್ಯಜಿಸು. ನೀನು ಮರಣಶೀಲನಾಗಿರುವೆ; ಮೃತ್ಯುವಿನ ದಾಸನಾಗಿರುವೆ. ಅಮೃತತ್ವದಲ್ಲಿ ನೆಲೆಸಬೇಕೆಂಬುದು ನಿನ್ನ ಶಾಶ್ವತ ಆಕಾಂಕ್ಷೆಯಾಗಿದೆ. ಮತ್ತು ಈ ಅಮೃತತ್ತ್ವದ ವರೆಗೆ ತಲುಪಿಸುವ ಸೇತುವೆಯೂ ಅವನೇ ಆಗಿದ್ದಾನೆ. ಆದ್ದರಿಂದ ಕೇವಲ ಅವನನ್ನು ಅರಿಯುವುದರಿಂದಲೇ ನಿನ್ನ ವಾಸ್ತವಿಕ ಕಲ್ಯಾಣವಾಗುತ್ತದೆ.

"ಅರಾ ಇವ ರಥನಾಭೌ ಸಂಹತಾ ಯತ್ರ ನಾಡ್ಯಃ ಸ
ಯೇಷೋಂತಶ್ಚರತೇ, ಬಹುಧಾ ಜಾಯಮಾನಃ
ಓಂ ಇತ್ಯೇವಂ ಧ್ಯಾಯಥ ಆತ್ಮಾನಂ ಸ್ವಸ್ತಿ ವಃ ಪರಾಯ
ತಮಸಃ ಪರಸ್ತಾತ್."

ಯಾವ ರೀತಿ, ರಥದ ಗಾಲಿಯ ಹಲ್ಲುಗಳು ಗಡ್ಡಿಯಲ್ಲಿ ಸ್ಥಿರವಾಗಿರುವುವೋ, ಅದೇ ರೀತಿ ನಾಡೀಪುಂಜವು ಅವನಲ್ಲಿ ಆಶ್ರಿತವಾಗಿದೆ. ಜೀವದೇಹದಲ್ಲಿ ಸಹಸ್ರಾರದಲ್ಲಿರುವ ಆತ್ಮವೇ ನಾಡೀ ಪುಂಜದ ಮುಖ್ಯ ಆಶ್ರಯವಾಗಿದೆ. ಅಥವಾ ಈ ಜಗದ್ರೂಪೀ ಬ್ರಹ್ಮ ಚಕ್ರದ ಹಲ್ಲುಗಳೆಲ್ಲ (ಅರಾ) ಬ್ರಹ್ಮಾಂಡದ ಪ್ರಧಾನ ಕೇಂದ್ರವಾದ ಆ ಸ್ಫೋಟದಲ್ಲಿಯೇ ಅಂದರೆ ಆ ಪುರುಷೋತ್ತಮನಲ್ಲಿಯೇ ಆಶ್ರಿತವಾಗಿವೆ. ನಾಡಿ ಶಬ್ದದ ಮಥಿತಾರ್ಥವೆಂದರೆ, ಭಾವವಾಹಕ ಎಂದು. ಸರ್ವ ಭಾವಗಳ ಪ್ರಾಣಕೇಂದ್ರನೂ ಅವನೇ. ಆತ್ಮದ ಆತ್ಮನಾದ ಅವನೇ ಪರಮಾತ್ಮ. ಆ ಓಂ–ಸ್ವರೂಪಿಯಾದ ಪರಮಾತ್ಮನ ಧ್ಯಾನವನ್ನೇ ಮಾಡು. ನೀನು ಅಂಧಕಾರದ ಆಚೆಗಿನ ಆಲೋಕದ (ಬೆಳಕಿನ) ರಾಜ್ಯವನ್ನು ಪ್ರವೇಶಿಸಿ ಇರಲೋಸುಗ ಸಾಧನಾ ತತ್ಪರನಾಗು. ಈ ಪರಮ ಪ್ರಕಾಶಮಯ ಲೋಕದಲ್ಲಿ ನಿಮ್ಮ ಗತಿ ಪಥಗಳು ಜಯ ತರಲಿ; ನಿಮಗೆ ಶುಭವಾಗಲಿ;

"ಯಃ ಸರ್ವಜ್ಞಃ ಸರ್ವವಿದ್ ಯಶ್ಯೈಷ ಮಹಿಮಾ ಭುವಿ
ದಿವ್ಯೇ ಬ್ರಹ್ಮಪುರೇ ಹ್ಯೇಷ ವ್ಯೋಮ್ನ್ಯಾತ್ಮಾ ಪ್ರತಿಷ್ಠಿತಃ
ಮನೋಮಯ ಕಾಮಶರೀರನೇತಾ ಪ್ರತಿಷ್ಠಿತಾನ್ನೇಹೃದಯ
ಸನ್ನಿಧಾಯ
ಯದ್ವಿಜ್ಞಾನೇನ ಪರಿಪಶ್ಯಂತಿ ಧೀರಾಃ ಆನಂದ ರೂಪಮಮೃತಂ
ಯದ್ವಿಭಾತಿ.

ಸರ್ವಜ್ಞನಾದ, ಸರ್ವವಿದನಾದ, ಸರ್ವಲೋಕಗಳಲ್ಲಿ ತನ್ನ ಮಹಿಮೆಯನ್ನು ಚೆನ್ನಾಗಿ ನೆಲೆಗೊಳಿಸಿದ, ಆ ವಿರಾಟ ಪುರುಷನೇ ಆನಂದಮಯ ಲೋಕದಲ್ಲಿ ತನ್ನ ಸ್ವರೂಪದಲ್ಲಿ ಹೊಳೆಯುತ್ತಿದ್ದಾನೆ. ಜೀವಿಯು ಸಾಧನೆಯ ಮೂಲಕ, ತನ್ನ ಚಿದಾಕಾಶದಲ್ಲಿ ಅವನ ಸತ್ತೆಯನ್ನು ಪಡೆಯಬಲ್ಲನು. ಅವನು ಜೀವರಿಗೆ ಪ್ರಾಣ ಸ್ವರೂಪನು. "ಅದೇ ರೀತಿ, ಕಾಮಮಯ ಮನೋಮಯ ಮುಂತಾದ ಲೋಕಗಳ ಮುಂದಾಳುವೂ ಅವನೇ. ಜೀವಿಗಳ ಹೃದಯಾದಲ್ಲಿ ಅಂದರೆ, ಮಹತ್ತತ್ತ್ವದಲ್ಲಿ, ಅಂದರೆ, 'ನಾನು ಇದ್ದೇನೆ' ಎಂಬ ಭೋಧದ ಜ್ಞಾತೃರೂಪದಲ್ಲಿ, ಅವನೇ ಪ್ರತಿಷ್ಠಿತನಾಗಿದ್ದಾನೆ. ಧೀರ ವ್ಯಕ್ತಿಯು ಅಂದರೆ ಸಾಧಕನು, ವಿಜ್ಞಾನನ ಮೂಲಕ ಅಂದರೆ ವಿಶೇಷ ರೂಪದ ಜ್ಞಾನದ ಮೂಲಕ, ಅವನ ಪರಿದರ್ಶನವನ್ನು ಅಂದರೆ ಸಮ್ಯಕ್ ದರ್ಶನವನ್ನು ಪಡೆಯುತ್ತಾನೆ. ಮತ್ತು ಆ ಆನಂದಸ್ವರೂಪದಲ್ಲಿ, ಮತ್ತು ಅಮೃತ ಸ್ವರೂಪದಲ್ಲಿ ಪ್ರಕಾಶಿಸುತ್ತಾನೆ.

"ಭಿದ್ಯತೇ ಹೃದಯ ಗ್ರಂಥಿಶ್ಚಿದ್ಯಂತೇ ಸರ್ವ ಸಂಶಯಃ
ಕ್ಷೀಯಂತೇ ಚಾಸ್ಯ ಕಾರ್ಮಾಣಿ ತಸ್ಮಿನ್ ದೃಷ್ಟೇ ಪರಾವರೇ"

ಅವನು ಪರಾವರನು. (ಅಂದರೆ, ಕಾರ್ಯ ರೊಪದಲ್ಲಿ ಪ್ರಧಾನನು. ಮತ್ತು ಕಾರಣ ರೂಪದಲ್ಲಿ ಅಪ್ರಧಾನನು) ಅವನು ಚೈತನ್ಯಸ್ವರೂಪನು. ಅವನನ್ನು ಕಂಡ ಜನರ ಹೃದಯುಗ್ರಂಥಿಗಳು ಕೊಡಿಬಿದ್ದ ಸಂಸ್ಕಾರಗಳನ್ನೂ ದೂರಗೊಳಿಸುತ್ತವೆ. ಮನದ ಎಲ್ಲ ಸಂದೇಹಗಳೂ ದೂರಾಗುತ್ತವೆ. ಆ ಜನರು ಪಡೆದುಕೊಂಡ ಶುಭ ಮತ್ತು ಅಶುಭ ಕರ್ಮಗಳೆರಡನ್ನೂ ಕ್ಷಯಿಸುತ್ತವೆ.

"ಹಿರಣ್ಮಯೇ ಪರೇ ಕೋಶೇ ವಿರಜಂ ಬ್ರಹ್ಮನಿಷ್ಕಲಂ.
ತಚ್ಛುಭ್ರಂ ಜ್ಯೋತಿಷಂ ಜ್ಯೋತಿಸ್ತದ್ ಯದಾತ್ಮವಿದೋವಿದುಃ"

ಈ ಪಂಚಕೋಶಾತ್ಮಕ ಶರೀರದಲ್ಲಿ ಹಿರಣ್ಮಯ ಕೋಶವೇ ಎಲ್ಲಕ್ಕಿಂತ ಸೂಕ್ಷ್ಮಕೋಶವಾಗಿದೆ. ಮತ್ತು ಇದಕ್ಕಿಂತ ಊರ್ಧ್ವದಲ್ಲಿ ನಿಷ್ಕಲ ಬ್ರಹ್ಮನೇ



ಇರುತ್ತಾನೆ. ಅವನು ನಿಷ್ಕಲನು; ಏಕೆಂದರೆ, ವಿಕಾರರಹಿತನಾಗಿದ್ದಾನೆ; ದೋಷ ರಹಿತನಾಗಿದ್ದಾನೆ. ಅವನಲ್ಲಿ ಕ್ಷರ-ರೂಪೀ ಪಂಚಕೋಶಾತ್ಮಕ ವಿಕಾಸವಿಲ್ಲ. ಅವನ ಜ್ಯೋತಿಯು ಶುಭ್ರವಾಗಿದೆ. ಅವನು, ಬೆಳಗುವ ವಸ್ತುಗಳೆಲ್ಲವುಗಳ ಬೆಳಕಾಗಿದ್ದಾನೆ. ಜ್ಯೋತಿಷ್ಮಾನ್ ವಸ್ತುಗಳ ಹಿಂದೆ ಅವನೇ ಜ್ಯೋತಿಸ್ವರೂಪನಾಗಿ ಇರುತ್ತಾನೆ. ಅವನೆದುರು ಇತರ ಜ್ಯೋತಿಗಳೆಲ್ಲ ಮಲಿನವೆನಿಸುತ್ತವೆ.

"ನ ತತ್ರ ಸೂರ್ಯೋ ಭಾತಿ ನ ಚಂದ್ರ ತಾರಕಂ
ನೇ ಮಾ ಮಿದ್ಯುತೋ ಭಾಂತಿ ಕುತೋಽ ಯಮಾಗ್ನಿಃ
ತಮೇವ ಭಾಂತಮನುಭಾತಿ ಸರ್ವಂ.
ತಸ್ಯ ಭಾಸೋ ಸರ್ವಮಿದಂ ವಿಭಾತಿ."

ಅವನೆದುರು ಸೂರ್ಯನೂ ಸಹ ಜ್ಯೋತಿಷ್ಮಾನನೆಂದು ಬೆಳಗಲಾರನು. ಅಂದರೆ ಅವನ ಬೆಳಕಿನೆದುರ ಸೂರ್ಯನ ಬೆಳಕು ಮ್ಲಾನವೆನಿಸುತ್ತದೆ. ಚಂದ್ರ ಮತ್ತು ತಾರೆಯರ ಅವಸ್ಥೆಯೂ ಇದೇ ರೀತಿ; ಅಷ್ಟೇಕೆ ಮಿಂಚಿನ ಕಾಂತಿಯೂ ಸಹ ಅಲ್ಲಿ ಯಾವ ಬೆಳಕೂ ಎನಿಸದು; ಇನ್ನು ಈ ಅಗ್ನಿಯ ಪಾಡೇನು? ಅವನೇ ಭಾಸ್ವರನು. ಆದ್ದರಿಂದ ಅವನ ಸರ್ವಸತ್ತೆಗಳೂ ಭಾಸ್ವರವಾಗಿವೆಯಷ್ಟೇ. ಅವನ ಜ್ಯೋತಿಯ ಮೂಲಕವೇ ಇನ್ನಿತರ ಎಲ್ಲ ವಸ್ತುಗಳು ಜ್ಯೋತಿಷ್ಮತಿಗಳಾಗಿವೆ.

"ಬ್ರಹ್ಮವೇದಮಮೃತಂ ಪರಸ್ತಾದ್ ಬ್ರಹ್ಮ ಪಶ್ಚಾತ್,
ಬ್ರಹ್ಮ ದಕ್ಷಿಣತಶ್ಚೋತ್ತರೇಣ,
ಅಧಶ್ಚೋರ್ಧ್ವಂಚ ಪ್ರಸೃತಂ ಬ್ರಹ್ಮೈವೇದಂ ವಿಶ್ವಮಿದಂವರಿಷ್ಠಂ"

ಆ ಅಮೃತ ಸ್ವರೂಪಿಯಾದ ಬ್ರಹ್ಮನು ಎಲ್ಲೆಡೆಗೆ ವ್ಯಾಪಿಸಿದ್ದಾನೆ.ಹಿಂದೆ-ಮುಂದೆ, ದಕ್ಷಿಣೋತ್ತರಗಳಲ್ಲಿ, ಮೇಲೆ ಕೆಳಗೆ, ಎಲ್ಲ ಜಾಗೆಗಳಲ್ಲಿ ಅವನೇ ಪರಿವ್ಯಾಪ್ತನಾಗಿದ್ದಾನೆ. ಈ ತ್ರಿಭುವನವು ಅವನ ಸರ್ವಶ್ರೇಷ್ಠ ಸತ್ತೆಯ ವಿಕಾಸವಾಗಿದೆ.

"ದ್ವಾ ಸುಪರ್ಣಾ ಸಯುಜಾ ಸಖಾಯಾ ಸಮಾನಂ ವೃಕ್ಷಂ
ಪರಿಷಸ್ವಜಾತೇ,
ತಯೋರಣ್ಯಃ ಪಿಪ್ಪಲಂ ಸ್ವಾದ್ವತ್ಯನಶ್ನನ್ನನ್ಯೋಅ ಭಿಚಾಕ ಶೀತಿ."

ಪರಮಾತ್ಮನೊಂದಿಗೆ ಆತ್ಮನ ಸಂಬಂಧವು ಯಾವ ಪ್ರಕಾರದ್ದಾಗಿದೆ? ಇದನ್ನು ಒಂದು ಗಿಡದ ಮೇಲೆ ಕುಳಿತ ಎರಡು ಸುಂದರ ರೆಕ್ಕೆಗಳುಳ್ಳ ಹಕ್ಕಿಗಳಿಗೆ ಹೋಲಿಸಬಹುದು. ಒಂದು ಹಕ್ಕಿಯು ಆ ಗಿಡದ ಸ್ವಾದಿಷ್ಟವಾದ ಹಣ್ಣು

ಗಳನ್ನು ತಿನ್ನುತ್ತಿದೆ; ಇನ್ನೊಂದು ಏನನ್ನೂ ತಿನ್ನದೆ ಕೇವಲ ಜ್ಞಾತೃ ರೂಪದಲ್ಲಿ ಅದನ್ನು ಅರಿಯುತ್ತದೆ. ಇಲ್ಲಿ ಫಲವನ್ನು ತಿನ್ನುವ ಹಕ್ಕಿಯೇ ಜೀವಾತ್ಮ. ಏಕೆಂದರೆ ಮನರೂಪಿ ಗಿಡದಲ್ಲಿ ಶುಭ–ಅಶುಭವೆಂಬ ಎರಡು ತರದ ಫಲಗಳು ಉಂಟಾಗುತ್ತವೆ. ಜೀವಾತ್ಮನ ಮೇಲೆ ಅವುಗಳ ವಿಶೇಷ ಮುದ್ರೆ ಬೀಳುತ್ತದೆ. ಅಂದರೆ ಜೀವಾತ್ಮನು ಅವುಗಳ ಮೂಲಕ ಸೆಳೆಯಲ್ಪಡುತ್ತಾನೆ. ಜಗತ್ತಿನ ಸಕಲ. ಸತ್ತೆಗಳ ಜ್ಞಾತೃವಿನ ರೂಪದಲ್ಲಿ ಪರಮಾತ್ಮನೇ ಆ ಮಾನಸ–ವೃಕ್ಷದಲ್ಲಿ ನೆಲೆಸಿದ್ದಾನೆ. ಆದರೆ ಅದರ ಫಲವನ್ನು ಮಾತ್ರ ತಿನ್ನುತ್ತಿಲ್ಲ. ಕೇವಲ ಅಂತರ್ಯಾಮಿಯ ರೂಪದಲ್ಲಿ ಅದನ್ನು ಅರಿಯುತ್ತಿರುತ್ತಾನೆ. ಅವನೇ ಮೂಲ ಪ್ರಕಾಶನು. ಇನ್ನು ಜೀವಾತ್ಮನು ಅವನ ಮಾನಸಿಕ ಪ್ರತಿಫಲನವಷ್ಟೇ.

'ಸಮಾನೇ ವೃಕ್ಷೇ ಪುರುಷೋ ನಿಮಗ್ನೋ
ನೀಶಯಾ ಶೋಚತಿ ಮುಹ್ಯಮಾನಃ
ಜುಷ್ಟಂ ಯದಾ ಪಶ್ಯತ್ಯನ್ಯಮಿಶ
ಮಸ್ಯ ಮಹಿಮಾನಮಿತಿ ವೀತಶೋಕಃ'

ಆ ಒಂದೇ ವೃಕ್ಷದ ಮೇಲಿರುವ ಜೀವಾತ್ಮನು ತನ್ನ ಮೇಲೆ ತನಗೆ ನಿಯಂತ್ರಣವಿಲ್ಲದ (ಅನೀಶತ್ವದ) ಕಾರಣ, ಸೀಮಾಬದ್ಧನಾಗಿ, ಶೋಕ ದುಃಖಗಳ ಮೂಲಕ ಘಾಸಿಗೊಳ್ಳುತ್ತಾನೆ. ಆದರೆ, ಅವನು ಯಾವಾಗ ಪರಮಾತ್ಮನ ಕೃಪೆಯನ್ನು ಪಡೆಯುವನೋ, ಮತ್ತು ಅವನಿಗೆ ಉಪಕೃತನಾಗುದನೋ ಆಗ, (ಅಂದರೆ ಯಾವಾಗ ಸಾಧನೆಯ ಸಂಕೇತವನ್ನು ಕಲಿಯುವ ಸುಯೋಗವನ್ನು ಪಡೆಯುವನೋ ಆಗ) ಆ ಪರಮಾತ್ಮನ ಈಶತ್ವವನ್ನು ಅಂದರೆ ಸೀಮಾ ಹೀನತೆಯನ್ನು ಕಂಡುಕೊಂಡು, ಅವನ ಮಹಿಮೆಯಿಂದ ಉದ್ಬುದ್ಧನಾಗುತ್ತಾನೆ. ಶೋಕವನ್ನು ನೀಗುತ್ತಾನೆ.

"ಯದಾ ಪಶ್ಯಃ ಪಶ್ಯತೇ ರುಕ್ಮ ವರ್ಣಂ
ಕರ್ತಾರಮೀಶಂ, ಪುರುಷಂ ಬ್ರಹ್ಮ ಯೋನಿಮ್,
ತದಾ ವಿದ್ವಾನ್ ಪುಣ್ಯಪಾಪಾ ವಿದೂಯ,
ನಿರಂಜನಃ ಪರಮಂ ಸಾಮ್ಯಮುಪೈತಿ."

ಸಾಧನೆಯ ಹಾದಿ ಹಿಡಿದು ಮುನ್ನಡೆದ ಸಾಧಕನು ಕ್ರಮೇಣ ಆ ಜ್ಯೋತಿರ್ಮಯ ಪುರುಷನನ್ನು ಪಡೆಯುತ್ತಾನೆ. ಈ ಪುರುಷನು ಅಕ್ಷರ ಭಾವದಿಂದ ನಶ್ವರ ವಸ್ತುವಿನ ಕರ್ತೃವೂ, ನಿಯಂತೃವೂ ಆಗಿದ್ದಾನೆ. ಈ ಕ್ಷರ–ಅಕ್ಷರಗಳೆರಡನ್ನೂ ಹಿಡಿದುಕೊಂಡೇ ಬ್ರಹ್ಮನಿದ್ದಾನೆ. ಮತ್ತು ಈ ಕ್ಷರ–ಅಕ್ಷರಾತ್ಮಕ



ಬ್ರಹ್ಮನ ಪ್ರಾಣಕೇಂದ್ರದ ರೂಪದಲ್ಲಿ, ಬಿಂದು (ಸ್ಫೋಟ) ರೂಪದಲ್ಲಿ, ಬ್ರಹ್ಮಯೋನಿಯು ಬ್ರಹ್ಮಚಕ್ರದ ಕಾರಣ ಸ್ವರೂಪವಾಗಿದೆ. ಈ ಪುರುಷೋತ್ತಮನ ಸಂಬಂಧದಲ್ಲಿ ಈ ರೀತಿ ತಿಳಿಯುತ್ತಾರೆ: ನೀವು ಮನದಾಳದಲ್ಲಿ ಮುಂಗೇರದ ಕಲ್ಪನೆ ಮಾಡುತ್ತಿದ್ದೀರೆಂದು ತಿಳಿಯಿರಿ. ಈಗ ನಿಮ್ಮ ಆತ್ಮಿಕ ಸತ್ತೆಯ ಒಂದಂಶವು ಮಾನಸ ಧಾತುವಿನಲ್ಲಿ ಪರಿವರ್ತಿತವಾಗುತ್ತದೆ. ಮತ್ತು ಅದೇ ಮಾನಸ ಧಾತುವು ಮುಂಗೆರದ ರೂಪತಾಳುತ್ತದೆ. ನಿಮ್ಮ ಮಾನಸ–ಧಾತುವಿನ ಉಳಿದ ಅಂಶವು ಈ ಮನದಿಂದ ಸೃಷ್ಟಿಗೊಂಡ ಮುಂಗೇರವನ್ನು ನೋಡುವವನ ರೂಪದಲ್ಲಿರುತ್ತದೆ. ಈ ನಿಮ್ಮ ಮಾನಸಿಕ ಸತ್ತೆಯ ಯಾವ ಅಂಶವು ದೃಶ್ಯ ಇಲ್ಲವೆ ದ್ರಷ್ಟಾ ಎಂಬೀ ಎರಡರಲ್ಲಿ ಯಾವುದೊಂದರಲ್ಲೂ ಭಾಗಿಯಾಗದಿರುವುದೋ, ಅದು ಈ ದೃಶ್ಯ–ದೃಷ್ಟಾರ ಜ್ಞಾತೃವಾಗಿರುತ್ತದೆ. ನಿಮ್ಮ ಆ ಭಾವವನ್ನೇ ಬ್ರಹ್ಮಗತ ಭಾಗದಲ್ಲಿ ಬಳಸಿದ ಮೇಲೆ ಪುರುಷೋತ್ತಮ ಎನ್ನುತ್ತಾರೆ. ಬ್ರಹ್ಮನ ಈ ಜ್ಯೋತಿರ್ಮಯ ಸತ್ತೆಯನ್ನು ತಿಳಿಯುವುದರಿಂದ, ನಿರಂಜನ ಬ್ರಹ್ಮವನ್ನು ಇಲ್ಲವೆ ಸ್ಫೋಟವನ್ನು ಸಹ ತಿಳಿದುಕೊಳ್ಳುತ್ತೇವೆ. ಸ್ಥಿತಧೀ ಜೀವಾತ್ಮನ ಆ ಸಮಯದಲ್ಲಿ ಪಾಪ–ಪುಣ್ಯಗಳೆರಡನ್ನೂ ಬಿಟ್ಟು, ನಿರಂಜನ ಸ್ವರೂಪ (ಯಾವುದರಲ್ಲಿ ಅಂಜನ ಅಥವಾ ದೋಷವಿಲ್ಲವೋ) ನಾಗುತ್ತಾನೆ. ಆಗ ಅವನಲ್ಲಿ ಸಮ್ಯಕ್ ಸಮತೆಯು ಆವಿರ್ಭವಿಸುತ್ತದೆ. ಅವನಲ್ಲಿ ಭಾವಗಳ ಉಚ್ಛ್ವಾಸ ಮತ್ತು ಪ್ರಕಾಶಗಳ ಏರಿಳಿತಗಳ ತರಂಗಮಾಲೆ ಇರದು. ಅದರ ಸಮೂಹವೆಲ್ಲವೂ ತಳಗಾಣದ ಬ್ರಹ್ಮಸಮುದ್ರದ ಪ್ರಶಾಂತಿಯಲ್ಲಿ ಲೀನವಾಗಿ ಬಿಡುತ್ತದೆ.

"ಪ್ರಾಣೋ ಹ್ಯೇಷ ಯಃ ಸರ್ವಭೂತೈರ್ವಿಭಾತಿ
ವಿಜ್ಞಾನನ್ ವಿದ್ಧಾನ್ ಭವತೇ ನಾತಿವಾದೀ ।
ಆತ್ಮಕ್ರಿಡ ಆತ್ಮರತಿಃ ಕ್ರಿಯಾವಾ ನೇಷ ಬ್ರಹ್ಮವಿದಾಂ ವರಿಷ್ಠ:॥

ಬ್ರಹ್ಮನು ಸರ್ವಭೂತಗಳಲ್ಲಿ ಪ್ರಕಾಶಿಸುತ್ತಾನೆ. ಯಾವನಾದರೊಬ್ಬ ವಿದ್ವಾಂಸ ವ್ಯಕ್ತಿಯು ಈ ಜ್ಯೋತಿಸ್ವರೂಪವನ್ನು ತಿಳಿದುಕೊಂಡರೆ, ಅವನು ಅತಿವಾದಿಯಾಗಿ ಇರಲಾರನು. ಯಾವುದೋ ಒಂದು ವಿಷಯವನ್ನು ಎತ್ತಿಕೊಂಡು ಅಲ್ಲ ಸಲ್ಲದ ತರ್ಕದ ಆವಾಂತರಮಾಡಿ, ವಾಕ್ ಶಕ್ತಿಯನ್ನು ನಿರರ್ಥಕವಾಗಿ ಅಪವ್ಯಯಗೊಳಿಸಿ, ಅವನು ತನ್ನ ವೇಳೆಯನ್ನು ನಷ್ಟಗೊಳಿಸಿಕೊಳ್ಳಲು ಬಯಸನು. (ಅವನನ್ನು ತಿಳಿದುಕೊಂಡವರಿಗೆ ಸಂಸಾರದ ಎಲ್ಲ ವಸ್ತುಗಳೂ ಸಪ್ಪೆಯಾಗಿ ಬಿಡುತ್ತವೆ; ಎಂದು ಶ್ರೀರಾಮ ಕೃಷ್ಣರು ಹೇಳುತ್ತಿದ್ದರು). ಆಗ,

ಅವನು ಆತ್ಮವನ್ನು ಹಿಡಿದುಕೊಂಡೇ ಕ್ರೀಡೆಯಲ್ಲಿ ಮಗ್ನನಾಗುತ್ತಾನೆ. ಆತ್ಮದ ಆನಂದದಲ್ಲಿಯೇ ಹರ್ಷಿಸುತ್ತಾನೆ. ಆದ್ದರಿಂದ ಸಾಂಸಾರಿಕ ಕ್ರಿಯೆಯ ರೂಪದಲ್ಲಿ ಅವನ ಯಾವ ಹಲವು ಸಂವೇದನೆಗಳು ಪ್ರಕಾಶಿತವಾಗಿವೆಯೋ, ಅವುಗಳೆಲ್ಲ ಕಲ್ಯಾಣಧರ್ಮಿಯಾಗಿವೆ. ಇಂಥ ಕಲ್ಯಾಣಕೃತ ಸಾಧನಾಮಾರ್ಗದ ಪಥಿಕನಾದ ಬ್ರಹ್ಮವಿದನು ಸಮಾಜದಲ್ಲಿ ಶ್ರೇಷ್ಠನೆನಿಸುತ್ತಾನೆ.

'ಸತ್ಯೇನ ಲಭ್ಯಸ್ತಪಸಾ ಹ್ಯೇಷ ಆತ್ಮಾ
ಸಮ್ಯಗ್ ಜ್ಞಾನೇನ ಬ್ರಹ್ಮಚರ್ಯೇಣ ನಿತ್ಯಮ್.
ಅಂತಃ ಶರೀರೇ ಜ್ಯೋತಿರ್ಮಯೊ ಹಿ ಸುಭ್ರೋ
ಯಂ ಪಶ್ಯಂತಿ, ಯತಯಃ ಕ್ಷೀಣದೋಷಾಕಿಃ'

ಬ್ರಹ್ಮನು ಸತ್ಯ, ತಪಃ ಸಮ್ಯಕ್‌ಜ್ಞಾನ (ಪರಾಜ್ಞಾನ) ಮತ್ತು ನಿತ್ಯ ಬ್ರಹ್ಮಚರ್ಯೆಗಳ ಮೂಲಕ ಪ್ರಾಪ್ತವಾಗುತ್ತಾನೆ. ಯಾರು ಈ ಭಾವದಿಂದ ಸಾಧನೆಯನ್ನು ಮಾಡುವರೋ, ಅವರು ತಮ್ಮ ಒಳಲೋಕದಲ್ಲಿ ಪರಮ ಬ್ರಹ್ಮನ ಶುಭ್ರಜ್ಯೋತಿಯ ಸಾಕ್ಷಾತ್ಕಾರ ಹೊಂದುತ್ತಾರೆ. ಯಾವ ಯತಿಗಳು (ಯಮ ನಿಯಮಗಳಲ್ಲಿ ಪ್ರತಿಷ್ಠಿತರಾದವರು) ಅವನ ಈ ಪ್ರಕಾರದ ದರ್ಶನ ಮಾಡುವರೋ, ಅವರು ನಿರ್ಮಲರಾಗುತ್ತಾರೆ, ನಿಷ್ಕಲುಷರಾಗುತ್ತಾರೆ.

ಸತ್ಯಮೇವ ಜಯತೇ ನಾನೃತಮ್
ಸತ್ಯೇನ ಪಂಥಾ ವಿತತೊ ದೇವಯಾನಃ ।
ಯೇನಾಕ್ರಮಂ ತ್ಯೃಷಯೋ ಹ್ಯಾಪ್ತಕಾಮಾ
ಯತ್ರತತ್ ಸತ್ಯಸ್ಯ ಪರಮಂ ನಿಧಾನಮ್ ॥

ಸತ್ಯದ ವಿಜಯವು ಆಗಿಯೇ ಆಗುತ್ತದೆ. ಮತ್ತು ಯಾವುದರ ಹಿನ್ನೆಲೆಯಲ್ಲಿ ಪರಹಿತದ ಭಾವನೆಯಿದೆಯೋ, ಅದನ್ನೇ ಸತ್ಯವೆಂದು ಕರೆಯುತ್ತಾರೆ. ಮಿಥ್ಯೆ ಎಂದೂ ಗೆಲ್ಲಲಾರದು. ಮತ್ತು ಗೆಲ್ಲುವ ಶಕ್ಯತೆಯೂ ಇಲ್ಲ. ಮಿಥ್ಯೆಯಿಂದ ಬಹಳವಾದರೆ, ತಾತ್ಕಾಲಿಕ ಸಫಲತೆಯು ಸಿಗಬಹುದು. ಆದರೆ ಆ ಸಫಲತೆಯು ದಾರುಣ ಪರಾಜಯದ ಸೂಚಕವೇ ಆಗಿದೆ. ಸತ್ಯದ ಮೂಲಕವೇ ಕಂಟಕಗಳಿಂದ ತುಂಬಿದ ಮೋಕ್ಷದ ಹಾದಿಯು ಪ್ರಶಸ್ತವಾಗುತ್ತದೆ. ಮತ್ತು ಸುಸಂಸ್ಕೃತವಾಗುತ್ತದೆ. ಆ ಹಾದಿಯನ್ನು ಅನುಸರಿಸಿಯೇ ಬಯಕೆಯನ್ನು ನೀಗಿಸಿದ ಋಷಿಗಳು ಸತ್ಯದ ಪರಮ ನಿಧಾನವಾದ ಪರಮ ಪುರುಷನ ಸಂಗ ಲಾಭವನ್ನು ಪಡೆದರು.



"ಬೃಹಚ್ಚ ತದ್ದಿವ್ಯಮಚಿಂತ್ಯರೂಪಂ
ಸೂಕ್ಷ್ಮಾಚ್ಚ ತತ್ ಸೂಕ್ಷ್ಮತರಂ ವಿಭಾತಿ,
ದೂರಾತ್ ಸುದೂರೇ ತದಿಹಾಂತಿಕೇ ಚ
ಪಶ್ಯತ್‌ಸ್ವಿಹೈವ ನಿಹಿತಂ ಗುಹಾಯಾಂ"

ಇನ್ನು ಸತ್ಯದ ಈ ಪರಮ ನಿಧಾನ ಇಲ್ಲವೆ ಪರಮ ಉತ್ಸವು ಯಾವುದು? ಸತ್ಯದ ನೆಲೆಯಾದ ಬ್ರಹ್ಮನು ಎಷ್ಟೊಂದು ಬೃಹತ್ ಆಗಿರುವನೆಂದರೆ, ಅದನ್ನು ಬಣ್ಣಿಸುವುದು ಅಸಾಧ್ಯ. ಹೀಗೆ ಅವನು ಒಂದೆಡೆ ಅಚಿಂತ್ಯನಾಗಿದ್ದಾನೆ. ಅನನ್ಯ ಜ್ಯೋತಿಯಾಗಿದ್ದಾನೆ. ಮತ್ತು ಇನ್ನೊಂದೆಡೆ, ಕ್ಷುದ್ರಕ್ಕಿಂತ ಕ್ಷುದ್ರನಾಗಿದ್ದಾನೆ. ಪರಮಾಣುವಿಗಿಂತಲೂ ಕ್ಷುದ್ರನಾಗಿದ್ದಾನೆ. ವಿದ್ಯುತ್ ಕಣಕ್ಕಿಂತಲೂ ಕ್ಷುದ್ರನು. ಎಷ್ಟೊಂದು ಕ್ಷುದ್ರನಾಗಿರುವನೆಂದರೆ, ಮನಸ್ಸು ಅವನನ್ನು ತನ್ನ ಕಲ್ಪನೆಯಲ್ಲಿಯೇ ತರಲಾರದು. ಆದರೆ, ಆ ಕ್ಷುದ್ರಭಾವದಲ್ಲಿ ಸಹ ಅವನು ಜ್ಯೋತಿರ್ಮಾನನಾಗಿದ್ದಾನೆ. ಯಾರು ಅವನನ್ನು ತಮ್ಮಿಂದ ದೂರವಿರುವನೆಂದು ಬಗೆಯುವರೋ, ಅವರಿಗೂ ಸಹ ಅವನು ಹೆಚ್ಚು ಹೆಚ್ಚಾಗಿ ನಿಕಟವಾಗಿರುತ್ತಾನೆ. ಯಾರಿಗೆ ನೋಡುವ ಕಣ್ಣುಗಳಿವೆಯೋ, ಯಾರು ಅವನನ್ನು ಅಲ್ಪಸ್ವಲ್ಪ ಅರಿತುಕೊಂಡಿರುವರೋ, ಅವರಿಗೆ ಅವನು ತಮ್ಮ ಅಸ್ತಿತ್ವ ಬೋಧೆಯ ಮಧ್ಯೆ, ಹೃದಯ ವೃತ್ತಿಯ ಮಧ್ಯೆ, ಪರಮ ಜ್ಯೋತಿಷಮಾನ್ ರೂಪದಲ್ಲಿ ವಿರಾಜಿಸುತ್ತಿರುವನೆಂಬುದನ್ನು ಅರಿತಿದ್ದಾರೆ. ಅವನನ್ನು ಶೋಧಿಸಲು, ಅವನನ್ನು ಪಡೆಯಲು ದೇಶ-ವಿದೇಶಗಳಲ್ಲಿ ಅಲೆದಾಡುವ ಅಗತ್ಯವೇನಿಲ್ಲ.

"ಅಂತರೇತೇ ನಾಂ ಸೇ ಚೇ ಅಂತರೇ ಅಛೆ."

"ನ ಚಕ್ಷುಷಾ ಗೃಹ್ಯತೇ ನಾಪೀವಾಚಾ
ನಾನ್ಯೈರ್ದೇವೈಸ್ತಪಸಾ ಕರ್ಮಣಾ ವಾ,
ಜ್ಞಾನಪ್ರಸಾದೇನ ವಿಶುದ್ಧ ಸತ್ತ್ವ
ಸ್ತತ-ಸ್ತುತ ಪಶ್ಯತೇ ನಿಷ್ಕಲಂ ಧ್ಯಾಯಮಾನಃ

ಅವನನ್ನು ಕಣ್ಣುಗಳು ಕಾಣಲಾರವು; ಶಬ್ದಗಳ ಮುಖಾಂತರ ಅವನ ವಿಷಯವನ್ನು ಅರಿಯಲಾರೆವು. ಇಂದ್ರಿಯಗಳ ತಪಸ್ಸು ಇಲ್ಲವೆ ಕರ್ಮಗಳ ಮೂಲಕ ಅವನ ಅನುಭವ ಹೊಂದುವುದು ತುಂಬಾ ಕಠಿಣ; 'ಯಾವಾಗ ಸಾಧಕನು ಸದ್ಗುರುವಿನ ಕೃಪೆಯಿಂದ ಜ್ಞಾನದಲ್ಲಿ ಪ್ರತಿಷ್ಠಿತನಾಗುವನೋ, ನಿಷ್ಠೆಯೊಂದಿಗೆ ಅವನ ಭಾವ ತಾಳಿ ತನ್ನ ಚಿತ್ತದಲ್ಲಿ ಸಾಧನೆ ಮಾಡುವ ಸೂಕ್ಷ್ಮ ಚಿತ್ತದ ಸಾಧಕನು ಮಾತ್ರ, ಆ ನಿರಾಕಾರ ಪರಮಾತ್ಮನ ಉಪಲಬ್ಧಿಯನ್ನು

ಹೊಂದಬಲ್ಲನು.

"ಏಷೋऽಣುರಾತ್ಮಾ ಚೇತಸಾ ವೇದಿತವ್ಯೋ
ಯಸ್ಮಿನ್ ಪ್ರಾಣಾಃ ಸಂಚಧಾ ಸವಿವೇಶ
ಪ್ರಾಣಶ್ಚಿತ್ತಂ ಸರ್ವಮೋತಮ್ ಪ್ರಜಾನಾಮ್
ಯಸ್ಮಿನ್ ವಿಶುದ್ಧೇ ವಿಭವತ್ಯೇಷ ಆತ್ಮಾ ॥"

ಆತ್ಮವು ಅಣುವಿಗಿಂತ ಅಣುವಾಗಿದೆ. ಇದನ್ನು ಕೇವಲ ಚೈತನ್ಯದ ಮೂಲಕ ಮಾತ್ರ ಅರಿಯಬಹುದು. ಸಾಧಕನ ಅಂತರ್ಲೋಕದಲ್ಲಿಯೇ ಈ ಚೈತನ್ಯಸತ್ತೆಯು ಪ್ರಕಟನಾಗಿರುತ್ತಾನೆ. ಎಲ್ಲಿಯ ವರೆಗೆ ಮಾನವದೇಹದಲ್ಲಿ ಪ್ರಾಣ, ಅಪಾನ ಇತ್ಯಾದಿ ಪಂಚವಾಯುಗಳು ಕ್ರೀಯಾಶೀಲವಾಗಿರುವವೋ, ಅಲ್ಲಿಯ ವರೆಗೂ ಸಾಧಕನಿಗೆ ಬ್ರಹ್ಮ ಪ್ರಾಪ್ತಿಯ ಸಾಧನದ ಸುಯೋಗವು ದೊರೆಯುವುದು. ಆದರೆ ಸಾಧಾರಣವಾಗಿ, ಅತಿಕಡಿಮೆ ಜನರ ಭಾಗ್ಯದಲ್ಲಿ ಇಂಥ ಸುಯೋಗವಿರುತ್ತದೆ. ಏಕೆಂದರೆ ಬಹಳಷ್ಟು ಜನರು, ಚಿತ್ತ ಇಂದ್ರಿಯಗಳ ತಾಕಲಾಟದಿಂದ ಹೊರಮುಖಿಗಳಾಗಿ, ವಿಷಯಗಳತ್ತ ಧಾವಿಸುತ್ತಾರೆ. ಯಾವಾಗ ಸಾಧನೆಯಿಂದ ಅವರ ಚಿತ್ತವು ವಿಶುದ್ಧವಾಗುವುದೋ, ಆಗ ಮಾತ್ರ ಅವರು ಆ ಇಂದ್ರಿಯಗಳ ಪ್ರಭಾವದಿಂದ ಬಿಡುಗಡೆ ಹೊಂದುತ್ತಾರೆ. ಮತ್ತು ಆಗ ಮಾತ್ರ, ಅವರು ತಮ್ಮ ಮಧ್ಯೆ ಆ ಪರಮ ಪುರುಷನ ಪರಮಜ್ಯೋತಿಯನ್ನು ಪಡೆಯುತ್ತಾರೆ. ಯಾರು ತಮ್ಮ ಆತ್ಮನಲ್ಲಿ ಪರಮಾತ್ಮನನ್ನು ನೋಡಬಲ್ಲರೋ, ಅವರೇ ಆತ್ಮಜ್ಞರು.

"ಯಂ ಯಂ ಮನಸಾ ಸಂವಿಭಾತಿ
ವಿಶುದ್ಧಸತ್ತ್ವಃ ಕಾಮಯತೇ ಯಾಂಶ್ಚ ಕಾಮಾನ್ ।
ತಂ ತಂ ಲೋಕಂ ಜಯತೇ ತಾಂಶ್ಚ ಕಾಮಾಂ
ಸ್ತಸ್ಮಾದಾತ್ಮಜ್ಞಂ,:ಹ್ಯರ್ಚಯೇದ್ ಭೂತಿಕಾಮಃ ॥"

ಆತ್ಮಜ್ಞ ವ್ಯಕ್ತಿಯು ಯಾವ ಪ್ರಕಾರದ ಚಿಂತನೆ ಮಾಡುವನೋ,ಅವನಿಗೆ ಅಂಥ ವಸ್ತುಗಳು ಲಭಿಸುತ್ತವೆ. ಅವನ ಕಾಮನೆಯು ಹೇಗೆ ಹೇಗ ಇರುವುದೋ, ಅವನ ವಿಷಯಗಳು ಆಯಾ ರೂಪ ತಾಳುತ್ತವೆ. ವಿಷಯಗಳನ್ನು ಹುಡುಕುತ್ತ ಅವನು ಹೊರಜಗತ್ತಿನಲ್ಲಿ ನಿರರ್ಥಕವಾಗಿ ಅಂಡಲೆಯಬೇಕಾಗಿಲ್ಲ. ಅವನು ಆಪ್ತಕಾಮನು; ಪೂರ್ಣಕಾಮನು. ಆದ್ದರಿಂದ ತನ್ನ ಸರ್ವಾತ್ಮಕ ಉನ್ನತಿಗೋಸುಗ ಉನ್ನತಿಯನ್ನೇ ಬಯಸುವ ವ್ಯಕ್ತಿಯು ಪಾತ್ರದಲ್ಲಿರುವ ಆತ್ಮಜ್ಞನನ್ನು ಪೂಜಿಸುತ್ತಾನೆ.

ಭಾದ್ರ ಪೂರ್ಣಿಮೆ, ೧೯೫೫

೩

# ವೇದದಲ್ಲಿ ಬ್ರಹ್ಮವಿಜ್ಞಾನ

ಅಂಗಿರಾ ಮಹರ್ಷಿ ಹೀಗೆ ಹೇಳುತ್ತಾರೆ.

"ಸ ವೇದೈ ತತ್ಪರಮಂ ಬ್ರಹ್ಮಧಾಮ,
ಯತ್ರ ವಿಶ್ವನಿಹಿತಂ ಭಾತಿಶುಭ್ರಮ್ ।
ಉಪಾಸತೇ ಪುರುಷಂ ಯೇ ಹ್ಯಕಾಮಾ
ಸ್ತೇ ಶುಕ್ರಮೇತದತಿವರ್ತಂತಿ ಧೀರಾಃ ॥"

ಪರಮ ಬ್ರಹ್ಮನನ್ನು ಅರಿಯುವವನು ವಿಶ್ವ ಬ್ರಹ್ಮಾಂಡದ ಆಶ್ರಯ ರೂಪದಲ್ಲಿಯೇ ಅರಿಯುತ್ತಾನೆ. ಜಡ–ಚೇತನ, ಸ್ಥಾವರ–ಜಂಗಮ, ಹೀಗೆ ಬ್ರಹ್ಮನಿಂದ ಹಿಡಿದು ಹುಲ್ಲು ಕಡ್ಡಿಯವರೆಗೆ ಏನೇನಿದೆಯೋ, ಆ ಪ್ರತಿಯೊಂದು ಸತ್ತೆಗೂ ಅವನೇ ಪರಮ ಆಶ್ರಯವಾಗಿದ್ದಾನೆ. ಅವನೇ ಪರಮ ಧಾಮವಾಗಿದ್ದಾನೆ. ಈ ವಿಶ್ವವು ಅವನಿಂದ ಹುಟ್ಟಿದೆ. ಅವನ ಬೆಳಕಿನಿಂದಲೇ ಬೆಳಗುತ್ತದೆ. ಇದು ಅವನಿಂದ ಸೃಷ್ಟವಾಗಿದೆಯೆಂದಿಷ್ಟೆ ಅಲ್ಲ, ಆದರೆ ಈ ಸಂಪೂರ್ಣವಿಶ್ವವು ಅವನ ವಿಕೃತಿಯೇ ಆಗಿದೆ. ಅವನ ಮೂಲಕ ಸಿದ್ಧವಾಗಿದೆ. ಅವನೇ ಈ ವಿಶ್ವದ ಉಪಾದಾನ ಕಾರಣನು. ಮೇಲಾಗಿ ಇದರ ನಿಮಿತ್ತ ಕಾರಣನೂ ಸಹ ಅವನೇ. ಅವನ ಗುಣಾತ್ಮಕ ವಿಕಾಸ, ಗುಣಾತ್ಮಕ ವಿಕಾಸದ ಪರಿಣಾಮ ಹಾಗೂ ಕಾರ್ಯಗಳ ರೂಪದಲ್ಲಿ ಯಾವ ಅಣು ಪ್ರಕೃತಿ ಹಾಗೂ ಹದಿನಾರು ವಿಕೃತಿಗಳಿವೆಯೋ, (ಹತ್ತು ಇಂದ್ರಿಯಗಳು, ಮನಸ್ಸು ಮತ್ತು ಐದು ತನ್ಮಾತ್ರೆಗಳು) ಅವೆಲ್ಲವುಗಳ ಸೃಷ್ಟಿಯೇ ಈ ವಿಶ್ವವಾಗಿದೆ. ಈ ವಿಶ್ವದ ಬೀಜ ಇಲ್ಲವೆ ;ಸಂಭಾವನೆಯು ಸಹ ಅವನಲ್ಲಿಯೇ ಅಡಗಿದೆ. ಈ ವಿರಾಟ ಭಾವದ ಕಾರಣದಿಂದಾಗಿಯೇ ಅವನ ಹೆಸರು ಬ್ರಹ್ಮ ಎಂದಿದೆ. ಬ್ರಹ್ಮ ಶಬ್ದದ ಅರ್ಥವೆಂದರೆ ಬ್ರಹತ್ (ಬ್ರಹತ್ತ್ವಾತ್ ಬ್ರಹ್ಮ) ಮತ್ತು ಯಾವುದು

ಇನ್ನೊಂದನ್ನು ದೊಡ್ಡದನ್ನಾಗಿ ಮಾಡುವುದೋ, ಅಂದರೆ ಯಾರ ಭಾವನೆಯನ್ನು ತಾಳಿ ಕ್ಷುದ್ರವು ಸಹ ದೊಡ್ಡದಾಗುವದೋ, ಅದರ ಹೆಸರು ಸಹ ಬ್ರಹ್ಮವೇ (ಬೃಂಹಣತ್ವಾತ್ ಬ್ರಹ್ಮ) ಈ ಜಗತ್ತು ಅವನನ್ನೇ ಆಶ್ರಯಿಸಿದೆ ಎಂದ ಮೇಲೆ, ಅವನು ನಿಶ್ಚಯವಾಗಿಯೂ ಜಗತ್ತಿಗಿಂತ ದೊಡ್ಡವನು. ಮನೆಯಲ್ಲಿ ಒಂದು ಪೆಟ್ಟಿಗೆ ಇದೆ; ಎಂದು ತಿಳಿಯಿರಿ. ಪೆಟ್ಟಿಗೆಗೆ ಹೋಲಿಸಿದರೆ ಆ ಮನೆಯು ದೊಡ್ಡದೇ ಹಾಗಿದ್ದಲ್ಲಿ ಮಾತ್ರ, ಪೆಟ್ಟಿಗೆಯನ್ನಿಡಲು ಜಾಗೆ ದೊರೆಯುವದಷ್ಟೇ. ಮನೆಯೇ ಚಿಕ್ಕದಾಗಿದ್ದರೆ ಹೀಗೆ ಪೆಟ್ಟಿಗೆಯನ್ನಿಡಲು ಬರುತ್ತಿರಲಿಲ್ಲ. ಆ ವಿರಾಟ್ ವಿಶ್ವ ಬ್ರಹ್ಮಾಂಡವು ಯಾರಲ್ಲಿ ನೆಲಸಿದೆಯೋ,ಅವನು ಸ್ವಾಭಾವಿಕ ನಿಯಮಾನುಸಾರ ವಿಶ್ವಬ್ರಹ್ಮಾಂಡಕ್ಕಿಂತ ಬೃಹತ್ ಆಗಿದ್ದಾನೆ. ವಿರಾಟ್ ಪುರುಷನ ವಿರಾಟ್ ದೇಹದಲ್ಲಿ ಸಕಲ ವಿಶ್ವ ಬ್ರಹ್ಮಾಂಡವು ಅವನ ಜ್ಞಾತೃ ಸತ್ತೆಯನ್ನೆ ಕೇಂದ್ರವಾಗಿರಿಸಿಕೊಂಡು,ಅವನನ್ನು ಪ್ರಾಣ ಬಿಂದುವಾಗಿರಿಸಿಕೊಂಡು, ಚಕ್ರಾಕಾರದಲ್ಲಿ ತಿರುಗುತ್ತಿರುತ್ತದೆ. ಈ ಚಕ್ರದಲ್ಲಿ ತಿರುಗಿ ತಿರುಗಿ, ಜ್ಞಾತೃ-ಸತ್ತೆಯತ್ತ ಸಾಧನ ಶಕ್ತಿಯಿಂದ ಯಾವನು ಮುನ್ನಡೆಯುವನೋ, ಅವನು ಆ ಬ್ರಹ್ಮನೊಂದಿಗೆ ಏಕೀಭಾವವನ್ನು ಹೊಂದುತ್ತಾನೆ. ಇವನೂ ಸಹ ಅವನೇ ಆಗಿ ಬಿಡುತ್ತಾನೆ. ಈ ಪ್ರಕಾರ ಬ್ರಹ್ಮನಲ್ಲಿ ಬೃಂಹಣತ್ತ್ವದ ಗುಣವು ಇದೆ.

ಬ್ರಹ್ಮನು ಶುಭ್ರ ಜ್ಯೋತಿಯಿಂದ ಬೆಳಗುತ್ತಿದ್ದಾನೆ. ಪ್ರಕೃತಿ ಮತ್ತು ಪುರುಷ ಇವೆರಡೂ ಅವಿನಾಭಾವಿ ಮತ್ತು 'ಅ ಪ್ರಥಕ್ ಸಿದ್ಧ' (ಒಂದನ್ನು ಬಿಟ್ಟು ಇನ್ನೊಂದು ಇರದ ಮತ್ತು ಒಂದರಿಂದ ಇನ್ನೊಂದನ್ನು ಬೇರ್ಪಡಿಸಲಾಗದ) ಸತ್ತೆಗಳಾಗಿವೆ. ಎಂದು ಶ್ರುತಿಯಲ್ಲಿ ಹೇಳಲಾಗಿದೆ. ಎಲ್ಲಿ ಪುರುಷನ ಮೇಲೆ ಪ್ರಕೃತಿಯು ಕ್ರಿಯಾ ಶೀಲವಾಗಿದೆಯೋ, ಅಲ್ಲಿಯೇ ಬ್ರಹ್ಮನು ಶುಭ್ರ ಜ್ಯೋತಿಯಾಗಿದ್ದಾನೆ. ಗಾಯತ್ರೀ ಮಂತ್ರದಲ್ಲಿ ಈ ಶುಭ್ರ ಜ್ಯೋತಿಯ ಅರ್ಥದಲ್ಲಿ 'ಭರ್ಗ' ಶಬ್ದವನ್ನು ಬಳಸಲಾಗಿದೆ. ಆದ್ದರಿಂದ, ಈ ಭರ್ಗ ಮತ್ತು ಸಗುಣ ಬ್ರಹ್ಮಗಳು ಅಭಿನ್ನವಾಗಿವೆ. ಬ್ರಹ್ಮ ಮತ್ತು ಬ್ರಹ್ಮ ಜ್ಯೋತಿಗಳ ಅಭಿನ್ನತೆಯು ಭರ್ಗ ಶಬ್ದದ ನಿಜವಾದ ಅರ್ಥವನ್ನು ಒಳಹೊಕ್ಕು ನೋಡುವದರಿಂದ ತಿಳಿಯಬಹುದಾಗಿದೆ. ಭ, ರ, ಮತ್ತು ಗ, ಈ ಮೂರು ಅಕ್ಷರಗಳಿಂದ ಭರ್ಗ ಶಬ್ದವಾಗಿದೆ.

ಅಂದರೆ ಯಾರ ಮೂಲಕ ಜಗತ್ತು ಹೊಳೆಯುವದೋ,

ರ-ರಂಜಯತೀಮಾನಿ ಭೂತಾನಿ,



ಅಂದರೆ ಯಾರು ಪ್ರಾಣಿ ಸಮೂಹದ ಆನಂದದ ವಿಧಾನವನ್ನು ರೂಪಿಸುವರೋ,

ಗ-ಗಚ್ಛತ್ಯಸ್ಮಿನ್ ಅಗಚ್ಛತ್ಯಸ್ಮಾತ್ ಇಮಾಃ ಪ್ರಜಾಃ

ಅಂದರೆ ಈ ಎಲ್ಲ ಸೃಷ್ಟಿಯು ಯಾರಿಂದ ಬಂದು ಯಾರಲ್ಲಿ ಲಯವಾಗುವದೋ ಅವನು.

ಶ್ರುತಿಯಲ್ಲಿ ಇನ್ನೂ ಹೀಗೆ ಹೇಳಲಾಗಿದೆ.

"ಭೇತಿ ಭಾಸಯತೇ ಲೋಕಾನ್ ರೇತಿ ರಂಜಯತಿ ಪ್ರಜಾಃ
'ಗ' ಇತ್ಯಾಗಚ್ಛತ್ಯಜಸ್ರಂ ಭರಗಾತ್ ಭರ್ಗ ಉಚ್ಯತೇ"

ಸಾಧಾರಣವಾಗಿ,ಭರ್ಗ ಶಬ್ದವನ್ನು ಬ್ರಹ್ಮನ ಜ್ಯೋತಿಯ ಅರ್ಥದಲ್ಲಿಯೇ ಬಳಸುತ್ತಾರೆ. ಇಲ್ಲಿ ಒಂದು ಪ್ರಶ್ನೆ ಏಳುತ್ತದೆ. ಏನೆಂದರೆ, ಬ್ರಹ್ಮ ಮತ್ತು ಅವನ ಜ್ಯೋತಿ ಇವುಗಳೇನು ಭಿನ್ನವಾಗಿವೆಯೇ? ಒಂದು ವೇಳೆ ರಾಮನಲ್ಲಿ ಇಂಥ ಇಂಥ ಗುಣವಿದೆ. ಇಲ್ಲವೆ ಶ್ಯಾಮನಲ್ಲಿ ಇಂಥ ಇಂಥ ಗುಣವಿದೆ ಎಂದು ಹೇಳುವದಾದರೆ, ಅಲ್ಲಿ ವ್ಯಕ್ತಿ ಮತ್ತು ಗುಣಗಳೆರಡು ಪೃಥಕ್ ಸತ್ತೆಗಳಾಗಿಲ್ಲವೇನು? ಆದರೆ ಈ ತರದ ಭೇದಾತ್ಮಕ ವಿಚಾರವು ಅನಂತ, ಅಖಂಡ, ಅದ್ವಿತೀಯ ಬ್ರಹ್ಮನನ್ನು ಕುರಿತು ಸರಿಯಾಗಿ ಹೊಂದಿಕೊಳ್ಳಲಾರದು. ಬ್ರಹ್ಮ ಮತ್ತು ಅವನ ಜ್ಯೋತಿ, ಎರಡೂ ಬೇರೆ ಬೇರೆ ಸತ್ತೆಗಳೇನೂ ಅಲ್ಲ. ಏಕೆಂದರೆ, ಅವನು ಸ್ವಯಂ ಪ್ರಕಾಶನಾಗಿದ್ದಾನೆ. ರಾಹುಶಿರದಂತ ಹೋಲಿಕೆಯಿಂದ ಹೇಳುವದಾದರೆ ಅವನು ಜ್ಯೋತಿ ಸ್ವರೂಪನಾಗಿದ್ದಾನೆ.

ಈ ಸೃಷ್ಟಿಯು ತ್ರಿಗುಣಾತ್ಮಕವಾಗಿದೆ. ಜಗತ್ತಿನಲ್ಲಿ, ಎಲ್ಲ ವಸ್ತುಗಳಲ್ಲಿಯೂ ಈ ಮೂರು ಗುಣಗಳ ಆಟ ನಡೆದಿದೆ. ಆದ್ದರಿಂದ ಮಾನವ ಶರೀರದಲ್ಲಿಯೂ ಸಹ, ಇದರ ವ್ಯಕ್ತಪಡಿಸುವಿಕೆ ಇಲ್ಲದಿಲ್ಲ. ಮಾನವ ಶರೀರದ ನಾಭಿಯಿಂದ ಕೆಳಗಿನ ಭಾಗವು ತಮೋಗುಣ ಪ್ರಧಾನವಾಗಿದೆ. ಇನ್ನು ಕಂಠದಿಂದ ತ್ರಿಕುಟಿಯ (ಇದು ಮನದ ಮೂಲದ ಅಧಿಷ್ಠಾನ ಭೂಮಿ) ವರೆಗೆ ಸತ್ತ್ವಗುಣ ಪ್ರಧಾನವಾಗಿದೆ.ಸ್ವಾಭಾವಿಕ ನಿಯಮಾನುಸಾರ, ಯಾರ ವೃತ್ತಿಯು ಎಂಥದೋ, ಅದಕ್ಕನುಸರಿಸಿಯೇ ಅವನ ಶರೀರದ ಆ ವಿಶೇಷ ಅಂಶವೇ ಕ್ರಿಯಾಶೀಲವಾಗಿರುತ್ತದೆ. ಯಾವಾಗ ಸಾಧಕನು ಶ್ರವಣ-ಮನನ ನಿದಿಧ್ಯಾಸನಗಳ ಮೂಲಕ ತನ್ನ ಮನೋಭೂಮಿಯಲ್ಲಿ ಪ್ರತಿಷ್ಠಿಸುವನೋ, ಆಗ ಸತ್ತ್ವಗುಣವನ್ನು ನೆನಪಿಸುವ ಶುಭ್ರ ವರ್ಣಾತ್ಮಕ ರೂಪದಲ್ಲಿ ಪರಮಬ್ರಹ್ಮನ ದರ್ಶನ ಪಡೆಯುತ್ತಾನೆ. ಆದರೆ ಯಾವಾಗ ಅವನು ಮಾನಸ ಸ್ತರದ ಮೇಲೆ ಏಳುವನೋ,ಆಗ ಬ್ರಹ್ಮರಂಧ್ರದಲ್ಲಿ

ನಿರ್ಗುಣ ಬ್ರಹ್ಮನ ಗುಣರಾಹಿತ್ಯದಲ್ಲಿ ಸೇರುತ್ತಾನೆ. ಆಗ ಅವನು ವರ್ಣಾತೀತನಾಗುತ್ತಾನೆ. ಭರ್ಗ ಇಲ್ಲವೆ ಶುಭ್ರ ವರ್ಣವು ಸಹ, ಆ ಕಾಲಕ್ಕೆ ಅವನ ಬಳಿ ಇರಲಾರದು. ಆ ಬಯಕೆಯನ್ನಿರಿಸಿಕೊಳ್ಳದ ವ್ಯಕ್ತಿಯೋರ್ವನು ಈ ಪರಮ ಪುರುಷನನ್ನು ಉಪಾಸಿಸುತ್ತಿದ್ದರೆ, ಅವನ ಮನವು ವಿಷಯಮುಕ್ತವಾಗಿರುವ ಕಾರಣ, ಮರಳಿ ಜನ್ಮ ಪಡೆಯಲೋಸುಗ, ಸಂಸ್ಕಾರ (ಭವ) ಗಳನ್ನು ಅವನು ಅರ್ಜಿಸುವುದಿಲ್ಲ. ಈ ಮಾನವನು ಪಿತೃ ಶುಕ್ರವನ್ನು ಅತಿಕ್ರಮಿಸುತ್ತಾನೆ. ಇಲ್ಲವೆ ವಿರಾಟ ಸತ್ತೆಯಲ್ಲಿ ಅಧಿಷ್ಠಿತನಾಗುವ ಕಾರಣ, ಅವನ ಮಾನಸಶಕ್ತಿಯು ನಕ್ಷತ್ರ ಸಮೂಹವನ್ನು ಸಹ ಅತಿಕ್ರಮಿಸಿ ಮುನ್ನಡೆಯುತ್ತದೆ.

"ಕಾಮನ್ ಯಃ ಕಾಮಯತೇ ಮನ್ಯಮಾನಃ
ಸ ಕಾಮಾಭಿರ್ಜಾಯತೆ ತತ್ರ ತತ್ತ ।
ಪರ್ಯಾಪ್ತ ಕಾಮಸ್ಯ ಕೃತಾತ್ಮನಸ್ತು
ಇಹೈವ ಸರ್ವೇ ಪ್ರವಿಲೀಯಂತಿ ಕಾಮಾಃ ॥"

ಮಾನವನ ವಾಸನೆಗಳು ಮತ್ತು ಕಾಮನೆಗಳು ಯಾವ ರೀತಿಯವಾಗಿವೆಯೋ, ಅಥವಾ ಎಂಥ ವೃತ್ತಿಗಳಿಂದ ಅವನು ನಡೆಸಲ್ಪಡುವನೋ,ಅಂಥದೇ ರೂಪವನ್ನು ಅವನ ಮನಸ್ಸು ಗ್ರಹಿಸುತ್ತದೆ. ಅವನು ಕ್ರಮೇಣ ಅದಕ್ಕೆ ಅನುಗುಣವಾಗಿ ಸಂಸ್ಕಾರಗಳನ್ನೂ ಅರ್ಜಿಸುತ್ತಾನೆ. ಮಾನವನು ಏನನ್ನೇ ಬಯಸಲಿ; ಮೊದಲು ಆ ವಸ್ತುವನ್ನು ತನ್ನ ಮನದಲ್ಲಿ ಕಾಣುತ್ತಾನೆ. ಮತ್ತು ಅವನ ಮಾನಸ ಸತ್ತೆಯು ಸಹ ಅತ್ತ ಹರಿಯುತ್ತದೆ. ಆ ಬಳಿಕ, ಅವನ ಕೈ ಕಾಲು, ಮುಂತಾದವುಗಳು ಹೊರಗಿನ ಕರಣಗಳಾದ ಇಂದ್ರಿಯ ಸಮೂಹವು ಕಾರ್ಯ ಪ್ರವೃತ್ತವಾಗುತ್ತವೆ. ಆದ್ದರಿಂದ ಸಾಧಾರಣವಾಗಿ ಕಾಣಬರುವುದೇನೆಂದರೆ, ಮಾನವನು ಜೀವನವಿಡೀ ಯಾವ ಪ್ರಕಾರದ ವೃತ್ತಿಗಳಿಗೆ ಆಶ್ರಯ ನೀಡುವನೋ, ಆ ವೃತ್ತಿಗಳೇ ಸಾಯುವ ಕಾಲಕ್ಕೆ ಘನೀಭೂತವಾಗಿ ಅವನೆದುರು ಪ್ರಕಟಗೊಳ್ಳುತ್ತವೆ. ಅಂದರೆ ಅವನ ಮಾನಸ ಧಾತುವು, ಅವನನ್ನು ತದ್ರೂಪೀ ಸಂಸ್ಕಾರಗಳ ಉಪಯುಕ್ತ ಪ್ರಕಾಶಕನ ರೂಪದಲ್ಲಿ, ಸ್ಥಿರವಾಗಲೋಸುಗ, ಅಂತ್ಯಕಾಲಕ್ಕೆ ಅದೇ ಜಾತೀಯ ಮಾನಸ ರೂಪವನ್ನು ಪರಿಗ್ರಹಿಸುತ್ತದೆ. ಜೀವಿಸುವ ಕಾಲಕ್ಕೂ ಸಹ ಏನಾಗುವುದೆಂಬುದನ್ನು ನೋಡುವಾ; ಒಬ್ಬ ಸೆರೆಗುಡುಕನ ಮನದಲ್ಲಿ ಸೆರೆ ಕುಡಿಯಬೇಕೆಂಬ ಉಗ್ರ ಇಚ್ಛೆ ಇಲ್ಲವೆ ಸಂಸ್ಕಾರವಿರುತ್ತದೆ. ಅವನ ಮಾನಸ ಧಾತುವಿನ ಈ ವಿಶೇಷ ರೂಪವು, ಅವನ ಅನಂತರದ ಸಂಸ್ಕಾರಗಳ ಭೋಗ್ಯ ಭೂಮಿಯಲ್ಲಿ ಪರಿಣಮಿಸುತ್ತದೆ.



ಅಂದರೆ, ಇಂಥ ವ್ಯಕ್ತಿಯು ಯಾವುದೊಂದು ಹೊಸ ತಾಣಕ್ಕೆ ಹೋದ ಮೇಲೆ, ಸಂಪಾದಿಸಿದ,ಮಾನಸಿಕ ವೃತ್ತಿಯ ಪ್ರೇರಣೆಯಿಂದಲೇ ಸೆರೆದಂಗಡಿಯ ಸಂಪರ್ಕ ಹೊಂದುತ್ತಾನೆ. ಯಾವ ವ್ಯಕ್ತಿಯು ಜೀವನ ಚರ್ಯೆಗಾಗಿ ನಾಯಿಯ ವೃತ್ತಿಯನ್ನೋ, ಹಂದಿಯ ವೃತ್ತಿಯನ್ನೋ, ಅನುಶೀಲನೆ ಮಾಡುವನೋ, ಅವನು ಸಾಯುವ ಕಾಲಕ್ಕೆ ಶ್ವಾನ ಇಲ್ಲವೆ ಸೂಕರದ ಮಾನಸ ರೂಪವನ್ನು ಹೊಂದಿ, ದೇಹತ್ಯಾಗ ಮಾಡುತ್ತಾನೆ. ತಿರುಗಿ ರಜೋಗುಣದ ಸಹಾಯದಿಂದ ಅವನು ಶ್ವಾನ ಇಲ್ಲವೆ ಸೂಕರಗಳ ಸಂಸ್ಕಾರ ಭೋಗಕ್ಕಾಗಿ ನಾಯಿ ಇಲ್ಲವೆ ಹಂದಿಯ ಯೋನಿಯಲ್ಲಿ ಜನಿಸುತ್ತಾನೆ. ಪರಮ ತಪಸ್ವಿಯಾದ ಭರತರಾಜನು, ಚಿಗರಿಮರಿಯ ಚಿಂತೆಯನ್ನು ಮಾಡಿ ಮಾಡಿ, ದೇಹತ್ಯಾಗ ಮಾಡಿದ್ದನು. ಆದ್ದರಿಂದ ಎರಡನೇ ಜನ್ಮದಲ್ಲಿ ಅವನು ಹರಿಣ ಶರೀರವನ್ನು ಧರಿಸಿದನೆಂದು ಪುರಾಣದಲ್ಲಿ ಹೇಳಲಾಗಿದೆ.

ಆದರೆ ಯಾರು ಪೂರ್ಣಕಾಮರೋ, ಅಂದರೆ, ಯಾರ ವಾಸನೆಗಳು ಮತ್ತು ಕಾಮನೆಗಳು ನಿಃಶೇಷವಾಗಿವೆಯೋ, ಅವರ ಬೇರಾವ ಸಂಸ್ಕಾರಗಳೂ ಇಲ್ಲದ ಕಾರಣ, ಅನಂತರದ ಕಾಲದಲ್ಲಿ, ತಜ್ಜಾತೀಯ ಯಾವುದೇ ಸಂವೇದನೆಗಳಿರುವುದೂ ಸಹ, ಸಂಭವನೀಯವಲ್ಲ. ಇಂಥ ವ್ಯಕ್ತಿಯೇ ಆಪ್ತಕಾಮನು. ಇವನೇ ಕೃತಾತ್ಮನು. ಆ ಪೂರ್ಣನನ್ನು, ಆ ವಿರಾಟನನ್ನು ಪಡೆಯದೆ, ಪೂರ್ಣಕಾಮನಾಗುವ ಸಂಭವವಿಲ್ಲ. ಆದ್ದರಿಂದ, ಯಾರು ಪೂರ್ಣಕಾಮರಾಗಿರುವರೋ, ಅವರ ಎಲ್ಲ ಸಂಸ್ಕಾರಗಳು ಇಲ್ಲಿಯೇ ವಿಲೀನವಾಗುತ್ತವೆ. ಮತ್ತು ಅವರು ಜನನ–ಮರಣ ಚಕ್ರದಿಂದ ಹೊರಗೆ ಉಳಿಯುತ್ತಾರೆ.

ಸೃಷ್ಟಿಯ ಕ್ರಮ ವಿಕಾಸವು ಜಡದಿಂದ ಚೇತನದತ್ತ ಸಾಗುತ್ತದೆ. ಕಲ್ಲಿನ ತುಂಡೊಂದು ಇದೆಯೆಂದು ತಿಳಿಯಿರಿ. ಅದು ಕಾರ್ಯ ಮಾಡಲಾರದು. ಅದರ ಮಾನಸ ಸಂವೇದನೆಗಳೂ ಇಲ್ಲ. ಇದರ ಕಾರಣವೇನೆಂದರೆ, ಅದರ ಮನದ ವಿಕಾಸವಿನ್ನೂ ಆಗಿಲ್ಲ. ಮನವು ಇದ್ದ ಮೇಲೆ ತಾನೇ ಅದರ ಸಂವೇದನೆಗಳು ಇರುವುದು. ಕಲ್ಲಿಗಿಂತ ಅಧಿಕ ಚೇತನಪೂರ್ಣ ಗಿಡವನ್ನು ನೋಡಿರಿ. ಇದರಲ್ಲಿ ಕ್ರಿಯಾಶೀಲತೆ ಇದೆ. ಇದು ಬೆಳೆಯುತ್ತದೆ. ಮಣ್ಣಿನಿಂದ ಪ್ರಾಣ ರಸವನ್ನು ಆಹರಣ ಮಾಡುತ್ತದೆ. ಮತ್ತು ತನ್ನ ದೇಹದಲ್ಲಿ ಬೀಜವನ್ನು ಸೃಷ್ಟಿಸಿ, ಆ ಮೂಲಕ ತನ್ನ ವಂಶವನ್ನು ರಕ್ಷಿಸುತ್ತದೆ. ಆಘಾತ ಮತ್ತು ಯತ್ನಗಳಿಂದ ದುಃಖ ಮತ್ತು ಸುಖಗಳನ್ನು ಭೋಗಿಸುತ್ತದೆ. ನಾವು ಇದರಲ್ಲಿ ಚೈತನ್ಯದ ವಿಕಾಸವನ್ನು ಕಾಣುತ್ತೇವೆ. ಏಕೆಂದರೆ, ಇದರಲ್ಲಿ ಮನವು ಗ್ರತಜಾ

ವಾಗಿದೆ. ಇದು ಮಾನಸ–ವಿಕಾಸದ ಹಾದಿಯಲ್ಲಿ ಮುನ್ನಡೆದು ಯಾವ ಸರ್ವೋನ್ನತ ಅವಸ್ಥೆಯನ್ನು ತಲುಪಿರುವುದೋ, ಅದನ್ನು ನಾವು ಮಾನವ ಮಾತ್ರರಲ್ಲಿ ಕಾಣುತ್ತೇವೆ. ಈ ಅವಸ್ಥೆಗಿಂತ ಊರ್ಧ್ವದಲ್ಲಿರುವುದೆಲ್ಲ ದೇವತ್ವ ಇಲ್ಲವೆ ಬ್ರಹ್ಮತ್ವ. ಬ್ರಹ್ಮೀ ಚಿಂತನದ, ಸೂಕ್ಷ್ಮದಿಂದ ಸ್ಥೂಲ ದತ್ತಣ ವಿಕಾಸ ಕಾಲದಲ್ಲಿ ಸೃಷ್ಟಿಯ ಉದ್ಭವವು ಹೇಗಾಗುವುದೋ, ಹಾಗೆಯೇ ಸ್ಥೂಲದಿಂದ ಉತ್ತರೋತ್ತರ ಸೂಕ್ಷ್ಮದತ್ತ ಚೈತನ್ಯ ಘನ ಅವಸ್ಥೆಯತ್ತ, ನಡೆದು ನಡೆದು, ಎಲ್ಲಕ್ಕಿಂತ ಕೊನೆಗೆ ಜೀವಿಯು ಎಲ್ಲಿಂದ ಬಂದನೋ ಅಲ್ಲಿಗೇ ಮರುಳುತ್ತಾನೆ. ಇದು ಸರಿಯಾಗಿ ಸಮುದ್ರದ ತೆರೆಗಳಂತೆಯೇ ಇದೆ. ಅವು ಎಲ್ಲಿಂದ ಮುನ್ನಡೆಯುವವೋ, ಮರಳಿ ಅಲ್ಲಿಗೇ ಮರುಳುತ್ತವೆ. ಮರುಳುವ ಹಾದಿಯಲ್ಲಿ ಮಾನವನು ಎಷ್ಟೊಂದು ಪ್ರಯಾಸ ಪಡಬೇಕಾಗುತ್ತದೆ? ಈ ಕ್ಷುದ್ರ ಸ್ವಾರ್ಥದ ಏಟಿನಿಂದ ವಿಚಲಿತನಾಗಿ ಹಾದಿ ತಪ್ಪದೆ, ಸಹಜ ಭಾವದಿಂದ ತನ್ನ ಗತಿಯು ತನ್ನ ಸ್ವರೂಪದಲ್ಲಿಯೇ ಕೊನೆಗೊಳ್ಳುವಂತೆ ಮಾಡಬಲ್ಲನು. ಆಗ ಮಾತ್ರ, ಅವನನ್ನು ಕೃತಾತ್ಮ ಎನ್ನುತ್ತೇವೆ. ಆಗ ಮಾತ್ರ ಅವನು ಒಳಗೂ, ಹೊರಗೂ ಬ್ರಹ್ಮಮಯನಾಗುವನು.

ಇಂಥ ಕೃತಾತ್ಮನಾಗಲಿಕ್ಕೋಸುಗ ಸ್ವಲ್ಪ ಪ್ರಯತ್ನ ಮಾಡಬೇಕಾಗುತ್ತದೆ. ಈ ಪ್ರಯತ್ನಕ್ಕೆ ಸಾಧನೆಯೆನ್ನುತ್ತಾರೆ. ಯಾವ ಸಾಧನೆಯಲ್ಲಿ ಭಕ್ತಿ, ಕರ್ಮ, ಮತ್ತು ಜ್ಞಾನ, ಈ ಮೂರು ಇವೆಯೋ, ಅದನ್ನೇ ಶ್ರೇಷ್ಠ ಸಾಧನೆ ಎನ್ನುತ್ತಾರೆ. ಯಾವ ಸಾಧನೆಯಲ್ಲಿ ಭಕ್ತಿ ಮತ್ತು ಕರ್ಮಗಳೆರಡೇ ಇರುವವೋ ಅದು ಮಧ್ಯಮ ಸಾಧನೆ. ಇನ್ನು, ಯಾವುದರಲ್ಲಿ ಕೇವಲ ದೊಡ್ಡ ದೊಡ್ಡ ಮಾತಿನ ಡೊಂಬರಾಟವಿದೆಯೋ (ಕರ್ಮ ಮತ್ತು ಭಕ್ತಿಗಳಿಲ್ಲದಿರುವುದರಿಂದ ಜ್ಞಾನವೂ ಇರದು; ಅವರಲ್ಲಿ ಇರುವುದು, ಜ್ಞಾನದ ಪೇಚಾಟ ಮಾತ್ರ) ಅದನ್ನು ಅಧಮ ಸಾಧನೆಯೆನ್ನುತ್ತಾರೆ. ಸಾಧಕನ ಯೋಗ್ಯತೆಯನ್ನು ಅವನ ಲೌಕಿಕ ವಿದ್ಯಾಬುದ್ಧಿಗಳಿಂದ ನಿರ್ಧರಿಸಲಾಗದು. ಸಾಧಕನ ಯೋಗ್ಯತೆಯ ಅಳತೆಯನ್ನು ಅವನ ಜ್ಞಾನ, ಭಕ್ತಿ ಮತ್ತು ಕರ್ಮನಿಷ್ಠೆಗಳನ್ನು ಕಂಡುಕೊಂಡೇ ನಿರ್ಧರಿಸಬಹುದಾಗಿದೆ. ಒಂದೇ ಗುರಿಯ ಅಗ್ರಹವನ್ನೇ 'ನಿಷ್ಠೆ' ಎನ್ನುತ್ತಾರೆ. 'ರಸಗುಲ್ಲಾ ಸಿಹಿಯಾಗಿದೆ' ಎಂದ ಮಾತ್ರಕ್ಕೆ ರಸಗುಲ್ಲಾದ ರುಚಿ ತಿಳಿಯುವುದೆ? ರಸಗುಲ್ಲಾವನ್ನು ಪಡೆಯಲೋಸುಗ ಇಲ್ಲವೆ ತಿನ್ನಲೋಸುಗ ಸ್ವಲ್ಪ ಪ್ರಯತ್ನ ಮಾಡಬೇಕಷ್ಟೆ?



"ನಾಯಮಾತ್ಮಾ ಪ್ರವಚನೇನ ಲಭ್ಯೋ
ನ ಮೇಧಯಾ ನ ಬಹುನಾಶ್ರುತೇನ,
ಯಮೇವೈಷ ವೃಣುತೇ ತೇನ ಲಭ್ಯ
ಸ್ತಸ್ಯೈಷ ಆತ್ಮಾ ವಿವೃಣುತೇ ತನೂಂ ಸ್ವಾಮ್"

ಕೇವಲ ದೊಡ್ಡ ದೊಡ್ಡ ಮಾತುಗಳಿಂದ ಬ್ರಹ್ಮಪ್ರಾಪ್ತಿಯಾಗದು. ಸುದ್ದಿ ಪತ್ರದಲ್ಲಿ, ಈ ವರ್ಷ ಇಂತಿಷ್ಟು ಮಳೆ ಬೀಳುವುದೆಂದು, ಬರೆಯುತ್ತಾರೆ. ಆದರೆ ಇದನ್ನು ಓದಿ ಕೇಳಿದ ಮಾತ್ರದಿಂದ ರೈತನ ಬೆಳೆಯೇನೂ ಉಳಿಯದು. ಸುದ್ದಿ ಪತ್ರವನ್ನು ಹಿಂಡಿದರೆ, ಅದರಿಂದ ಒಂದು ಹನಿ ನೀರೂ ಬಾರದು. ಬ್ರಹ್ಮ ಪ್ರಾಪ್ತಿಗೋಸುಗ ಮನವನ್ನು ಅವನತ್ತ ತಿರುಗಿಸುವ ಸಾಧನೆಯನ್ನು ಮಾಡಲೇಬೇಕು.

"ಅನುಭೂತಿ ಬಿನಾ ಮೂಢೋ ವೃಥಾ ಬ್ರಹ್ಮಣಿ ಮೋದತೇ,
ಪ್ರತಿಬಿಂಬಿತ ಶಾಖಾಗ್ರ ಫಲ ಸ್ವಾದನ ಮೋದವತ್"

–ಮೈತ್ರೇಯೀ ಶ್ರುತಿ.

ಯಾವನಿಗೆ ಅನುಭೂತಿಯೇ ಇಲ್ಲವೋ, ಅವನು ಲಕ್ಷ ಲಕ್ಷ ಶಾಸ್ತ್ರಗಳನ್ನು ಅಧ್ಯಯನ ಮಾಡಿದರೇನು? ಇಲ್ಲವೆ ಬ್ರಹ್ಮನ ಸಂಬಂಧ ಭಾಷಣ ಬಿಗಿಯುತ್ತಿದ್ದರೇನು? ಅವನ ಬ್ರಹ್ಮನು ಅವನ ಪುಸ್ತಕದಲ್ಲಿ ಮಾತ್ರ ಇರಬಹುದು. ಅವನು ಅನುಭವಸಿದ್ಧ; ಸುಪರಿಚಿತ ಬ್ರಹ್ಮನಾಗಲಾರನು. ಹೇಗೆಂದರೆ, ನದಿಯ ದಡದಲ್ಲಿರುವ ಗಿಡದಲ್ಲಿ ಹಣ್ಣು ಇದೆ; ಅದರ ನೆರಳು ಕೆಳಗೆ ನೀರಿನಲ್ಲಿ ಪ್ರತಿಫಲಿಸಿದೆ. ಆದರೆ ಅದನ್ನು ಕಂಡ ಮಾತ್ರಕ್ಕೆ ಹಣ್ಣನ್ನು ತಿಂದು ರುಚಿ. ಅನುಭವಿಸಿದಂತಾಗುವುದೇ? ಆರು ದರ್ಶನ ಶಾಸ್ತ್ರಗಳಲ್ಲಿಯೂ ಮಹಾ ಪಂಡಿತರಾದವರು, ಒಂದು ವೇಳೆ, ಬ್ರಹ್ಮ ಸಾಧನದಿಂದ ವಿಮುಖರಾದರೆ, ಅವರೂ ಸಹ ಬ್ರಹ್ಮನಿಂದ ಬಹು ದೂರವೇ ಉಳಿಯುವರು. ಲೌಕಿಕ ವಿದ್ಯೆಯಲ್ಲಿ ನೀವೆಷ್ಟೇ ದೊಡ್ಡ ಪಂಡಿತರಾಗಿರಬಹುದು; ಆದರೆ ಬ್ರಹ್ಮನ ಸಂಬಂಧ ನೀವೇನೂ ತಿಳಿಯಲಾರಿರಿ. ಏಕೆಂದರೆ, ಶಿಕ್ಷಣದ ಜೊತೆ ಜೊತೆಗೇ ಅಹಂಕಾರವೂ ಸಿದ್ಧಗೊಳ್ಳುತ್ತದೆ. ಅದರ ಫಲವಾಗಿ, ಅಲ್ಪ 'ನಾನು'ವಿಗೇ ಗುರುತ್ವವನ್ನು ಆರೋಪಿಸುತ್ತಾನೆ; ಹೀಗೆ ಅವನ ಭಾರವು ಇನ್ನೂ ಹೆಚ್ಚುತ್ತ ಹೋಗುತ್ತದೆ. ಈ ಭಾರವು ನಿಮ್ಮ ಭಕ್ತಿಯ ಕಾರಣವಾದೀತಲ್ಲದೆ, ಮುಕ್ತಿಯ ಕಾರಣವಾಗದು.

ಆಚಾರ್ಯ ಶಂಕರರು ಹೀಗೆ ಹೇಳುತ್ತಾರೆ.

"ವಾಕ್ ವೈಖರೀ ಶಬ್ದ ಝರೀ ಶಾಸ್ತ್ರ ವ್ಯಾಖ್ಯಾನ ಕೌಶಲಮ್,
ವೈದುಷ್ಯಂ ವಿದುಷಾ ತದ್ವತ್ ಭುಕ್ತಯೇ ನ ಮುಕ್ತಯೇ"

ತಾವೇನೂ ಸಾಧನೆಯನ್ನು ಮಾಡದೆ, ಕೇವಲ ಉಪದೇಶ ಕೇಳಲು ಮಹಾಪುರುಷರ ಬಳಿಗೆ ಓಡಾಡುವ ಬಹುಜನರನ್ನು ನಾವು ಕಾಣುತ್ತೇವೆ. ಅವರು ಅತ್ಯಂತ ಭ್ರಾಂತರಷ್ಟೇ. ಕೇವಲ ಮಹಾಪುರುಷರ ಬೆನ್ನು ಹತ್ತುವುದರಿಂದ ಏನೇನೂ ಆಗದು. ಸ್ವತಃ ಸಾಧನೆ ಗೆಯ್ದು ಬ್ರಹ್ಮ ಉಪಲಬ್ಧಿಯಲ್ಲಿ ಪ್ರತಿನಿಷ್ಠಿತನಾಗಬೇಕು. ಯಾವನು ಎಷ್ಟು ದೊಡ್ಡ ವಕ್ತಾರನು? ಮತ್ತು ಎಷ್ಟು ಪುಸ್ತಿಕೆಗಳನ್ನು ಓದಿದ್ದಾನೆ? ಇದನ್ನೆಲ್ಲ ನೋಡಿ ಪರಮಾತ್ಮನು ಯಾರ ಮೇಲೂ ತನ್ನ ಕೃಪೆಯನ್ನು ಸುರಿಸುವುದಿಲ್ಲ. ಯಾರಲ್ಲಿ ನಿಷ್ಠೆಯಿದೆಯೋ, ಅವರು ಮಾತ್ರ ಅವನ ಕೃಪೆಯನ್ನು ಪಡೆಯಬಲ್ಲರು. ಪರಮ ಭಕ್ತನಾದ ನಾರದ ಮಹರ್ಷಿಗಳು ಹೀಗೆ ಹೇಳಿದ್ದಾರೆ.

"ಮಹದ್ ಕೃಪಯೈವ ಭಗವದ್ ಕೃಪಾ ಲೇಶಾದ್ವಾ"

ಅಂದರೆ, ಮಹದ್ ವ್ಯಕ್ತಿಯ ಕೃಪೆ ಇಲ್ಲವೆ ಪರಮಬ್ರಹ್ಮನ ಕೃಪೆಯ ಕಣವನ್ನಾದರೂ ಪಡೆದ ಬಳಿಕ ಮಾತ್ರ ಬ್ರಹ್ಮವನ್ನು ಪಡೆಯಬಹುದು. ಈಗ ಒಬ್ಬ ಮೇಧಾವಿ ಬಾಲಕನಿರುವನೆಂದು ತಿಳಿಯಿರಿ. ಅವನ ಶಿಕ್ಷಕನು ಆ ಬಾಲಕನಿಗೆ ಚೆನ್ನಾಗಿ ಓದು–ಬರೆಹ ಕಲಿಸದಿದ್ದರೆ, ಅವನಲ್ಲಿ ಮೇಧಾವಿಯಾಗುವ ಸಂಭಾವ್ಯತೆಯಿದ್ದರೂ ಅವನು ವಿದ್ವಾನ್‌ನಾಗಲಾರನು. ಸರಿಯಾಗಿ ಇದೇ ರೀತಿ, ಮಾನವರೆಲ್ಲರಲ್ಲಿ ಆಧ್ಯಾತ್ಮಿಕ ಉನ್ನತಿ ಗೆಯ್ಯುವ ಇಲ್ಲವೆ ಬ್ರಹ್ಮ ಭಾವನೆಯಲ್ಲಿ ಪ್ರತಿಷ್ಠಿತನಾಗುವ ಯೋಗ್ಯತೆ ಇಲ್ಲವೆ ಸಂಭಾವ್ಯತೆಯಿದ್ದರೂ, ಉಪಯುಕ್ತ ಮಾರ್ಗದರ್ಶಿಯ ಅಭಾವದಿಂದ ಅವನ ಯೋಗ್ಯತೆಯು ವಾಸ್ತವ ರೂಪ ತಾಳುವುದಿಲ್ಲ. ಇದಕ್ಕಾಗಿಯೇ ಸದ್ಗುರುವಿನ ಆವಶ್ಯಕತೆಯಿದೆ. ಅವನ ಕೃಪೆಯು ಭಗವದ್ ಕೃಪೆಯೇ ಆಗಿದೆ. ಏಕೆಂದರೆ ಅವನು ಪರಮಬ್ರಹ್ಮನ ಕೃಪಾನಿಧಿಯಾಗಿದ್ದಾನೆ.

"ನಾಯಮಾತ್ಮ ಬಲಹೀನೇನ ಲಭ್ಯೋ
ನ ಚ ಪ್ರಮಾದಾತ್ತಪಸೋ ವಾಪ್ಯಲಿಂಗಾತ್,
ಏತೈರೂಪಾಯೈರ್ಯತತೇ ಯಸ್ತು ವಿದ್ವಾಂಸ್ತಸ್ಯೈಷ
ಆತ್ಮವಿಶತೇ ಬ್ರಹ್ಮಧಾಮ"

ಬಲಹೀನರಾದವರಿಗೆ ಅಂದರೆ, ಆತ್ಮಿಕ ಮತ್ತು ಮಾನಸಿಕ ಶಕ್ತಿ ಇಲ್ಲದವರಿಗೆ, ಬ್ರಹ್ಮಜ್ಞಾನವಂತೂ ಆಗಲಾರದು. ಹೇಡಿಗಳು, ಕೀಳು ಜನರು ಬ್ರಹ್ಮಭಾವದಿಂದ ಬಹುದೂರ ಇರುತ್ತಾರೆ. ಲಂಚಖೋರ ಮಿಥ್ಯಾವಾದಿ ವ್ಯಕ್ತಿಯು ಯಮನಿಯಮಗಳನ್ನು ಪಾಲಿಸುವ ಭಯದಿಂದ ಆನಂದ ಮಾರ್ಗವನ್ನು ನಿಂದಿಸುವುದನ್ನು ನೀವೀಗ ನೋಡುತ್ತಿರುವಿರಷ್ಟೇ.



ಸಾಧಕರ ಇನ್ನೊಂದು ದೊಡ್ಡ ಲಕ್ಷಣವೆಂದರೆ, ಆತ್ಮವಿಶ್ವಾಸ. "ನಾನು ಸಿದ್ಧಿ ಲಾಭವನ್ನು ಪಡೆದೇ ಪಡೆಯುವೆ". ಈ ದೃಢ ವಿಶ್ವಾಸವು ಸಹ, ಸಿದ್ಧಿಯ ಮೊದಲ ಮೆಟ್ಟಲಾಗಿದೆ.

"ಫಲಿಷ್ಯತೀತಿ ವಿಶ್ವಾಸ ಸಿದ್ಧೇರ್ಪ್ರಥಮ ಲಕ್ಷಣಮ್
ದ್ವಿತೀಯಂ ಶ್ರದ್ಧಯಾ ಯುಕ್ತಂ ತೃತೀಯಂ ಗುರುಪೂಜನಮ್
ಚತುರ್ಥೋ ಸಮತಾಭಾವೋ ಪಂಚಮೇಂದ್ರಿಯ ನಿಗ್ರಹಃ
ಷಷ್ಠಂಚ ಪ್ರಮಿತಾಹಾರೋ ಸಪ್ತಮಂ ನೈವ ವಿದ್ಯತೇ"

–ಶಿವ ಸಂಹಿತಾ.

ನಾನು ಸಿದ್ಧಿಲಾಭವನ್ನು ಪಡೆದೇ ತೀರುತ್ತೇನೆ. ಇಂಥ ಮನೋಭಾವವನ್ನು ಹೊಂದಿದವನು ಸಾಧನೆಯಿಂದ ಎಳ್ಳಿನಿತೂ ಉದಾಸೀನನಾಗಲಾರನು. ಜಗತ್ತಿನ ಕಾರ್ಯಗಳಿಂದ ಇಲ್ಲವೆ ಜಗತ್ತಿನಿಂದಲೇ ಓಡಿಹೋಗಿ ಉದಾಸೀನನಾದರೂ ಕೆಲಸವಾಗದು. ಏಕೆಂದರೆ, ಇವೆಲ್ಲ ಮಾನಸಿಕ ವಿಶೇಷ ವ್ಯಾಧಿಗಳಷ್ಟೇ. ಮನೆ–ಮಾರು ತೊರೆದು, ಹಿಮಾಲಯ ಪರ್ವತದ ಗುಹೆ–ಗಂಹ್ವರಗಳಲ್ಲಿದ್ದು, ಬ್ರಹ್ಮಸಾಧನೆ ಮಾಡುವ ಇಚ್ಛೆಯುಳ್ಳವರು ಸಹ ತಪ್ಪು ಮಾಡುತ್ತಿದ್ದಾರೆ. ಸನ್ಯಾಸ ಶಬ್ದದ ಅರ್ಥವೆಂದರೆ, ಸದ್ವಸ್ತುವನ್ನು ಪಡೆಯುವ ಉದ್ದೇಶದಿಂದ ತನ್ನನ್ನೇ ಅರ್ಪಿಸಿ ಬಿಡುವುದಾಗಿದೆ. ಬ್ರಹ್ಮನೇ ಏನೆಲ್ಲವೂ ಆಗಿರುವಾಗ, ನೀನು ಒಂದು ಸ್ಥಾನ ಬಿಟ್ಟು ಬೇರೊಂದು ಸ್ಥಾನಕ್ಕೆ ಹೋಗುವುದರ ಸಾರ್ಥಕ್ಯವೇನು? ನೀನೆಲ್ಲಿಯೇ ಇರಲಿ, ನಿನ್ನ ನಾಲ್ಕೂ ನಿಟ್ಟಿನಲ್ಲಿರುವ ವಸ್ತುಗಳನ್ನು ಸರಿಯಾಗಿ ಬಳಸುತ್ತ ನಡೆ. ಆದ್ದರಿಂದ, ಸಮಾಜ ಇಲ್ಲವೆ ಪರಿವಾರದಿಂದ ಉದಾಸೀನನಾಗಿರುವುದು, ಸಂಪೂರ್ಣವಾಗಿ ಬ್ರಹ್ಮಸಾಧನೆಗೆ ವಿರೋಧಿಯಾಗಿದೆ. ಜನರೆದುರು ತೋರಿಸಿಕೊಳ್ಳಲೆಂದು ಆಳವಿಲ್ಲದ ಜ್ಞಾನವನ್ನು ಪಡೆದರೂ ಸಹ ಬ್ರಹ್ಮಬೋಧೆಯಾಗದು. ಯಾವಾಗ ಜ್ಞಾನವು ಸತ್ಯ ನಿಷ್ಠೆಯ ಮೂಲಕ ಶಕ್ತಿಶಾಲಿಯಾಗುವುದೋ, ಆಗಲೇ ಅದರ ಸಹಾಯದಿಂದ ಬ್ರಹ್ಮಪ್ರಾಪ್ತಿಯಾಗಬಲ್ಲದು. ಯಾರ ಜ್ಞಾನವು ಸತ್ಯನಿಷ್ಠೆಯಿಂದ ಯುಕ್ತವಾಗಿದೆಯೋ, ಕೇವಲ ಅವರ ಆತ್ಮವು ಮಾತ್ರ, ಬ್ರಹ್ಮಲೋಕದಲ್ಲಿ ನೆಲೆಗೊಳ್ಳುತ್ತದೆ. ಸಂಕ್ಷೇಪದಲ್ಲಿ ಹೇಳುವುದಾದರೆ, ಅ–ಪ್ರಮಾದ, ಮಾನಸಿಕ ಮತ್ತು ಆತ್ಮಿಕ ಶಕ್ತಿಗಳ ದೃಢತೆ,

ಸತ್ಯನಿಷ್ಠೆ, ಜ್ಞಾನ ಮತ್ತು ಜಗತ್ತಿನ ವ್ಯಾಪಾರದಲ್ಲಿ ವಸ್ತು ಸಮೂಹದ ಯಥಾಯೋಗ್ಯ ಬಳಕೆ ಇತ್ಯಾದಿ ಗುಣಗಳ ಒಟ್ಟಾರೆ ಭಾವದಿಂದ ಇರುವುದರಿಂದ ಮಾತ್ರ ಸಾಧಕನು ಅವಶ್ಯವಾಗಿ ಬ್ರಹ್ಮನೊಂದಿಗೆ ಆತ್ಮೈಕ್ಯದ ಉಪಲಬ್ಧಿ ಹೊಂದುತ್ತಾನೆ.

"ಸಂಪ್ರಾಪ್ಯೈನಮೃಷಯೋ ಜ್ಞಾನತೃಪ್ತಾಃ
ಕೃತಾತ್ಮಾನೋ ವೀತರಾಗಾಃ ಪ್ರಶಾಂತಾಃ
ತೇ ಸರ್ವಗಂ ಸರ್ವತಃ ಪ್ರಾಪ್ಯ ಧೀರಾ
ಯುಕ್ತಾತ್ಮಾನಃ ಸರ್ವಮೇವಾವಿಶಂತಿ"

'ಋಷಿ' ಶಬ್ದದ ಅರ್ಥವೆಂದರೆ, ಯಾವನು ತನ್ನಲ್ಲಿ ಬ್ರಹ್ಮನನ್ನು ಕರ್ಷಣ (ಎಳೆತ) ಮಾಡಿರುವನೋ ಅವನು. ಎಲ್ಲಿಯ ತನಕ ಸಾಧಕನು ಬ್ರಹ್ಮನನ್ನು ಪಡೆಯುವುದಿಲ್ಲವೋ, ಅಲ್ಲಿಯ ತನಕ ಅವನಲ್ಲಿ ಅಪೂರ್ಣತೆಯ ಅತೃಪ್ತಿ ಇದ್ದೇ ಇರುತ್ತದೆ. ನಿಮಗೆ ಒಂದು ಸಾವಿರ ರೂಪಾಯಿ ಬೇಕಾಗಿವೆಯೆಂದು ತಿಳಿಯಿರಿ. ಹಾಗಾದರೆ ನಿಮಗೆ ಅಷ್ಟು ಲಭ್ಯವಾದರೆ ತೃಪ್ತಿಯಾಗುವುದೋ? ಇಲ್ಲ; ಆಗ ನೀವು ಇನ್ನಷ್ಟು ಬಯಸುತ್ತೀರಿ. ಮಾನವನ ಮನೋಧರ್ಮವೆಂದರೆ ಅನಂತ ಪಿಪಾಸೆ. ಅದು ಎಂದೆಂದಿಗೂ 'ನಾನು ಹಸಿದಿರುವೆ' ಎನ್ನುತ್ತಿರುತ್ತದೆ. ಇದೇ ರೀತಿ ಹಸಿವಿನ ಪ್ರಮಾಣವು ನೀವು ಅನಂತ ಪರಿಮಾಣದಲ್ಲಿ ರೂಪಾಯಿಗಳನ್ನು ಪಡೆಯುವ ವರೆಗೆ ಬೆಳೆಯುತ್ತಲೇ ಹೋಗುತ್ತದೆ. ಈ ಅನಂತತ್ವವು ಕೇವಲ ಬ್ರಹ್ಮನಲ್ಲಿ ಇದೆ. ಆದ್ದರಿಂದ ಯಾವಾಗ ಋಷಿಯು ಕೃತಾತ್ಮನಾಗುವನೋ, ಆಗ ಅವನು ಆತ್ಮಸ್ವರೂಪನ ದರ್ಶನ ಪಡೆದು, ತನ್ನ ರಾಗ-ವಿರಾಗಗಳ ಮೇಲೇರಿ ಪ್ರಶಾಂತ ಅಂದರೆ, ಸಂಸ್ಕಾರಗಳ ಪುನರುತ್ಥಾನದಿಂದ ವರ್ಜಿತನಾಗುವನು. ರಾಗ (ಆಕರ್ಷಣ) ಮತ್ತು ವಿರಾಗ (ವಿಕರ್ಷಣ)ಗಳು ಮೋಹ ಮತ್ತು ಘೃಣಾ ವೃತ್ತಿಗಳಿರುವ ತನಕ ಉಳಿಯುತ್ತವೆ. ಒಳ್ಳೆಯ ವಾತಾವರಣದಲ್ಲಿರುವ ಸಾಧಕನು ಸೆರೆ-ಸೇಂದಿಯನ್ನು ಕೀಳು ವಸ್ತುವೆಂದು ಬಗೆದು ಅದನ್ನು ಮುಟ್ಟುವುದೂ ಸಹ ಪಾಪವೆಂದು ತಿಳಿಯುವಂತೆಯೇ, ಕುಡುಕನು ಅದನ್ನು ಲೋಭಕರ ವಸ್ತುವೆಂದು ಬಗೆದು, ಜ್ಞಾನ-ಶೂನ್ಯನಾಗಿ, ಪ್ರಾಣರಸವೆಂಬಂತೆ ಅದರತ್ತ ಧಾವಿಸುತ್ತಾನೆ. ಆದರೆ, ಆತ್ಮ ದರ್ಶನದ ಫಲವಾಗಿ, ನಿಜವಾಗಿ ವೀತರಾಗಿಗಳು ಇವೆರಡೂ ಅವಸ್ಥೆಗಳನ್ನು ಮೀರಿ ಮೇಲೇರುವರು. ಅಂಥವರು ಚಿಕಿತ್ಸಕನ ನಿರ್ದೇಶಾನುಸಾರ, ಔಷಧ ರೂಪದಲ್ಲಿ ಸೆರೆಯನ್ನು ಬಳಸುವುದೂ ಉಂಟು; ಮತ್ತು ಅದನ್ನು ಯತ್ನಪೂರ್ವಕ ಜನರಿಂದ



ಮುಚ್ಚಿಡುವುದೂ ಉಂಟು. ಅವರಿಗೆ ಸೆರೆಯನ್ನು ಕುರಿತು ರಾಗವೂ ಇಲ್ಲ; ವಿರಾಗವೂ ಇಲ್ಲ.

ಒಂದು ವೇಳೆ, ನೀನು ಕನ್ಯಾಕುಮಾರಿಗೆ ಹೋದರೆ, ಅಲ್ಲಿ ಒಂದೆಡೆಗೆ ಬಂಗಾಲ ಆಖಾತದಲ್ಲಿ ಏಳುತ್ತಿರುವ ತರಂಗ ಮಾಲೆಗಳನ್ನು ಕಾಣುವೆವು; ಮತ್ತು ಇನ್ನೊಂದೆಡೆಗೆ ಪ್ರಶಾಂತ ಅರಬ್ಬೀಸಮುದ್ರವನ್ನು ಕಾಣುವೆವು. ಬಂಗಾಲ ಅಖಾತವು ಆಳವಾಗಿಲ್ಲ. ಆದರೆ ಎಷ್ಟು ತರಂಗಗಳಿವೆಯೋ, ಅಷ್ಟು ಗರ್ಜನೆಯಿದೆ. ಮತ್ತು ಗಂಭೀರವಾದ ಅರಬ್ಬೀಸಮುದ್ರವು ಸುಸ್ಥಾಪಿತವಾಗಿದೆ. ಅದೇ ಮೇರೆಗೆ ಜ್ಞಾನತೃಪ್ತರಾದವರು, ವೀತರಾಗಿಗಳು, ಪ್ರಶಾಂತರು ಗಂಭೀರವಾಗಿರುತ್ತಾರೆ. ಅವರೇಕೆ ತಮ್ಮ ಪ್ರಚಾರ ಕೈಕೊಳ್ಳುತ್ತಾರೆ? ಯಾರೊಂದಿಗೆ ಕೈಕೊಳ್ಳುತ್ತಾರೆ? ಅಂಥ ಕಾರ್ಯಗಳನ್ನು ಪ್ರಚಾರದ ಭಿಕಾರಿಗಳಾದ ಸಾಧಾರಣ ಮೋಹ ಗ್ರಸ್ತ ಜನರು ಮಾಡುತ್ತಾರೆ.ಬ್ರಹ್ಮನನ್ನು ಪಡೆದ ವ್ಯಕ್ತಿಯುಎಲ್ಲವನ್ನೂ ಬ್ರಹ್ಮಮಯವಾಗಿಯೇ ಕಾಣುತ್ತಾನೆ. ಮತ್ತು ಹಾಗೆಯೇ ತಮ್ಮಿಂದಾವುದೂ ಬೇರಿಲ್ಲವೆಂಬುದನ್ನು ಅನುಭವಿಸುತ್ತಾನೆ. ಬ್ರಹ್ಮನಲ್ಲಿ ಆತ್ಮಸಮರ್ಪಣ ಮಾಡಿಕೊಂಡವರಿಗೆ ಬೇರಾವ ಸಂಸ್ಕಾರಗಳ ಭಯವಿದ್ದೀತು?

ಬ್ರಹ್ಮಜ್ಞ, ಸಾಧಕನು ಬ್ರಹ್ಮನಲ್ಲಿಯೇ ತನ್ನನ್ನೂ ವಿಲೀನಗೊಳಿಸುತ್ತಾನೆ; ಸೇರಿಸಿಕೊಳ್ಳುತ್ತಾನೆ. ಬೇರೆ ಜನ್ಮಚಕ್ರಗಳಲ್ಲಿ ತಿರುಗುವ ಪಾಡು ಅವನಿಗಿಲ್ಲ.

"ಗತಾಃ ಕಲಾಃ ಪಂಚದಶ ಪ್ರತಿಷ್ಠಾ ದೇವಾಶ್ಚ ಸರ್ವೇಪ್ರತಿದೇವತಾಸು
ಕರ್ಮಾಣಿ ವಿಜ್ಞಾನಮಯಶ್ಚ ಆತ್ಮಾ ಪರೇವ್ಯಯೇ
ಸರ್ವಂ ಏಕೀಭವಂತಿ."

ಮಾನವನ ಅಸ್ತಿತ್ವವು ಹದಿನಾರು ಕಲೆಗಳಿಂದ ಯುಕ್ತವಾಗಿದೆ. ಮಾನವನು ಬಹಿರ್ಮುಖೀ ವೃತ್ತಿಯಲ್ಲಿರುವ ತನಕ ಅವನು ಭೌತಿಕ ಜಗತ್ತಿನಲ್ಲಿ ತನ್ನ ಸುಖ ಸಾಮಗ್ರಿಗಳನ್ನು ಅರಸುತ್ತಿರುತ್ತಾನೆ. ಮತ್ತು ಅದುವರೆಗೆ ಅವನಿಗೆ ಹದಿನಾರು ಕಲೆಗಳಾಚೆ ಹೋಗುವುದು ಸಾಧ್ಯವಾಗದು. ಹತ್ತು ಇಂದ್ರಿಯಗಳು, (ಕಣ್ಣು, ಕಿವಿ, ಮೂಗು, ನಾಲಗೆ ಮತ್ತು ತ್ವಚೆ ಈ ಐದು ಜ್ಞಾನೇಂದ್ರಿಯಗಳು ಮತ್ತು ವಾಕ್, ಪಾಣಿ, ಪಾದ, ಪಾಯು ಮತ್ತು ಉಪಸ್ಥ ಈ ಐದು ಕರ್ಮೇಂದ್ರಿಯಗಳು) ಪಂಚಪ್ರಾಣಗಳು ಪ್ರಾಣ, ಅಪಾನ, ಸಮಾನ, ಉದಾನ ಮತ್ತು ವ್ಯಾನ-ಈ ಐದು ಒಳಗಿನ ವಾಯುಗಳು; ನಾಗ, ಕೂರ್ಮ, ಕೃಕರ, ದೇವದತ್ತ ಮತ್ತು ಧನಂಜಯ-ಈ ಐದು ಹೊರಗಿನ ವಾಯುಗಳು, ಕಲೆಗಳಲ್ಲಿ ಸೇರುವುದಿಲ್ಲ. ಏಕೆಂದರೆ, ಇವು ಒಳಗಿನ ವಾಯುಗಳ ಪರಿಣಾಮಗಳಷ್ಟೇ).

ಮತ್ತು ಅಹಂ ತತ್ತ್ವ–ಇವೇ ಹದಿನಾರು ಕಲೆಗಳು. ಅವುಗಳಿಗೆ ಸಂಬಂಧಿಸಿದ ಭಾವದಿಂದ ಸಾಧಕನ ಹದಿನೈದು ಕಲೆಗಳ ಭಾವವು ಅವೆಲ್ಲವುಗಳ ಮೂಲ ಕಾರಣದಲ್ಲಿ ದೊರೆಯುತ್ತದೆ. + ದೇವತೆಗಳು ಅಂದರೆ ಇಂದ್ರಿಯಗಳು ತಮ್ಮ ತಮ್ಮ ಪ್ರತಿ ದೇವತೆಗಳಲ್ಲಿ (ನಿಯಂತ್ರಕ ಶಕ್ತಿಗಳಲ್ಲಿ) ಕೊನೆಗೆ ಲೀನ ವಾಗುತ್ತವೆ.

ಈ ವಿಶಾಲ ಬ್ರಹ್ಮಾಂಡದಲ್ಲಿ ಶಬ್ದ, ಸ್ಪರ್ಶ, ರೂಪ, ರಸ ಮತ್ತು ಗಂಧ ಗಳ ಅನಿರ್ವಚನೀಯ ಲೀಲೆಯು ನಡೆದಿದೆ. ಆ ಕಟ್ಟುಪಾಡಿಲ್ಲದ ಲೀಲೆಯ ಪ್ರತಿಯೊಂದು ಭಾವದ ಹಿನ್ನೆಲೆಯಲ್ಲಿ ಒಂದೊಂದು ವಿಶೇಷ ಶಕ್ತಿಯ ಸ್ಫುರಣ

---

+ ಮಾನವ ಶರೀರದಲ್ಲಿರುವ ಅಸಂಖ್ಯ ನಾಡಿಗಳಲ್ಲಿ ಮೂವತ್ತುಮೂರು ನಾಡಿಗಳು ಮುಖ್ಯವಾಗಿವೆ. ಈ ಮೂವತ್ತುಮೂರು ನಾಡಿಗಳ ನಿಯಂತ್ರಕ ಸತ್ತೆಗಳನ್ನೇ ಮೂವತ್ತುಮೂರು ದೇವತೆಗಳೆಂದು ಕರೆಯುತ್ತಾರೆ. ಇವುಗಳೆಂದರೆ ಹನ್ನೊಂದು ರುದ್ರರು, ದ್ವಾದಶ, ಆದಿತ್ಯರು, ಅಷ್ಟವಸುಗಳು, ಇಂದ್ರ ಮತ್ತು ಪ್ರಜಾಪತಿ. ಬ್ರಹ್ಮಶಕ್ತಿಯ ಮುಖ್ಯ ವಿಕಾಸವನ್ನು 'ಇಂದ್ರ' ಎನ್ನುತ್ತಾರೆ. ಈ ದೇವತೆಗಳೇ ಮಾನವ ಶರೀರ ವನ್ನು ಸಮಗ್ರ ರೀತಿಯಿಂದ ನಿಯಂತ್ರಿಸುತ್ತಾರೆ.

(ಕ) ಏಕಾದಶ ರುದ್ರ:–ಹತ್ತು ಇಂದ್ರಿಯ ಮತ್ತು ಮನ. ರುದ್ರ ಶಬ್ದದ ಅರ್ಥವೆಂದರೆ, ಅಳಿಸುವುದು. ಮರಣ ಕಾಲದಲ್ಲಿ ಪ್ರತಿಯೊಂದು ಇಂದ್ರಿಯವು ತನ್ನ ಪ್ರತಿ ದೇವತೆಯಲ್ಲಿ ಸೇರಿ ಹೋಗುತ್ತದೆ. ಮನವು ನಿಷ್ಕ್ರಿಯವಾಗುತ್ತದೆ. ಮಾನವನ ಶರೀರವು ಅಚಲವಾಗುತ್ತದೆ; ಸ್ಪಂದನಾ ಹೀನವಾಗುತ್ತದೆ. ಹೀಗಾದಾಗ, ಅವನ ಆತ್ಮೀಯ ಬಂಧುಗಳು ಕಾತರ ಭಾವದಿಂದ ಅಳತೊಡುಗುತ್ತಾರೆ. ಈ ಹನ್ನೊಂದು ದೇವತೆ ಗಳು ಮಾನವನನ್ನು ಅಳಿಸುತ್ತವೆ. ಆದ್ದರಿಂದ ಇವುಗಳಿಗೆ 'ರುದ್ರ' ಎಂದು ಕರೆಯುತ್ತಾರೆ.

(ಖ) ಅಷ್ಟವಸು:– 'ವಸು' ಶಬ್ದದ ಅರ್ಥವೆಂದರೆ, ಜೀವರ ವಾಸಸ್ಥಾನ. ಅರ್ಥಾತ್ ಯಾವುದು ಇಂದ್ರಿಯಗಳ ಆಧಾರ, ಆಶ್ರಯ ಸ್ಥಾನ ಇಲ್ಲವೆ ವಿಷಯ ಆಗಿದೆಯೋ ಅದುವೇ 'ವಸು; ಸೂರ್ಯ, ಚಂದ್ರ, ನಕ್ಷತ್ರ, ಅಂತರಿಕ್ಷ, ವ್ಯೋಮ, ವಾಯು, ತೇಜ, ಮತ್ತು ಧರಿತ್ರೀ ಎಂಬ ಈ ಎಂಟು, ವಸುಗಳಾಗಿವೆ.



ವಿರುತ್ತದೆ. ಈ ಶಕ್ತಿ ಸಮೂಹಕ್ಕೆ ನಾವು ದೇವತೆ ಎನ್ನುತ್ತೇವೆ. ಆದ್ದರಿಂದ, ಭೂಮಾದೇಹದಲ್ಲಿ, ಲೀಲೆಗೊಳಪಟ್ಟ ಪ್ರತಿಯೊಂದು ಶಕ್ತಿಯೂ ಅನುಭಾವ ದಿಂದ, ಮಾನವ ಶರೀರವನ್ನು ನಡೆಸುತ್ತದೆ. ಮತ್ತು ನಿಯಂತ್ರಿಸುತ್ತದೆ. ಅಂಗ–ಪ್ರತ್ಯಂಗಗಳ ಒಂದೊಂದು ಶಕ್ತಿಯು ವಿಶೇಷ ಭಾಗದಿಂದ ಸಂಬಂಧ ಹೊಂದುತ್ತವೆ. ಮಾನವನು ಹತ್ತು ಇಂದ್ರಿಯಗಳ ಮೂಲಕ ಕಾರ್ಯ ಮಾಡು ತ್ತಾನೆ. ಈ ಹತ್ತು ಇಂದ್ರಿಯಗಳನ್ನು ನಡೆಸುತ್ತಿರುವುದರಿಂದ ಈ ಶಕ್ತಿ ಸಮೂಹಗಳಿಗೆ ದೇವತೆಗಳೆನ್ನುತ್ತಾರೆ. ದೇಹ ಕಳಚಿದ ಬಳಿಕ ಮೋಕ್ಷ ಪಡೆದ ಸಾಧಕನ ಪ್ರತಿಯೊಂದು ಇಂದ್ರಿಯವು ತನ್ನ ತನ್ನ ದೇವತೆಯಲ್ಲಿ ಲೀನವಾಗು ತ್ತದೆ. ಅವನ ಕರ್ಮ ಹಾಗೂ ವಿಜ್ಞಾನಮಯ ಆತ್ಮ (ವಿಜ್ಞಾನಕೋಶದಲ್ಲಿ ಪ್ರತಿಷ್ಠಿತ ಆತ್ಮ), ಆತ್ಮ (ಹಿರಣ್ಮಯ ಕೋಶದಲ್ಲಿ ಪ್ರತಿಷ್ಠಿತ ಆತ್ಮ) ಹದಿನೈದು ಕಲೆಗಳು ಮತ್ತು ದೇವತಾ ಸಮೂಹದ ಪ್ರತಿದೇವತೆಗಳು (ಅಣುದೇಹಗಳಲ್ಲಿ ದೇವತೆಯೆಂದು ಕರೆಯುವುದನ್ನೇ, ಭೂಮಾದಲ್ಲಿ ಅದರ ವ್ಯಾಪಕ ಭಾವವನ್ನೇ ಪ್ರತಿದೇವತೆ ಎನ್ನುತ್ತಾರೆ). ಮುಂತಾದವರೆಲ್ಲ ಸಾಧಕನು ಮರಣಿಸಿದ ಬಳಿಕ,

---

(ಗ) ಆದಿತ್ಯ:– 'ಆದಿತ್ಯ' ಶಬ್ದದ ಅರ್ಥವೆಂದರೆ, ತೆಗೆದು ಕೊಳ್ಳುವವನು, ಇಲ್ಲಿ ಕರ್ಮಫಲ ಮತ್ತು ಆಯುಸ್ಸನ್ನು ತೆಗೆದುಕೊಳ್ಳು ವವನು ಎಂದು ಅರ್ಥ. ಕ್ಷಣ ಕ್ಷಣಕ್ಕೂ ಆಯಸ್ಸು ಕ್ಷಯಿಸುತ್ತಿ ರುತ್ತದೆ. ಕರ್ಮಫಲ ಭೋಗಕ್ಕಾಗಿ, ಜೀವವು ಒಂದು ಶರೀರ ವನ್ನು ತ್ಯಜಿಸಿ, ಇನ್ನೊಂದು ಶರೀರವನ್ನು ಧರಿಸಬೇಕಾಗುತ್ತದೆ. ಈ ಎಲ್ಲವೂ ಕಾಲ ಪ್ರವಾಹದ ಕಾರಣದಿಂದಾಗಿಯೇ ನಡೆಯುತ್ತದೆ. ಆದ್ದರಿಂದ ಸಮಯ ಇಲ್ಲವೆ ಕಾಲವೇ ಆದಿತ್ಯವಾಗಿದೆ. ಏಕೆಂದರೆ, ಕಾಲವೇ ಮನುಷ್ಯನ ಕರ್ಮಫಲ ಮತ್ತು ಆಯುಸ್ಸನ್ನು ತೆಗೆದುಕೊಳ್ಳು ತ್ತದೆ. ಹನ್ನೆರಡು ಮಾಸಗಳೇ ದ್ವಾದಶ ಆದಿತ್ಯರುಗಳು.

(ಘ) ಇಂದ್ರ:– 'ಇಂದ್ರ ಶಬ್ದದ ಅರ್ಥವೆಂದರೆ ವಿದ್ಯುತ್ತು ಸಿಡಿಲು ಇಲ್ಲವೆ ಕರ್ಮಶಕ್ತಿ.

(ಙ) ಪ್ರಜಾಪತಿ:– 'ಪ್ರಜಾಪತಿ' ಶಬ್ದದ ಅರ್ಥವೆಂದರೆ, ಯಜ್ಞ ಇಲ್ಲವೆ ಕರ್ಮ.

ಕೆಲವರು ಮನುಷ್ಯನ ಶರೀರದ ನಾಡಿಗಳ ಸಂಖ್ಯೆಯನ್ನು ಎಣಿಸು ವುದು ಶಕ್ಯವಿಲ್ಲ; ಎಂದು ಹೇಳುತ್ತಾರೆ. ಇವುಗಳ ಸಂಖ್ಯೆ ಎಷ್ಟೋ

ಪರಬ್ರಹ್ಮನಲ್ಲಿ ಲೀನವಾಗಿ ಒಂದಾಗುತ್ತಾರೆ. ಅರ್ಥಾತ್, ಮೋಕ್ಷ ಪಡೆದ ಸಾಧಕನು ಜೀವನ ಮರಣಕ್ಕಿಂತ–ಊರ್ಧ್ವಸ್ಥಾನ ಪಡೆಯುತ್ತಾನೆ. ಅವನು ಅವ್ಯಯ ಪರಬ್ರಹ್ಮನ ಪರಪದದೊಂದಿಗೆ ಒಂದಾಗುತ್ತಾನೆ.

ಬ್ರಹ್ಮನೊಂದಿಗೆ ಸಾಧಕನ ಕೂಟವನ್ನು ಒಂದು ಸುಂದರ ದೃಷ್ಟಾಂತ ದಿಂದ ತಿಳಿಸಿದ್ದಾರೆ. ಯಾವ ರೀತಿ, ನದಿಯು ಸಂಪೂರ್ಣವಾಗಿ ತನ್ನ ನಾಮ ಮತ್ತು ರೂಪಗಳನ್ನು ನೀಗಿ ಸಮುದ್ರದಲ್ಲಿ ಸೇರಿಹೋದ ಮೇಲೆ, ಸಮುದ್ರದಿಂದ ಭಿನ್ನವಾಗಿ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುವುದಿಲ್ಲವೋ, ಅದೇ ರೀತಿ, ಸಾಧಕನು ಸಹ, ತಾನು ಬ್ರಹ್ಮನಲ್ಲಿ ಸೇರಿದ ಬಳಿಕ, ಬ್ರಹ್ಮನಿಂದ ಭಿನ್ನವಾದ ಏನನ್ನೂ ಪಡೆಯುವುದಿಲ್ಲ; ಏನನ್ನೂ ತಿಳಿಯುವುದಿಲ್ಲ.

"ಯಥಾ ನದ್ಯಃ ಸ್ಯಂದಮಾನಾಃ ಸಮುದ್ರೇಽ ಸ್ತಂ ಗಚ್ಛಂತಿ
ನಾಮ ರೂಪೇ ವಿಹಾಯ
ತಥಾ ವಿದ್ವಾನ್ನಾಮರೂಪಾದ್ವಿಮುಕ್ತಃ ಪರಾತ್ಪರಂ
ಪುರುಷಮುಪೈತಿ ದಿವ್ಯಂ".

---

ಲಕ್ಷದಷ್ಟು ಇದೆ ಎನ್ನುವರು.ಬೇರೆ ಕೆಲವರಂತೂ ಎಷ್ಟೋ ಕೋಟಿ ಎನ್ನು ತ್ತಾರೆ. ಇದೆಲ್ಲವನ್ನು ನೋಡಿದರೆ, ಆ ಜನರು ಇವುಗಳನ್ನು ಎಣಿಸಿ ನೋಡಿರುವರೇನೋ ಎಂದೆನಿಸುತ್ತದೆ. ಮತ್ತೆ ಕೆಲವರು ಈ ನಾಡಿಗಳ ಸಂಖ್ಯೆ ಒಟ್ಟು ಮೂವತ್ತುಮೂರು ಕೋಟಿ ಎಂದು ಹೇಳುತ್ತಾರೆ. ಹೀಗೆ ದೇವತೆಗಳ ಸಂಖ್ಯೆಯು ಸಹ ಮೂವತ್ತುಮೂರು ಕೋಟಿಯಾಗಿದೆ. ವಾಸ್ತವವಾಗಿ ಮನುಷ್ಯರ ಶರೀರವನ್ನು ನಿಯಂತ್ರಿಸುವ ಸ್ನಾಯು ಹಾಗೂ ನಾಡಿ ಪುಂಜಗಳೇ,ಅವಿದ್ಯೆ ಮತ್ತು ಅಂಧ ವಿಶ್ವಾಸದ ಫಲವಾಗಿ ಅನೇಕ ರೂಪ ಮತ್ತು ಅನೇಕ ನಾಮಗಳಿಂದ, ಇಂದು ಮೂವತ್ತು ಮೂರು ಕೋಟಿ ದೇವತೆಗಳಲ್ಲಿ ಪರಿಣತವಾಗಿವೆ. ದೇವತೆಗಳ ಸಂಬಂಧ ದಲ್ಲಿ ಶಂಕರರು ಹೀಗೆ ಹೇಳುತ್ತಾರೆ.

"ಸರ್ವದ್ಯೋತನಾತ್ಮಕ ಅಖಂಡ ಚಿದ್ಯೈಕರಸಃ"

ಯಜ್ಞವಲ್ಕ್ಯರು ಹೀಗೆ ಹೇಳುತ್ತಾರೆ.

"ದ್ಯೋತತೇ ಕ್ರೀಡತೇ ಯಸ್ಮಾದುದ್ಯತೇ ದ್ಯೋತತೇ ದಿವಿ
ತಸ್ಮಾದ್ ದೇವ ಇತಿ ಪ್ರೋಕ್ತಃ ಸ್ತೂಯತೇ ಸರ್ವದೇವತೈಃ"



ಗಂಗೆಯನ್ನು ನೋಡಿ, ಇಂದು ಗಂಗೆಯ ನೀರು;ಎಂದು ಹೇಳಬಹುದು. ಅದೇ ರೀತಿ,ಅದು ಯಮುನೆಯ ನೀರು ಎಂದೂ, ಅಥವಾ ಸರಸ್ವತಿಯ ನೀರು ಎಂದೂ ಹೇಳಬಹುದು. ಆದರೆ, ಅವುಗಳೆಲ್ಲ ಸಮುದ್ರ ಸೇರಿದ ಬಳಿಕ ಅದ ರೊಂದಿಗೆ ಏಕಾಕಾರ ತಾಳುತ್ತವೆ. ಆಗ ಯಾವುದು ಗಂಗಾಜಲ? ಯಾವುದು ಯಮುನಾ ಜಲ? ಇನ್ನಾವುದು ಸರಸ್ವತಿಯ ಜಲ? ಹೀಗೆಲ್ಲ ಗುರುತಿಸಲಾರೆವು. ಬೇರೆ ಮಾಡಲಾರೆವು. ಅವುಗಳೆಲ್ಲ ಅಲ್ಲಿ ಇವೆ. ಆದರೆ ಸಮುದ್ರದ ಸತ್ತೆ ಯಲ್ಲಿ ತಮ್ಮ ನಾಮ ರೂಪಗಳನ್ನು ಕಳೆದುಕೊಂಡಿವೆ. ಸರಿಯಾಗಿ ಇದೇ ರೀತಿ, ಆತ್ಮಜ್ಞನು ಪರಮ ಪುರುಷನಲ್ಲಿ, ವಿರಾಟ ಪುರುಷನಲ್ಲಿ ಸೇರುತ್ತಾನೆ. ಆ ಕಾಲಕ್ಕೆ ಅವನ ಕ್ಷುದ್ರ ಅಸ್ತಿತ್ವಬೋಧೆಯು ಕೊನೆಗಾಣುತ್ತದೆ. ಮತ್ತು ಈ ವಿರಾಟ ಸತ್ತೆಯೊಂದಿಗೆ ಒಂದಾದ ಬಳಕ ಸಹ ವಿರಾಟ ಆಗಿಬಿಡುತ್ತದೆ. ಸಾಧನೆ ಯನ್ನು ಆತ್ಮ ಪ್ರಸಾರಕ್ಕೋಸುಗ ಮಾಡುತ್ತಾರೆಯೇ ಹೊರತು ಆತ್ಮವನ್ನು ಧ್ವಂಸ ಮಾಡಲಿಕ್ಕಲ್ಲ. ಆದ್ದರಿಂದ, ಸಮಾಧಿಯೆಂದರೆ ಆತ್ಮಹತ್ಯೆಯಲ್ಲ; ಆತ್ಮ ವಿಸ್ಮೃತಿಯಷ್ಟೇ.

ಸ ಯೋ ಹ ವೈ ತತ್ ಪರಮಂ ಬ್ರಹ್ಮ ವೇದ ಬ್ರಹ್ಮೈ ಭವತಿ,
ನಾಸ್ಯಾ ಬ್ರಹ್ಮವಿದ್ ಕುಲೇ ಭವತಿ,
ತರತಿ ಶೋಕಂ ತರತಿ ಪಾಪ್ಮಾನಂ,
ಗುಹಾ ಗ್ರಂಥಿಭ್ಯೋ ವಿಮ್ಯುಕ್ತೋ ಮೃತೋ ಭವತಿ.

---

ದೇವತಾ ಎರಡು ಪ್ರಕಾರದವುಗಳು.ಆತ್ಮದ ಪ್ರಕಾಶವು ಇಂದ್ರಿಯ ಗಳ ಮೂಲಕ ಆಗುತ್ತದೆ. ಆದ್ದರಿಂದ, ಇಂದ್ರಿಯ ಸಮೂಹವನ್ನು ದೈಹಿಕ ದೇವತಾ ಎಂದು ಕರೆಯುತ್ತಾರೆ. ಮತ್ತು ವಿಶ್ವಬ್ರಹ್ಮಾಂಡದ ಪ್ರಕಾಶವು ಮತ್ತು ನಿಯಂತ್ರಣವು ಯಾವ ದೇವತಾ ಸಮೂಹದ ಮೂಲಕ ಆಗುವುದೋ,ಅವುಗಳನ್ನು ಬ್ರಾಹ್ಮೀ ದೇವತಾ ಎಂದು ಕರೆಯು ತ್ತಾರೆ. ಇವೆರಡರ ಸಂಖ್ಯೆ ಮೂವತ್ತುಮೂರು. ಆದ್ದರಿಂದ, ಬ್ರಾಹ್ಮೀ ದೇವತಾ ಗಣವು ಪ್ರತಿಯೊಂದು ದೈಹಿಕ ದೇವತಾ ಗಣದ ಪ್ರತಿದೇವತೆ ಗಳಾಗಿವೆ. ಈ ದೈಹಿಕ ದೇವತಾಗಣವು ಪ್ರತಿದೇವತೆಗಳಲ್ಲಿ ಲಯ ಹೊಂದುತ್ತವೆ. ಮತ್ತು ಪ್ರತಿ ದೇವತಾಗಣವು ಬ್ರಹ್ಮನಲ್ಲಿ ಸೇರುತ್ತವೆ. ಆದ್ದರಿಂದ, ಮೋಕ್ಷ ಪ್ರಾಪ್ತಿಹೊಂದಿದ ಸಾಧಕನು ಬ್ರಹ್ಮನಾಗುತ್ತಾನೆ.

ಪರಮ ಬ್ರಹ್ಮನೇ ಜಗದ ದ್ರಷ್ಟಾ. ಮತ್ತು ಸೃಷ್ಟಿಯ ರಚನೆಯೂ

ಪರಮ ಬ್ರಹ್ಮವನ್ನು ಅರಿತವನು ಬ್ರಹ್ಮನೇ ಆಗುತ್ತಾನೆ. ಏಕೆಂದರೆ ಜೀವಿಯು ತನ್ನ ವಿಷಯದ ರೂಪವನ್ನೇ ಪರಿಗ್ರಹಿಸುತ್ತಾನೆ. ಬ್ರಹ್ಮನನ್ನೇ ವಿಷಯವಾಗಿರಿಸಿಕೊಂಡವರು, ಮರಣಾನಂತರ ಬ್ರಹ್ಮಲೋಕದಲ್ಲಿಯೇ ನೆಲೆಸುತ್ತಾರೆ. ಅಂದರೆ, ಬ್ರಹ್ಮವೇ ಆಗುತ್ತಾರೆ. ಈ ಪ್ರಕಾರ, ಬ್ರಹ್ಮವಿದನ ಕುಲದಲ್ಲಿ ಅಬ್ರಹ್ಮವಿದನು ಜನಿಸುವುದಿಲ್ಲ. ಕು + ಲಾ—ಧಾತುವಿಗೆ 'ಡ' ಪ್ರತ್ಯಯ ಸೇರಿಸಿ 'ಕುಲ' ಶಬ್ದದ ಉತ್ಪತ್ತಿಯಾಗಿದೆ. 'ಕು' ಎಂದರೆ ಪೃಥ್ವೀ. 'ಲಾ' ಧಾತುವಿನ ಅರ್ಥವೆಂದರೆ ಧರಿಸು ಎಂದು. ಪೃಥ್ವಿಯು ಯಾವುದನ್ನು ಧರಿಸುವುದೋ ಅದುವೇ ಕುಲ. ಮಾನವ ವಂಶವನ್ನು ಪೃಥ್ವಿಯು ಧಾರಣ ಮಾಡುತ್ತದೆ. ಆದ್ದರಿಂದ ವಂಶವನ್ನು ಕುಲ ಎನ್ನುತ್ತಾರೆ. ಗುರುಶಿಷ್ಯರ ಪರಂಪರಾಗತ ಬ್ರಹ್ಮಸೂತ್ರವು ಈ ಪೃಥ್ವಿಯನ್ನು ಧರಿಸಿದೆ ಇಲ್ಲವೆ ಈ ಪೃಥ್ವಿಯಿಂದ ಧೃತವಾಗಿದೆ. ಎಂಬ ಅರ್ಥದಲ್ಲಿ, ಇಲ್ಲಿ, ಕುಲ ಶಬ್ದವನ್ನು ಬಳಸಿದ್ದಾರೆ. ಮತ್ತು ಈ ಕುಲಗತ ಭಾವದಿಂದಲೇ ಬ್ರಹ್ಮವಿದ್ಯೆಯು ರಕ್ಷಿಸಲ್ಪಟ್ಟಿದೆ. ಎಂದೂ ಹೇಳಿದ್ದಾರೆ. ಬ್ರಹ್ಮವಿದರು ಸ್ವತಃ ಸರ್ವ ಶೋಕಗಳ ಮೇಲೆ ಹೋಗುತ್ತಾರೆ. ಎಲ್ಲ ಪಾಪಗಳ ಊರ್ಧ್ವಕ್ಕೆ ಹೋಗುತ್ತಾರೆ. ಸಾಧನೆಯ ಮೂಲಕ ಸಾಧಕನ

---

ಒಂದು ಕ್ರಿಯೆ. ಪ್ರಣವ ಇಲ್ಲವೆ ಓಂಕಾರ ಧ್ವನಿಯು ಪರಮಾತ್ಮನ ಈ ಸೃಷ್ಟಿ–ಕಲ್ಪನೆಯ ಶಬ್ದವಷ್ಟೇ. ಅ, ಉ, ಮ–ಈ ಮೂರು ಅಕ್ಷರಗಳಲ್ಲಿ, ಅ ಸೃಷ್ಟಿಯ ಬೀಜ, ಉ ಸ್ಥಿತಿಯ ಅಥವಾ ಪಾಲನೆಯ ಬೀಜ, ಮತ್ತು ಮ ಧ್ವಂಸದ ಬೀಜ. ಅ–ಸೃಷ್ಟ್ಯಾತ್ಮಕ ಅಕ್ಷರ. ಆದ್ದರಿಂದ ಸೃಷ್ಟಿ–ಕರ್ಮ–ವಿಶಿಷ್ಟ ಬ್ರಹ್ಮನಿಗೆ 'ಬ್ರಹ್ಮಾ + ಅ) ಅನ್ನುತ್ತಾರೆ. ಓರ್ವ ವ್ಯಕ್ತಿಯ ಹೆಸರು ರಾಮಬಾಬು ಎಂದು ತಿಳಿಯಿರಿ. ಅವನು ಮಗನು ಅವನನ್ನು ಬಾಬೂಜಿ ಎಂದು ಕರೆಯುತ್ತಾನೆ. ಮತ್ತು ಅವನ ಶಿಷ್ಯನು ಮಾಸ್ತರಸಾಹೇಬ ಎನ್ನುತ್ತಾನೆ. ಇವುಗಳೆಲ್ಲ ರಾಮಬಾಬುವಿನ ವಿಶೇಷ ಅವಸ್ಥೆಯ ವಿಶೇಷ ಕರ್ಮಕ್ಕೆ ಸಂಬಂಧಿಸಿದ ಉಪಾಧಿಗಳಷ್ಟೇ. ವಾಸ್ತವದಲ್ಲಿ ರಾಮಬಾಬು ಒಂದೇ ವ್ಯಕ್ತಿ ಸಗುಣ ಬ್ರಹ್ಮನಲ್ಲಿ ಸೃಷ್ಟಿ, ಸ್ಥಿತಿ ಮತ್ತು ಲಯ ಎಂಬೀ ಮೂರು ಪ್ರಕಾರದ ಮುಖ್ಯ ಕ್ರಿಯೆಗಳಿವೆ. ಬ್ರಹ್ಮನ ಮಾನಸಿಕ ಚಿಂತನಧಾರೆಯಿಂದಲೇ ಸೃಷ್ಟಿ, ಸ್ಥಿತಿ ಮತ್ತು ಲಯ ಎಂಬೀ ಮೂರು ಪ್ರಕಾರದ ಕ್ರಿಯೆಗಳು ನಡೆದಿರುತ್ತವೆ. ಅವನ ಕಲ್ಪನೆಯು ಮುಗಿಯುತ್ತ ಬಂದಂತೆ, ಈ ಪ್ರಕಾರದ ಕ್ರಿಯೆಗಳ ಪ್ರಕಾಶವೂ



ಕುಂಡಲಿನೀ ಶಕ್ತಿಯು ಗುಹಾಗ್ರಂಥಿ (ಹೃದಯ ಗ್ರಂಥಿ)ಯನ್ನು ಭೇದಿಸಿ ನಡೆದರೆ,ಆ ಸಮಯಕ್ಕೆ ಅವರು ಮುಕ್ತರಾಗಿ ಅಮೃತತ್ವವನ್ನು ಪಡೆಯುತ್ತಾರೆ. ಅವರು ಎಂದೆಂದಿಗೂ ಮೃತ್ಯುವಿನಿಂದ ಬೇರೆಯಾಗುತ್ತಾರೆ. ಶ್ರುತಿಯಲ್ಲಿ ಬೇರೆಡೆಗೂ ಸಹ ಹೀಗೆ ಹೇಳಿದ್ದಾರೆ.

"ಭಿದ್ಯತೇ ಹೃದಯ ಗ್ರಂಥಿಶ್ಚಿದ್ಯಂತೇ ಸರ್ವ ಸಂಶಯಾಃ
ಕ್ಷೀಯಂತೇ ಚಾಸ್ಯ ಕರ್ಮಾಣಿ ತಸ್ಮಿನ್ ದೃಷ್ಟೇ ಪರಾವರೇ"
ನ ಚ ಜಲವೋ ನ ಚ ಬ್ರಹ್ಮ ನ ಚಾನ್ಯದಪಿ ಕಿಂಚನ,
ನ ತಸ್ಯ ವರ್ಣಾಃ ವಿದ್ಯಂತೇ ನಾಶ್ರಮಾಶ್ಚ ತಥೈವ ಚ

–ಪಾಶುಪತ ಬ್ರಹ್ಮ.

ಈ ಅವಸ್ಥೆಯಲ್ಲಿ ಆ ಮುಕ್ತ ಪುರುಷನನ್ನು ಯಾವ ಜೀವವೆಂದು ಕರೆಯಬಹುದು? ಆ ಮಹಾಪುರುಷನ ಗುಹಾಗ್ರಂಥಿ ಬಿಚ್ಚಿದೆ. ಸಂಸ್ಕಾರ ತೀರಿವೆ. ಅದರಿಂದ ಬ್ರಹ್ಮನಲ್ಲಿ ಲೀನವಾಗಿದ್ದಾನೆ. ಅವನು ಬ್ರಹ್ಮ, ವಿಷ್ಣು, ಮಹೇಶರಿಗಿಂತ ಮೇಲಿನ ಸ್ಥಾನ ಪಡೆದಿದ್ದಾನೆ. ಬ್ರಹ್ಮನು ಯಾವ ವರ್ಣವನ್ನೂ ಒಳಗೊಂಡಿಲ್ಲ. ಅವನ ಚಿಂತನವು ವರ್ಣಾತ್ಮಕವಾಗಿದೆಯಷ್ಟೇ. ಚಿಂತನದ ತರಂಗಗಳಲ್ಲಿರುವ ಧ್ವನಿಯೊಂದಿಗೆ ವರ್ಣ (ಬಣ್ಣ) ವಿರುತ್ತದೆ. ಈ ವರ್ಣ ಇಲ್ಲವೆ ಧ್ವನಿ ಸಮೂಹವು ವಿಶೇಷ ಗುಣಗಳ ದ್ಯೋತಕವಾಗಿವೆ.

---

ಸಹ ನಿಲ್ಲುತ್ತದೆ. ಹೇಗೆಂದರೆ, ನಾವು ಮನದೊಳಗೆ ಬಾಗಲಪುರದ ಚಿಂತೆ ಮಾಡಿದರೆ, ನಮ್ಮ ಮಾನಸ–ಪಟದಲ್ಲಿ ಬಾಗಲಪುರದ ಸುಸ್ಪಷ್ಟ ಚಿತ್ರವು ಮೂಡುತ್ತದೆ. ಮತ್ತು ಈಗ ಬಾಗಲಪುರದ ಚಿಂತೆಯನ್ನು ಬಿಟ್ಟು ಬಿಟ್ಟರೆ, ಆ ಕೂಡಲೇ ಆ ಚಿತ್ರವು ಮಾನಸಪಟದಲ್ಲಿಯೇ ವಿಲೀನವಾಗುತ್ತದೆ. ಅದಾದ ಬಳಿಕ, ಬೇರಾವ ಪ್ರಕಾರದ ಚಿಂತೆಯನ್ನೂ ಮಾಡುವುದಿಲ್ಲ. ಅಂದರೆ, ಸರ್ವ ಚಿಂತೆಯ ಪರಿತ್ಯಾಗ ಮಾಡುತ್ತೇವೆ. ಆ ಕಾಲಕ್ಕೆ ಮನದ ಅಸ್ತಿತ್ವವೂ ಇಲ್ಲವಾಗುತ್ತದೆ. ಆದ್ದರಿಂದ ಬ್ರಹ್ಮಾ, ವಿಷ್ಣು, ಮತ್ತು ಮಹೇಶರೆಲ್ಲ ಬ್ರಹ್ಮನ ಬೇರೆ ಬೇರೆ ಮಾನಸಿಕ ಕ್ರಿಯೆಗಳ ಹೆಸರುಗಳಷ್ಟೇ. ಸಾಧಕನು ಮಾನಸ–ಸ್ತರದ ಊರ್ಧ್ವಕ್ಕೇರಿ, ನಿರ್ವಿಕಾರಿ, ಶುದ್ಧ ಬ್ರಹ್ಮ ಲೋಕದಲ್ಲಿ ಸ್ಥಿತಿ–ಲಾಭ ಪಡೆಯುತ್ತಾನೆ. ಆ ಕಾಲಕ್ಕೆ ಅವನು ಈ ಮೂರೂ ದೇವತೆಗಳಿಗಿಂತ ಶ್ರೇಷ್ಠತ್ವವನ್ನು ಪಡೆಯುತ್ತಾನೆ. ಇದುವೇ ಮಾನವನ ಸ್ವ-ರೂಪಸ್ಥಿತಿ. ಇದುವೇ ಭಾವಾ

| ವರ್ಣ | ಗುಣ. | ಬಣ್ಣ |
|---|---|---|
| ಬ್ರಾಹ್ಮಣ. | ಸತ್ತ್ವ. | ಶುಭ್ರ (ಬಿಳಿದು). |
| ಕ್ಷತ್ರಿಯ. | ಸತ್ತ್ವ + ರಜಃ | ರಕ್ತ (ಕೆಂಪು) |
| ವೈಶ್ಯ. | ರಜಃ + ತಮಃ | ಪೀತ (ಹಳದಿ) |
| ಶೂದ್ರ. | ತಮಃ | ಕೃಷ್ಣ (ಕಪ್ಪು) |

ಬ್ರಹ್ಮನು ಸ್ವಯಂ ವರ್ಣಾತೀತನು. ಆದ್ದರಿಂದ ಬ್ರಾಹ್ಮಣಾದಿ ಚತುರ್ವರ್ಣ ಇಲ್ಲವೆ ಚತುರಾಶ್ರಮದ ಹೊರಗೆ ಅವನಿದ್ದಾನೆ. ಮಾನವ ದೇಹದ ತ್ರಿಕುಟಿಯಲ್ಲಿಯೇ, ವರ್ಣವು ಕೊನೆಗೊಳ್ಳುತ್ತದೆ. ಮತ್ತು ಅವರ್ಣವು ಶುರುವಾಗುತ್ತದೆ. ಆದ್ದರಿಂದ ಅವರ್ಣನಾಗುವ ಸಾಧನೆಗಾಗಿ, ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ, ತ್ರಿಕುಣಿಯನ್ನೇ ಸ್ವೀಕರಿಸಬೇಕಾಗುತ್ತದೆ.

"ನ ತಸ್ಯ ಧರ್ಮೋऽಧರ್ಮಶ್ಚ ನ ನಿಷೇಧೋ ವಿಧಿರ್ನ ಚ,
ಯಥಾ ಬ್ರಹ್ಮಾತ್ಮಕಂ ಸರ್ವಂ ವಿಭಾತಿ ತತ ಏವ ತು."

–ಪಾಶುಪತ ಬ್ರಹ್ಮ.

ಬ್ರಹ್ಮವಿದನೆದುರು ಧರ್ಮ, ಅಧರ್ಮಗಳ ಭೇದ ಜ್ಞಾನವಿರದು. ವಿಧಿ–ನಿಷೇಧಗಳ ಭೇದ ಜ್ಞಾನವೂ ಇರದು. ಅವನೆದುರು ಎಲ್ಲವೂ ಒಂದೇ ಆದ ಮೇಲೆ ಅವನು ಏನನ್ನು ಹಿಡಿಯುತ್ತಾನೆ? ಏನನ್ನು ಬಿಡುತ್ತಾನೆ? ಬ್ರಹ್ಮವಿದನೂ ಉಣ್ಣುತ್ತಾನೆ; ಕುಡಿಯುತ್ತಾನೆ; ಏಳುತ್ತಾನೆ; ಕೂಡ್ರುತ್ತಾನೆ. ಯಾವಾಗಲೂ ಬ್ರಹ್ಮ ಸಾಧನೆಯಲ್ಲಿಯೇ ನಿರತನಾಗಿರುತ್ತಾನೆ. 'ನಾನು ಭಾವ'ದಲ್ಲಿಯೇ ನೆಲೆಸಿರುತ್ತಾನೆ. ಅವನು ತನ್ನ ಸಣ್ಣ ದೊಡ್ಡ ಕಾರ್ಯಗಳನ್ನೆಲ್ಲ ಬ್ರಹ್ಮನಿಗೇ ಅರ್ಪಿಸಿರುತ್ತಾನೆ. ಆದ್ದರಿಂದ, ತಾನು ಗೆಯ್ದ ಕರ್ಮದ ಫಲವನ್ನು ಭೋಗಿಸುವ ಪ್ರಸಂಗವೂ ಅವನಿಗಿಲ್ಲ. ಅವನಿಗೆ ಶರೀರವೊಂದು ಕೇವಲ ಯಂತ್ರ. ಅದರ ಮುಖಾಂತರ ಪ್ರಾರಬ್ಧವನ್ನು ಭೋಗಿಸಬೇಕಷ್ಟೇ. ಆದರೆ ಬೇರಾವುದೇ ಕರ್ಮವಾಗಲಿ, ಕರ್ಮಫಲವಾಗಲಿ, ಅವನನ್ನು ಮುಟ್ಟಲಾರದು.

---

ಶೀತ ಶಿವಾವಸ್ಥೆ. ತಮ್ಮ ಪರಿಚಯ ಕೇಳಿದಾಗ ಭಗವಾನ ಶಂಕರಾಚಾರ್ಯರು, ಹೀಗೆ ಹೇಳಿದ್ದಾರೆ.

"ಮನೋಬುದ್ಧ್ಯಹಂಕಾರ ಚಿತ್ತಾನಿ ನಾಹಂ,
ನ ಚಶ್ರೋತ್ರ ಜಹ್ವೇ ನ ಚ ಘ್ರಾಣ ನೇತ್ರೇ,
ನ ವ್ಯೋಯ ಭೂಮಿರ್ನ ತೇಜೋ ನ ವಾಯುಃ
ಚಿದಾನಂದ ರೂಪೋ ಶಿವೋಹಂ ಶಿವೋಹಂ."



"ತದಾ ದುಃಖಾದಿ ಭೇದೋऽ ಯಮಾ ಭಾಸೋऽ ಪಿ ನ ಭಾಸತೇ,
ಜಗತ್ ಜೀವಾದಿ ರೂಪೇನ ಪಶ್ಯನ್ನಪಿ ಪರಾತ್ಮವಿದ್."

—ಪಾಶುಪತ ಬ್ರಹ್ಮ.

ಸುಖ ದುಃಖಗಳ ಬೋಧೆಯು ಮಾನಸಿಕ ವಿಕೃತಿಯಷ್ಟೇ. ಸಮಾಧಿಯಲ್ಲಿ ಪೂರ್ಣ ಸಾಮ್ಯವಿರುತ್ತದೆ. ಆ ಕಾಲಕ್ಕೆ ಸುಖ ದುಃಖಗಳ ನೆರಳು ಸಹ ಇರದು. ಆಗ ಇರುವುದೆಂದರೆ, ಕೇವಲ ಆನಂದ ಘನ ಮೂರ್ಛೆಯಷ್ಟೇ.

ಈ ಸಂಬಂಧದಲ್ಲಿ ಒಂದು ಕಥೆಯು ನೆನಪಿಗೆ ಬರುತ್ತದೆ. ನವದ್ವೀಪದಲ್ಲಿ ರಾಮನಾಥನೆಂಬ ಒಬ್ಬ ಪಂಡಿತನಿದ್ದ. ಅವನಿಗೆ ಮೈಮೇಲೆ ಎಚ್ಚರವೂ ಇರುತ್ತಿರಲಿಲ್ಲ. ನದಿಯಾದ ದೊರೆಯು ಒಮ್ಮೆ ಆರ್ಥಿಕ ನೆರವು ಒದಗಿಸುವ ಇಚ್ಛೆಯಿಂದ ಅವನಿಗೆ ಕೇಳಿದನು: "ಏನು, ತಮಗೇನಾದರೂ ಕೊರತೆಯಿದೆಯೇ". ಆ ಕಾಲಕ್ಕೆ ಪಂಡಿತನು ಸತ್ಯಲೋಕದಲ್ಲಿ ಮಗ್ನನಾಗಿದ್ದನು. ಆದ್ದರಿಂದ ಅವನು ಹೇಳಿದನು: "ಅಹುದು; ಒಂದು ಶ್ಲೋಕದ ಅರ್ಥ ತಿಳಿಯದ ಕಾರಣ ಸ್ವಲ್ಪ ಕೊರತೆಯಿತ್ತು. ಆದರೆ ನಾನೀಗ ಅದನ್ನು ತಿಳಿದುಕೊಂಡೆ." ಆಗ ಮಹಾರಾಜನು ನುಡಿದನು: "ಹಾಗಲ್ಲ; ನಾನು ಆರ್ಥಿಕ ಅಡಚಣೆ ಕುರಿತು ಹೇಳುತ್ತಿದ್ದೇನೆ." ರಾಮನಾಥನು ರಾಜನಿಗೆ ಹೀಗೆ ಹೇಳಿದನು: "ನೋಡಿ; ಈ ಮನೆತನದ ವಿಷಯದ ಬಗ್ಗೆ ನೀವು ನನ್ನ ಗೃಹಿಣಿಯನ್ನೇ ಕೇಳಿ ನೋಡಿ." ಮಹಾರಾಜನು ಅಗತ್ಯವಾಗಿ ಅವನ ಮಡದಿಯನ್ನೂ ಕೇಳಿದನು. ಪತಿಯು ಹೇಗೋ, ಹಾಗೆಯೇ ಅವನ ಪತ್ನಿ ಸಹ. ಅವಳು ರಾಜನಿಗೆ ಸ್ಪಷ್ಟ ರೂಪದಲ್ಲಿ ಹೀಗೆ ಹೇಳಿದಳು."ನೋಡಿ; ಮನೆಯಲ್ಲಿ ಅಕ್ಕಿಯಿದೆ;ಹುಣಸೆ ಮರದಲ್ಲಿ ಎಲೆಗಳಿಗೇನೂ ಕೊರತೆಯಿಲ್ಲ. ಹುಣಸೆ ಎಲೆಯ ಸಾರು ಅವರಿಗೆ ತುಂಬಾ ಸ್ವಾದಿಷ್ಟಕರವೆನಿಸುತ್ತದೆ. ಈಗ ನಮಗೆ ಬೇರಾವುದೇ ವಸ್ತುವಿನ ಅಗತ್ಯವು ಕಂಡು ಬರುತ್ತಿಲ್ಲ."

ಆದ್ದರಿಂದ, ಮಹದಾದರ್ಶದಿಂದ ಪ್ರಭಾವಿತನಾದ ವ್ಯಕ್ತಿಯು ಮೇಲೆ ಮೇಲೆ ಹೋದಂತೆ,ಅವನ ಸುಖ-ದುಃಖಾದಿಗಳ ಬೋಧೆಯು ಕಡಿಮೆಯಾಗುತ್ತ ಹೋಗುತ್ತದೆ. ಜಾದೂಗಾರನು ಕಲ್ಲಿನ ತುಂಡನ್ನು ಹಕ್ಕಿಯನ್ನಾಗಿ ಮಾಡುತ್ತಾನೆ. ಮರಳಿ ಆ ಹಕ್ಕಿಯನ್ನು ಕಲ್ಲಿನ ತುಂಡನ್ನಾಗಿಸುತ್ತಾನೆ. ಇದೊಂದು ಅಚ್ಚರಿಯ ಆಟ; ಈ ಜಾದೂ ಆಟ ಕಂಡು ಪ್ರೇಕ್ಷಕರು ದಂಗಾಗುತ್ತಾರೆ. ಆದರೆ ಜಾದುಗಾರನಲ್ಲಿ ಯಾವುದೇ ವಿಕಾರ ಕಾಣಬರದು. ಏಕೆಂದರೆ, ಜಾದುಗಾರನು ಜಾದುವಿನೊಳಗಿನ ಕೌಶಲ್ಯವನ್ನು ಚೆನ್ನಾಗಿ ಅರಿತಿದ್ದಾನೆ. ಪ್ರೇಕ್ಷಕರು ಮಾತ್ರ ಆಟ ಕಂಡು ದಂಗುಬಡಿದಂತಾಗುತ್ತಾರೆ; ಸ್ಥಂಭೀಬೂತರಾಗುತ್ತಾರೆ. ಜಾದೂ

ಗಾರನೂ ಆಟವನ್ನು ನೋಡುತ್ತಾನೆ. ಆಗರೆ, ಅವನು ದಂಗಾಗುವುದಿಲ್ಲ. ಅವನು ಆಟವು ಸರಿಯಾಗಿ ಸಾಗಿದೆಯೋ ಇಲ್ಲವೋ, ಎಂಬುದನ್ನು ತಿಳಿದು ಕೊಳ್ಳಲೆಂದು ಮಾತ್ರ ಆಟವನ್ನು ನೋಡುತ್ತಾನೆ. ಈ ಜಗತ್ತು ಸಹ ಅದೇ ಪ್ರಕಾರದ ಒಂದು ಜಾದೂ ಆಟವಾಗಿದೆ. ಬ್ರಹ್ಮವಿದನು ಈ ಆಟವನ್ನೇನೋ ನೋಡುತ್ತಾನೆ; ಆದರೆ ಅದರಿಂದ ವಿವಶನಾಗುವುದಿಲ್ಲ. ಅವನು ಜಗತ್, ಜೀವರೊಂದಿಗಿದ್ದರೂ ಸಹ, ಅನಾಸಕ್ತನಾಗಿರುತ್ತಾನೆ. ವಿಷಯ ಭೋಗಿಗಳ ನಡುವೆ ಇದ್ದರೂ ಸಹ, ಅವನು ನಿರಾಸಕ್ತನಾಗಿರುತ್ತಾನೆ. ಚೈತನ್ಯ ಮಹಾಪ್ರಭು ತನ್ನ ಶಿಷ್ಯನಿಗೆ ಹೀಗೆ ಹೇಳಿದ್ದಾನೆ:

"ಸ್ಥಿರ ಹೋಇಯಾ ಗೃಹೇ ಜಾಹ ನಾ ಹೋಯ ವಾತುಲ,
ಕ್ರಮೇ ಕ್ರಮೇ ಪಾಯ ಲೋಕ ಭಕ್ತಿ ಸಿಂಧು ಕೂಲ ॥
ಮರ್ಕಟ ವೈರಾಗ್ಯ ನಾ ಕರೋ ಲೋಕ ದೇಖಾಇಯಾ,
ಯಥಾ ರೀತಿ ವಿಷಯ ಭುಂಜ ನಿರಾಸಕ್ತ ಹೋಇಯಾ ॥
ಅಂತರ ನಿಷ್ಠಾ ಕರೋ ಬಾಹ್ಯಲೋಕ ವ್ಯವಹಾರ,
ಅವಶ್ಯ ಇ ಕೃಷ್ಣ ತೋಮಾ ಕರಿವೇನ ಉದ್ಧಾರ"

—ಕೃಷ್ಣದಾಸ.

'ನ ತತ್ ಪಶ್ಯತಿ ಚಿದ್ರೂಪಂ ಬ್ರಹ್ಮವಸ್ತ್ವೇವ ಪಶ್ಯತಿ,
ಧರ್ಮ ಧರ್ಮಿತ್ವ ವಾರ್ತಾ ಚ ಭೇದೇ ಸತಿಹಿ ಭಿದ್ಯತೇ ॥'

—ಪಾಶುಪತ ಬ್ರಹ್ಮ.

ಬ್ರಹ್ಮವಿದನು ಚೈತನ್ಯ ಸ್ವರೂಪನು. ಅವರು ಪ್ರತಿಯೊಂದು ವಸ್ತುವನ್ನು, ಅದರ ಯೋಗ್ಯತೆಗೆ ಅನುಸರಿಸಿ ಅರಿಯುತ್ತಾನೆ. ಸಾಧಾರಣ ಬುದ್ಧಿಯುಳ್ಳ ಜನರಿಗೆ ನೀರು ಮತ್ತು ಬರ್ಫ ಎರಡೂ ಬೇರೆ ಬೇರ ವಸ್ತುಗಳಾಗಿವೆ. ಒಂದಿನಿತು ಜ್ಞಾನವಿದ್ದವರಿಗೂ ಸಹ, ಬರ್ಫವು ಹೆಪ್ಪುಗಟ್ಟಿದ ನೀರಷ್ಟೇ ಎಂಬುದು ತಿಳಿದೇ ಇದೆ. ಸರಿಯಾಗಿ ಇದೇ ರೀತಿ, ಸಾಧಾರಣ ಮನುಷ್ಯನ ದೃಷ್ಟಿಯಲ್ಲಿ ಗಡಿಗೆ ಮತ್ತು ಕುಂಬಾರ, ಧರ್ಮ ಮತ್ತು ಧರ್ಮೀ ಇವುಗಳ ಮಧ್ಯೆ ದೊಡ್ಡ ಭೇದವು ಕಾಣುತ್ತದೆ. ಅಲ್ಲಿ ಸಹ ಬ್ರಹ್ಮವಿದನು ಅಭೇದ ಭಾವ ಹೊಂದಿರುತ್ತಾನೆ. ಜಗತ್ತು ಮತ್ತು ಬ್ರಹ್ಮಗಳು ಎರಡು ಬೇರೆ ಬೇರೆ ಸತ್ತೆಗಳೇನು? ಅವುಗಳು ಒಂದರಿಂದ ಇನ್ನೊಂದು ಪೃಥಕ್ ಆಗಿವೆಯೆ? ಇವೆರಡರಲ್ಲಿ ಒಂದು ಸತ್ಯ ಮತ್ತೊಂದು ಮಿಥ್ಯೆಯೇನು? ಇವೆರಡರಲ್ಲಿಯ ಭಿನ್ನತೆಯು ಸತ್ಯವೇ? ಅಥವಾ ಅಭಿನ್ನತೆಯು ಸತ್ಯವೇ? ಈ ಪ್ರಕಾರದ ಪ್ರಶ್ನೆಯು



ಇಲ್ಲವೆ ಭಾವಧಾರೆಯು ಬ್ರಾಹ್ಮೀ ದೃಷ್ಟಿಸಂಪನ್ನ ವ್ಯಕ್ತಿಯ ಹೃದಯದಲ್ಲಿ ಏಳುವುದೇ ಇಲ್ಲ.

ಭೇದಾ ಭೇದಸ್ತಥಾ ಬೇದಃ ಸಾಕ್ಷಾತ್ ಪರಮಾತ್ಮನಃ
ನಾಸ್ತಿ ಸ್ವಾತ್ವಾತಿರೇಕೇಣ ಸ್ವಯಮೇವಾಸ್ತಿ ಸರ್ವದಾ.

—ಪಾಶುಪತ.

ಜಗತ್ತು ಮತ್ತು ಬ್ರಹ್ಮ ಎಂಬೆರಡು ಸತ್ತೆಗಳಿವೆ. ಇಲ್ಲವೆ ಒಂದು ಇನ್ನೊಂದರಿಂದ ಅಭಿನ್ನವಾಗಿವೆ. ಈ ಪ್ರಕಾರದ ವಿಚಾರವೇ ಮೋಕ್ಷಪೂರ್ಣವಾಗಿದೆ. ಬ್ರಹ್ಮವಿದನಿಗೆ ಜಗತ್ತು ತನ್ನ ವಿಕಾಸವೇ ಎಂದು ಅನುಭವವಾಗುತ್ತದೆ. ನಾವೇ ಏನೆಲ್ಲ ಆಗಿದ್ದೇವೆ, ಎಂದು ಅವರು ತಿಳಿಯುತ್ತಾರೆ. ರಾಮಣ್ಣ ಮತ್ತು ಶ್ಯಾಮಣ್ಣ ಇಬ್ಬರೂ ಲೌಕಿಕ ದೃಷ್ಟಿಯಿಂದ ಬೇರೆ ಬೇರೆ ಸತ್ತೆಗಳೇ. ಆದರೆ ಬ್ರಾಹ್ಮೀ ದೃಷ್ಟಿಯಲ್ಲಿ ಆ ಭೇದವು ಹೇಗೆ ಕಾಣುವುದೆಂಬುದು ಗೊತ್ತೇ? ಹೇಗೆಂದರೆ ನರ ಮತ್ತು ಮನುಷ್ಯ, ಸಮುದ್ರ ಮತ್ತು ಸಾಗರ, ಪತ್ನೀ ಮತ್ತು ಕಲತ್ರಗಳಲ್ಲಿರುವ ಭೇದಗಳಂತೆ. ಸಾಧಕರ ದೃಷ್ಟಿಯಲ್ಲಿ ಭೇದಾಭೇದಗಳೇನೂ ಇರವು. ಒಂದು ವೇಳೆ, ನಾನು ನನ್ನ ಮನದಲ್ಲಿ ಲಂಡನ್ನಿನ ಕಲ್ಪನೆ ಮಾಡಿಕೊಂಡರೆ, ಆಗ ಕಲ್ಪಿತ ಲಂಡನ್ ಮತ್ತು ನನ್ನ ಮಧ್ಯೆ ನಿಜವಾಗಿ ಯಾವುದಾದರೂ ಭೇದವಿದೆಯೇ? ಅದು ಕೇವಲ ನನ್ನ ವಿಶೇಷ ರೂಪವಷ್ಟೇ.

'ಅಧಿಷ್ಠಾನ ಮನೌಪಮ್ಯಮವಾ ಙ್ ಮನಸೋಗೋಚರಮ್,
ಯತ್ತ ದದ್ರೇಶ್ಯ ಮಗ್ರಾಹ್ಯಮಗೋತ್ರಂ ರೂಪವರ್ಜಿತಂ'

—ಪಾಶುಪತ.

ಆ ಕಾಲಕ್ಕೆ ಬ್ರಹ್ಮವಿದನು, ಬ್ರಹ್ಮಾಂಡದಲ್ಲಿ ಎಲ್ಲದರ ಅಧಿಷ್ಠಾತೃ ಪ್ರಾಣ ಬಿಂದುವು ತಾನೇ ಎಂದು ಅನುಭವಿಸುತ್ತಾನೆ. ಬ್ರಹ್ಮಾಂಡದಲ್ಲಿ ಅವನು ಅನುಪಮನೆಂದು ತಿಳಿಯುತ್ತಾರೆ. ಅವನ ಉಪಮೇಯವು ಬೇರಾವುದೂ ಇಲ್ಲ. 'ನ ತಸ್ಯ ಪ್ರತಿಮಾ ಅಸ್ತಿ'. ಎರಡು ಹೋಲಿಸಬಹುದಾದ ವಸ್ತುಗಳಲ್ಲಿ ಹೋಲಿಕೆ ಸಾಧ್ಯ. ಮತ್ತು ಹಾಗಾದರೆ, ಬ್ರಹ್ಮವು ಎರಡು ಆಗುವುದು. ಆದ್ದರಿಂದ ಬ್ರಹ್ಮನು ಅತುಲನೀಯನಾಗಿದ್ದಾನೆ. ಬ್ರಹ್ಮನು ವಾಕ್ಯ ಮತ್ತು ಮನಸ್ಸಿಗೆ ಅತೀತನಾಗಿದ್ದಾನೆ. ಅದೇನಿದ್ದರೂ ಪ್ರಯತ್ನಪಟ್ಟರೆ ಅವಾಙ್ ಮಾನಸ ಗೋಚರ ಬ್ರಹ್ಮನನ್ನು ಪಡೆಯಬಲ್ಲೆವು. ತಮ್ಮ ಅಂತರಾಳದೊಳಗಿನ ಭಾವವನ್ನು ಗ್ರಹಿಸಿ, ಅವನನ್ನು ಮುಟ್ಟಬಹುದು. ಸಂಬೋಧಿಯಿಂದ ಮಾತ್ರ ಅವನನ್ನು ಹಿಡಿಯಬಲ್ಲೆವು. ಆತ್ಮದಲ್ಲಿ ಆತ್ಮವನ್ನು ವಿಲೀನಗೊಳಿಸಿ, ಅವನನ್ನು

ಪಡೆಯಬೇಕು. ಅವನ ಶರೀರವು ಪಾಂಚಭೌತಿಕಕ್ಕೇ ಸೀಮಿತವಾದ, ಕಣ್ಣಿನಿಂದ ಕಾಣಬಹುದಾದ, ಸತ್ತೆಯಲ್ಲ. ಅದು ಸೂಕ್ಷ್ಮಕ್ಕಿಂತ ಸೂಕ್ಷ್ಮ ಮತ್ತು ವಿರಾಟಕ್ಕಿಂತ ವಿರಾಟವಾಗಿದೆ. ಅವನನ್ನು ಕಾಣಬೇಕಾದರೆ, ಅವಿದ್ಯೆಯ ಕುರುಡು ಕಟ್ಟುಗಳನ್ನು ಕಡಿದೊಗೆದು ಜ್ಞಾನದ ಅಂಜನವನ್ನು ಬಳಸಿ, ಪ್ರಾರಂಭಿಸು. ಒಂದು ವೇಳೆ, ಉಪ್ಪಿನ ಗೊಂಬೆಯು ಸಮುದ್ರವನ್ನು ಅಳೆಯಲು ಹೋದರೆ, ಅದು ಕರಗಿ ಸಮುದ್ರವೇ ಆಗುತ್ತದೆ. ಅದೇ ಪ್ರಕಾರ, ಬ್ರಹ್ಮವಿದನು ಬ್ರಹ್ಮವನ್ನು ಅಳೆಯಲು ಬ್ರಹ್ಮಸಮುದ್ರದಲ್ಲಿ ಮುಳುಗಿ ಬ್ರಹ್ಮವೇ ಆಗುತ್ತಾನೆ. 'ಬ್ರಹ್ಮವಿದ್ ಬ್ರಹ್ಮೈವ ಭವತಿ; ಬ್ರಹ್ಮನ ಚಿಂತೆಯನ್ನು ಮಾಡಿ ಮಾಡಿ ನೀನೂ ಬ್ರಹ್ಮನಾಗುವೆ. ಕೀಟವು ಭ್ರಮರದ ಚಿಂತನ ಮಾಡಿ ಮಾಡಿ, ಭ್ರಮರವೇ ಆಗುತ್ತದೆ. ಅವನನ್ನು ಸ್ಥೂಲ ಕಣ್ಣಿನಿಂದ ಕಾಣಲಾರೆವು. ಏಕೆಂದರೆ, ಅವನನ್ನು ಇಂದ್ರಿಯಗಳ ಮೂಲಕ ಗ್ರಹಿಸಲಾರೆವು. ಅವನ ವಂಶ ಪರಿಚಯ ವಾವುದೂ ಇಲ್ಲ. ಇರಲೂ ಆಗದು. ಏಕೆಂದರೆ, ಅವನು ಅ-ಜ; ಅನಾದಿ ಮತ್ತು ಕಾರಣರಹಿತ. ಅವನು ರೂಪವಿಲ್ಲದ ನಿರಾಕಾರ. ಅವನಿಗೆ ರೂಪವಿಲ್ಲ. ಏಕೆಂದರೆ, ರೂಪನೀಡಿದೊಡನೆ ಸೀದಾರೇಖೆ ನೀಡಬೇಕಾಗುತ್ತದೆ. ಅನಂತ ಬ್ರಹ್ಮನಿಗೆ ರೂಪ ನೀಡಿ, ಸೀಮಿತ ಸತ್ತೆಯಲ್ಲಿ ಪರಿಣತಗೊಳಿಶುವುದರಿಂದ ಅವನು ಬ್ರಹ್ಮ ಅರ್ಥಾತ್ ಬೃಹತ್ ಆಗಿ ಉಳಿಯುವದಿಲ್ಲ.

"ಅಚಕ್ಷುಃ ಶ್ರೋತ್ರಮತ್ಯರ್ಥಂ ತದ್‌ಪಾಣಿಪದಂ ತಥಾ,
ನಿತ್ಯಂ ವಿಭುಂ ಸರ್ವಗತಂ ಸುಸೂಕ್ಷ್ಮಂಚ ತದವ್ಯಯ"

—ಪಾಶುಪತ.

ಅವನಿಗೆ ಸ್ಥೂಲ ಕಣ್ಣುಗಳಿಲ್ಲ. ಆದರೂ ಅವನು ತನ್ನ ಪ್ರಭಾವದ ಕಣ್ಣುಗಳಿಂದ ಎಲ್ಲವನ್ನೂ ನೋಡಬಲ್ಲನು. ಅವನಿಗೆ ಕಿವಿಗಳಿಲ್ಲ. ಆದರೆ ಅವನು ತನ್ನ ಪ್ರಜ್ಞಾಘನ ಕಿವಿಗಳಿಂದ ಎಲ್ಲವನ್ನೂ ಕೇಳಬಲ್ಲನು. ಅವನ ಹೊರಗೆ ಯಾವುದೂ ಇರುವುದಿಲ್ಲವಾದ ಕಾರಣ ಅವನಿಗೆ ಕರ್ಮೇಂದ್ರಿಯಗಳಾಗಲಿ, ಜ್ಞಾನೇಂದ್ರಿಯಗಳಾಗಲಿ ಇಲ್ಲ. ಆದರೆ ಅವನು ತನ್ನ ಕಲ್ಪನೆಯ ಮೂಲಕ ಎಲ್ಲವನ್ನೂ ಮಾಡಬಲ್ಲನು. ಈಗ ಒಂದು ದೃಷ್ಟಾಂತ ನೀಡುವೆ: ಒಂದು ವೇಳೆ ನೀವು ಮನದೊಳಗೆ ಗಿಡದ ಕಲ್ಪನೆ ಮಾಡಿದರೆ, ಆಗ ಗಿಡದ ಛಾಯಾ ಚಿತ್ರವು ನಿಮ್ಮ ಮನೋಪಟದ ಮೇಲೆ ಮೂಡುತ್ತದೆ. ಮತ್ತು ನಿಮ್ಮಲ್ಲಿ ಗಿಡ ನೋಡುತ್ತಿದ್ದೇನೆ; ಎಂಬ ಬೋಧ ಉಂಟಾಗುತ್ತಿದೆ. ಆದರೆ ವಾಸ್ತವದಲ್ಲಿ ನಿಮ್ಮ ಹೊರತು ಬೇರಾವುದಾದರೂ ಸ್ವತಂತ್ರ ಸತ್ತೆಯು ಅಲ್ಲಿ ಇದೆಯೇ? ಅದೇ



ಮೇರೆಗೆ, ಬ್ರಹ್ಮನು ತನ್ನ ಚಿಂತಾ-ಧಾರೆಯ ಮೂಲಕ, ಎಲ್ಲವನ್ನೂ ನೋಡಬಲ್ಲ; ಕೇಳಬಲ್ಲ; ತಿಳಿಯಬಲ್ಲ. ಅವನು ನಿತ್ಯನು; ತ್ರಿಕಾಲಾತೀತನು; ಶಾಶ್ವತನು. ಅವನಿಗೆ ಉತ್ಪತ್ತಿಯೂ ಇಲ್ಲ; ವಿನಾಶವೂ ಇಲ್ಲ. ಈ ಕಾರಣ, ಅವನನ್ನು ವಿಭು ಎಂದು .ಕರೆಯುತ್ತಾರೆ. ಅವನು ಸೂಕ್ಷ್ಮಕ್ಕಿಂತ ಸೂಕ್ಷ್ಮನು; ಮತ್ತು ಎಲ್ಲ ರೀತಿಯ ಅಪಚಯ ರಹಿತನು; ಅಂದರೆ ಆದ್ಯಯನು.

'ಬ್ರಹ್ಮೈವೇದಮಮೃತಂ ತತ್ಪುರಸ್ತಾದ್
ಬ್ರಹ್ಮಾನಂದಂ ಪರಮಂಚೈವ ಪಶ್ಚಾತ್
ಬ್ರಹ್ಮಾನಂದಂ ಪರಮಂ ದಕ್ಷಿಣೇ ಚ
ಬ್ರಹ್ಮಾನಂದಂ ಪರಮಂ ಚೋತ್ತರಂಚ'

—ಪಾಶುಪತ.

ಅಮೃತ ಸ್ವರೂಪನಾದ ಬ್ರಹ್ಮನು ನಮ್ಮ ಹಿಂದೆ-ಮುಂದೆ, ಎಡ-ಬಲಕ್ಕೆ, ಎಲ್ಲೆಡೆಗೆ ಇದ್ದಾನೆ. ಅವನನ್ನು ಬಿಟ್ಟು ನಾವು ಎಲ್ಲಿಗೂ ಹೋಗಲಾರೆವು. ನಾವು ಸಂಪೂರ್ಣವಾಗಿ ಅವನಿಂದ ಸುತ್ತುವರಿಯಲ್ಪಟ್ಟಿದ್ದೇವೆ.

ಉಮಾ ಸಹಾಯಂ ಪರಮೇಶ್ವರಂ ಪ್ರಭುಂ
ತ್ರಿಲೋಚನಂ ನೀಲಕಂಠಂ ಪ್ರಶಾಂತಮ್
ಧ್ಯಾತ್ವಾ ಮುನಿರ್ಗಚ್ಛತಿ ಭೂತಯೋನಿಂ
ಸಮಸ್ತ ಸಾಕ್ಷೀ ತಮಸಃ ಪರಸ್ತಾತ್

—ಕೈವಲ್ಯ.

ಪರಮ ಪುರುಷನು ಉಮೆಯ ಜೊತೆಜೊತೆಗೇ ಇರುತ್ತಾನೆ. ಉಮಾ ಎಂದರೆ ಪ್ರಕೃತಿ. ಈ ಪ್ರಕೃತಿ ಮತ್ತು ಪುರುಷರ ಒಟ್ಟಾರೆ ಹೆಸರೇ ಬ್ರಹ್ಮ. ಪ್ರಕೃತಿಯ ಪ್ರಭಾವವು ಪುರುಷನ ಮೇಲೆ ಬಿದ್ದಾಗ ಬ್ರಾಹ್ಮೀ ಕಲ್ಪನೆಯು ಪ್ರಾರಂಭವಾಗುತ್ತದೆ. ಮತ್ತು ಈ ಪ್ರಕೃತಿಯ ಕ್ರಿಯಾಶೀಲತೆಯ ಫಲವಾಗಿ ಪ್ರಣವ ಧ್ವನಿ ಓಂಕಾರ ಉದ್ಗೀತವಾಗುತ್ತದೆ. ಆದರೆ, ಪ್ರಕೃತಿಯು ಕ್ರಿಯಾಶೀಲವಿಲ್ಲದಾಗ ಅಂದರೆ, ಪುರುಷನು ಪ್ರಧಾನನಿರುವಾಗ,ಅಲ್ಲಿ ಪ್ರಣವಧ್ವನಿಯು ಸಹ ಸ್ತಬ್ಧವಾಗುತ್ತದೆ. ಅ + ಉ + ಮ, ಈ ಮೂರು ಅಕ್ಷರಗಳ ಸಾಮಾನ್ಯ ಸ್ಥಾನವನ್ನು ಬದಲಿಸಿ, ಆ-ಅನ್ನು ಕೊನೆಯಲ್ಲಿ ಇರಿಸುವುದರಿಂದ, 'ಉ-ಮಾ' ಶಬ್ದವಾಗುತ್ತದೆ. ಆದ್ದರಿಂದ 'ಉಮಾಪತಿ' ಶಬ್ದದ ಅರ್ಥವೆಂದರೆ ಪುರುಷ. ಪ್ರಕೃತಿಯ ಸಂಯೋಗದಿಂದ ಬ್ರಹ್ಮನೇ ಸೃಷ್ಟಿಯ ಕಾರಣನಾಗಿದ್ದಾನೆ. ಅವನನ್ನು, ವಿಶೇಷ ಅರ್ಥದಲ್ಲಿ ಈಶ್ವರನೆಂದೂ ಕರೆಯುತ್ತಾರೆ. ಈಶ್ವರ ಶಬ್ದದ

ಅರ್ಥವೆಂದರೆ ನಿಯಂತ್ರಕ. ಬ್ರಹ್ಮನೇ, ಪ್ರತ್ಯಕ್ಷ ಇಲ್ಲವೆ ಪರೋಕ್ಷ ಭಾವದಿಂದ, ಇಂದ್ರಿಯ ಮತ್ತು ದೇವತಾ ಸಮೂಹದ ನಿಯಂತ್ರಕನಾಗಿದ್ದಾನೆ. ಅವನ ಪ್ರಜ್ಞಾ ಘನ ಕಣ್ಣುಗಳು ಎರಡೇ ಅಲ್ಲ, ಮೂರಿವೆ. ಅಂದರೆ ಅವನು ಭೂತ, ವರ್ತಮಾನ ಮತ್ತು ಭವಿಷ್ಯ ಎಂಬೀ ಮೂರರ ದ್ರಷ್ಟಾ ಆಗಿದ್ದಾನೆ. ಅವನು ನೀಲಕಂಠನಾಗಿದ್ದಾನೆ. ಅಂದರೆ ತುಂಬಾ ವಿಸ್ತಾರವಾದ ನೀಲ ಆಕಾಶ ತತ್ತ್ವವು ಅವನ ಕಂಠ ಸ್ತರದಲ್ಲಿದೆ. ಸೂಕ್ಷ್ಮದಿಂದ ಸ್ಥೂಲದತ್ತಣ ಬ್ರಹ್ಮನ ವಿಸ್ತಾರದಲ್ಲಿ ಮೊದಲನೆಯದೇ ಆಕಾಶತತ್ತ್ವ. ಆಕಾಶದ ಬಣ್ಣವು ವಾಸ್ತವ ದೃಷ್ಟಿಯಿಂದ ನೀಲಿಯಿದೆ. ಮತ್ತು ಅದು ಶಬ್ದವನ್ನು ಕೊಂಡೊಯ್ಯುವ ಸಾಮರ್ಥ್ಯ ಹೊಂದಿದೆ. ಆದ್ದರಿಂದ ಬ್ರಹ್ಮನ ನೀಲಕಂಠವು ಜೀವಿಗಳ ಕಂಠದಂತೆ ಸೀಮಿತ, ರೇಖಾಬದ್ಧ ಕಂಠವಲ್ಲ. ಇಡೀ ಸೃಷ್ಟಿಯೇ ಅದರಲ್ಲಿದೆ. ಅವನ ಗಂಭೀರತೆಯು ಅಳತೆಗೆ ನಿಲುಕದು. ಆದ್ದರಿಂದ ಅವನು ಪ್ರಶಾಂತನಾಗಿದ್ದಾನೆ. ಮುನಿಗಣ, ಅಂದರೆ ಮನನಶೀಲ ವ್ಯಕ್ತಿಗಳು, ಅವನ ಧ್ಯಾನ, ಮನನಗಳ ಮೂಲಕ, ಸಕಲ ಭೂತಗಳ ಮೂಲ ಕಾರಣದಲ್ಲಿ ಉಪನೀತರಾಗಿ, ಕೊನೆಗೆ ಅವನನ್ನೇ ಪಡೆಯುತ್ತಾರೆ. ಅವನು ಎಲ್ಲ ಅವಿದ್ಯೆಗಳ ಮೇಲಿದ್ದಾನೆ. ಅವನು ಸರ್ವಜ್ಞ; ಸರ್ವಸಾಕ್ಷೀ; ಮತ್ತು ಜ್ಯೋತಿಷ್ಮಾನ್ ಆಗಿದ್ದಾನೆ.

'ಸ ಬ್ರಹ್ಮಾ, ಸ ಶಿವಃ, ಸೇಂದ್ರಃ ಸೋಕ್ಷರಃ ಪರಮಃ ಸ್ವರಾಟ್,
ಸ ಏವ ವಿಷ್ಣು ಸ ಪ್ರಾಣಃ ಸ ಕಾಲಾಗ್ನೀ ಸ ಚಂದ್ರಮಾ.

ಅವನು ಬ್ರಹ್ಮನು; ಅಂದರೆ ಒಬ್ಬನೇ ಒಬ್ಬನಾದ ಅವನು, ಸೃಷ್ಟಿಕಾರ್ಯದಲ್ಲಿ ತೊಡಗಿದಾಗ, ಬ್ರಹ್ಮಾ ಎಂಬ ಹೆಸರಿನಿಂದ ಪರಿಚಿತನಾಗುತ್ತಾನೆ. ಶಿವ ಮತ್ತು ಚೈತನ್ಯ ರೂಪದಲ್ಲಿ ಅವನೇ ಜಗತ್ತಿನ ಸಕಲ ಕಾರ್ಯಗಳ ಸಾಕ್ಷೀ ಸತ್ತೆಯಾಗಿದ್ದಾನೆ. ಅವನೇ ಈ ಬ್ರಹ್ಮಾಂಡದ ಇಂದ್ರನು, ಅಂದರೆ ಸರ್ವಶ್ರೇಷ್ಠನು. ಅವನು ಅವ್ಯಯನು; ಅಂದನೆ, ಅಪಚಯ ರಹಿತನು. ಅವನು ವಿರಾಟನು; 'ಅವನು ತನ್ನ ಜ್ಯೋತಿಯಿಂದ ಜ್ಯೋತಿಷ್ಮಾನನು. ಸ್ವರೂಪೇಣ ರಾಜತೇ ಇತಿ ಸ್ವರಾಟ್'. ವ್ಯಾಪನ ಶೀಲತೆಯಿಂದಾಗಿ ಅವನನ್ನು ವಿಷ್ಣು ಎನ್ನುತ್ತಾರೆ. ಅವನ ಸತ್ತೆಯಿಂದಾಗಿಯೇ ,ಉಳಿದೆಲ್ಲ ವಸ್ತುಗಳು ಸತ್ತಾವಾನ್ ಆಗುತ್ತವೆ. ಆದ್ದರಿಂದ ಅವನನ್ನು ಪ್ರಾಣ ಎನ್ನುತ್ತಾರೆ. ತೀಕ್ಷ್ಣ ಧ್ವಂಸ ಶಕ್ತಿಯ ಅಧಿಕಾರಿಯಾದುದರಿಂದ ಅವನನ್ನು ಕಾಲಾಗ್ನಿ ಎನ್ನುತ್ತಾರೆ. ಹೃದಯಾಕಾಶದಲ್ಲಿ, ಮಹತ್, ಬುದ್ಧಿಗಳ ರೂಪದಲ್ಲಿ, ಅವನೇ ಹೊಳೆಯುತ್ತಾನೆ. ಆದ್ದರಿಂದ ಅವನನ್ನು ಚಂದ್ರಮನೆನ್ನುತ್ತಾರೆ. ಸಂಕ್ಷೇಪಿಸಿ ಹೇಳುವುದಾದರೆ, ಜಗತ್ತಿನ ಎಲ್ಲ ಕಾರ್ಯ-



ಗಳ ಮಧ್ಯೆ, ಇಲ್ಲವೆ ಹೊರಗೆ, ನೀವು ಯೋಚಿಸಬಹುದಾದ, ಯೋಚಿಸಲಾರದ, ಸರ್ವವೂ ಅವನಲ್ಲಿಯೇ ನೆಲೆಸಿದೆ. ಶಬ್ದ, ಸ್ಪರ್ಶ, ರೂಪ, ರಸ ಮತ್ತು ಗಂಧ ಎಂಬ ಎಲ್ಲ ತನ್ಮಾತ್ರೆಗಳ ಬೀಜವೂ ಅವನೇ. ಆ ಬೀಜದ ಅಂಕುರವೂ ಸಹ ಅವನ ಸ್ಫುರಣಮಾತ್ರವಾಗಿದೆ.

ಸ ಏವ ಸರ್ವಂ ಯದ್ಭೂತಂ ಯಚ್ಚ ಭವ್ಯಂ ಸನಾತನಮ್,
ಜ್ಞಾತ್ವಾ ತಂ ಮೃತ್ಯುಮತ್ಯೇತಿ ನಾನ್ಯ ಪಂಥಾ ವಿಮುಕ್ತಯೇ,

ಈ ವಿಶ್ವದಲ್ಲಿ ಇರುವುದೆಲ್ಲವೂ ಅವನೇ. ಸರ್ವ ವಸ್ತುಗಳಲ್ಲಿ ಇರುವುದೆಲ್ಲವೂ ಸಹ ಅವನೇ. ಆಗುವುದೆಲ್ಲವೂ, ಆದುದೆಲ್ಲವೂ, ಆಗುತ್ತಿರುವುದೆಲ್ಲವೂ ಅವನ ಸತ್ತೆಯಿಂದ ಧರಿಸಲ್ಪಟ್ಟಿದೆ. ಅವನ ಸ್ಪಂದನದಿಂದ ಸರ್ವವೂ ಸ್ಪಂದಿತವಾಗುತ್ತಿದೆ. ಅವನ ಧ್ವನಿಯೇ ಸಾವಿರ ಧಾರೆಗಳಲ್ಲಿ ಪ್ರತಿಧ್ವನಿತವಾಗುತ್ತದೆ. ಅವನ ವಾಣಿಯೇ ವಿಶ್ವವಾಣಿಯಾಗಿದೆ. ಇದುವೇ ಮೃತ್ಯುಲೋಕದ ಜೀವಿಗಳ ಅಮರತ್ವದಲ್ಲಿ ಪ್ರತಿಷ್ಠಿತವಾಗಿದೆ. ಅವನ ವಾಣಿಯೇ ಜಗತ್ತಿನ ಬೀಜ; ಅಂಕುರ; ಅಷ್ಟೇಕೆ? ಜಗದ್ರೂಪದಲ್ಲಿ ಕಾಣ ಬರುವ ಫಲಭರಿತ ವೃಕ್ಷವೂ ಸಹ. ಬೈಬಲದಲ್ಲಿ ಸೇಂಟ ಪಾಲನು ಹೀಗೆ ಹೇಳಿದ್ದಾನೆ.

'In the beginning was the word and the word was with God and the word was God.'

ವೇದದಲ್ಲಿಯೂ ಸಹ, ಈ ವಿರಾಟ ಧ್ವನಿ, ಪ್ರಣವ ಇಲ್ಲವೆ ಓಂಕಾರದ ಮಹಾತ್ಮ್ಯವನ್ನು ಕೀರ್ತಿಸಲಾಗಿದೆ. ಕರುಣಾಮಯನಾದ ಬ್ರಹ್ಮನು ಈ ಓಂಕಾರದ ಮಾಧ್ಯಮದಿಂದ ಸರ್ವ ಶಿಕ್ಷಣಗಳ ಮೂಲ ಶಿಕ್ಷಣವನ್ನು ಜಗತ್ತಿಗ ನೀಡುತ್ತ ನಡೆದಿದ್ದಾನೆ. ಅವನ ಸೃಷ್ಟಿ ಲೀಲೆಯ ಪ್ರತಿಯೊಂದು ಹೆಜ್ಜೆಯಲ್ಲಿ ಅವನ ಚಿಂತನ ಅಥವಾ ಅವನ ಧ್ಯಾನ, ಎಂಬೀ ಎರಡು ಉಪಾಯಗಳ ಮೂಲಕ ಮಾನವನು ಆ ಪರಬ್ರಹ್ಮನನ್ನು ಪರಿಚಯಿಸಿಕೊಂಡು, ಶಾಶ್ವತವಾಗಿ ಮೃತ್ಯುವನ್ನು ಅತಿಕ್ರಮಿಸುತ್ತಾನೆ, ಅವನ ಸಕಲ ದುಃಖಗಳ ಅಂತಿಮ ನಿವೃತ್ತಿಯಾಗುತ್ತದೆ.

'ಕೃಷ್ಣ ನಾಮ ಭಜೋ ಆರ ಸಬ ಮಿಛೇ
ಪಲಾಇತೇ ಪಥ ನಾಈ ಯಮ ಆಛೇ ಪೀಛೇ'

ಅಧಿಕ ಭಾದ್ರ ಪೂರ್ಣಿಮಾ: ೧೯೫೫

೪

# ವೇದದಲ್ಲಿ ಬ್ರಹ್ಮವಿಜ್ಞಾನ

"ಮನ ಏವ ಮನುಷ್ಯಾಣಾಂ ಕಾರಣಂ ಬಂಧಮೋಕ್ಷಯೋಃ
ಬಂಧಸ್ಯ ವಿಷಯಾಸಂಗಿ ಮುಕ್ತ್ಯೋ ನಿರ್ವಿಷಯಂ ತಥಾ"

ಮನದ ಅಸ್ತಿತ್ವಕ್ಕೋಸುಗ ವಿಷಯದ ಅವಶ್ಯಕತೆ ಇದೆ. ಏಕೆಂದರೆ ವಿಷಯುವೇ ಮನದ ಜೀವಿಕೆಯಾಗಿದೆ. ಮನವು ವಿಷಯುಗಳನ್ನು ಹಿಡಿದು ಕೊಂಡಿರುವ ವರೆಗೆ ಅದರ ಅಸ್ತಿತ್ವವಿದೆ. ನಿರ್ವಿಷಯವಾದ ಕೂಡಲೇ ಅದರ ಅಸ್ತಿತ್ವವೂ ಇಲ್ಲವಾಗುತ್ತದೆ. ವ್ಯಷ್ಟಿ ಮನವು ಇಂದ್ರಿಯ ಸಮೂಹವ ಸಹಾಯ ದಿಂದ, ನಾಲ್ಕೂ ನಿಟ್ಟಿನ ಖಂಡವಸ್ತುಗಳನ್ನು ತನ್ನ ವಿಷಯ ಇಲ್ಲವೆ ಜೀವನೋ ಪಾಯದ ರೂಪದಲ್ಲಿ ಗ್ರಹಿಸುತ್ತದೆ. ಖಂಡ ಸತ್ತೆಯಾದ ಜೀವವು ಅಖಂಡ, ಅನಂತವಾದ ಯಾವ ವಸ್ತುವನ್ನು ಧಾರಣ ಮಾಡಲಾರದು. ಬ್ರಹ್ಮವೊಂದೇ ಅಖಂಡ ವಸ್ತು. ಉಳಿದೆಲ್ಲ ಸೃಷ್ಟ ವಸ್ತುಗಳೂ ಖಂಡವಾಗಿವೆ. ಮತ್ತು ಅವು ಗಳೊಳಗಿಂದ ಪ್ರತಿಯೊಂದೂ ಮಾನಸ–ಭೂಮಿಯ ಅಧಿಕಾರವನ್ನು ಅನು ಭವಿಸುತ್ತಿವೆ. ಹಿಮಾಲಯ ಪರ್ವತವಿದೆಯೆಂದು ತಿಳಿಯಿರಿ; ಇದನ್ನು ಗ್ರಹಿ ಸಲು ಸಹ ಮನಸ್ಸಿಗೆ ಅಸೌಕರ್ಯವೆನಿಸಬಹುದು. ಆದರೆ, ಇದು ವಿಶಾಲ ಸತ್ತೆಯಾದರೂ ಅನಂತವೇನಲ್ಲ. ಆದ್ದರಿಂದ, ಅದನ್ನು ಅನಾಯಾಸವಾಗಿಯೇ, ರೂಪ ರೇಷೆಯ ಮಾಧ್ಯಮದಿಂದ, ಮನದ ವಿಷಯುವನಾಗಿ ಮಾಡಿಕೊಳ್ಳಬಹು ದಾಗಿದೆ. ಆದರೆ, ಅಖಂಡ ಸತ್ತೆಯಾದ ಬ್ರಹ್ಮನಿಗೋಸುಗ ನಾವು ಯಾವುದೇ ರೂಪ ರೇಷೆ ಇಲ್ಲವೆ ಸೀಮೆಯನ್ನು ನಿರ್ಮಿಸಲಾರೆವು. ಯಾವುದೊಂದು ಮೂರ್ತಿಯ ಮೂಲಕ, ನಾವು ಆ ಸತ್ತೆಯನ್ನು ದಿಕ್ಕು ದಿಕ್ಕುಗಳಲ್ಲಿ ಬಂಧಿಸ ಲಾರೆವು. ಆದ್ದರಿಂದ, ಶಾಸ್ತ್ರದಲ್ಲಿ, 'ನ ತಸ್ಯ ಪ್ರತಿಮಾ ಅಸ್ತಿ' ಎಂದು



ಹೇಳಿದ್ದಾರೆ. ಮನಸ್ಸು ಈ ಅಖಂಡ ಬ್ರಹ್ಮಸತ್ತೆಯನ್ನು ಧಾರಣ ಮಾಡ ಲಾರದು. ಇದರ ಕಾರಣವು ಒಂದೇ. ಅದೆಂದರೆ, ಮನವು ಧರಿಸಿದ ಪ್ರತಿ ಯೊಂದು ವಿಷಯವೂ ಸಹ, ದಿಶೆ ದಿಶೆಗಳಲ್ಲಿ ಸೀಮಿತವಾಗಿರುತ್ತದೆ. ಮತ್ತು ಇದು ಸಂಪೂರ್ಣವಾಗಿ ಅನಂತ ಭಾವದ ಪರಿಪಂಥೀಯಾಗಿದೆ.

ಬ್ರಹ್ಮವನ್ನು ಗ್ರಹಿಸುವುದು ಮನದ ಅಳವಿಗೆ ಮೀರಿರುವಾಗ, ಮಾನ ವನು ಅದನ್ನು ಯಾವ ಪ್ರಕಾರ ಪಡೆಯಬಲ್ಲನು? ಸಾಧನೆಯ ಫಲವಾಗಿ ಮನಸ್ಸು ಸ್ಥೂಲದಿಂದ ಸೂಕ್ಷ್ಮದತ್ತ, ಮತ್ತು ಜಡದಿಂದ ಭಾವದತ್ತ ಮುನ್ನಡೆ ಯುತ್ತಿದೆ. ಆ ಕಾಲಕ್ಕೆ ಖಂಡ ಮಾನಸ ಸತ್ತೆಯು ಅವನ ಲಕ್ಷ್ಯವಲ್ಲವಾದ್ದ ರಿಂದ ಹಿರಣ್ಯಗರ್ಭದಲ್ಲಿ ಆತ್ಮ ಸಮರ್ಪಣ ಮಾಡಿಕೊಳ್ಳುತ್ತದೆ. ಈ ಆತ್ಮ ಸಮರ್ಪಣೆಯು ಚರಮಾವಸ್ಥೆಯನ್ನು ತಲುಪಿದಾಗ, ಅವನ ವ್ಯಷ್ಟಿ ಮನವು (ರಾಮು, ಶ್ಯಾಮು, ಯದು ಮತ್ತು ಮಧು ಮುಂತಾದ ಬೋಧೆಯು) ಸಂಪೂರ್ಣ ನಿವೃತ್ತಿಯಾಗುತ್ತದೆ. ಇನ್ನು ಉಳಿಯುವುದೆಂದರೆ, ಆ ವಿರಾಟ ಪುರುಷನ ವಿರಾಟ ಮಾನಸ ಸತ್ತೆಯೊಂದೇ. ಇದನ್ನೇ ಸವಿಕಲ್ಪ ಸಮಾಧಿ ಎನ್ನುತ್ತಾರೆ. ಆದ್ದರಿಂದ, ವಿರಾಟ ಮಾನಸ ಸತ್ತೆಯಲ್ಲಿ ಅಣು ಮನದ ಆತ್ಮ ಸಮರ್ಪಣೆಯೇ ಸಾಧನೆಯ ಮೊದಲ ಮತ್ತು ಕೊನೆಯ ಮಾತೆಂದು ನಾವು ಕಂಡುಕೊಳ್ಳುತ್ತೇವೆ. ಅದೇ ಮೇರೆಗೆ, ಅಣುಮನವನ್ನು ವಿರಾಟ ಚೈತನ್ಯ ಸತ್ತೆಯಲ್ಲಿ ಅರ್ಪಿಸಿದಾಗ, ತತ್ಫಲವಾಗಿ ಮಾಯಾಧೀಶನಾದ ನಿರ್ಗುಣ ಸತ್ತೆಯೊಂದೇ ಉಳಿಯುತ್ತದೆ. ಇದನ್ನೇ ನಿರ್ವಿಕಲ್ಪ ಸಮಾಧಿಯೆಂದು ಕರೆಯುತ್ತಾರೆ. ಈ ಸಾಧನೆಯಲ್ಲಿಯೂ ಸಹ ಮೊದಲ ಮತ್ತು ಕೊನೆಯ ಮಾತೆಂದರೆ, ಆತ್ಮ ಸಮರ್ಪಣೆಯೇ. ಅಣು ಮನದ ದೃಷ್ಟಿಯಿಂದ ಬ್ರಾಹ್ಮೀ ಸತ್ತೆಯು ಅಚಿಂತ್ಯವಾಗಿದೆ.

"ಅಚಿಂತ್ಯಮವ್ಯಕ್ತಮನಂತ ರೂಪಂ ಶಿವಂ
ಪ್ರಶಾಂತಮನ್ಮೃತಂ ಬ್ರಹ್ಮಯೋನಿಮ್ ।
ತಥಾದಿ ಮಧ್ಯಾಂತ ವಿಹೀನಮೇಕಂ ವಿಭುಂ
ಚಿದಾನಂದಮರೂಪಮದ್ಭುತಮ್ ॥

ಅವನು ಅಚಿಂತ್ಯನು. ಆದ್ದರಿಂದ ಅವನು ಅಣುಮನದ,ಚಿಂತನ–ಮನದ ಹೊರಗಿದ್ದಾನೆ. ಅವನು ಬರೀ ಅಚಿಂತ್ಯನೇನು? ಅಚಿಂತ್ಯದೊಂದಿಗೆ ಅವ್ಯಕ್ತನೂ ಆಗಿದ್ದಾನೆ. ಏಕೆಂದರೆ ಶಬ್ದ, ಸ್ಪರ್ಶ, ರೂಪ, ರಸ ಮತ್ತು ಗಂಧ ಮುಂತಾದವು ಗಳ ಮೂಲಕ, ಇಂದ್ರಿಯಗಳು ಅವನನ್ನು ಗ್ರಹಿಸಲಾರವು. ಏನೇ ಇರಲಿ, ಎಷ್ಟೇ ದೊಡ್ಡದಾಗಿರಲಿ, ಶಬ್ದ,ಸ್ಪರ್ಶಾದಿ ಗುಣಗಳು ಅದರಲ್ಲಿದ್ದರೆ, ಇಂದ್ರಿಯ

ಗಳು ಅದನ್ನು ಗ್ರಹಿಸುತ್ತವೆ. ಅವನು ಅರೂಪನು. ಏಕೆಂದರೆ, ಅನಂತಕ್ಕೆ ನಾವಾವ ರೂಪವನ್ನೂ ನೀಡಲಾರೆವು. ಹಾಗಾದರೆ ಈ ತೋರುವ ಜಗತ್ತು ಅವನ ರೂಪವಲ್ಲವೇನು? ಈ ತೋರುಜಗತ್ತಿನ ಅನಂತ, ಅಸಂಖ್ಯ ರೂಪಗಳು ಅವನ ಮಾನಸಿಕ ವಿಕಾಸವಷ್ಟೇ. ಅಣು ಮನದ ವಿಷಯ ರೂಪದಲ್ಲಿ, ಅವನ ಮಾನಸ ಭೂಮಿಯಲ್ಲಿ, ಅಣು ಸತ್ತೆಯದೇ ಸೃಷ್ಟಿಯಾಗುತ್ತದೆ. ಮತ್ತು ಅನಂತ ಮಾನಸನಾದ ಬ್ರಹ್ಮನ ಕಲ್ಪನೆಯಿಂದ ಕ್ಷುದ್ರ, ಬೃಹತ್, ಅನಂತ ಸಂಖ್ಯೆಯ ಖಂಡ ಸತ್ತೆಗಳು ಸೃಷ್ಟವಾಗುತ್ತಿರುತ್ತವೆ. ನೈಜ ದೃಷ್ಟಿಯಿಂದ ನೋಡಿದರೆ, ತೋರು ಜಗತ್ತಿನಲ್ಲಿ ಇದುವೇ ಅವನ ರೂಪವಾಗಿದೆ. ಆದರೆ ಅವನ ಮಾನಸ ಪ್ರವಾಹದಲ್ಲಿ ಏಳುತ್ತಿರುವ ಈ ಬುದ್ಬುದ ರೂಪಗಳು ಉಂಟಾಗುತ್ತವೆ; ಉಡುಗಿ ಹೋಗುತ್ತವೆ. ಇದಾವ ಅಂತಿಮ ಸತ್ತೆಯಲ್ಲ. ಇದು ದೇಶ, ಕಾಲ ಮತ್ತು ಪಾತ್ರಗಳ ಮಧ್ಯೆಯಿದ್ದು, ಕಲ್ಪನಾ ಚಕ್ರದ ಮಧ್ಯಮಣಿಯಾದ ಆ ವಿರಾಟ ಭಾವದಲ್ಲಿ ಸೇರುವ ಉದ್ದೇಶದಿಂದ ಮುನ್ನಡೆಯುತ್ತಿದೆ. ಆದ್ದರಿಂದ ಬ್ರಹ್ಮದ ಈ ಜಗತ್ ರೂಪೀ ವಿಕಾಸದ ಯಾವುದೊಂದು ರೂಪವನ್ನು ನಾವು ಶಾಶ್ವತವೆಂದು ಒಪ್ಪಿ, ಬಿಗಿದಿಟ್ಟುಕೊಳ್ಳಲಾರೆವು. ಅವನ ಯಾವುದೇ ರೂಪ ವಿರಲಿ, ಅದೆಷ್ಟೇ ಮನಮೋಹಕವಾಗಿರಲಿ, ಅದೊಂದು ದಿನ ನಮ್ಮ ಎದುರಿನಿಂದ ದೂರ ಸರಿಯುತ್ತದೆ. ನಮ್ಮನ್ನು ಆಳಹಚ್ಚಿ, ಕಾಲನ ಕೈಗೆ ಸಿಲುಕಿಸಿ, ನಮ್ಮನ್ನು ಅಗಲಿ, ಬೇರಾವುದೋ ಅವಶ್ಯ ಲೋಕಕ್ಕೆ ಹೊರಟು ಹೋಗುವುದು. ಆದ್ದರಿಂದ, ಅವನ ಯಾವುದೇ ಖಂಡ ರೂಪವು, ನಮಗೆ ಶಾಶ್ವತ ಶಾಂತಿಯನ್ನೂ ವಾಸ್ತವಿಕ ಆನಂದವನ್ನೂ ಕೊಡಲಾರವು. ಅನಂತದ ಅನಂತ ವಿಕಸಿತ ರೂಪ ಕಂಡು, ಸಾಧಕನು ಮೂಕನಾಗಿ ಹೋಗುವನು. ಶ್ರೀರಾಧಾ ಹೇಳುತ್ತಾಳೆ.

"ಸಖಿ ಕಿ ಪೂಛಸಿ ಅನುಭವ ಮೋಯ"
ಸೋ ಈ ಪಿರೀತಿ ಅನುರಾಗ ಬಖಾನಿತ,
ತಿಲೇ ತಿಲೇ ನೂತನ ಹೋಯ,
ಜನಮ ಅವಧಿ ಹಮ ರೂಪ ನೇಹಾರಲು.
ನಯನ ನ ನಿರಪಿತ ಬೇಲ
ಸೋಹ ಮಧುರ ಬೋಲ.
ಶ್ರುತಿ ಪಥೆ ಪರಶ ನಾ ಗೇಲ.
ಕತ ಮಧು ಯಾಮಿನೀ ರಭಸೇ ಗವಾಯದ



ನಾ ಬುಝಲು ಕೈಸನ ಕೇರಿ,
ಲಾಖ ಲಾಖ ಯುಗ ಹಿಯೇ ಹಿಯಾ ರಾಖವ,
ತಬು ಹಿಯಾ ಜುಡನ ನಾ ಗೇಲಿ
ಕತ–ಲದ ಗಧ ಜನ ರಸು ಅನುಮಗನ,
ಅನುಭವ ಶಾಹನು ನಾ ಪೇಖ,
ವಿದ್ಯಾಪತಿ ಕಹ ಸೋ ಪಿರೀತಿ ಬಖಾನಿತ,
ಲಿಖೇ ನಾ ಮಿಲಲ ಏಕ.

ಅವನು ಶಿವಸ್ವರೂಪನು. ಶಿವ ಶಬ್ದದ ಅರ್ಥವೆಂದರೆ ಪುರುಷ. ಕಲ್ಯಾಣ ಇಲ್ಲವೆ ಮಂಗಲ ಸ್ವರೂಪ ಎಂಬ ಅರ್ಥದಲ್ಲಿಯೂ ಶಿವ ಶಬ್ದವನ್ನು ಬಳಸುತ್ತಾರೆ. ಇಲ್ಲಿ ಮಂಗಲ ಸ್ವರೂಪ ಎಂಬ ಅರ್ಥದಲ್ಲಿಯೇ ಶಿವ ಶಬ್ದವನ್ನು ಬಳಸಲಾಗಿದೆ. ಏಕೆಂದರೆ, ಅವನ ಮಾನಸ ವಿಕಾಸ–ರೂಪದ ಈ ಸೃಷ್ಟವಸ್ತು ಸಮೂಹವು ಕಲ್ಯಾಣದ ಉದ್ದೇಶದಿಂದಲೇ ನಿಯೋಜಿತವಾಗಿದೆ; ಪರಮ ಮಂಗಳದ ನಿಮಿತ್ತವಾಗಿಯೇ ದತ್ತಿಯಾಗಿ ಬಂದಿದೆ. ಆದ್ದರಿಂದ ಅವನು ಶಿವ, ಮಂಗಲಮಯ ಮತ್ತು ಕಲ್ಯಾಣ ಸ್ವರೂಪನಾಗಿದ್ದಾನೆ. ನಮಗೆ ಕಷ್ಟ ಕೊಡಲು ಅವನು ದಂಡಿಸುತ್ತಾನೇನು? ಇಲ್ಲ. ಅದೂ ಸಹ, ನಮ್ಮನ್ನು ಕುರಿತು ಅವನ ಮಂಗಲೇಚ್ಛೆಯೇ ಆಗಿದೆ. ನಮ್ಮನ್ನು ಶುದ್ಧಗೊಳಿಸಲೋಸುಗ, ದಂಡಿಸುವ ಮಂಗಲಮಯ ವಿಧಾನವಿದೆ. ಅವನಲ್ಲಿ ಅವಿದ್ಯೆ ಮುಂತಾದ ಮಾಲಿನ್ಯ ದೋಷವಿಲ್ಲ. ಆದ್ದರಿಂದ ಅವನು ಪರಮ ಶಾಂತನಾಗಿದ್ದಾನೆ; ಪರಮ ಪ್ರಶಾಂತನಾಗಿದ್ದಾನೆ. ಅವಿದ್ಯಾ ರೂಪಿ ವಾಯುವು ತಾಕಿದಾಗ, ಮಾನಸ ಸಮುದ್ರದಲ್ಲಿ ತರಂಗಗಳು ಉದಿಸುತ್ತವೆ. ಇದರಿಂದ ಅವನ ಸಮತೆ, ಅವನ ಶಾಂತ ಭಾವಗಳು ನಷ್ಟವಾಗುತ್ತವೆ. ಬ್ರಹ್ಮ ಸಮುದ್ರದಲ್ಲಿ ಅವಿದ್ಯೆಯ ಆಘಾತವಿಲ್ಲ. ಆದ್ದರಿಂದ ಯಾವುದೇ ತರಂಗವೂ ಇಲ್ಲ.ಅವಿದ್ಯೆಯಿಂದ ಉಂಟಾದ ಅಹಂಕಾರವು ಹೆಚ್ಚು ಹೆಚ್ಚಾಗಿರುವಲ್ಲಿ, ತರಂಗಗಳ ಉಚ್ಛ್ವಾಸವೂ ಅಷ್ಟೇ ಹೆಚ್ಚಾಗಿರುತ್ತದೆ. ತಾರ್ಕಿಕವಾಗಿ ವಿಚಾರಿಸಿದರೆ, ಅಲ್ಲಿ ಜ್ಞಾನ ಗಂಭೀರತೆಯ ಅಭಾವವೂ ಅಷ್ಟೇ ಹೆಚ್ಚಾಗಿರುವುದು ಕಂಡುಬರುತ್ತದೆ. ಕನ್ಯಾಕುಮಾರಿಯ ಬಳಿ, ಒಂದೆಡೆಗೆ ಆಳವಿರದ ಬಂಗಾಲ ಉಪಸಾಗರವಿದೆ. ಅಲ್ಲಿ ತರಂಗಮಾಲೆಗಳನ್ನೇ ಕಾಣುತ್ತೇವೆ. ಇನ್ನೊಂದೆಡೆಗೆ ಅಗಾಧ, ಅಪಾರ, ಶಾಂತಿಯಿಂದ ಕೂಡಿದ ಅರಬ್ಬೀ ಸಮುದ್ರವಿದೆ. ಅವನು ಅಮೃತನು. ಆದ್ದರಿಂದ ವಿಕೃತಿ ರಹಿತನು. ಯಾವುದೊಂದು ವಸ್ತುವಿನ ಒಳಹೊರಗಿನ ಪ್ರಭಾವ ಇಲ್ಲವೆ ಬೇರೊಂದು ವಸ್ತುವಿನ ಪ್ರಭಾವದ

ಹೊರತು ಅವನಲ್ಲಿ ವಿಕೃತಿ ಉಂಟಾಗದು. ಹಾಲನ್ನು ಮೊಸರು ಮಾಡಲು ಹೆಪ್ಪು (ದಧ್ಯಮ್ಲ) ಹಾಕಬೇಕು. ಅವನ ಹೊರಗೆ ಯಾವ ಸತ್ತೆಯೂ ಇರದಿರುವ ಕಾರಣ, ಮತ್ತು ಅದೇ ರೀತಿ, ಬೇರಾವ ವಸ್ತುವಿನ ಪ್ರಭಾವವೂ ಬೀಳದಿರುವ ಕಾರಣ ಅವನು ವಿಕೃತನಾಗುವ ಸಂಭವವೂ ಸಹ ಇಲ್ಲ.

ಬ್ರಹ್ಮ ಎಂದರೆ ಬೃಹತ್, ನಿರ್ವಿಶೇಷ ಎಂದು ಅರ್ಥ. ಅವನು ಎಲ್ಲರಿಗಿಂತ ದೊಡ್ಡವನು. 'ಬೃಹತ್ತ್ವಾತ್ ಬ್ರಹ್ಮ'. ಅವನು ಬರೀ ದೊಡ್ಡವನಷ್ಟೇ ಏನು? ಅವನ ಭಾವನೆಯಿಂದ ಸರ್ವವೂ ಬ್ರಹ್ಮವಾಗುತ್ತದೆ. ಅಂದರೆ, ಸರ್ವರನ್ನೂ ಬ್ರಹ್ಮವಾಗಿಸುವ ಕ್ಷಮತೆಯನ್ನು ಇಟ್ಟುಕೊಂಡಿದ್ದಾನೆ.'ಬೃಹಂಣಾತ್ವಾತ್ ಬ್ರಹ್ಮ.'

ಅವನೇ ಸರ್ವ ವಸ್ತುಗಳ ಮೂಲ ಕಾರಣನಾಗಿದ್ದಾನೆ. ಏಕೆಂದರೆ ಮನದೊಳಗೇ ಕಲ್ಪಿಸಿ, ಜಗತ್ತನ್ನು ಸೃಷ್ಟಿಸುತ್ತಾನೆ. ಅವನಲ್ಲಿ ಆದಿಯೂ ಇಲ್ಲ; ಮಧ್ಯವೂ ಇಲ್ಲ; ಅಂತ್ಯವೂ ಇಲ್ಲ. ಈ ಮೂರರಲ್ಲಾವುದೂ ಇಲ್ಲ.

ಆದ್ದರಿಂದ ಅವನು ಅನಂತನಾಗಿದ್ದಾನೆ. ಒಂದು ವೇಳೆ, ಅವನಿಗೆ ಆದಿ ಇದ್ದಿದ್ದರೆ, ನಾವು ಅವನನ್ನು ಅನಾದಿ ಎನ್ನಲಾರೆವು. ಒಂದು ವೇಳೆ, ಅಂತವಿದ್ದಿದ್ದರೆ, ನಾವು ಅವನನ್ನು ಅನಂತ ಎನ್ನಲಾರೆವು. ಯಾವುದರ ಮೊದಲ ಮತ್ತು ಕೊನೆಯ ಬಿಂದುವಿಲ್ಲವೋ, ಅದರ ಮಧ್ಯ ಬಿಂದುವೂ ಇರಲಾರದಷ್ಟೆ? ಅವನಲ್ಲಿ ಆದಿ, ಮಧ್ಯ ಮತ್ತು ಅಂತ್ಯಗಳಿದ್ದರೆ, ಅವನ ಹೊರತು ಬೇರೊಂದು ಸತ್ತೆಯಿರುವ ಸಂಭವವಿರುತ್ತಿತ್ತು. ಈ ಸರ್ವ ವಸ್ತುಗಳು ಅವನ ಆದಿ ಬಿಂದುವಿನ ಮೊದಲು ಇಲ್ಲವೆ ಕೊನೆಯ ಬಿಂದುವಿನ ಬಳಿಕ ಇರುತ್ತಿದ್ದವು. ಇಂಥ ಅವಸ್ಥೆ ಇದ್ದರೆ, ಮನಸ್ಸು ಮತ್ತು ಇಂದ್ರಿಯಗಳ ಸಹಾಯದಿಂದ ಅವನನ್ನು ಗ್ರಹಿಸುವ ಸಂಭವವಿತ್ತು. ಆದ್ದರಿಂದ, ಈ ದೆಶೆಯಲ್ಲಿ, ಅವನೊಂದು ಕೇವಲ ಸಾಮಾನ್ಯ ಪಾಂಚಭೌತಿಕ ಸತ್ತೆಯಾಗುತ್ತಿದ್ದನು. ಒಂದು ವೇಳೆ ನಾವು ಮೂರ್ತಿಯೊಂದನ್ನು ಭಗವಾನ ಎನ್ನುವುದಾದರೆ, ಆ ಮೂರ್ತಿಯ ಕೆಳಗಿನ ಜಗುಲಿ ಮತ್ತು ಆ ಮೂರ್ತಿಯ ಮೇಲಿನ ಕಿರೀಟವು ಭಗವಾನನ ಹೊರಗಿನ ಎರಡನೆಯ ಸತ್ತೆಯೇನು? ಈ ಮೂರ್ತಿಯನ್ನು ಅನಾದಿ, ಅನಂತ ಎನ್ನುವುದೆಲ್ಲ ಬರೀ ಹುಚ್ಚುತನ; ಏಕೆಂದರೆ ನಾವು ಅದರಲ್ಲಿ ಆದಿ ಮತ್ತು ಅಂತ್ಯ ಬಿಂದುವನ್ನು ಕಾಣುತ್ತೇವೆ. ಮೇಲಾಗಿ ಈ ಮೂರ್ತಿಯನ್ನು ಮನಸ್ಸು ಮತ್ತು ಇಂದ್ರಿಯಗಳ ಮೂಲಕ ಸಹ ಗ್ರಹಿಸಬಲ್ಲೆವು. ಇದನ್ನು ಗ್ರಹಿಸಬಲ್ಲೆವಾದ್ದರಿಂದ



ಈ ವಸ್ತುವು ಪಾಂಚಭೌತಿಕ ಉಪಾದಾನಗಳಿಂದ ನಿರ್ಮಿತವಾಗಿದೆ. ಅಂದರೆ, ಮಣ್ಣು, ಕಲ್ಲು, ಕಟ್ಟಿಗೆ, ಲೋಹ ಮುಂತಾದವುಗಳಿಂದ.

ಎಲ್ಲವೂ ಅವನ ಮಾನಸ ದೇಹದಲ್ಲಿನ ಅಂಗವಾಗಿರುವುದರಿಂದ, ಅವನು ಸಕಲರ ನಿಯಂತ್ರಕನಾಗಿದ್ದಾನೆ. ಚೈತನ್ಯ ಸ್ವರೂಪನಾಗಿದ್ದಾನೆ; ಆನಂದ ಸ್ವರೂಪನಾಗಿದ್ದಾನೆ.

ಮನದ ಪ್ರತಿಯೊಂದು ಅನುಭೂತಿಯು ಸುಖಾತ್ಮಕವಿರುತ್ತದೆ. ಇಲ್ಲವೆ ದುಃಖಾತ್ಮಕವಿರುತ್ತದೆ. ಮನಸ್ಸು ಯಾವುದೋಂದು ವಿಷಯದಲ್ಲಿ ಇಲ್ಲವೆ ವಸ್ತುವಿನಲ್ಲಿ, ಹೆಚ್ಚು ಕಾಲದವರೆಗೆ ಸಿಲುಕಿಕೊಂಡರೆ, ನಾವು ಅದನ್ನು ಸುಖವೆನ್ನುತ್ತೇವೆ. ಮತ್ತು ಯಾವುದಾದರೊಂದು ವಿಷಯ ಇಲ್ಲವೆ ವಸ್ತುವಿನಲ್ಲಿ (ಸ್ವಭಾವ ಮತ್ತು ತನ್ನ ವಿಪರೀತ ವಿಷಯ ಇಲ್ಲವೆ ವಸ್ತು) ಸಿಲುಕಿಕೊಂಡಿರಲು ಬಯಸದಿರುವಾಗ ದುಃಖವೆನ್ನುತ್ತೇವೆ. ಮನಸ್ಸು ಯಾವಾಗ ಸುಖ ಇಲ್ಲವೆ ದುಃಖವೆರಡರ ಅನುಭೂತಿಯನ್ನು ಹೊಂದಿರುವುದಿಲ್ಲವೋ, ಆಗ ಅದು (ನಸ್ಯಾತ್) ಇಲ್ಲದಂತಾಗುತ್ತದೆ. ಆ ಅವಸ್ಥೆಯಲ್ಲಿ ಕೇವಲ ವಿಷಯ ರಹಿತ ಆತ್ಮವೊಂದೇ ಉಳಿಯುತ್ತದೆ. ಆ ಕಾಲಕ್ಕೆ ಆತ್ಮವು ಆತ್ಮದ ಆನಂದದಿಂದ ತುಂಬಿರುತ್ತದೆ. ಆದ್ದರಿಂದ, ಅವನು ಚಿತ್ತ ಸ್ವರೂಪನು; ಆನಂದಸ್ವರೂಪನು, ಚಿದಾನಂದನಾಗಿದ್ದಾನೆ.

ಅನಂತನಿಗೆ ಯಾವ ವಿಶೇಷ ರೂಪಗಳೂ ಇರಲಾರವೆಂದು ಮೊದಲೇ ಹೇಳಿದ್ದೇನೆ. ಆದ್ದರಿಂದ ಅವನು ಅರೂಪನು; ನಿರಾಕಾರನು. ತೋರುತ್ತಿರುವ ಅನಂತ ಸಂಖ್ಯೆಯ ಖಂಡರೂಪಗಳು ಆ ಅಖಂಡ, ಅರೂಪನೊಳಗೆ ಇರುತ್ತವೆ. ಭೇದ ದೃಷ್ಟಿಯಿಂದ ಅನಂತ ಸಂಖ್ಯೆಯ ಖಂಡರೂಪಗಳಿರುವಲ್ಲಿಯೇ ಅಭೇದ ದೃಷ್ಟಿಯಿಂದ, ಓರ್ವ ರೂಪಾತೀತ 'ಅವನು' ಮಾತ್ರ ಇರುತ್ತಾನೆ. ಸಾಧಕ ರಾಮ ಪ್ರಸಾದನು ಹೀಗೆ ಹಾಡಿದ್ದಾನೆ.

"ತ್ಯಜಿಬೋ ಸಬ ಭೇದಾಭೇದ,
(ಓಮಾ ಘುಚೇ ಜಾಬೇ ಮನೇರ ಖೇದ
ಶತ ಶತ ಸತ್ಯ ವೇದ
ತಾರಾ ಅಮಾರ ನಿರಾಕಾರಾ."

ರೂಪಹೀನವಾದುದು ಅವರ್ಣನೀಯವಾಗಿರುತ್ತದೆ. ಅಂದಮೇಲೆ ಅದನ್ನು ಅತ್ಯಾಶ್ಚರ್ಯ; ಅದ್ಭುತ: ಎನ್ನದೆ ಬೇರೆ ಹೇಗೆ ಬಣ್ಣಿಸಬಲ್ಲೆವು.

"ಸರ್ವ ಭೂತಸ್ಥಮಾತ್ಮಾನಂ ಸರ್ವ ಭೂತಾನಿ ಚ ಆತ್ಮನಿ,
ಸಂಪಶ್ಯನ್ ಬ್ರಹ್ಮಪರಮಂ ನಾತ್ಯೇನ ಹೇತುನಾ."

ಸರ್ವಭೂತಗಳಲ್ಲಿ–ಜಡ ಮತ್ತು ಚೇತನಗಳಲ್ಲಿ, ತನ್ನ ಸತ್ತೆಯನ್ನೇ ನೋಡುವವನು, ಮತ್ತು ಸರ್ವಭೂತಗಳನ್ನು ತನ್ನಲ್ಲಿ ನೋಡುವವನು ಬ್ರಹ್ಮನ ಉಪಲಬ್ಧಿ ಪಡೆಯುವ ಅಧಿಕಾರವನ್ನು ಹೊಂದಿರುತ್ತಾನೆ. ಅಂದರೆ, ಬ್ರಹ್ಮೋಪಲಬ್ಧಿಯು ಕೇವಲ ಅವನಿಂದ ಮಾತ್ರ ಸಾಧ್ಯ. ಈ ಭೂಮಾ ದೃಷ್ಟಿಯನ್ನು ಹೊರತುಪಡಿಸಿ,, ಬೇರಾವ ಉಪಾಯದಿಂದಲೂ ಅವನನ್ನು ಪಡೆಯಲಾರೆವು. ಇಲ್ಲಿ ಒಂದು ಪ್ರಶ್ನೆ ಏಳುತ್ತದೆ. ಏನೆಂದರೆ, ಸರ್ವಭೂತಗ್ಗಳಲ್ಲಿ ತನ್ನನ್ನು ಮತ್ತು ತನ್ನಲ್ಲಿ ಸರ್ವಭೂತಗಳನ್ನು, ಯಾವ ಪ್ರಕಾರ ಕಾಣುವ ಸಂಭವವಿದೆ?

'ಆತ್ಮಾನಮರಣಿಂ ಕೃತ್ವಾ ಪ್ರಣವಂಚೋತ್ತರಾರಣಿಮ್,
ಜ್ಞಾನ ನಿರ್ಮಥನಾಭ್ಯಾಸಾತ್ ಪಾಶಂ ದಹತಿ ಪಂಡಿತಃ

ತನ್ನನ್ನು ಅರಣಿಯನ್ನಾಗಿಸಿ, ಮತ್ತು ಪ್ರಣವನನ್ನು ಉತ್ತರಾರಣಿಯನ್ನಾಗಿಸಿ, ಜ್ಞಾನದ ಮೂಲಕ ಅಂದರೆ ಯುಕ್ತಿಯ ಸಹಾಯದಿಂದ ಚೆನ್ನಾಗಿ ಮಥಿಸಿ, ಪಂಡಿತ ವ್ಯಕ್ತಿಯು ಪಾಶ ಸಮೂಹವನ್ನು ದಹಿಸಲಿ.

ಅರಣಿ ಶಬ್ದದ ಅರ್ಥವೆಂದರೆ ಯಜ್ಞಕ್ಕಾಗಿ ಬಳಸುವ ಮಂತ್ರಪೂತ ಕಟ್ಟಿಗೆ. ಪ್ರಾಚೀನ ಕಾಲದಲ್ಲಿ ಜನರು ಒಂದು ಕಟ್ಟಿಗೆಯಿಂದ ಇನ್ನೊಂದನ್ನು ತಿಕ್ಕಿ, ಬೆಂಕಿ ಮಾಡುತ್ತಿದ್ದರು. ಮೂಲ ಕಟ್ಟಿಗೆಗೆ ಅರಣಿ ಎನ್ನುತ್ತಾರೆ. ಇನ್ನು ತಿಕ್ಕಲು ಬಳಸುವ ಎರಡನೆಯ ಕಟ್ಟಿಗೆಗೆ ಉತ್ತರಾರಣಿ ಎನ್ನುತ್ತಾರೆ. ಅರಣಿ ಉತ್ಪನ್ನವಾಗುವ ಜಾಗೆಗೆ ಅರಣ್ಯ ಎನ್ನುತ್ತಿದ್ದರು. ಅದು ಆ ಕಾಲದ ಋಷಿಗಳ ಉಪಾಸನೆಯ ಕ್ಷೇತ್ರವಾಗಿತ್ತು. ಇಲ್ಲಿ ಈ ರೂಪಕದ ಮೂಲಕ ತಮ್ಮ ಆತ್ಮವನ್ನು ಅರಣಿ ರೂಪದಲ್ಲಿ ಬಳಸಲು ತಿಳಿಸಲಾಗಿದೆ. ಆದರೆ ಬ್ರಹ್ಮಾಗ್ನಿಯನ್ನು ಪ್ರಜ್ವಲಗೊಳಿಸಲು ಇದಕ್ಕೆ ಇನ್ನೊಂದು ಉತ್ತರಾರಣಿಯ ಮೂಲಕ ತಿಕ್ಕುವ ಅವಶ್ಯಕತೆಯುಂಟು. ಇಲ್ಲಿ ಈ ಉತ್ತರಾರಣಿಯೆಂದರೆ ಪ್ರಣವ. ಪ್ರ—ನು + ಅಲ್—ಪ್ರಣವ. ನು—ಧಾತುವಿನ ಅರ್ಥವೆಂದರೆ, ಉಪಾಸಿಸು ಎಂದು. ಅರ್ಥಾತ್ ಯಾವುದರ ಮೂಲಕ ಪ್ರಕೃಷ್ಟ ಉಪಾಸನೆ ನಡೆಯುವುದೋ ಅದನ್ನೇ ಪ್ರಣವವೆನ್ನುತ್ತಾರೆ. ಓಂಕಾರ ಮಂತ್ರವೇ ಪ್ರಣವ. ಈ ಪ್ರಕೃಷ್ಟ ಉಪಾಸನೆಯ ಸಂಸ್ಪರ್ಶದಿಂದ, ಆತ್ಮನಲ್ಲಿ ಬ್ರಹ್ಮಭಾವವು ಪ್ರಕಟವಾಗುತ್ತದೆ. ನಿಮ್ಮಲ್ಲಿ ಬಹುಜನರು ತಿಳಿದಿರುವಂತೆ, ಸ್ಥಿರಚಿತ್ತದಿಂದ ಓಂಕಾರ



ಧ್ವನಿಯನ್ನು ಕೇಳುತ್ತ, ಕೇಳುತ್ತ ಮಾನವನು ಸಮಾಧಿಸ್ಥನಾಗುತ್ತಾನೆ. ಬ್ರಹ್ಮ ಭಾವದಲ್ಲಿ ಒಂದಾಗುತ್ತಾನೆ.

ನಾನು ಸರ್ವದಲ್ಲಿಯೂ ಇದ್ದೇನೆ. ನನ್ನ 'ನಾನುತನ'ವು ಜಗತ್ತಿನ ತುಂಬ ವ್ಯಾಪಿಸಿದೆ. ಈ ತರದ ಭಾವನಾ–ಭೂಮಿಯಲ್ಲಿ ಪ್ರತಿಷ್ಠಿತನಾಗುವುದನ್ನೇ ಜ್ಞಾನದೆನ್ನುತ್ತಾರೆ. ಈ ವಿರಾಟ ಜ್ಞಾನಭೂಮಿಯಲ್ಲಿ, ಯುಕ್ತಿಯ ಮೂಲಕ ಮಂಥನ ಮಾಡುತ್ತ, ಅಂದರೆ ಯುಕ್ತಿ ಮೂಲಕ ತಿಳಿಯುತ್ತ, ಎಲ್ಲದರಲ್ಲಿಯೂ ಪಾರಮಾರ್ಥಿಕ ವಿಚಾರದಿಂದ, ಇರುವುದೆಲ್ಲವೂ ಬ್ರಹ್ಮವೇ, ಎಂದು ಅರಿಯುತ್ತಾರೆ. ಬಾರಿ ಬಾರಿಗೆ ಈ ಭಾವದ ಅಭ್ಯಾಸ ಮಾಡುತ್ತ; (ಈ ಸರಳತಮ ಪದ್ಧತಿಯನ್ನು ನಿಮ್ಮ ಸಾಧನೆಯ ಪ್ರಾರಂಭದ ಹಂತದಲ್ಲಿಯೇ ಕಲಿಸಲಾಗುತ್ತದೆ) ಆತ್ಮ ರೂಪದ ಅರಣಿಯಲ್ಲಿ ಪ್ರಣವ ರೂಪದ ಉತ್ತರಾರಣಿಯ ಸಂಸ್ಪರ್ಸದಿಂದ ಬ್ರಹ್ಮಾಗ್ನಿಯ ಉಪಲಬ್ಧಿಯಾಗುತ್ತದೆ. ಅರ್ಥಾತ್ ಯುಕ್ತಿ ಮೂಲಕವಾದ ಈ ಮಂಥನವೇ ಅರಣಿ–ಉತ್ತರಾರಣಿಗಳ ಸಂಘರ್ಷ ಕ್ರಿಯೆಯಾಗಿದೆ. ಹೃದಯದಲ್ಲಿ ಈ ಬ್ರಹ್ಮಾಗ್ನಿಯು ಪ್ರಜ್ವಲಿತವಾಗುವುದರೊಂದಿಗೆ, ಮಾನವನ ಮನವು ಸಹ ಪಾಶಮುಕ್ತವಾಗುತ್ತದೆ. ಪಾಶ ಎಂದರೆ ಕಟ್ಟುವ ಹಗ್ಗ, ಎಂದರ್ಥ. ಪಾಶವು ಎಂಟು ಪ್ರಕಾರದ್ದಿರುತ್ತದೆ.

"ಘೃಣಾ ಶಂಕಾ ಭಯಂ ಲಜ್ಜಾ ಜಗುಪ್ಸಾ ಚೇತಿ ಪಂಚಮೀ
ಕುಲ ಶೀಲಂ ಚ ಮಾನಂಚ ಅಕೌ ಪ್ರಾಶಾಃ ಪ್ರಕೀರ್ತಿತಾಃ"

ಈ ಪಾಶಗಳನ್ನು ದಗ್ಧಗೊಳಿಸಿದವನನ್ನೇ ಸಮಾಜವು ಪಂಡಿತ ಎಂದು ಕರೆಯುತ್ತದೆ. ಅಂದರೆ ಬ್ರಹ್ಮೋಪಲಬ್ಧಿ ಇಲ್ಲವೆ ಸವಿಕಲ್ಪ ಸಮಾಧಿ ಹೊಂದುವುದರೊಂದಿಗೆ ಮಾನವನ ಮನದಿಂದ ಪಾಶವು ದೂರವಾಗುತ್ತದೆ. ಸವಿಕಲ್ಪ ಸಮಾಧಿ ಕಾಲದಲ್ಲಿ, ಸಾಧಕನ ಮನದಲ್ಲಿ, 'ನಾನೇ ಬ್ರಹ್ಮನಿದ್ದೇನೆ' ಎಂಬೀ ಭಾವವೇ ಇರುತ್ತದೆ. ಸಂಸ್ಕೃತ ಭಾಷೆಯಲ್ಲಿ 'ನಾನೇ ಬ್ರಹ್ಮನಿದ್ದೇನೆ' ಎಂಬೀ ಭಾವವನ್ನು 'ಪಂಡಾ' ಎನ್ನುತ್ತಾರೆ. ಯಾರಲ್ಲಿ ಪಂಡಾ ಇದೆಯೋ, ಅವನೇ ಪಂಡಿತನು.

"ಅಹಂ ಬ್ರಹ್ಮಾಸ್ಮೀತಿ ಬುದ್ಧಿಃ ತಾಮಿಕಃ ಪ್ರಾಪ್ತಃ ಪಂಡಿತಃ"

ಒಂದು ವೇಳೆ, ಬ್ರಹ್ಮನು 'ಏಕಮೇವಾದ್ವಿತೀಯಂ' ಆಗಿದ್ದರೆ, ಅವನಲ್ಲಿ ವಿಕೃತಿಯು ಯಾವ ಪ್ರಕಾರ ಉಂಟಾಗುತ್ತದೆ? ಇದೊಂದು ಸ್ವಾಭಾವಿಕ ಪ್ರಶ್ನೆ, ಮತ್ತು ಅದರ ಉತ್ತರವೂ ಸಹ ಸಹಜವಿದೆ. ವಿಕೃತಿಯು ಪ್ರಕೃತಿಯ ಕಾರಣ

ದಿಂದ ಆಗುತ್ತದೆ. ಮತ್ತು ಆ ವಿಕೃತಿಯೂ ಸಹ, ಬ್ರಹ್ಮದೇವರ ಒಳಗೇ ಆಗುವುದೇ, ಹೊರತು ಅದರ ಹೊರಗಲ್ಲ. ಆದ್ದರಿಂದ ಅಂತಿಮ ದೃಷ್ಟಿಯಿಂದ ಅವನ ಏಕತ್ವಕ್ಕೇನೂ ಹಾನಿಯಾಗದು. ಅಣು–ಜೀವವು ಬ್ರಹ್ಮಮನದ ಒಂದು ಕ್ಷುದ್ರ ಅಂಶವನ್ನು ಅಧಿಕೃತವಾಗಿ ತೆಗೆದುಕೊಳ್ಳುತ್ತದೆ. ಮತ್ತು ಬ್ರಹ್ಮಮನ ದಲ್ಲಿಯೇ ಮುನ್ನಡೆಯುತ್ತದೆ. ಅದರಲ್ಲಿಯ ಈ ಕ್ಷುದ್ರತೆಗೂ ಚೇತನವಿದೆ. ಈ ಕ್ಷುದ್ರತೆಯ ಬೋಧವೇ ಜೀವತ್ವ. ಈ ಕ್ಷುದ್ರತ್ವದ ಬೇಡಿಗಳನ್ನು ಮುರಿದು ಹಾಕುವ ಪ್ರಯತ್ನವೇ ಸಾಧನೆ. ಬೇಡಿಗಳು ಮುರಿದು ಹೋಗುವುದನ್ನೇ ಸಿದ್ಧಿ ಎನ್ನುತ್ತಾರೆ.

ಕ್ಷುದ್ರತೆ ಇರುವ ಅಣುಜೀವ ಮತ್ತು ಅಳತೆಯ ಅಳವಿನಾಚೆಯ ವಿರಾಟ ಬ್ರಹ್ಮ–ಇವೆರಡರ ನಡುವೆ ಪ್ರಕೃತಿಯ ಪ್ರಭಾವದಿಂದ ಮೂರು ಅವಸ್ಥೆಗಳಿರ ಬಹುದು. ಈ ಮೂರು ಅವಸ್ಥೆಗಳಿಗೆ ಜಾಗ್ರತ ಸ್ವಪ್ನ ಸುಕ್ಷುಪ್ತಿ ಎಂದು ಹೆಸರುಗಳಿವೆ. ಈ ಮೂರು ಅವಸ್ಥೆಗಳು ಯಾವುದೂ ಚರಮ ಅವಸ್ಥೆಯಲ್ಲ. ಏಕೆಂದರೆ ಈ ಮೂರು ಸತ್ತ್ವ, ರಜಸ್ ಮತ್ತು ತಮಸ್ ಗುಣಾತ್ಮಕ ಪ್ರಕೃತಿಯ ಪ್ರಭಾವದಿಂದ ಸೃಷ್ಟವಾಗಿದೆ. ಈ ಮೂರೂ ಅವಸ್ಥೆಗಳಲ್ಲಿ ವಾಸ್ತವ ದೃಷ್ಟಿ ಯಿಂದ, ಬ್ರಹ್ಮ ಮತ್ತು ಜೀವರು ಪೃಥಕ್ಕಾಗಿ ಇರುತ್ತಾರೆ. ಇನ್ನು ನಾಲ್ಕನೆ ಅವಸ್ಥೆಯೊಂದಿದೆ ಅದನ್ನು ತುರೀಯಾವಸ್ಥೆ ಇಲ್ಲವೆ ಕೈವಲ್ಯ ಎನ್ನುತ್ತಾರೆ. ಇಲ್ಲಿ ಪ್ರಕೃತಿಯ ಪ್ರಭಾವವಿರದ ಕಾರಣ, ಜೀವ ಮತ್ತು ಬ್ರಹ್ಮರಲ್ಲಿ ಯಾವುದೋ ಭೇದವಿಲ್ಲ. ಇವೆರಡರ ಏಕಾತ್ಮಭಾವವಿರುತ್ತದೆ. ಸೃಷ್ಟಿ ಲೀಲೆಯಲ್ಲಿ ಜಾಗ್ರತ, ಸ್ವಪ್ನ ಮತ್ತು ಸುಷುಪ್ತಿ ಎಂಬ ಮೂರು ಅವಸ್ಥೆಗಳಿರುತ್ತವೆ. ಏಕೆಂದರೆ, ಸತ್ತ್ವ, ರಜಃ ಮತ್ತು ತಮಃ ಈ ಮೂರು ಗುಣಗಳಿಂದಲೂ ಪ್ರಕೃತಿಯ ಸೃಷ್ಟಿಯಾಗಿದೆಯಷ್ಟೇ? ವಿರಾಟ ಪುರುಷನ ಮೇಲೆ ಸತ್ತ್ವ ಗುಣದ ಪ್ರಭಾವವು ಹೆಚ್ಚಾಗಿ ಬಿದ್ದರೆ, ಅವನನ್ನು ಕ್ಷೀರಾಬ್ಧಿ ಇಲ್ಲವೆ ಕ್ಷೀರಸಮುದ್ರ ಎನ್ನುತ್ತಾರೆ. ಅಣುಜೀವಿಯ ಈ ಅವಸ್ಥೆಯನ್ನು ಜಾಗ್ರತ ಅವಸ್ಥೆ ಎನ್ನುತ್ತಾರೆ. ಸಾಧಾರಣ ವಾಗಿ ಜನರು ಈ ಜಾಗ್ರತಾವಸ್ಥೆಯಲ್ಲಿಯೇ ಕೇವಲ ಜ್ಞಾತೃತ್ವವಿರುವುದೆಂದು ತಿಳಿಯುತ್ತಾರೆ. ಆದರೆ ಈ ಮಾತು ಸರಿಯಲ್ಲ. ಸ್ವಪ್ನ ಮತ್ತು ಸುಷುಪ್ತಿ ಅವಸ್ಥೆಗಳಲ್ಲಿಯೂ ಸಹ, ಜ್ಞಾತೃತ್ವವಿರುತ್ತದೆ. ಈ ಬಗ್ಗೆ ಅನಂತರ ಇನ್ನಷ್ಟು ಹೇಳುವೆ.

ಪ್ರಕೃತಿಯ ಪ್ರಭಾವದಿಂದ ಬ್ರಹ್ಮನ ಯಾವ ಅಂಶವು ಜ್ಞೇಯ ಅರ್ಥಾತ್ ವಿಷಯದಲ್ಲಿ ಪರಿಣಮಿಸುವುದೋ, ಅದನ್ನು ಕ್ಷರ ಎನ್ನುತ್ತಾರೆ. ಅಂದರೆ,



ಯಾವುದರಲ್ಲಿ ವಿಕೃತಿ ಉಂಟಾಗುವುದೋ ಅದು. ಇನ್ನು ಸ್ವಯಂ ವಿಕೃತ ವಾಗದೆ, ಕ್ಷರದ ಜ್ಞಾತೃ ರೂಪದಲ್ಲಿ ವಿಕೃತಿಯೊಂದಿಗೆ ಪ್ರತ್ಯಕ್ಷವಾಗಿ ಜೋಡಿಸಿದ ಬ್ರಹ್ಮನ ಅಂಶಕ್ಕೆ ಅಕ್ಷರ ಎನ್ನುತ್ತಾರೆ. ಈ ಅಕ್ಷರವು ಕ್ಷರ ದೊಂದಿಗೆ ಓತಪ್ರೋತ ಭಾವದಿಂದ ಕೂಡಿಕೊಂಡಿರುತ್ತದೆ. ಇನ್ನು ಬ್ರಹ್ಮನ ಯಾವ ಅಂಶವು, ಇತ್ತ ಕ್ಷರವೂ ಅಲ್ಲ; ಅತ್ತ ಅಕ್ಷರವೂ ಅಲ್ಲ; ಆದರೆ, ಬ್ರಹ್ಮ ಚಕ್ರದ ಪ್ರಾಣ ಕೇಂದ್ರವಾಗಿ ಇಲ್ಲವೆ ಮಧ್ಯಬಿಂದುವಾಗಿ ಇಲ್ಲವೆ ಮಹಾಬಿಂದು ವಾಗಿ ಶರೀರದೊಂದಿಗೆ ನೆಲೆಸಿರುವುದೋ, ಅದುವೇ ಈ ಜ್ಞೇಯ ಕ್ಷರ ಮತ್ತು ಜ್ಞಾತೃ ಅಕ್ಷರಗಳೆರಡರ ನಿಯಂತ್ರಕವಾಗಿದೆ. ಅವನು ಯಾರ ಕರ್ಮ ಇಲ್ಲವೆ ಕರ್ಮಫಲದೊಂದಿಗೆ ಪ್ರತ್ಯಕ್ಷವಾಗಿ ಸೇರಿಕೊಂಡಿಲ್ಲ. ಅವನನ್ನೇ ಪರಮಾತ್ಮ ಇಲ್ಲವೆ ಪುರುಷೋತ್ತಮ ಎನ್ನುತ್ತಾರೆ.

ಕ್ಷರಂ ಪ್ರಧಾನಮಮೃತಾಕ್ಷರಂ ಹರಃ
ಕ್ಷರಾತ್ಮನಾ ವೀಶತೇ ದೇವ ಏಕಃ
ತಸ್ಯಾಭಿಧ್ಯಾನಾತ್ ಯೋಜನಾತ್ ತತ್ತ್ವಭಾವಾತ್,
ಭೂಯಶ್ಚಂತೇ ವಿಶ್ವಮಾಯಾ ನಿವೃತ್ತಿಃ

ಈ ಪುರುಷೋತ್ತಮನಿಗಾಗಿ ನಾರಾಯಣ ಶಬ್ದವನ್ನು ಬಳಸಬಹುದು. ನಾರ ಎಂದರೆ ಪ್ರಕೃತಿ ಎಂದು ಅರ್ಥ. (ಭಕ್ತಿ ಇಲ್ಲವೆ ಜಲ ಎಂಬ ಅರ್ಥ ದಲ್ಲಿಯೂ ಈ ಶಬ್ದವನ್ನು ಬಳಸುತ್ತಾರೆ. ಅಯನ ಎಂದರೆ ಆಶ್ರಯ ಎಂದು ಅರ್ಥ. ಆದ್ದರಿಂದ ಪ್ರಕೃತಿಗೆ ಆಶ್ರಯದಾತನಾದ ಪುರುಷೋತ್ತಮನಿಗಾಗಿ ನಾರಾಯಣ ಶಬ್ದವನ್ನೂ ಬಳಸಬಹುದು. ನಾರಾಯಣನು ಕ್ಷೀರ ಸಮುದ್ರ ದಲ್ಲಿ ಶಯನ ಮಾಡಿದ್ದಾನೆ ಎಂದು ಬಣ್ಣಿಸಿದ್ದಾರೆ. ಲಕ್ಷ್ಮಿಯು ಅವನ ಪಾದ ಸೇವೆಯಲ್ಲಿ ನಿರತಳಾಗಿದ್ದಾಳೆ. ನಾನು ಈ ಮುಂಚೆ ವಿವರಿಸಿದಂತೆ, ಬ್ರಹ್ಮನ ಜಾಗ್ರತ ಅವಸ್ಥೆಯನ್ನೇ ಕ್ಷೀರ ಸಮುದ್ರವೆನ್ನುತ್ತಾರೆ. ನಾರಾಯಣ ಇಲ್ಲವೆ ಪುರುಷೋತ್ತಮನು ಮಲಗಿದ್ದಾನೆ. ಏಕೆಂದರೆ ಅವನು ಜ್ಞಾನಶಾಂತನಾಗಿ ದ್ದಾನೆ. ಅವನಿಗೆ ಮಾಡುವುದೇನೂ ಇಲ್ಲ. (ಅವನಿಗೆ ಮಾಡಬೇಕಾದುದು ಎಳ್ಳೆನಿತೂ ಇಲ್ಲ). ಅವನು ಕೇವಲ ಭಾವಿಸಬೇಕಷ್ಟೇ. "ಪುರೇ ಶೇತೇ ಯಃ ಸ ಪುರುಷಃ".ಲಕ್ಷ್ಮಿಯು ಪಾದ ಸೇವೆಮಾಡುತ್ತಾಳೆ. ಅಂದರೆ,ಪರಾ ಪ್ರಕೃತಿಯು ಈ ಪುರುಷೋತ್ತಮನ ಅಧೀನಳಾಗಿ ಇರುತ್ತಾಳೆ. ಈ ವಿರಾಟ ನಾರಾಯಣನು

ವಾಕ್ಯ ಮತ್ತು ಮನಗಳ ಮೇಲೆ ಇದ್ದಾನೆ. ಇವನ ಮೂರ್ತಿಯನ್ನು ನಿರ್ಮಿಸುವುದು ಹುಚ್ಚುತನವಷ್ಟೇ;

ಬೃಹತ್ ಸತ್ತೆಯಲ್ಲಿ ರಜೋ ಗುಣದ ಪ್ರಭಾವ ಬಿದ್ದಾಗ, ಅವನನ್ನು ಗರ್ಭೋದಕ ಎನ್ನುತ್ತಾರೆ. ಅಣುಜೀವಿಯು ಈ ಅವಸ್ಥೆಯನ್ನು ಸ್ವಪ್ನಾವಸ್ಥೆಯೆನ್ನುತ್ತಾರೆ. ಇನ್ನು ವಿರಾಟ ಪುರುಷನಲ್ಲಿ ಪ್ರಕೃತಿಯು ತಮೋಗುಣದ ಪ್ರಭಾವವು ಪ್ರಕಟವಾದರೆ, ಆಗ ಅವನನ್ನು ಕಾರಣಾರ್ಣವ ಎನ್ನುತ್ತಾರೆ. ಅಣು ಜೀವಿಯು ಈ ಅವಸ್ಥೆಗೆ ಸುಷುಪ್ತಿ ಅವಸ್ಥೆ ಎನ್ನುತ್ತಾರೆ ಬ್ರಹ್ಮನ ತಮೋಗುಣೀ ಅವಸ್ಥೆಯಿಂದಲೇ ಜಗತ್ತಿನ ಸೃಷ್ಟಿಯು ಸ್ಫುರಣವಾಗುತ್ತದೆ. ಆದ್ದರಿಂದ ಆ ಅವಸ್ಥೆಯನ್ನು ಕಾರಣಾರ್ಣವ ಇಲ್ಲವೆ ಕಾರಣ ಸಮುದ್ರ ಎನ್ನುತ್ತಾರೆ. ಕಾರಣ ಶಬ್ದದ ಅರ್ಥವೆಂದರೆ ಹೇತು. ಮತ್ತು ಅರ್ಣವ ಎಂದರೆ ಸಮುದ್ರ. ಈ ಸಮುದ್ರದ ಮಧ್ಯ ಬಿಂದುವಾಗಿರುವವನೇ ಪುರುಷೋತ್ತಮನು. ಇವನ ನಾಲ್ಕೂ ನಿಟ್ಟಿನಲ್ಲಿ ಈ ಸೃಷ್ಟಿ ಸಮುದ್ರದ ತರಂಗ ರಾಶಿಯು ಉದ್ದಾಮ ವೇಗದಿಂದ ಸುತ್ತುತ್ತಿರುತ್ತದೆ. ಕ್ಷರ ಮತ್ತು ಅಕ್ಷರದ ಸಮೂಹವು ಓಡುತ್ತಿರುತ್ತದೆ. ಅಲ್ಪ, ಅಲ್ಪ, 'ನಾನು'ಗಳನ್ನು ಕೇಂದ್ರವಾಗಿರಿಸಿಕೊಂಡು ಈ ಕ್ಷರಾಕ್ಷರಗಳ ಸಮೂಹದ ಮಧ್ಯೆ ಸ್ಥಿರಪ್ರಜ್ಞೆಯುಳ್ಳ, ವಿಶ್ವಾತ್ಮಕನಾದ, ಪುರುಷೋತ್ತಮನಿದ್ದಾನೆ.

ಜಾಗ್ರದಾವಸ್ಥೆಯಲ್ಲಿ, ಜೀವಭಾವದಲ್ಲಿ 'ನಾನು', ಬ್ರಹ್ಮನಿಂದ ಪೃಥಕ್ ಇರುತ್ತದೆ. ಸ್ವಪ್ನಾವಸ್ಥೆಯಲ್ಲಿ ಈ ಪೃಥಕ್ ಬೋಧೆಯು ಸ್ವಲ್ಪ ಕಡಿಮೆಯಿರುತ್ತದೆ. ನಿದ್ರಿತಾವಸ್ಥೆಯಲ್ಲಿ ಮತ್ತಷ್ಟು ಕಡಿಮೆ ಇರುತ್ತದೆ. ನಿದ್ರಿತಾವಸ್ಥೆಯಲ್ಲಿ ಅಲ್ಪ-ನಾನುವಿನ ಚಡಪಡಿಸುವಿಕೆಯು ಇಲ್ಲದ ಕಾರಣ, ಒಂದು ವಿಶೇಷ ಪ್ರಕಾರದ ಸ್ಥಿರತೆಯ ಸುಖ ಇಲ್ಲವೆ ತಾಮಸಿಕ ಆನಂದದ ಅನುಭೂತಿಯಾಗುತ್ತದೆ. ಆದರೆ, ಸ್ವಪ್ನಾವಸ್ಥೆಯಲ್ಲಿ, ಮನದೊಳಗೆ ಕ್ರಿಯಾಭೋಗವು ನಡೆದಿರುವುದರಿಂದ, ಅವಶ್ಯವಾಗಿ ಅಷ್ಟೊಂದು ಸುಖವಂತೂ ಇರದು. ಪ್ರತಿಯಾಗಿ ಅನೇಕ ಪ್ರಕಾರದ ದುಃಖಾನುಭೂತಿಯೂ ಆಗುತ್ತಿರುತ್ತದೆ.

"ಸ ಏವ ಮಾಯಾ ಪರಿಮೋಹಿತಾತ್ಮಾ
ಶರೀರಮಾಸ್ಥಾಯ ಕರೋತಿ ಸರ್ವಮ್,
ಸ್ತ್ರಿಯನ್ನಪಾನಾದಿ ವಿಚಿತ್ರಭೋಗೈಃ
ಸ ಏವ ಜಾಗ್ರತ್ ಪರಿತೃಪ್ತಿಮೇತಿ".

ಜೀವವು, ಜಾಗ್ರದಾವಸ್ಥೆಯಲ್ಲಿ, ಎಲ್ಲಕ್ಕಿಂತ ಹೆಚ್ಚಾಗಿ, ಅವಿದ್ಯೆಯಿಂದೇಕೆ



ಪ್ರಭಾವಿತವಾಗಿರುತ್ತವೆ? ಅವನ ಮನದೊಳಗೆ ಅಷ್ಟಪಾಶಗಳೂ, ಷಡ್ರಿಪುಗಳೂ ಇರುತ್ತವೆ. ಇನ್ನು ಹೊರಗೆ ಆಕರ್ಷಿಸುವ ಪ್ರಪಂಚವಿದೆ. ಅವನ ಮನದ ಪ್ರತಿಯೊಂದು ಕ್ರಿಯೆಯಲ್ಲಿ, ಈ ಒಳ-ಹೊರಗಿನ ಎರಡರ ಪ್ರಭಾವವೂ ಬೀಳುತ್ತದೆ. ಶರೀರವನ್ನೇ ಕೇಂದ್ರ ಮಾಡಿಕೊಂಡ ಅವನು, ಸ್ತ್ರೀ, ಅನ್ನ, ಪಾನ ಮುಂತಾದ ವಿಚಿತ್ರ ವಿಷಯಗಳನ್ನು ತನ್ನ ಭೋಗವೆಂದು ತಿಳಿದು, ಮನದೊಳಗಿನ ರಿಪು ಇಲ್ಲವೆ ಪಾಶದ ಪ್ರಭಾವಕ್ಕನುಸರಿಸಿ, ಅವುಗಳತ್ತ ಸಾಗುತ್ತಾನೆ. ಸಾಧಕನು ಈ ಬಾಹ್ಯಿಕ ವಸ್ತು ಸಂಮೂಹದ ಆಸೆಯನ್ನು ಕುರಿತು ಪ್ರಯತ್ನಪೂರ್ವಕ ಜಾಗ್ರತನಾಗಿರಬೇಕು; ಸಂಯತನಾಗಿರಬೇಕು. ಆದರೆ, ಒಂದು ವೇಳೆ ಸಂಯಮದ ಪ್ರತಿಷ್ಠೆಯು ಮನದಲ್ಲಿ ದೃಢವಾಗಿರದಿದ್ದರೆ, ಸಂಯಮವು ಹೀಗೆ ಸಂಭವಿಸಬಹುದೇನು? ಜನರಿಗೆ ತೋರಿಸಲೆಂದು ದೇಹಕ್ಕೆ ಬೂದಿ ಬಳಿದುಕೊಂಡು, ಸಾಧುವೇಷ ಹಾಕಿ, ಕಮಂಡಲು ಹಿಡಿದು ಅಂಡಲೆಯುವುದರಿಂದ ಸಂಯಮವು ಸಂಭವಿಸುವುದೇ? ಅದಕ್ಕೋಸುಗ ಹೊರಗಿನೊಂದಿಗೆ ಒಳಗಿನ ಸಮತೆಯನ್ನಿರಿಸಿಕೊಂಡು, ಒಳಗಿನ ಸಿದ್ಧತೆಯನ್ನೇ ಮಾಡಬೇಕು. ಹೊರಗಿನ ಪರಿಸ್ಥಿತಿಯು ಸಹ, ಮನೋಶುದ್ಧಿಗೆ ಅನುಕೂಲವಾಗಲಿ; ಎಂಬ ಬಗ್ಗೆ ಸಹ ಲಕ್ಷ್ಯವಿರಿಸಬೇಕು. ಒಬ್ಬ ವ್ಯಕ್ತಿಯು ಉಚ್ಚ ವಿಚಾರಗಳನ್ನು ಇರಿಸಿಕೊಳ್ಳಬಹುದು. ಒಂದು ವೇಳೆ, ಅವನು, ಕ್ರಮೇಣ ಅಸತ್‌ದೊಂದಿಗೆ ಸೇರಿಕೊಂಡರೆ, ಅವನ ಪತನದ ದಿನವೂ ದೂರವುಳಿಯದು. ಆದ್ದರಿಂದ ಒಳಹೊರಗಿನ ಸಮತೆಯನ್ನಿರಿಸಿ ನಡೆಯಬೇಕಾದ ಅವಶ್ಯಕತೆಯಿದೆ. ಜಾಗ್ರದಾವಸ್ಥೆಯಲ್ಲಿ ಮನವೇ ಶರೀರ-ಕೇಂದ್ರಿಕ ಸುಖವನ್ನು ಅನುಭವಿಸುತ್ತಿದ್ದರೂ ಸಹ, ಅದರ ಉಪಕರಣವು ಮಾತ್ರ ಹೊರಗಿನಿಂದ ತಂದುಕೊಂಡದ್ದಾಗಿದೆ. ಇದರ ಫಲವಾಗಿ, ಅದರ ಹೊರಗಿನ ಜಗತ್ತು ಇಲ್ಲವಾದರೆ, ನಿಜವಾದ ಸುಖ ಪಡೆಯುವಲ್ಲಿ, ಬಾಧೆಯುಂಟಾಗುತ್ತದೆ. ಏಕೆಂದರೆ, ಅವನ ಮನದ ವಾಸನೆ ಮತ್ತು ಕಾಮನೆಗಳಲ್ಲಿ ಕೆಲವೊಂದು ಭೋಗ್ಯ ವಸ್ತುಗಳನ್ನು ಪಡೆಯಲಿಚ್ಛಿಸುತ್ತಾನೆ. ಆ ಕಾಲಕ್ಕೆ ಹೊರಗಿನ ಜಗತ್ತಿನಲ್ಲಿ ಅಷ್ಟು ಭೋಗ್ಯ ವಸ್ತುಗಳನ್ನು ಪಡೆಯುವ ಸಂಭವವು ಇಲ್ಲದಿರಬಹುದು. ಇದರ ದೆಶೆಯಿಂದ ಮನಸ್ಸು ಪರಿತಪಿಸಬೇಕಾಗುತ್ತದೆ. ಮನದ ಚಂಚಲತೆ ಪ್ರಕಟವಾಗುತ್ತದೆ. ಮತ್ತು ಶಾಂತಿಯು ನಷ್ಟವಾಗುತ್ತದೆ. ಸ್ವಪ್ನಾವಸ್ಥೆಯಲ್ಲಿ ಅವನ ಬಳಿ ಹೊರ ಜಗತ್ತು ಇರುವುದಿಲ್ಲ. ಇದರಿಂದ ಮನ ಇಲ್ಲವೆ ಇಂದ್ರಿಯಗಳ ಬಹಿರ್ಮುಖೀ ವೃತ್ತಿಗಳು ಇದರ ಕಾರಣ, (ಅರ್ಥಾತ್ ವಿಚಾರಿಸಿ ನೋಡಿದರೆ, ಇಲ್ಲಿ ವೃತ್ತಿಗಳು ಅಂತರ್ಮುಖಿಯಾಗಿಯೂ ಇರುವು

ದಿಲ್ಲ.) ಈ ಅವಸ್ಥೆಯಲ್ಲಿ ಸುಖದ ಪರಿಮಾಣವು ಸ್ವಲ್ಪ ಹೆಚ್ಚಾಗಿಯೇ ಇರುತ್ತದೆ. ಇನ್ನು ನಿದ್ರಾವಸ್ಥೆಯಲ್ಲಿ ಮನದೊಳಗಿನ ಕ್ರಿಯೆಯು ಅತ್ಯಂತ ಕಡಿಮೆಯಾಗಿರುತ್ತದೆ. ಆದ್ದರಿಂದ ಈ ಸುಖದ ಪರಿಮಾಣವು (ತಮೋಗುಣೀ ಸುಖ) ಇನ್ನಷ್ಟು ಹೆಚ್ಚಾಗಿರುತ್ತದೆ.

ಸ್ವಪ್ನೇ ಸ ಜೀವೋ ಸುಖದುಃಖ ಭೋಕ್ತಾ,
ಸ್ವಮಾಯಯಾ ಕಲ್ಪಿತ–ಜೀವ ಲೋಕೇ ।
ಸ್ರುಷುಪ್ತಿ ಕಾಲೇ ಸಕಲೇ ವಿಲೀನೇ,
ತಮೋಭಿಭೂತೋ ಸುಖರೂಪಮೇತಿ ॥

ಸ್ವಪ್ನಾವಸ್ಥೆಯಲ್ಲಿ ಅಣುಜೀವಿಯು ಸುಖ ದುಃಖಗಳನ್ನು ಹೆಚ್ಚಿನ ಪರಿಮಾಣದಲ್ಲಿ ಭೋಗಿಸಬಲ್ಲನೆಂದು ಈ ಮುನ್ನ ಹೇಳಿದ್ದೇನೆ. ಏಕೆಂದರೆ ಈ ಅವಸ್ಥೆಯಲ್ಲಿ ಬಹಿರ್ಮುಖೀ ವೃತ್ತಿಗಳೊಂದಿಗೆ ಹೊರ ಜಗತ್ತಿನ ಯಾವುದೊಂದು ವಸ್ತುವಿನೊಂದಿಗೆ ಸಂಗವಿರುವ ಸಂಭವವಿಲ್ಲ. ಸ್ವಾಭಾವಿಕವಾಗಿ ಈ ಸ್ವಪ್ನಾವಸ್ಥೆಯಲ್ಲಿಯೂ ಸಹ, ಜೀವವು ಬ್ರಹ್ಮನಿಂದ ಪೃಥಕ್ಕಾಗಿರುತ್ತದೆ. ಕಾರಣ ಅಲ್ಲಿ ಭೋಕ್ತಾ ಎಂಬ ದ್ವೈತ ಭಾವವಿರುತ್ತದೆ. ಜಾಗ್ರದಾವಸ್ಥೆ ಮತ್ತು ಸ್ವಪ್ನಾವಸ್ಥೆಗಳಲ್ಲಿ ಇರುವ ಅಂತರವೆಂದರೆ, ಸ್ವಪ್ನಾವಸ್ಥೆಯಲ್ಲಿ ಯಾವುದೇ ಹೊರಗಿನ ಪಾಂಚಭೌತಿಕ ಜಗತ್ತಿನಿಂದ ಭೋಗ್ಯ ಉಪಕರಣವನ್ನು ಗ್ರಹಿಸುವುದಿಲ್ಲ. ಭೋಗಿಸುತ್ತಿರುವುದೆಲ್ಲವೂ ಸ್ವಕಲ್ಪಿತವೇ. ಸಾಧಾರಣವಾಗಿ ನಾವು ಮನದ ಮೂರು ಅವಸ್ಥೆಗಳೊಂದಿಗೆ ಪರಿಚಿತರಾಗಿದ್ದೇವೆ. ಇವುಗಳೆಂದರೆ Conscious mind, Subconocions mind ಮತ್ತು un conscious mind ಇವುಗಳನ್ನು ಚೇತನ ಮನ, ಅವಚೇತನ ಮನ ಮತ್ತು ಅಚೇತನ ಮನ ಎಂದೂ ಕರೆಯುತ್ತಾರೆ. ಇವುಗಳ ಯಥಾರ್ಥ ನಾಮಕರಣವೆಂದರೆ, ಕಾಮಮಯ ಕೋಶ, ಮನೋಮಯ ಕೋಶ ಮತ್ತು ಕಾರಣ ಮನ ಎಂದಿರುವುದೇ ಉಚಿತವಾಗಿದೆ. ಜಾಗ್ರದಾವಸ್ಥೆಯಲ್ಲಿ ಮೂರು ಸ್ತರಗಳು ಸರಿಯಾಗಿರುವುದರಿಂದ ಕಲ್ಪನಾಕಾಲದಲ್ಲಿ (ಯಾವುದು ಮನೋಮಯದ ಕಾರ್ಯವೋ) ಕಲ್ಪಿತ ವಸ್ತುವು ಸತ್ಯವೆಂದು ಕಾಣಬರದು. ಆದ್ದರಿಂದ, ಇಂದ್ರಿಯಗಳ ಸಹಾಯದಿಂದ ಪಾಂಚಭೌತಿಕ ಭೋಗ್ಯವಸ್ತುಗಳನ್ನು ಗ್ರಹಿಸುವ ಕಾಮಮಯ ಕೋಶದ ಪ್ರಭಾವದಿಂದ, ಮನೋಮಯ ಕೋಶದ ಕ್ರಿಯೆಯು ಕಲ್ಪಿಸುವುದಷ್ಟೇ ಎಂಬುದನ್ನು ಜೀವಿಯು ಅರಿಯುತ್ತಾನೆ. ಆದರೆ ಸ್ವಪ್ನಾವಸ್ಥೆಯಲ್ಲಿ, ಕಾಮಮಯ ಕೋಶವು ಸ್ಥಾಪಿತವಾಗದಿರುವುದರಿಂದ ಹೊರಜಗತ್ತಿನೊಂದಿಗೆ ಜೀವಿಯ



ಸಂಪರ್ಕವೇ ಕಡಿದು ಹೋಗುತ್ತದೆ. ಮತ್ತು ಆ ಅವಸ್ಥೆಯಲ್ಲಿ ಕಲ್ಪಿತ ಭೋಗ್ಯ ವಸ್ತುವೇ ಸತ್ಯವೆಂದು ಹೊಳೆಯುತ್ತದೆ. ಆದ್ದರಿಂದ ಸ್ವಪ್ನಾವಸ್ಥೆಯಲ್ಲಿ ಜೀವನು ಸುಖದುಃಖಗಳ ಭೋಕ್ತಾ ರೂಪದಲ್ಲಿರುವನೆಂದು ಹೇಳಿದ್ದಾರೆ.

ಸ್ವಪ್ನವೂ ಸಹ, ಎಂದಾದರೂ ಸತ್ಯವಾಗಿರುವುದೇನು? ಬಹು ಜನರ ಮನದಲ್ಲಿ ಈ ಪ್ರಶ್ನೆ ಏಳುತ್ತದೆ. ಜಾಗ್ರದಾವಸ್ಥೆಯಲ್ಲಿ ಜೀವಿಯು ಮಾಡುತ್ತಿರುವ, ಕಲ್ಪನೆಗಳ ಇಲ್ಲವೆ ಕಾರ್ಯಗಳ ಭಾವವು ಅವನ ಮನೋಮಯ ಕೋಶ (ಅವಚೇತನ ಮನ) ದಲ್ಲಿ ತನ್ನ ರೂಪರೇಷೆಗಳನ್ನು ಪಡೆದಿರುತ್ತದೆ. ಯಾವುದೊಂದು ಅವಸ್ಥೆಯಲ್ಲಿ ಸರಿಯಾಗಿ ಅದೇ ತರದ ಭಾವ ಇಲ್ಲವೆ ಕ್ರಿಯೆಗಳ ಸಂಪರ್ಕ ಬಂದ ಮೇಲೆ, ಜೀವಿಯು ಮೊದಲಿನ ಕ್ರಿಯೆಯ ಪುನರಾಭಿವ್ಯಕ್ತಿಯ ಮೂಲಕ,ಬದಲಾದ ಭಾವ, ಕ್ರಿಯೆ ಇಲ್ಲವೆ ವಸ್ತುವಿನ ಸ್ವರೂಪವನ್ನು ನಿರ್ಧರಿಸುತ್ತದೆ. ಅನುಭವಕ್ಕೆ ಬಾರದ ವಸ್ತುಗಳ ಸಂಬಂಧದಲ್ಲಿ ಈ ಪ್ರಕಾರ ಕೂಡಿಕೊಳ್ಳುವ ಪ್ರಸಂಗವಿಲ್ಲದಿರುವ ಕಾರಣ ಇಲ್ಲವೆ ಕೆಲವೊಮ್ಮೆ ಬಹು ಕಾಲ ಮೊದಲು ಅನುಭವಿಸಿದ ವಸ್ತುಗಳನ್ನು ಈ ರೂಪದಿಂದ ಕೂಡಿಕೊಳ್ಳುವ ಪ್ರಸಂಗವಿಲ್ಲದಿರುವ ಕಾರಣ, ಜೀವಿಯು ಬದಲಾದ ವಸ್ತುವನ್ನು ಗುರುತಿಸಲಾರನು. ಭೆಟ್ಟಿಯಾಗಲು ಸ್ವಲ್ಪ ಅನಾನುಕೂಲವಾಯಿತು; ಎಂದು ನೆನಪಿಸಿಕೊಳ್ಳುತ್ತ ಜನರು ಹೇಳುವಂತೆಯೇ ಈ ಪ್ರಸಂಗವೂ ಇದೆಯೆಂದು ತಿಳಿಯಿರಿ. ಆಗ ಇದು ಅದರದೇ ಬದಲಾದ ರೂಪವಾಗಿರಬಹುದು. ಈ ಪ್ರಕಾರ ವಿಚಾರ ಮಾಡಿ ವಸ್ತುವನ್ನು ಪರಿಚಯಿಸಿಕೊಳ್ಳುತ್ತಾರೆ. ಇದನ್ನೇ ಮನೋವಿಜ್ಞಾನದ ಭಾಷೆಯಲ್ಲಿ ಪ್ರತ್ಯಭಿಜ್ಞತೆಯೆನ್ನುತ್ತಾರೆ. ಇಲ್ಲಿ ಒಂದು ದೃಷ್ಟಾಂತ ನೀಡಬಹುದು. ಹದಿಮೂರು–ಹದಿನಾಲ್ಕು ವರ್ಷ ವಯಸ್ಸಿನ ಹುಡುಗನೊಬ್ಬನನ್ನು ನೋಡಿದ್ದೆವು. ಆ ಕಾಲಕ್ಕೆ ಅವನು ಚಿಕ್ಕ ಮಗುವಾಗಿದ್ದನು. ಮರಳಿ ಅದೇ ಹುಡುಗನನ್ನು ಹನ್ನೆರಡು ವರುಷಗಳ ನಂತರ ನೋಡಿದೆವು. ಆಗ ಅವನು ತರುಣನಾಗಿರುತ್ತಾನೆ. ಅವನ ಮುಖ್ಯ ಲಕ್ಷಣ ಮತ್ತು ಅಂಗಾಂಗಗಳಲ್ಲಿ ಬಹಳಷ್ಟು ಅಂತರವು ಕಾಣಬಂದಿತ್ತು. ಆದರೂ ಸಹ, ಸ್ವಲ್ಪ ಶ್ರಮವಹಿಸಿ, ಬಹಳಷ್ಟು ಕ್ಷೇತ್ರಗಳಲ್ಲಿ ಅವನನ್ನು ಗುರುತಿಸುತ್ತೇವೆ. ಮತ್ತು ಗುರುತು ಹಿಡಿಯುತ್ತ ಸಾಗಿದಂತೆ, ಮನದಲ್ಲಿಯೇ, ಆ ಹದಿನಾಲ್ಕು ವಯಸ್ಸಿನ ಬಾಲಕನೇ ದೊಡ್ಡವನಾಗಿ ಹೀಗೆ ಕಾಣುತ್ತಿರಬಹುದು ಎಂದು ವಿಚಾರಿಸುತ್ತೇವೆ. ಇದನ್ನೇ ಪ್ರತ್ಯಭಿಜ್ಞಾ ಎಂದು ಕರೆಯುತ್ತಾರೆ. ಆದರೆ ಎರಡು ರೂಪಗಳಲ್ಲಿಯ ಅಂತರವು ಬಹಳ ಹೆಚ್ಚಾದ ಬಳಿಕ ಪ್ರತ್ಯಭಿಜ್ಞೆಯು ಕೆಲಸಕ್ಕೆ ಬಾರದು. ಆಗ

ನಮಗೆ ಕಂಡುಬರುವುದೇನೆಂದರೆ–ಮನೋಮಯ ಕೋಶದಲ್ಲಿ ಕೂಡಿಬಿದ್ದ ಭಾವಗಳು ನಮಗೆ ದೈನಂದಿನ ಜೀವನ ಯಾತ್ರೆಯಲ್ಲಿ ತುಂಬಾ ಸಹಾಯ ಮಾಡುತ್ತವೆ. ಒಂದು ವೇಳೆ, ಅಗತ್ಯವಿರುವಲ್ಲೆಲ್ಲ ಈ ಸ್ಫುರಣವು ಇಲ್ಲವಾದರೆ, ಲೌಕಿಕ ಜಗತ್ತು ಮತ್ತು ಚಿಂತನ ಜಗತ್ತಿನಲ್ಲಿ ನಮಗೆ ಸಾಕಷ್ಟು ಅಸೌಕರ್ಯ ವುಂಟಾಗುತ್ತದೆ. ನಿದ್ರಾವಸ್ಥೆಯಲ್ಲಿ ಹೊಟ್ಟೆಯು ಬೆಚ್ಚಗಿರುವ ಕಾರಣ, ವಾಯುವು ಮೇಲಕ್ಕೇರುವುದರಿಂದ ಇಲ್ಲವೆ ರೋಗದಲ್ಲಿ ಸ್ನಾಯುವಿನ ವಿಕಾರ ಗಳು ಪ್ರಕಟವಾಗುವುದರಿಂದ, ಬಹುತೇಕ ಮಸ್ತಿಷ್ಕದಲ್ಲಿ (ಮನೋಮಯ ಕೋಶ) ಮಂಥನವುಂಟಾಗುತ್ತದೆ. ನಮ್ಮ ಪೂರ್ವ ಕಲ್ಪಿತ ಇಲ್ಲವೆ ಪೂರ್ವಾನು ಭವದ ವಿಷಯಗಳು ವಿಚ್ಛಿನ್ನ ಭಾವದಿಂದ ಮನೋಮಯ ಕೋಶದಲ್ಲಿ ಮರಳಿ ಏಳುತ್ತವೆ. ಇದನ್ನೇ ನಾವು ಸ್ವಪ್ನವೆನ್ನುತ್ತೇವೆ. ಈ ಪ್ರಕಾರದ ಸ್ವಪ್ನಗಳು ಕೇವಲ ನಿಷ್ಫಲವಷ್ಟೇ ಅಲ್ಲ; ಅವು ಮಸ್ತಿಷ್ಕದಲ್ಲಿ ಬೇರೆ ಬೇರೆ ಅಂಶಗಳಲ್ಲಿ ಆಶಿಸಿದ ವಸ್ತುಗಳ ಪುನರಾವಿರ್ಭಾವ ಮಾತ್ರವಾಗಿರುವ ಕಾರಣ, ಕನಸಿನ ಕಥೆ ಯನ್ನು ಸಹ, ಕ್ರಮಬದ್ಧವಾದ ಕಥೆಯ ರೂಪದಲ್ಲಿ ಹೆಣೆಯಲಾರೆವು. ಸ್ವಪ್ನವು ಇನ್ನೂ ಒಂದು ಪ್ರಕಾರದ್ದಾಗಿರುತ್ತದೆ. ಮಾನವನ ಅತಿಮಾನಸ ಕೋಶವು ಸರ್ವಜ್ಞಾನದ ಆಧಾರವಾಗಿದೆ. ಸದ್ಯೋಭವಿಷ್ಯತ್ತಿನಲ್ಲಿ ಘಟಿಸಬಹುದಾದ ಯಾವುದೇ ದೊಡ್ಡ ಸುಖ ಇಲ್ಲವೆ ದುಃಖ ನೀಡುವ ಯಾವ ಘಟನೆಗಳು ಸರ್ವಜ್ಞ ಕಾರಣ ಮನಕ್ಕೆ ಗೋಚರಿಸುತ್ತವೆಯೋ ಅವು ಯಾವ ಆ ವ್ಯಕ್ತಿಯು ಆ ಸುಖ–ದುಃಖಗಳೊಂದಿಗೆ ಗಾಢ ಸಂಬಂಧ ಹೊಂದಿರುವನೋ, ಅವನ ನಿದ್ರಿತ ಮನದಲ್ಲಿ ಸಂಚರಿಸುತ್ತವೆ. ಈ ಪ್ರಕಾರದ ಸ್ವಪ್ನಗಳು ಯಾವಾಗಲೂ ಬೀಳುವು ದಿಲ್ಲ. ಈ ಪ್ರಕಾರದ ಸ್ವಪ್ನಗಳು ಸತ್ಯಘಟನೆಗಳ ಪೂರ್ವಛಾಯೆಯನ್ನು ತರುತ್ತವೆ.

ನಿದ್ರಿತ ಅವಸ್ಥೆಯಲ್ಲಿ ಕಾಮಮಯ ಕೋಶ (Conscious mind) ಮತ್ತು ಮನೋಮಯ ಕೋಶ (Sub-conscious mind) ಗಳೆರಡೂ ವಿರಮಿಸಿರುತ್ತವೆ. ಕೇವಲ ಕಾರಣ ಮನ (Unconscious mind) ಇಲ್ಲವೆ (ಅತಿಮಾನಸ, ವಿಜ್ಞಾನಮಯ ಮತ್ತು ಹಿರಣ್ಮಯಗಳ ಸಮಷ್ಟಿ)ವೊಂದೇ ಕಾರ್ಯ ಮಾಡುತ್ತದೆ. ಘೋರ ತಮಸ್ಸು ಮುಚ್ಚಿದ ಕಾರಣ; ಮನವು ಸರ್ವ ಜ್ಞಾನದ ಆಧಾರವಾಗಿಯೂ ಸಹ, ವಾಸ್ತವದಲ್ಲಿ, ತನ್ನ ನಾಲ್ಕೂ ನಿಟ್ಟಿನಲ್ಲಿ ಮುತ್ತಿದ ಅಂಧಕಾರದಲ್ಲಿ ಬಿದ್ದುಕೊಂಡು ಯಾವುದೇ ವಿಷಯವನ್ನು ತಿಳಿದು ಕೊಳ್ಳಲು ಸಮರ್ಥವಾಗುವುದಿಲ್ಲ. ಯಾವ ಕಾರಣದಿಂದ ಅಗಲೊಲ್ಲದೇಕೆ? ಆ ಸಮಯಕ್ಕೆ ಆ ವಿಷಯದ ವಿಷಯೀಯಾಗಿಯೂ ಸಹ, ವಿಷಯೀ ಭಾವ ಹೊಂದುವಲ್ಲಿ ಸಕ್ಷಮವಾಗದು. ಆದ್ದರಿಂದ, ಒಂದು ವಿಶೇಷ ತೃಪ್ತಿ ಇಲ್ಲವೆ



ಒಂದು ವಿಶೇಷ ಸುಖದ ಸ್ಥಿತಿಯಲ್ಲಿ ಇರುತ್ತದೆ. ಶೋಕ, ದುಃಖ ಮತ್ತು ದೋಷಗಳಿಂದ ಹೃದಯವಿಹ್ವಲನಾದವನು ಸಹ, ನಿದ್ರಿತ ಅವಸ್ಥೆಯಲ್ಲಿರು ತ್ತಾನೆ. ಈ ಆರಾಮ, ಈ ಸುಖವು ತಮೋಗುಣೀ (ಅಜ್ಞತೆಯ ಕಾರಣ) ಸುಖವಾಗಿದೆ. ನಿದ್ರೆಯು ಇಂಥದೊಂದು ಅವಸ್ಥೆ. ಇದು ನಡೆದಾಗ ಇದರ ಅನುಭವವಾಗದು. ಕೇವಲ ಅದು ಮುಗಿದ ಬಳಿಕ ಮಾತ್ರ, ಕೆಲ ಕ್ಷಣ ಮೊದಲು ನಮಗೊಂದು ವಿಷಯಮುಕ್ತ ಅಭಾವಾವಸ್ಥೆಯಿತ್ತು; ಎಂಬ ಅನುಭವ ವಾಗುತ್ತಿದೆ.

"ಅಭಾವ ಪ್ರತ್ಯಯಾಲಂಬನಾವೃತ್ತಿರ್ನಿದ್ರಾ."

—ಪಾತಂಜಲ.

ನಿದ್ರಿತ ಜೀವನು ಬ್ರಹ್ಮನ ಕಾರಣಾರ್ಣವದಲ್ಲಿ ಪೂರ್ಣ ಮುಚ್ಚಲ್ಪಟ್ಟಿ ರುವ ಕಾರಣ, ಅವನ ಅಣು ಬೋಧೆಯು ಆ ಸಮಯದ ಭಾವದಿಂದ ಗುಪ್ತ ವಾಗಿರುತ್ತದೆ. ಆದ್ದರಿಂದ ಆ ಕಾಲದ ಅವನ ಆನಂದದ ಪ್ರಮಾಣವು ಜಾಗ್ರದಾ ವಸ್ಥೆಗಿಂತ ಅಧಿಕವಾಗಿರುತ್ತದೆ.

ನಿದ್ರೆ ಮತ್ತು ಮರಣಗಳ ನಡುವಿನ ಅಂತರವೆಂದರೆ, ಮರಣಾನಂತರ ಸ್ಥೂಲ, ಸೂಕ್ಷ್ಮ ಮತ್ತು ಕಾರಣ ಈ ಮೂರು ಮನಗಳ ಕಾರ್ಯವು ನಿಲ್ಲುತ್ತದೆ. ನಿದ್ರಾಕಾಲದಲ್ಲಿ ಕಾರಣ ಮನವನ್ನು ಧರಿಸಿದ ದೇಹದಲ್ಲಿ ಹತ್ತು ವಾಯುಗಳ ಕಾರ್ಯವು ನಿರ್ವಿಘ್ನವಾಗಿ ಸಾಗಿರುವುದರಿಂದ, ಪ್ರಾಣ ಶಕ್ತಿಯು ಸರಿಯಾಗಿಯೇ ಇರುತ್ತದೆ. ಆದರೆ ಮರಣದಲ್ಲಿ ಹತ್ತು ವಾಯುಗಳ ವಿಕೃತಿಯಾಗುವುದರಿಂದ, ಮತ್ತು ಪ್ರಾಣವನ್ನು ತ್ಯಜಿಸುವುದರಿಂದ, ಕಾರಣ ಮನದ ಕಾರ್ಯವನ್ನು ಸಹ ನಿಲ್ಲಿಸಬೇಕಾಗುತ್ತದೆ. ಸ್ನಾಯು ಕೋಶ ಇಲ್ಲವೆ ಸ್ನಾಯು ತಂತುಗಳು ಶಕ್ತಿ ಹೀನವಾಗುವ ಕಾರಣ, ಶರೀರವು ಜಡದಂತೆ ಬಿದ್ದುಕೊಂಡಿರುತ್ತದೆ. ನಿದ್ರೆ ಮತ್ತು ಅಚೇತನ ಅವಸ್ಥೆಗಳ ನಡುವಿನ ಅಂತರವೆಂದರೆ, ನಿದ್ರಾಕಾಲದಲ್ಲಿ ಸ್ಥೂಲ ಮತ್ತು ಸೂಕ್ಷ್ಮ ಮನಗಳು (ಕಾಮಮಯ ಕೋಶ ಮತ್ತು ಮನೋಮಯ ಕೋಶ) ಪರಿಶ್ರಾಂತಿಯ ನಂತರ ವಿಶ್ರಮಿಸುತ್ತವೆ. ಮತ್ತು ಅಚೇತನಾವಸ್ಥೆ ಯಲ್ಲಿ, ಹೊರಗಿನಿಂದ ಯಾವುದೇ ಆಘಾತವಾದರೆ ಇಲ್ಲವೆ ಮನದ ಮೇಲೆ ಏನಾದರೂ ಆಘಾತವಾದರೆ, ಕಾಮಮಯ ಮತ್ತು ಮನೋಮಯ ಕೋಶಗಳು ಕಾರ್ಯ ನಿಲ್ಲಿಸಲು ಬಾಧ್ಯಸ್ಥವಾಗುತ್ತವೆ. ನಿದ್ರೆಯು ಆ ಸಮಯದ ಮಟ್ಟಿಗಿನ ವಿಶ್ರಾಂತಿಯಷ್ಟೇ. ಆದ್ದರಿಂದ, ನಿದ್ರೆ ಮುಗಿದ ಬಳಿಕ ಶರೀರದಲ್ಲಿ ಸ್ವಾಸ್ಥ್ಯ

ವೆನಿಸುತ್ತದೆ. ಇನ್ನು ಅಚೈತನ್ಯ ಅವಸ್ಥೆಯಲ್ಲಿ ಬಲದಿಂದ ಕ್ರಿಯೆಯನ್ನು ನಿಲ್ಲಿಸುವುದರಿಂದ, ಶರೀರವು ಅನಂತರ ಅತ್ಯಂತ ದುರ್ಬಲವೆನಿಸುತ್ತದೆ.

ಸವಿಕಲ್ಪ ಸಮಾಧಿ ಮತ್ತು ನಿದ್ರೆಗಳಲ್ಲಿಯ ಅಂತರವೆಂದರೆ, ಸವಿಕಲ್ಪ ಸಮಾಧಿಯಲ್ಲಿ ಜೀವ ಮನವು ಬ್ರಾಹ್ಮೀ ಮನದೊಂದಿಗೆ ಒಂದಾಗಿ ಹೋಗುತ್ತದೆ. ಮತ್ತು ಆ ಕಾಲಕ್ಕೆ ಆ ಬ್ರಾಹ್ಮೀ ಮನವು ಅನಂತ ಸುಖ (ಆನಂದ) ವನ್ನು ಪಡೆಯುತ್ತದೆ. ಆದ್ದರಿಂದ ಬಾಹ್ಮೀ ಮನದ ಹೊರಗೆ ಯಾವುದೇ ಭೋಗ್ಯ ಸತ್ತೆಯು ಇಲ್ಲದಿರುವ ಕಾರಣ, ಹೊರಗಿನ ವಸ್ತುವಿನ ಸಂಗ, ಏಟು ಇದಿರೇಟುಗಳ ಫಲವಾಗಿ ಬ್ರಹ್ಮ ಮನದ ಶಾಂತಿಯು ನಷ್ಟವಾಗುವ ಸಂಭವವೂ ಇಲ್ಲ. ನಿದ್ರೆ ಮತ್ತು ಅಚೈತನ್ಯ ಅವಸ್ಥೆಗಳಿಗೆ ಸಮನಾಗಿ ಸವಿಕಲ್ಪದಲ್ಲಿ ಸಹ ಪ್ರಾಣಶಕ್ತಿಯು ಚೆನ್ನಾಗಿಯೇ ಇರುತ್ತದೆ. ಅದೇ ಮೇರೆಗೆ, ದೈಹಿಕ ಕಾರ್ಯವು ಇತರ ಜಡ ವಸ್ತುಗಳಂತೆ ಬ್ರಹ್ಮ ಮನದ ನಿರ್ದೇಶಾನುಸಾರ ನಿಯಂತ್ರಿತವಾಗುತ್ತಗೆ. ಆದರೆ, ಶರೀರವು ಇನ್ನೂ ಭೋಗಿಸಬೇಕಾದ ಸಂಸ್ಕಾರಗಳು ಜೀವಿಯನ್ನು ಹೆಚ್ಚು ಕಾಲದವರೆಗೆ ಈ ಬ್ರಾಹ್ಮಿ ಸ್ಥಿತಿಯಲ್ಲಿ ಇರಗೊಡುವದಿಲ್ಲ. ಪ್ರಕೃತಿಯ ರಜೋಗುಣವು ಸಂಸ್ಕಾರ ಭೋಗಕ್ಕೋಸುಗ ಅದನ್ನು ಜೀವ ಭಾವದಲ್ಲಿ ತಂದಿರಿಸುತ್ತದೆ.

ನಿರ್ವಿಕಲ್ಪ ಸಮಾಧಿ ಮತ್ತು ಸವಿಕಲ್ಪ ಸಮಾಧಿಗಳಲ್ಲಿ ಇರುವ ಅಂತರವೆಂದರೆ, ನಿರ್ವಿಕಲ್ಪ ಸಮಾಧಿಯಲ್ಲಿ ಜೀವಿಯ ಮನವು ನಿಷ್ಕಲ ಪುರುಷನಲ್ಲಿ ಸೇರಿಬಿಟ್ಟಿರುತ್ತದೆ. ಆದ್ದರಿಂದ, ಆ ಅವಸ್ಥೆಯಲ್ಲಿ ಭೋಗ, ಭೋಗ್ಯ, ಭೋಕ್ತಾ ಇಲ್ಲವೆ ಜ್ಞಾನ, ಜ್ಞೇಯ, ಜ್ಞಾತಾ ಎಂಬ ಭಾವಗಳಿರುವದಿಲ್ಲ. ಆಗ ಕೇವಲ ಒಂದು ಅಭಿವ್ಯಕ್ತಿಯಾಗದ ಆನಂದ ಸತ್ತೆಯೇ ಆಗಿರುತ್ತದೆ. ಅದರ ಭೋಕ್ತೃವು ಆನಂದದಲ್ಲಿ ಮೈಮರೆತು "ಏನು ಪಡೆದೆ? ಏನು ಪಡೆಯುವೆ? ಎಂದು ಸ್ತಂಭಿತನಾಗುತ್ತಾನೆ. ಜೀವಿಯ ಈ ಅವಸ್ಥೆಯು ಹೆಚ್ಚು ಕಾಲದ ವರೆಗೆ ಇರುವುದಿಲ್ಲ. ಪ್ರಕೃತಿಯ ರಜೋಗುಣವು ಕೆಲವೊಂದು ಸಂಸ್ಕಾರಗಳನ್ನು ಭೋಗಿಸಲಕ್ಕೋಸುಗ ಅದನ್ನು ಜೀವ ಭಾವದಲ್ಲಿ ತಂದಿರಿಸುತ್ತದೆ. ಈ ಜೀವ ಭಾವದಲ್ಲಿ ತಂದ ಬಳಿಕ, ಅಜ್ಞಾತ ಲೋಕದಿಂದ ಒಂದು ನಿರಂತರವಾದ ಆನಂದದ ಧಾರೆಯು ಅವನ ಮನವನ್ನು, ಪ್ರಾಣವನ್ನು ಮತ್ತು ಅವನ ಸರ್ವಸತ್ತೆಗಳನ್ನು ಮುಳುಗಿಸುತ್ತದೆ. ಎಂಬುದನ್ನು ಅವನು ಕಾಣುತ್ತಾನೆ.



ಅಭಾವೋತ್ತರಾನಂಡ ಪ್ರತ್ಯಯಾಲಂಬಿನಿ ವೃತ್ತಿರ್ತಸ್ಯಪ್ರಮಾಣಂ.

—ಆನಂದಮೂರ್ತಿ.

ಅಭಾವ ಬೋಧದ ನಂತರ ಮನವು ಆನಂದ ಧಾರೆಯಲ್ಲಿ ಮುಳುಗಿ ಹೋಗುವುದು. ಆಗ ಇದಕ್ಕಿಂತ ಮುಂಚಿನ ತಥಾಕಥಿತ ಅಭಾವಾವಸ್ಥೆಯು ಬೇರಾವುದೂ ಇರದೆ, ನಿರ್ವಿಕಲ್ಪ ಸಮಾಧಿಯೇ ಇತ್ತು. (ಮನವು ಇರಲಿಲ್ಲ ಆದ್ದರಿಂದ ವಿಷಯವಿರದು. ಆದ್ದರಿಂದ ಆ ಅವಸ್ಥೆಯು ಅಭಾವದ ಅವಸ್ಥೆಯಾಗಿತ್ತು) ಎಂದು ತಿಳಿಯತಕ್ಕದ್ದು. ಯಾರ ಸಂಸ್ಕಾರಗಳು ಭೋಗಿಸದೆ ಉಳಿದಿಲ್ಲವೋ,ಅವರ ಸವಿಕಲ್ಪ ಇಲ್ಲವೆ ನಿರ್ವಿಕಲ್ಪ ಸಮಾಧಿಯು ಭಂಗಗೊಳ್ಳುವ ಪ್ರಶ್ನೆಯೇ ಏಳದು. ಈ ಶಾಶ್ವತ ಸವಿಕಲ್ಪದ ಹೆಸರೇ ಮುಕ್ತಿ. ಮತ್ತು ಈ ಶಾಶ್ವತ ನಿರ್ವಿಕಲ್ಪದ ಹೆಸರೇ ಮೋಕ್ಷ. ಆನಂದ ಮಾರ್ಗದ ಸಾಧನ ಪದ್ಧತಿಯಲ್ಲಿ, ನೀವು ಇವೆರಡನ್ನೂ ಚೆನ್ನಾಗಿ ಅರಿಯುತ್ತೀರಿ.

"ಪುನಶ್ಚ ಜನ್ಮಾಂತರ ಕರ್ಮಯೋಗಾತ್

ಸ ಏವ ಜೀವೋಸ್ವಪಿತಿ ಪ್ರಬುದ್ಧಃ

ಪುರತ್ರಯೇ ಕ್ರೀಡತಿ ಯಸ್ಯ ಜೀವಸ್ತತಸ್ತು ಜಾತ ಸಕಲಂ ವಿಚಿತ್ರಂ,

ಆಧಾರಮಾನಂದಮುಖಂಡ ಬೋಧಂ

ಯಸ್ಮಿಲ್ಲಯಂ ಯಾತಿ ಪುರತ್ರಯಂ ಚ"

—ಅಥರ್ವ.

ಸವಿಕಲ್ಪ ಮತ್ತು ನಿರ್ವಿಕಲ್ಪ ಸಮಾಧಿಗಳು ಯಾವ ಕಾರಣದಿಂದ ಭಂಗವಾಗುವವೋ, ಸರಿಯಾಗಿ ಅದೇ ಕಾರಣದಿಂದ ಕರ್ಮಫಲವನ್ನು ಭೋಗಿಸದೆ ಇರುವ ದಿನದ ವರೆಗೆ ನಿದ್ರೆಯೂ ಸಹ ಭಂಗವಾಗುತ್ತ ಸಾಗುವುದು. ಕರ್ಮದ ಪ್ರತಿಕ್ರಿಯಯ ಬೀಜವು ಕಾರಣ ಮನದಲ್ಲಿ ಸಂಚಿತವಾಗಿರುತ್ತದೆ. ಪ್ರಕೃತಿಯ ರಜೋಗುಣದ ಪ್ರಭಾವದಿಂದ, ನಿದ್ರೆಯು ಕೊನೆಗೊಳ್ಳುವ ಮುಂಚೆ ಅವಚೇತನ ಮನ (ಮನೋಮಯ ಕೋಶ) ಮತ್ತು ಬಹುತೇಕ ಅದರೊಂದಿಗೆ ಚೇತನ ಮನವೂ (ಕಾಮಮಯ ಕೋಶ) ಸಹ ಜಾಗ್ರತವಾಗುತ್ತವೆ. ಇದನ್ನೇ ನಾವು ನಿದ್ರಾಭಂಗ ಎಂದು ಕರೆಯುತ್ತೇವೆ. ಬಹಳ ಸಲ, ನಿದ್ರೆ ಭಂಗವಾಗುವ ಕಾಲಕ್ಕೆ ಮನೋಮಯ ಕೋಶವು ಎಚ್ಚರಿಯುತ್ತದೆ. ಆದರೆ ಕಾಮಮಯ ಕೋಶವಿನ್ನೂ ಎಚ್ಚತ್ತಿರುವುದಿಲ್ಲ. ಇಂಥ ಸಮಯದಲ್ಲಿ ಜೀವಿಯು ತನ್ನ ಸಂಸ್ಕಾರದ ಕಾರಣ, ಸ್ವಪ್ನವನ್ನು ನೋಡುತ್ತಾನೆ. ಒಂದು ವೇಳೆ, ಈ ಸ್ವಪ್ನವು ಯಾವಾಗಲಾದರೂ ಶರೀರಕ್ಕೆ ಇಲ್ಲವೆ ರೋಗಕ್ಕೆ ಸಂಬಂಧಿಸಿರದಿದ್ದರೆ, ಆಗ

ಅದರ ಪೂರ್ವಾವಸ್ಥೆಯು ಕಾರಣ ಮನದಲ್ಲಿ ಇರುತ್ತದೆಯಾದ್ದರಿಂದ, ಇಂಥ ಸ್ವಪ್ನಗಳು ಸತ್ಯವಾಗುತ್ತವೆ.

ಪ್ರಕೃತಿಯ ಸಯೋಗದಿಂದ ಪುರುಷನ ಮೂರು ಪ್ರಕಾರದ ಭಾವ ಇಲ್ಲವೆ ಅವಸ್ಥೆಗಳು ಉಂಟಾಗುತ್ತವೆ. ಇವುಗಳನ್ನೇ ತ್ರಿಪುರ ಎನ್ನುತ್ತಾರೆ. ಜೀವ ಭಾವದಲ್ಲಿ ಈ ತ್ರಿಪುರವು ಅವನ ಜಾಗ್ರತ, ಸ್ವಪ್ನ ಮತ್ತು ಸುಷುಪ್ತಿ ಅವಸ್ಥೆಗಳಾಗಿದೆ. ಈ ಮೂರು ಅವಸ್ಥೆಗಳ ಹೊರಗೆ ಸಾಕ್ಷೀ ಸ್ವರೂಪನು ಇದ್ದಾನೆ. ಅವನೇ ಆತ್ಮ ಇಲ್ಲವೆ ಪುರುಷ. ಈ ವಿಚಿತ್ರ ಜಗತ್ತು (ತೋರುವ ಜಗತ್ತು) ಪುರತ್ರಯಾತ್ಮಕ ಭಾವವನ್ನು ಗ್ರಹಿಸಿಯೇ ನಿಂತಿದೆ. ಮತ್ತು ಜೀವಿಗಳ ಮಧ್ಯೆ ಕಾರ್ಯ ಮಾಡುತ್ತ ಸಾಗಿದೆ. ಜೀವರ ಭೋಗ್ಯವೂ ಸಹ, ಈ ವಿರಾಟ ಪುರತ್ರಯಗಳಿಂದ ಕೂಡಿದ ಜಗತ್ತು ಆಗಿದೆ. ಇದುವೇ ಕ್ಷೀರಾಬ್ಧಿ, ಗರ್ಭೋದಕ ಮತ್ತು ಕಾರಣಾರ್ಣವ ಎಂಬ ಹೆಸರಿನಿಂದ ಪ್ರಸಿದ್ಧವಾಗಿದೆ. ಅದರ ಸೃಷ್ಟಿಯು ಪರಮ ಪುರುಷನ ಕಲ್ಪನೆಯಿಂದಾಗಿದೆ, ಅವನ ಸತ್ತ್ವಗುಣ, ರಜೋಗುಣ ಮತ್ತು ತಮೋಗುಣಾತ್ಮಕ ಅಭಿಮಾನದ ಫಲವಾಗಿ ಆಗಿದೆ. ಈ ಮೂರು ಅವಸ್ಥೆಗಳ ಆಧಾರವನ್ನು ಅವನ ನಾಲ್ಕನೆಯ ಪುರವೆನ್ನುತ್ತಾರೆ. ಈ ನಾಲ್ಕನೆಯ ಪುರವು ತ್ರಿಗುಣಾತೀತವಿದೆ. ಆದ್ದರಿಂದ ಅವನ ಸತ್ತೆಯು ದೇಶ ಕಾಲ ಮತ್ತು ಪಾತ್ರಗಳ ಅಳತೆಯ ಆಚೆಗಿದೆ; ತ್ರಿಪುರದ ಊರ್ಧ್ವದಲ್ಲಿದೆ. ಈ ನಾಲ್ಕನೆಯ ಅವಸ್ಥೆಯನ್ನು ನಿರ್ಗುಣ, ಕೈವಲ್ಯ ಇಲ್ಲವೆ ತುರೀಯ ಅವಸ್ಥೆಯೆಂದು ಕರೆಯುತ್ತಾರೆ. ಅಣು ಜೀವಿಯ ಸಂಸ್ಕಾರವು ಇನ್ನೂ ಬಾಕಿ ಉಳಿದಿರುವವರೆಗೆ, ಈ ಭೋಗಕ್ಕಾಗಿ ಜಾಗ್ರತ್, ಸ್ವಪ್ನ ಮತ್ತು ಸುಷುಪ್ತಿಯೆಂಬ ಈ ಮೂರು ಪುರಗಳಲ್ಲಿ ಚಲಿಸಬೇಕಾಗುತ್ತದೆ. ಮತ್ತು ಸಾಧನೆಯ ಫಲವಾಗಿ ಎಲ್ಲ ಸಂಸ್ಕಾರಗಳಿಂದ ಜೀವಿಯು ಮುಕ್ತನಾದಾಗ, ಆ ತ್ರಿಪುರದ ಹೊರಗೆ ತುರೀಯ ಪದ (ಪರಮ ಪದ) ದಲ್ಲಿ ಸೇರಿಕೊಳ್ಳುತ್ತಾನೆ.

ಓಂ (ಪ್ರಣವ) ಇಲ್ಲವೆ ಓಂಕಾರವು ವರ್ಣಗಳಿಂದ ಕೂಡಿದ ಮಂತ್ರವಾಗಿದೆ. ಆ ವರ್ಣಗಳೆಂದರೆ ಅ, ಉ, ಮ, ಮತ್ತು ನಾದ ಬಿಂದು. ಈ ನಾದಬಿಂದುವೇ ನಾಲ್ಕನೇ ಅವಸ್ಥೆಯ ಅಂದರೆ ನಿರ್ಗುಣ ಸತ್ತೆಯ ದ್ಯೋತಕವಾಗಿದೆ. ಇದರಲ್ಲಿ ಸತ್ತ್ವ, ರಜಃ ಇಲ್ಲವೆ ತಮಃಗಳ ಯಾವುದೇ ಗುಣವು ಸ್ಫುಟವಾದ ಅವಸ್ಥೆಯಲ್ಲಿ ಇಲ್ಲ. ಜೀವ ಭಾವದ 'ಅ'ವು ಸತ್ತ್ವಗುಣ ಪ್ರಾಧಾನ್ಯದ ದ್ಯೋತಕವಾಗಿದೆ. ಮತ್ತು ಜಾಗ್ರದಾವಸ್ಥೆಯ ಸೂಚಕವಾಗಿದೆ. 'ಉ', ರಜೋಗುಣ ಪ್ರಾಧಾನ್ಯದ ದ್ಯೋತಕವಾಗಿದೆ. ಮತ್ತು ಸ್ವಪ್ನಾವಸ್ಥೆಯ



ಸೂಚಕವಾಗಿದೆ. 'ಮ' ತಮೋಗುಣ ಪ್ರಾಧಾನ್ಯದ ದ್ಯೋತಕವಾಗಿದೆ. ಮತ್ತು ಸುಷುಪ್ತಾವಸ್ಥೆಯ ಸೂಚಕವಾಗಿದೆ. ಸಗುಣ ಬ್ರಹ್ಮನಲ್ಲಿ, ಅ, ಉ, ಮ ಇವು ಯಥಾಕ್ರಮದಿಂದ ಕ್ಷೀರಾಬ್ಧಿ, ಗರ್ಭೋದಕ ಮತ್ತು ಕಾರಣಾರ್ಣವಗಳ ಸೂಚಕವಾಗಿವೆ. ಬಿಂದುವು ನಾಲ್ಕನೆಯ ಇಲ್ಲವೆ ತುರೀಯ ಅವಸ್ಥೆಯ ದ್ಯೋತಕವಾಗಿದ್ದು, ನಿರ್ಗುಣಬ್ರಹ್ಮನ ಸೂಚಕವಾಗಿದೆ.

A point has got position but no magnitude. ನಿರ್ಗುಣ ಬ್ರಹ್ಮನ ಸಂಬಂಧವಾಗಿ ನಾವು ಏನನ್ನೂ ಹೇಳಲಾರೆವು. ಏನನ್ನೂ ಯೋಚಿಸಲಾರೆವು. (,) ಕೇವಲ ತಿಳಿಯುವುದಕ್ಕೋಸುಗ, ಬಿಂದುವನ್ನು ಬಳಸುತ್ತೇವಷ್ಟೇ. ನಿರ್ಗುಣ ಬ್ರಹ್ಮವಾಚಕ. ಮತ್ತು ಸಗುಣಬ್ರಹ್ಮವಾಚಕ ಓಂ ಮತ್ತು ನಡುವೆ "‿" ಚಿಹ್ನವು, ಅವ್ಯಕ್ತ ಪ್ರಕೃತಿಯನ್ನು ವ್ಯಕ್ತಾವಸ್ಥೆಯಲ್ಲಿ ಪರಿಣಮಿಸುವುದರ ಜ್ಞಾಪಕವಾಗಿದೆ.

ಜೀವನದಲ್ಲಿ ಜಾಗ್ರದವಸ್ಥೆಯ ಅಭಿಮಾನೀ ಪುರುಷನನ್ನು ವಿಶ್ವ (ದಾರ್ಶನಿಕ ಶಬ್ದ) ಇಲ್ಲವೆ ವಿಷಯೀ ಪುರುಷ ಎನ್ನುತ್ತಾರೆ. ಎಲ್ಲ ಇಂದ್ರಿಯಗಳ ಮೂಲಕ ವಿಷಯಭೋಗವು ಜಾಗ್ರದವಸ್ಥೆಯಲ್ಲಿಯೇ ಯಥಾವತ್ತಾಗಿ ಆಗುವುದರಿಂದ ಈ ಅವಸ್ಥೆಯ ಪುರುಷನನ್ನು ವಿಷಯೀಪುರುಷ ಎನ್ನುತ್ತಾರೆ. ಜೀವ ಭಾವದಲ್ಲಿ, ಸ್ವಪ್ನಾವಸ್ಥೆಯ ಅಭಿಮಾನೀ ಪುರುಷನನ್ನು ತೈಜಸ ಎನ್ನುತ್ತಾರೆ. ಇನ್ನೂ ಸುಷುಪ್ತಿ ಅವಸ್ಥೆಯ ಅಭಿಮಾನೀ ಪುರುಷನನ್ನು ಪ್ರಾಜ್ಞ ಎನ್ನುತ್ತಾರೆ. ಸಗುಣ ಬ್ರಹ್ಮದ ಕ್ಷೀರಾಬ್ಧಿ, ಗರ್ಭೋದಕ ಮತ್ತು ಕಾರಣಾರ್ಣವ ಅವಸ್ಥೆಗಳ ಅಭಿಮಾನೀ ಪುರುಷನನ್ನು ಕ್ರಮಾನುಸಾರ ವಿರಾಟ, ಹಿರಣ್ಯಗರ್ಭ ಮತ್ತು ಈಶ್ವರ (ದಾರ್ಶನಿಕ ಶಬ್ದ) ಎನ್ನುತ್ತಾರೆ. ಆದ್ದರಿಂದ 'ಅ' ವಿಶ್ವ ಮತ್ತು ವಿರಾಟರ ಬೀಜಾಕ್ಷರವಾಗಿದೆ. 'ಉ'–ತೈಜಸ ಮತ್ತು ಹಿರಣ್ಯಗರ್ಭದ ಬೀಜಾಕ್ಷರವಾಗಿದೆ. ಇನ್ನು 'ಮ' ಪ್ರಾಜ್ಞ ಮತ್ತು ಈಶ್ವರ ಬೀಜಾಕ್ಷರವಾಗಿದೆ. ತುರೀಯ ಅವಸ್ಥೆಯಲ್ಲಿ ಜೀವ ಭಾವ ಮತ್ತು ಬ್ರಹ್ಮ ಭಾವಗಳಲ್ಲಿ ಯಾವ ಅಂತರವೂ ಇಲ್ಲ. ಏಕೆಂದರೆ ಅಲ್ಲಿ 'ನಾನು ಇದ್ದೇನೆ' ಎಂಬ ಬೋಧವೇ ಇಲ್ಲ. ಆದ್ದರಿಂದ ಈ ಅವಸ್ಥೆಯಲ್ಲಿ ಯಾವುದೇಬೀಜಾಕ್ಷರವು ಸಹ ಇಲ್ಲ. ಏಕೆಂದರೆ, ಉತ್ಪತ್ತಿಯ ಕಾರಣವನ್ನು ಬೀಜವೆನ್ನುತ್ತಾರೆ. ಉತ್ಪತ್ತಿ, ಅನುತ್ಪತ್ತಿ, ಸೃಷ್ಟಿ, ಸ್ಥಿತಿ ಮತ್ತು ಲಯಗಳ ಪ್ರಶ್ನೆಯೇ ಏಳದಿರುವಲ್ಲಿ–ಸಹ–ಬೀಜದ ಪ್ರಶ್ನೆಯು ಏಳುವುದಿಲ್ಲ. ತುರಿಯಾವಸ್ಥೆಯಲ್ಲಿ ಜ್ಞಾತಾ, ಜ್ಞೇಯ ಮತ್ತು ಜ್ಞಾನ ಮತ್ತು ಅದೇ ಮೇರೆಗೆ ಧ್ಯಾತಾ, ಧ್ಯೇಯ ಮತ್ತು ಧ್ಯಾನ ಈ ಮೂರೂ ಏಕೀಭವಿಸುತ್ತವೆ. ಆದ್ದರಿಂದ

ಇದರ ವಾಚಕ ನಾದಬಿಂದುವಿದೆ. ಅದೇ ಪರಮ ಪದಕ್ಕೆ ಈಶ್ವರ-ಗ್ರಾಸ ಎಂದು ಕರೆಯುತ್ತಾರೆ. ಅರ್ಥಾತ್ ಅಲ್ಲಿ ಈಶ್ವರನು ಸಹ ಗ್ರಸ್ತನಾಗಿರುತ್ತಾನೆ. ಈ ಪುರತ್ರಯವು ನಿರ್ಗುಣದಲ್ಲಿಯೇ ಲೀನವಾಗುತ್ತದೆ. ಆದ್ದರಿಂದ ಇದಕ್ಕೆ ಈಶ್ವರಗ್ರಾಸ ಎಂದು ಹೆಸರಿಸುವುದು ತುಂಬಾ ಚೆನ್ನಾಗಿದೆ.

ಈ ತೋರು ಜಗತ್ತು ಪರಮ ಪುರುಷನ ವಿಕಾಸವೇ ಆಗಿದೆ. ಪುರುಷನ ಮೇಲೆ ತ್ರಿಗುಣಗಳ ಪ್ರಭಾವವು ಇರುವ ವರೆಗೆ ಜಗತ್ತು ಇರುತ್ತದೆ. ಸಾಧಕನು ಜ್ಞಾನಮಂಥನದಿಂದ ಮತ್ತು ಅಭ್ಯಾಸದ ಮೂಲಕ ಪುರತ್ರಯಗಳನ್ನು ಇಲ್ಲವಾಗಿಸುವ ತನಕ, ಅವನಲ್ಲಿ (ಜೀವಭಾವದಲ್ಲಿ) ಮತ್ತು ಬ್ರಹ್ಮನಲ್ಲಿ ಯಾವ ಭೇದವೂ ಇರುವುದಿಲ್ಲ. ತುರೀಯಾವಸ್ಥೆಯಲ್ಲಿ ಗುಣ ರಾಹಿತ್ಯದ ಕಾರಣ, ವಸ್ತುಗತ ಭೇದದ ಸಮ್ಯಕ್ ನಿವೃತ್ತಿಯಾಗುತ್ತದೆ.

"ಏತಸ್ಮಾಗ್ ಜಾಯತೇ ಪ್ರಾಣೋ ಮನಃ ಸರ್ವೇಂದ್ರಿಯಾಣಿ ಚ
ಖಂ ವಾಯು ಜ್ಯೋತಿರಾಪಶ್ಚ ಪೃಥ್ವೀ ವಿಶ್ವಸ್ಯ ಧಾರಿಣೀ."

ಈ ಸೃಷ್ಟ ಜಗತ್ತು ಬ್ರಹ್ಮನ ಸಂಕಲ್ಪವೇ ಆಗಿದೆ. ಆದ್ದರಿಂದ, ಪಂಚ ಭೂತಗಳ ಮಿಲನ ಮತ್ತು ವಿಚ್ಛೇದಗಳ ಕಾರಣ, ಪ್ರಾಣಶಕ್ತಿ ಇಲ್ಲವೆ ಪ್ರಾಣ ವಾಯುವು ವ್ಯಷ್ಟಿದೇಹದಲ್ಲಿ ಕ್ರಿಯಾಶೀಲವಾಗಿರುತ್ತದೆ. ಅದೂ ಸಹ, ಆ ಬ್ರಹ್ಮನ ಕಲ್ಪಿತ ವಸ್ತುವಷ್ಟೇ. ಮಾನವನು ಪ್ರಾಣಶಕ್ತಿಯನ್ನು ಮೊತ್ತಮೊದಲು ತನ್ನ ತಾಯಿ ತಂದೆಯಂದಿರ ದೇಹದಿಂದ ಆಹರಣ ಮಾಡಿಕೊಳ್ಳುತ್ತಾನೆ; ತಂದುಕೊಳ್ಳುತ್ತಾನೆ. ಅದಾದ ಬಳಿಕ, ಪಾಂಚಭೌತಿಕ ಉಪಾದಾನಗಳಿಂದ ಸಂಗ್ರಹಿಸಿದ ಖಾದ್ಯಾನ್ನದ ಮೂಲಕ, ರಸರಕ್ತಾದಿ ಭೂತಗಳ ಪರಿಣಾಮದಿಂದ ಇನ್ನಷ್ಟು ಭೂಮಿಷ್ಠನಾದ ಮೇಲೆ ತಾನೇ ಖಾದ್ಯ, ಪಾನೀಯ, ಪ್ರಕಾಶ ಮತ್ತು ವಾಯುಗಳ ಮೂಲಕ ಆ ಪ್ರಾಣಶಕ್ತಿಯನ್ನು ಗ್ರಹಿಸಿದನು. ಆದ್ದರಿಂದ ಜೀವಿಗಳ ಪ್ರಾಣದ ಉಗಮವು ಆ ಬ್ರಹ್ಮವೇ ಆಗಿದೆ. ಬ್ರಹ್ಮನು ಜೀವಿಗಳ ಪ್ರಾಣದ ಪ್ರಾಣನಾಗಿದ್ದಾನೆ. ಪ್ರಾಣ ಶಬ್ದವು ಏಕವಚನದಲ್ಲಿರುವಾಗ ಅದರ ಅರ್ಥವು ಕ್ರಿಯಾಶಕ್ತಿ ಎಂದಾಗುತ್ತದೆ. ಇನ್ನು ಬಹುವಚನದಲ್ಲಿರುವಾಗ ಅದರ ಅರ್ಥವು ಜೀವನೀ ಶಕ್ತಿ ಇಲ್ಲವೆ Vital energy ಎಂದಾಗುತ್ತದೆ. ಪಾಂಚ ಭೌತಿಕ ವಿಕಾಸವು ಬ್ರಹ್ಮನ ಮಾನಸ ಕ್ರಿಯೆಯ ಸ್ಥೂಲತಮ ರೂಪವಾಗಿದೆ. ಮಾನಸ ಕ್ರಿಯಾಶಕ್ತಿಯ ಸ್ಥೂಲತಮ ಅಭಿವ್ಯಕ್ತಿಯಾಗಿದೆ. ಆದ್ದರಿಂದ ಈ ಪಾಂಚಭೌತಿಕ ಸತ್ತೆಯಿಂದಲೇ ಜೀವನಿಗೆ ತನ್ನ ಪ್ರಾಣಶಕ್ತಿಯನ್ನು ಆಹರಣ ಮಾಡಿಕೊಳ್ಳಬೇಕಾಗುತ್ತದೆ. ತಂದುಕೊಳ್ಳಬೇಕಾಗುತ್ತದೆ. ಜೀವ



ದೇಹದಲ್ಲಿ ಪ್ರಾಣಶಕ್ತಿಯ ವಿಕಾಸವು ಐದು ಅಂತರ್ವಾಯು ಮತ್ತು ಐದು ಬಹಿರ್ವಾಯುಗಳ ಮಾಧ್ಯಮದಿಂದ ಆಗುತ್ತದೆ. ಪ್ರಾಣ, ಅಪಾನ, ಸಮಾನ, ಉದಾನ ಮತ್ತು ವ್ಯಾನಗಳೇ ಆ ಐದು ಅಂತರ್ವಾಯುಗಳು. ಈ ಅಂತರ್ವಾಯುಗಳ ನಡುವೆ, ನಾಭಿ ಮತ್ತು ಕಂಠಗಳ ನಡುವೆ 'ಪ್ರಾಣ'ವು ಪುಪ್ಪುಸ ಗುಡುತ್ತ ಹೃತ್‌ಪಿಂಡ ಮುಂತಾದವುಗಳ ಕಾರ್ಯಧಾರೆಯನ್ನು ನಡೆಸುತ್ತದೆ. ನಾಭಿಯ ಕೆಳಗಿನ ಭಾಗದಲ್ಲಿರುವ 'ಅಪಾನ'ವು ಮಲಮೂತ್ರಾದಿ ಗತಿಗಳನ್ನು ನಿಯಂತ್ರಿಸುತ್ತದೆ. ನಾಭಿಯಲ್ಲಿ ನೆಲೆಗೊಂಡ 'ಸಮಾನ'ವು, ಪ್ರಾಣ ಮತ್ತು ಅಪಾನಗಳ ಭಾರ ಸಾಮ್ಯವನ್ನು ರಕ್ಷಿಸುತ್ತದೆ, ಕಂಠಸ್ಥ 'ಉದಾನ'ವು ವಾಕ್ ಶಕ್ತಿಯನ್ನು ನಿಯಂತ್ರಿಸುತ್ತದೆ. ಮತ್ತು ವ್ಯಾನ ವಾಯುವು ಇಡೀ ದೇಹದಲ್ಲಿ ಹಬ್ಬಿಕೊಂಡು ರಸ ರಕ್ತಾದಿಗಳ ಸಂಚಾಲನೆಯನ್ನು ಜ್ಞಾನೇಂದ್ರಿಯ ಮತ್ತು ಕರ್ಮೇಂದ್ರಿಯಗಳ ಸ್ನಾಯು-ತಂತುಗಳ ಸಹಾಯದಿಂದ ಜ್ಞೇಯ ಮತ್ತು ಕಾರ್ಯಗಳೊಂದಿಗೆ ಸಂಬಂಧಿಸುತ್ತದೆ. ಮನದ ಮನನಶೀಲತೆಗಾಗಿ ಸ್ನಾಯು ಕೋಶದಲ್ಲಿ ಸ್ಪಂದನಗಳೇಳಬೇಕಾದ ಅಗತ್ಯವಿದೆ. ಇದೂ ಸಹ ವ್ಯಾನವಾಯುವಿನಿಂದ ಆಗುತ್ತದೆ. ನಾಗ, ಕೂರ್ಮ, ಕೃಕರ, ದೇವದತ್ತ ಮತ್ತು ಧನಂಜಯ ಈ ಐದು ಹೊರಗಿನ ವಾಯುಗಳು ಪ್ರಸಾರಣ, ಸಂಕೋಚನ, ಜೃಂಭನ (ಮೈಮುರಿ ಇಲ್ಲವೆ ಆಕಳಿಕೆ) ಮತ್ತು ಬಿಕ್ಕು, ಕ್ಷುಧಾ-ತೃಷ್ಣೆ. ಮತ್ತು ನಿದ್ರಾ-ತಂದ್ರಾಗಳನ್ನು ನಿಯಂತ್ರಿಸುತ್ತವೆ. ಆದ್ದರಿಂದ ಬ್ರಹ್ಮಸೃಷ್ಟ ವಾಯುಗಳ ಸಹಾಯದಿಂದಲೇ, ವ್ಯಷ್ಟಿಜೀವಿಯು ಬ್ರಹ್ಮಮನದಿಂದ ತನ್ನ ಮಾನಸ ಧಾತುವನ್ನು ಸಂಗ್ರಹಿಸುತ್ತದೆಯೆಂಬುದನ್ನು ಕಂಡುಕೊಳ್ಳಬಹುದು. ಪ್ರಾಣವು ಮನದೊಂದಿಗೆ ಸೇರುವುದರಿಂದಲೇ ಇಂದ್ರಿಯ ಸಮೂಹವು ಪ್ರಕಾಶಿಸುತ್ತದೆ. ಆಕಾಶ (ಖ), ವಾಯು, ಅಗ್ನಿ, ಜಲ ಮತ್ತು ಪೃಥ್ವಿ ಮುಂತಾದವುಗಳೆಲ್ಲ ಅದೇ ವಿರಾಟ ಮನದಿಂದ ಸೃಷ್ಟವಾಗಿವೆ. ಅವನಲ್ಲಿಯೇ ಧರಿಸಲ್ಪಟ್ಟಿವೆ, ಅಥವಾ ಬ್ರಹ್ಮ ಮನದಿಂದ ಸೃಷ್ಟವಾದ ಈ ಪಂಚಭೂತಗಳೇ ವಿಶ್ವದ ಅಸ್ತಿತ್ವವನ್ನು ರಕ್ಷಿಸುತ್ತಿವೆ.

"ಯತ ಪರಂ ಬ್ರಹ್ಮ ಸರ್ವಾತ್ಮಾ ವಿಶ್ವಸ್ಯಾಯತನಂ ಮಹತ್,
ಸೂಕ್ಷ್ಮಾತ್‌ಸೂಕ್ಷ್ಮತರಂ ನಿತ್ಯಂ ತತ್ತ್ವಮೇವ ತ್ವಮೇವ ತತ್."

ಈ ಮಂತ್ರದಲ್ಲಿ ಪ್ರಧಾನವಾಗಿ ಲಕ್ಷಿಸಬೇಕಾದ ವಿಷಯವೆಂದರೆ, ಇಲ್ಲಿ ಬ್ರಹ್ಮನಿಗಾಗಿ ಪುರುಷ ಇಲ್ಲವೆ ಸ್ತ್ರೀಲಿಂಗವಾಚಕ ಶಬ್ದವನ್ನು ಬಳಸಿಲ್ಲ. ಆದರೆ

ನಪುಂಸಕ ಲಿಂಗದ ಶಬ್ದವನ್ನು ಬಳಸಲಾಗಿದೆ. ನಿಜವಾಗಿ, ಅನಾದಿ, ಅನಂತ, ನಿರಾಕಾರ ಸತ್ತೆಯು ಪುರುಷ ಇಲ್ಲವೆ ಸ್ತ್ರೀ ವಿಶೇಷಣದಿಂದ ವಿಶಿಷ್ಟವಾಗದು. ಇದು ಸರ್ವಜೀವರ ಪ್ರಾಣ ಸ್ವರೂಪವಾಗಿದೆ. ಸರ್ವ ಆತ್ಮರ ಆತ್ಮವಾಗಿದೆ. ಆದ್ದರಿಂದ ಇದು ಪರಮಾತ್ಮ. ಸೀಮಿತ ವಸ್ತುವಿಗೆ ಮಾತ್ರ ಒಂದು ಆಧಾರದ ಅವಶ್ಯಕತೆಯಿದೆ. ಕೇವಲ ಅಸೀಮವಾದುದಕ್ಕೆ ಆಧಾರದ ಯಾವ ಅವಶ್ಯಕತೆಯೂ ಇಲ್ಲ. ವಿಶ್ವದಲ್ಲಿರುವ ಸಕಲ ಖಂಡಸತ್ತೆಗಳೂ ಬ್ರಹ್ಮನ ಖಂಡವಿಕಾಸಗಳಷ್ಟೇ. ಅವನಲ್ಲಿಯೇ ನೆಲೆಸಿವೆ. ಸರ್ವವೂ ಅವನ ಮನದಿಂದ ಕಲ್ಪಿತವಾದ ವಸ್ತುಗಳೇ ಆಗಿವೆ. ಬ್ರಹ್ಮನ ಬುದ್ಧಿ ತತ್ತ್ವ, ಅಸ್ತಿತ್ತ್ವಯುಕ್ತ `ಪ್ರಜ್ಞಾಸತ್ತೆಗಳು ಬಹು ವಿರಾಟ ಆಗಿರುವಂತೆಯೇ, ಅವನ ಮಾನಸ ತತ್ತ್ವವು ಸೂಕ್ಷ್ಮಕ್ಕಿಂತ ಸೂಕ್ಷ್ಮವಾದ, ಖಂಡಕ್ಕಿಂತಲೂ ಖಂಡವಾದ ವಸ್ತುಗಳಲ್ಲಿ ಜ್ಞಾತೃ ಸತ್ತೆಯ ರೂಪದಲ್ಲಿ ಪಸರಿಸಿವೆ. ಜೀವಿಯಲ್ಲಿ ಜ್ಞಾತೃ ಭಾವದಿಂದ ಇರುವುದೇ, ವಿರಾಟಿನಲ್ಲಿಯೂ ಜ್ಞಾತೃಭಾವದಿಂದ ಇರುತ್ತದೆ. ಅವನ ಜ್ಞಾತೃತ್ವ ಧರ್ಮದಲ್ಲಿ ವಿಲಕ್ಷಣತ್ವವು ಬರುವುದಿಲ್ಲ. ವೈಲಕ್ಷಣ್ಯವು ಕೇವಲ ಆಧಾರದಲ್ಲಿ ಮಾತ್ರ ಬರಬಲ್ಲದು. ನಾವೆಲ್ಲ ಅವನ ಬೇರೆ ಬೇರೆ ಆಧಾರ ಭೂತ ಸತ್ತೆಗಳ ರೂಪದಲ್ಲಿ ಯೋಚಿಸುತ್ತೇವೆ. ಆದ್ದರಿಂದ, ಅವನನ್ನು ಪೃಥಕ್ ದೃಷ್ಟಿಯಿಂದ ನೋಡುತ್ತೇವೆ. ಆತ್ಮನನ್ನು ತಿಳಿಯುವುದರಿಂದ ಮಾತ್ರ ಪರಮಾತ್ಮನನ್ನು ತಿಳಿಯಬಹುದೆಂಬುದನ್ನು ಸಾಧಕನು ಅರಿತಿದ್ದಾನೆ. ಏಕೆಂದರೆ, ಈ ಎರಡರಲ್ಲಿ, ಸ್ವರೂಪತಃ ಯಾವ ಭೇದವೂ ಇಲ್ಲ. ಮಾನವನು ತನ್ನನ್ನು ತಿಳಿದುಕೊಳ್ಳುವುದರಿಂದ ಮಾತ್ರ ಭಗವಂತನನ್ನು ತಿಳಿಯಬಲ್ಲನೆಂದು, ರಾಮಕೃಷ್ಣ ಪರಮಹಂಸರೂ ಹೇಳಿದ್ದಾರೆ. ಸತ್ಯ ದ್ರಷ್ಟಾರರಾದ ಋಷಿ ರವೀಂದ್ರನಾಥರು, ಈ ಭಾವವನ್ನು ತಮ್ಮದೊಂದು ಸುಂದರ ಕವಿತೆಯಲ್ಲಿ ಬಹು ಸುಂದರ ರೂಪದಲ್ಲಿ ಹೀಗೆ ಬಣ್ಣಿಸಿದ್ದಾರೆ.

"ಹಾಯ ಗಗನ ಮಹಿಲೇ ತೋಮಾರೆ ಧಾರಿಬೆ ಕೆ ವಾ
ಓಗೋ ತಪನ ತೋಮಾರ ಸ್ವಪನ ದೇಖಿಜೇ.
ಕರಿತೇ ಪಾರಿನೇ ಸೇವಾ ।
ಶಿಶಿರ ಕಹಿಲ ಕಾಂದಿಯಾ; ತೋಮಾರೇ ರಾಖಿಜೇ ಬಾಂಧಿಯಾ
ಹೇ ರವಿ ಆಮಾರ ನಾಹಿಕ ತೇಮನ ಬಲ
ತೋಮಾ ಬಿನಾ ತಾಈ ಕ್ಷುದ್ರ ಜೀವನ ಕೇವಲಈ ಅಶ್ರುಜಲ
ಆಮಿ ವಿಪುಲ ಕಿರಣೆ ಭುವನ ಕರಿ ಜೇ ಆಲೋ



ತಬು ಶಿಶಿರ ಟುಕರೇ ಧರಾ ದಿತೇ ಪಾರಿ,
ಬಾಸಿತೇ ಪಾರಿ ಜೇ ಭಾಲೋ
ಶಿಶಿರೇರ ಬುಕೇ ಆಸಿಯಾ ಕಹಿಲ ತಪನ ಹಾಸಿಯಾ
ಛೋಟೋ ಹೋಯೇ ಆಮಿ ರಹಿಬೊ ತೋಮಾರೇ ಭರಿ
ತೋಮಾರ ಕ್ಷುದ್ರ ಜೀವನ ಗಡಿಬೋ ಹಾಸಿರ ಮತನ ಕರಿ.

ಪ್ರತಿಯೊಂದು ಖಂಡ ವಸ್ತುವು ಕಾರ್ಯಕಾರಣ ಸಂಬಂಧಕ್ಕೊಳಪಟ್ಟಿದೆ. ಮತ್ತು ಪ್ರತಿಯೊಂದು ಕ್ರಿಯೆಯು ಮಾನಸ ಸತ್ತೆಯ ವಿಷಯವಾಗಿದೆ. ಖಂಡ ವಸ್ತುವಿನಲ್ಲಿ ಇರುವ ಮಾನಸ ಸತ್ತೆಯು ಆದರ ಕಾರಣ–ಬ್ರಾಹ್ಮೀ ಮನದ ಸೃಷ್ಟ ವಸ್ತುವೂ ಅಹುದು; ಬ್ರಾಹ್ಮೀ ವಿಷಯುವೂ ಅಹುದು. ಬ್ರಾಹ್ಮೀ ಮನದ ಕಾರಣವಾವುದೂ ಇಲ್ಲ. ಏಕೆಂದರೆ, ಬ್ರಾಹ್ಮೀಮನದ ಸೃಷ್ಟಿಯಾಗುವ ಪೂರ್ವದಲ್ಲಿ ಯಾವುದೇ ಎರಡನೆಯ ಕ್ರಿಯಾಶೀಲ ಸತ್ತೆಯಿರಲಿಲ್ಲ. ಬ್ರಾಹ್ಮಿ ಮನವು ಹೇಗೆ ಸೃಷ್ಟವಾಯಿತು? ಈ ಪ್ರಶ್ನೆಗೆ ಉತ್ತರ ಹುಡುಕುತ್ತ ಹೋದರೆ, ಅನವಸ್ಥೆಯ ದೋಷವು ಒರುತ್ತದೆ. ಆದ್ದರಿಂದ ಸಗುಣ ಬ್ರಹ್ಮನ ಜನ್ಮದ ಸಾಕ್ಷಿತ್ವವು ಬೇರಾವುದರಲ್ಲಿಯೂ ಇರಲು ಶಕ್ಯವಿಲ್ಲ. ಆ ಸಮಯಕ್ಕೆ ಮನವು ಇರುವುದಿಲ್ಲವಾದ ಕಾರಣ, ದೇಶ, ಕಾಲ, ಪಾತ್ರಾದಿ ಆಪೇಕ್ಷಿಕ ತತ್ತ್ವಗಳ ಅಸ್ತಿತ್ವವೂ ಇರಲಾರದು. ಅದರ ಉತ್ಪತ್ತಿಯ ಕಾಲವನ್ನು ಹುಡುಕುವ ಸಮಯಕ್ಕೆ ಇನ್ನೂ ಒಂದು ಮನಯುಕ್ತ ವಸ್ತುವಿನ ಪ್ರಯೋಜನವು ಅನುಭವಕ್ಕೆ ಬರುತ್ತದೆ. ಸಗುಣ ಬ್ರಹ್ಮನ ಜನ್ಮ, ಸ್ಥಿತಿ ಇಲ್ಲವೆ ಲಯ–ಈ ಮೂರು, ಮನಸ್ಸಿಗೆ ಅತೀತವಾಗಿವೆ. ಅದೇ ಮೇರೆಗೆ ದೇಶ, ಕಾಲ, ಪಾತ್ರಾದಿಗಳಿಂದಾಚೆ ಇರುವ ಕಾರಣ, ಅವನನ್ನು ನಿತ್ಯ ಎನ್ನುತ್ತಾರೆ. ಬ್ರಹ್ಮವಿಜ್ಞಾನವು ಕಾರ್ಯ-ಕಾರಣ ತತ್ತ್ವಗಳ ಆಚೆಗಿದೆ. ಬ್ರಹ್ಮನ ಹೊರಗೆ ಯಾವುದೂ ಇರದು. ಆದ್ದರಿಂದ ಏನೊಂದೂ ಅವನಿಗಿಂತ ಮುಂಚಿನದಾಗಿರಲಾರದು. ಏಕೆಂದರೆ, ಕಾರಣದ ಪರಿವರ್ತಿತ ರೂಪವನ್ನೇ ಕಾರ್ಯವೆನ್ನುತ್ತಾರಷ್ಟೇ? ಹಾಲು, ಮೊಸರಿನ ಕಾರಣವಾಗಿದೆ. ಏಕೆಂದರೆ ಹಾಲು ಮೊಸರಿಗಿಂತ ಮುಂಚಿನ ಅವಸ್ಥೆ. ಬ್ರಹ್ಮನ ಹೊರಗೆ ಬೇರಾವುದೇ ವಸ್ತುವು ಇಲ್ಲದಿರುವುದರಿಂದ, ಯಾವುದೇ ಬದಲಾದ ಕಾರ್ಯದ ಕಾರಣವೂ ಇರದು. ಸಂಕೋಚನ ಮತ್ತು ಪ್ರಸರಣಗಳ ಫಲವಾಗಿ ವಸ್ತುಗಳಲ್ಲಿ ಪರಿವರ್ತನೆಯುಂಟಾಗುತ್ತದೆ. ಸಂಕೋಚನ–ಪ್ರಸರಣಗಳಿಗೋಸ್ಕರ ವಿಶೇಷ ವಸ್ತುವಿನ ಮೇಲೆ ಬೇರೊಂದು ವಸ್ತುವಿನ ಪ್ರಭಾವದ ಅವಶ್ಯಕತೆಯು ಉಂಟಾಗುತ್ತದೆ. ಆದ್ದರಿಂದ, ಬ್ರಹ್ಮನು ಅಪರಿಣಾಮೀಯಾಗಿದ್ದಾನೆ. ಒಬ್ಬನೇ

ಒಬ್ಬ ಸದ್ವಸ್ತುವಾಗಿದ್ದಾನೆ. ಮನವು ಇರುವ ತನಕ, ಕಾರ್ಯಕಾರಣಗಳ ಸಂಪರ್ಕವಿದೆ. ಅಲ್ಲಿಯ ವರೆಗೂ ಮಾನವನು ಹೀಗೆ ಹೇಳುತ್ತಾನೆ.

'ಕಾರಣಾಭಾವಾತ್ ಕಾರ್ಯಾಭಾವಃ'

ನಿಜವಾಗಿ ನೋಡಿದರೆ ಬ್ರಹ್ಮನ ಪರಿಣಾಮವು, ಸಂಪೂರ್ಣವಾಗಿ, ಅವನೊಳಗೇ ಇದೆ. ಈ ಪರಿಣಾಮೀ ವಸ್ತುಸಮೂಹವು ಅವನಿಂದಲೇ ಹುಟ್ಟಿದೆ. ಅವನಲ್ಲಿಯೇ ನಿಂತಿದೆ; ಅವನಲ್ಲಿಯೇ ಲಯಿಸುವುದು. ಆದ್ದರಿಂದ, ಋಷಿಯು ಹೀಗೆ ಹೇಳಿದ್ದಾನೆ.

'ತಿ ನಿ ಈ ತುಮಿ, ತಾಯಿಈ ತಿನಿ'
(ಅವನೇ ನೀನಿರುವಿ; ನೀನೇ ಅವನಿರುವಿ,)

ವಸ್ತುಗಳ ಈ ಪರಿಣಾಮವು ಪಾಂಚಭೂತಾತ್ಮಕವಾಗಿದೆ. ಅಂದರೆ, ಕ್ಷಿತಿ, ಅಪ್, ತೇಜ, ಮರುತ್, ವ್ಯೋಮ ಇವುಗಳಲ್ಲಿ ಒಂದಿಲ್ಲೊಂದು ಅವಸ್ಥೆಯಲ್ಲಿರುತ್ತದೆ. ಮತ್ತು ಈ ಜಾಗ್ರತ, ಸ್ವಪ್ನ ಮತ್ತು ಸುಕ್ಷುಪ್ತಿ–ಈ ಮೂರರ ಒಂದಿಲ್ಲೊಂದು ಅವಸ್ಥೆಯಲ್ಲಿರುತ್ತದೆ.

"ಜಾಗ್ರತ ಸ್ವಪ್ನ ಸುಷುಪ್ತ್ಯಾದಿ ಪ್ರಪಂಚ ಯದ್ ಪ್ರಕಾಶತೇ
ತದ್ ಬ್ರಹ್ಮಾಹಮಿತಿ ಜ್ಞಾತ್ವಾ ಸರ್ವ ಬಂಧೈಃ ಪ್ರಮುಚ್ಯತೇ."

ಪಂಚಭೂತಗಳ ಸಮೂಹಕ್ಕೆ ಪ್ರಪಂಚವೆನ್ನುತ್ತಾರೆ. ಕಲ್ಪನಾ ಧಾರೆಯ ಗತಿಯೊಂದಿಗೇ ಭೂತಗಳಲ್ಲಿ ಭೇದವೂ ಉಂಟಾಗುತ್ತದೆ. ಇದು ಸೂಕ್ಷ್ಮದಿಂದ ಸ್ಥೂಲದತ್ತ (ಸಂಚರ) ಸಾಗಿ, ಮರಳಿ, ಸ್ಥೂಲದಿಂದ ಸೂಕ್ಷ್ಮದತ್ತ (ಪ್ರತಿಸಂಚರ) ಹಿಂತಿರುಗುತ್ತದೆ. ಆದ್ದರಿಂದ ಇದು ನಶ್ವರವೆನಿಸಿದೆ. ಇದರಾವುದೇ ಒಂದು ರೂಪವು ದೇಶ, ಕಾಲ–ಪಾತ್ರಗಳನ್ನೇ ಅವಲಂಬಿಸಿರುತ್ತದೆ. ಕೇವಲ ಇಷ್ಟೇ ಅಲ್ಲ; ಇದರ ಪ್ರಕಾಶಶೀಲ, ಕ್ರಿಯಾಶೀಲ, ಮತ್ತು ಜಡಭಾವಾತ್ಮಕ ಎಂಬೀ ಮೂರು ಅವಸ್ಥೆಗಳು ಕ್ರಮವಾಗಿ, ಜೀವಿಗಳ ಜಾಗ್ರತ್, ಸ್ವಪ್ನ ಮತ್ತು ಸುಕ್ಷುಪ್ತಿಗಳಲ್ಲಿ ನೆಲೆಸಿರುತ್ತವೆ. ಆದರೆ ಇವುಗಳ ಈ ಬೇರೆ ಬೇರೆ ಪ್ರಕಾರಗಳ ಅಭಿವ್ಯಕ್ತಿಗಳ ಉಗಮವಾವುದು? ಉಪಕರಣವಾವುದು? ಇದೆಲ್ಲವೂ ಆ ಮಹಾನ್ ಆತ್ಮನೇ ಆಗಿದ್ದಾನೆ. ಆ ವಿರಾಟ ಅಭಿಮಾನೀ 'ಅಹಂ'ದ ಆ ಸೀಮಾಹೀನ ಶಕ್ತಿಕೇಂದ್ರದಿಂದಲೇ ಉದ್ಭವಿಸಿದೆ. ಆದ್ದರಿಂದ, ಪಾರಮಾರ್ಥಿಕ ವಿಚಾರದಿಂದ ಈ ಜಾಗ್ರತ, ಸ್ವಪ್ನ ಮತ್ತು ಸುಷುಪ್ತಿ ಅವಸ್ಥೆಗಳು ಮತ್ತು ಈ ಪ್ರಪಂಚಮಯ ಜಗತ್ತುಗಳೆಲ್ಲವೂ 'ನಾನೇ ಆಗಿರುವೆ'. ನಾನುತನದ



(ಅಹಂಭಾವ) ಈ ನಿಜವಾದ ಸಂಜ್ಞೆಯನ್ನು ತಿಳಿಯಬಲ್ಲವರು ಯಾವ ಬಂಧನವನ್ನೂ ಬಂಧನವೆಂದು ಬಗೆದು ಭಯಭೀತರಾಗರು.

'ತ್ರಿಸುಧಾಮಸು ಯದ್‌ಭೋಗ್ಯಂ ಭೋಕ್ತಾಭೋಗಶ್ಚ ಯದ್‌ಭವೇತ್
ತೇಭ್ಯೋ ವಿಲಕ್ಷಣೋ ಸಾಕ್ಷೀ ಚಿನ್ಮಾತ್ರೋಽ ಹಂ ಸದಾಶಿವಃ'

ಜಾಗ್ರತ, ಸ್ವಪ್ನ ಮತ್ತು ಸುಷುಪ್ತಿ ಈ ಮೂರು ಅವಸ್ಥೆಗಳನ್ನು ಮೇಲೆ ಹೇಳಿದ ಶ್ಲೋಕದಲ್ಲಿ ತ್ರಿಧಾಮ ಎಂದು ಕರೆಯಲಾಗಿದೆ. ಹೇಳದೆ ಬಿಟ್ಟಿರುವ ನಾಲ್ಕನೇಯ ಧಾಮವು ಅವಿಕೃತವಾಗಿದೆ. ಅಪರಿಣಾಮಿ 'ನಾನು' ಆಗಿದೆ. ಈ ತ್ರಿಧಾಮದಲ್ಲಿ ಇರುವ ಸ್ವಲ್ಪ ವಸ್ತುಗಳು, ಭೋಗ್ಯ, ಭೋಕ್ತಾ ಮತ್ತು ಭೋಗಗಳ ರೂಪದಲ್ಲಿ ಕಾಣಬರುತ್ತವೆ. ಮತ್ತು ಈ ಮೂರಕ್ಕಿಂತ ವಿಪರೀತ ಲಕ್ಷಣದಿಂದೊಡಗೂಡಿದ (ವಿಲಕ್ಷಣ ಶಬ್ದವನ್ನು ವಿಪರೀತ ಲಕ್ಷಣ ಎಂಬ ಅರ್ಥದಲ್ಲಿ ಬಳಸಲಾಗಿದೆ)ನಾಲ್ಕನೆಯ ಸತ್ತೆಯು,ಅಂದರೆ,ಭೋಗ, ಭೋಕ್ತಾ,ಭೋಗ್ಯಗಳ ಸಾಕ್ಷೀ ಚೈತನ್ಯ ಸ್ವರೂಪನೇ ಸದಾಶಿವ. ನಾನೇ ಆ ಸದಾಶಿವ. ತಂತ್ರದಲ್ಲಿ ಸಾಧಾರಣವಾಗಿ ಅರ್ಧನಾರೀಶ್ವರ ಶಿವನಿಗೇ ಸದಾಶಿವ ಎಂದು ಕರೆದಿದ್ದಾರೆ. ಆದರೆ ಇಲ್ಲಿ ಸರಿಯಾಗಿ ಆ ಅರ್ಥದಲ್ಲಿಯೇ ಸದಾಶಿವ ಶಬ್ದವನ್ನು ಬಳಸಿಲ್ಲ. ಶಿವ ಎಂದರೆ ಪುರುಷ, ಕಲ್ಯಾಣದಾಯಕ ಅಥವಾ ಮಂಗಳಮಯ ಎಂದು ಅರ್ಥ. ಸರ್ವದಾ ಶಿವ ಭಾವದಲ್ಲಿ ಇರುವವನೇ ಸದಾಶಿವ.

"ಮಯ್ಯೇವ ಸಕಲಂ ಜಾತಂ ಮಯಿ ಸರ್ವಂ ಪ್ರತಿಷ್ಠಿತಮ್,
ಮಯಿ ಸರ್ವಂ ಲಯಂ ಯಾತಿ,
ತದ್ ಬ್ರಹ್ಮಾದ್ ವ್ಯಯಮಸ್ಮ್ಯಹತಮ್"

ಈ ಸಂಪೂರ್ಣ ಸೃಷ್ಟಿಯು ನಮ್ಮ ಮನದಲ್ಲಿಯೇ ಸೃಷ್ಟವಾಗಿದೆಯೆಂಬುದನ್ನು ಸದಾಶಿವ ಭಾವದಲ್ಲಿ ಪ್ರತಿಷ್ಠಿತರಾದವರು ನೋಡುತ್ತಾರೆ; ಅರಿಯುತ್ತಾರೆ. ಇವುಗಳ ಅಸ್ತಿತ್ವವು ನಮ್ಮ ಮಾನಸ ಪಟದಲ್ಲಿಯೇ ಮೂಡುತ್ತದೆ. ಮತ್ತು ನಮ್ಮ 'ನಾನು ತನ'ದ ನಡುವೆಯೇ ಈ ಎಲ್ಲವೂ ಲಯಿಸುತ್ತದೆ. ನಾನೇ ಆ ಅಕ್ಷರ ಬ್ರಹ್ಮವಾಗಿದ್ದೇನೆ.

"ಅಣೋರಣೀಯಾನಹಮೇವ ತದ್ವನ್ಮಹಾನಂ
ವಿಶ್ವಮಹಂ ವಿಚಿತ್ರಮ್,
ಪುರಾತನೋಽ ಹಂ ಪುರುಷೋಽ ಹಮೀಶೋ
ಹಿರಣ್ಮಯೋಽಹಂ ಶಿವರೂಪಮಸ್ಮಿ"

ನಾನು ಅಣುವಿಗಿಂತಲೂ ಅಣುವಾಗಿರುವೆ. ಮತ್ತು ವಿರಾಟಕ್ಕಿಂತಲೂ ವಿರಾಟನಾಗಿರುವೆ; ಎಂಬುದನ್ನು ನಾನು ತಿಳಿದಿರುವೆ. ನಾನೇ ಈ ತೋರುವ ವಿಶ್ವರೂಪದಲ್ಲಿ ವಿಕಸಿಸಿರುವೆ. ನನ್ನ ಕಾರ್ಯಧಾರೆಯು ಅದ್ಭುತನಾಗಿದೆ; ನನ್ನ ಭಾವ ಧಾರೆಯೂ ಅದ್ಭುತವಾಗಿದೆ. ಈ ಅದ್ಭುತ ಸ್ಪಂದನದಲ್ಲಿ ಅನಿರ್ವಚನೀಯ ಬೆಳಕಿನಿಂದ ನಾನು ನನ್ನನ್ನೇ ಅನಂತ ಭಾವಗಳಲ್ಲಿ, ವಿಸ್ತರಿಸುತ್ತಿರುವೆ. ಇದರಲ್ಲಿ ಒಂದರೊಡನೊಂದು ಮೇಳವಿಸುತ್ತಿಲ್ಲ. ಪ್ರತಿಯೊಂದು ತನ್ನ ವೈಶಿಷ್ಟ್ಯದಿಂದ ವಿಶಿಷ್ಟಪೂರ್ಣವಾಗಿದೆ. ಪ್ರತಿಯೊಂದನ್ನು, ಬೇರೆ ಬೇರೆ ಭಾವದಿಂದ, ನನ್ನ ಐಶ್ವರ್ಯವೆಂದೇ ಗ್ರಹಿಸಿ, ವಿಚಿತ್ರಗತಿಯಿಂದ, ರೂಪ ಲೋಕದಿಂದ ಅ–ರೂಪದತ್ತ ಧಾವಿಸುತ್ತಿರುವೆ. ನಾನೆಷ್ಟು ಅದ್ಭುತನು! ನನ್ನ ಉತ್ಪತ್ತಿಯೇ ಆಗಿಲ್ಲ. ನಾನು ನನ್ನ ಕಾರಣವಾದುದನ್ನು ಹುಡುಕಿ ಕಂಡು ಹಿಡಿಯದಾಗಿರುವೆ. ನಾನು ಕಾರ್ಯ–ಕಾರಣ ತತ್ತ್ವದಾಚೆಗಿರುವೆ. ಆದ್ದರಿಂದ ನನಗಿಂತ ಪುರಾತನವಾದ ಬೇರಾವುದೂ ಇಲ್ಲ. ನಾನೇ ಜ್ಞಾನಸ್ವರೂಪನಾಗಿದ್ದೇನೆ. ನನ್ನಲ್ಲಿ ಅಮಂಗಲವಾದ ಇಲ್ಲವೆ ಅಶುಭವಾದ ಯಾವ ಭಾವನೆಯೂ ಪ್ರವೇಶಿಸದು. ನಾನು ಸರ್ವ ಜೀವಿಗಳ ಕಲ್ಯಾಣದ ಇಚ್ಛೆಯುಳ್ಳವನಾಗಿರುವೆ. ಮೇಲೆ ಹೇಳಿದ ಭಾವನೆಯಲ್ಲಿ ಸಾಧಕನು ಇರುವ ವರೆಗೆ, ಆ ಕಾಲಕ್ಕೆ ಅವನು ತನ್ನೊಳಗೆ, ಅನಂತ ರೂಪವನ್ನು ಸಾಕ್ಷಾತ್ಕರಿಸಿಕೊಂಡು, ಅದರಲ್ಲಿ ತನ್ಮಯನಾಗುತ್ತಾನೆ. ಅವನ ಬಾಹ್ಯಜ್ಞಾನವು ಲುಪ್ತವಾಗುತ್ತದೆ. ಈ ಅವಸ್ಥೆಯನ್ನೇ ನಾವು ಸವಿಕಲ್ಪ ಸಮಾಧಿ ಎನ್ನುತ್ತೇವೆ. ಈ ಅವಸ್ಥೆಯಲ್ಲಿ ಸಾಧಕನ ಜೀವ ಭಾವಾತ್ಮಕ 'ನಾನು', ಶಿವ–ಭಾವಾತ್ಮಕ 'ನಾನು'ವಿನಲ್ಲಿ ಸೇರಿಹೋಗುತ್ತದೆ. ಒಂದಾಗಿ ಬಿಡುತ್ತದೆ. ನಿರ್ವಿಕಲ್ಪ ಸಮಾಧಿಯೊಂದಿಗೆ ಈ ಭಾವದ ಅಂತರವೆಂದರೆ, ನಿರ್ವಿಕಲ್ಪದಲ್ಲಿ ಕ್ಷುದ್ರ–ಬೃಹತ್ತಿನ ಯಾವುದೇ 'ನಾನು–ತನ'ವಿರದು. ಇರುವುದೆಲ್ಲವೂ ನಿರ್ವಿಶೇಷವಾಗಿ ಚೈತನ್ಯದಲ್ಲಿ ಸೇರಿರುತ್ತದೆ. ಸವಿಕಲ್ಪ ಸಮಾಧಿಯಲ್ಲಿ ಹೊರಗಿನ ಜ್ಞಾನವಿಲ್ಲದಿರುವುದರಿಂದ, ಸಾಧಕನಲ್ಲಿ ದ್ವೈತಭಾವವಿರುವುದಿಲ್ಲ. ಅಂತರ್ಮುಖೀ ಭಾವದಲ್ಲಿ ನೆಲೆಗೊಂಡಿರುವುದರಿಂದ ಅಂತರ್ಲೋಕದಲ್ಲಿ ಕಂಡ ವಸ್ತು ಸಮೂಹವು 'ನಾನು'ವಿನಿಂದ ಬೇರೆಯಲ್ಲವೆಂಬ ಭಾವದಿಂದ ಪ್ರತೀತವಾಗುತ್ತದೆ. ಅವನ ಈ ಅವಸ್ಥೆಯನ್ನು ಹೊರಗಿನ ಜನರು ತಿಳಿಯಲಾರರು. ಕೆಲವರು ನಗೆಯಾಡುತ್ತಾರೆ. ಕೆಲವರು ಹುಚ್ಚ, ತಲೆತಿರುಕ ಎನ್ನುತ್ತಾರೆ. ಈ ತರದ ಹುಚ್ಚು ಹಿಡಿಯಬೇಕಾದರೆ, ಜನ್ಮ ಜನ್ಮಾಂತರದ ಪುಣ್ಯಬೇಕೆಂಬುದನ್ನು ಪಾಪ; ಅವರು ಅರಿಯರು; ಸರ್ವವನ್ನೂ ತೊರೆದು



ಒಂದನ್ನೇ ಪಡೆಯುವ ಈ ಇಚ್ಛೆ ಎಷ್ಟು ವಾಂಛನೀಯ; ಇಂಥ ಹುಚ್ಚರು ಮಾತ್ರ ವಿಶ್ವಮನವನ್ನು ಮುಂದೆ ಮುಂದೆ ಒಯ್ಯಬಲ್ಲರು. ಮಹಾಕವಿ ರವೀಂದ್ರನಾಥರು ಹೀಗೆ ಹಾಡಿದ್ದಾರೆ:

ಜೇ ತೋರೇ ಪಾಗಲ ಬಲೇ–
ತಾರೇ ತುಈ ಬಲಿಸ್ ಸೇ ಕಿಛು
ಆಜ ಕೇ ತೋರೇ ಕೇಮನ ಭೇವೇ,
ಅಂಗೇಜೇ ತೋರ ಧೂಲೋ ದೇವೇ,
ಕಾಲ ಸ ಪ್ರಾತೇ ಮಾಲಾ ಹಾತೇ,
ಆಸಬೇ ರೇ ತೋರ ಪಿಛು ಪಿಛು,
ಆಜ ಕೇ ಅಪನ ಮಾನೇರ ಭರೇ
ಥಾಕ ಸೇ ಬೋಸೇ ಗದೀರ ಪರೇ,
ಕಾಲ ಸೇ ಪ್ರೇಮೇ ಆಸಬೇ ನೇಮೇ,
ಕರವೇ ರೇ ತಾರ ಮಾಥಾ ನೀಚೂ.

ಈ ರೀತಿ ಹುಚ್ಚನಾದವನು ತನ್ನ ಸ್ವರೂಪವನ್ನು ಕಂಡುಕೊಂಡು, ನಿಜವಾಗಿಯೂ ಇದೆಷ್ಟು ಅದ್ಭುತವಾಗಿದೆ; ಎಂದು ಹೇಳುತ್ತಾನೆ.

"ಅಪಾಣಿ ಪಾದೋಽ ಹಮಚಿಂತ್ಯ ಶಕ್ತಿಃ
ಪಶ್ಯಾಮ್ಯಚಕ್ಷುಃ ಸ ಶೃಣೋಮ್ಯಕರ್ಣಃ
ಅಹಂ ವಿಜಾನಾಮಿ ವಿವಿಕ್ತರೂಪೋ
ನ ಚಾಸ್ತಿವೇತ್ತಾ ಮಮಚಿದ್ ಸದ್ಯಾಽಹಮ್"

ಸಾಧಕನು, ಕೈಕಾಲು ಮತ್ತು ಇಂದ್ರಿಯ ಮುಂತಾದವುಗಳು ನನ್ನವಲ್ಲ ಎಂದು ತಿಳಿಯುತ್ತಾನೆ. ನಾನಾದರೋ, ಅಸೀಮ ಸತ್ತೆ. ಹಾಗಾದರೆ, ನನ್ನ ಈ ಕೈಕಾಲುಗಳೇನು? ನನ್ನ ಸ್ವರೂಪವು, ನನ್ನ ಚಿತ'ಶಕ್ತಿಯು ಅಚಿಂತನೀಯ. ಇಂದ್ರಿಯಗಳಿಗೆ ಗೋಚರವಾಗುವ ವಿಷಯಗಳ ದರ್ಶನಜ್ಞಾನ ಮತ್ತು ಶ್ರವಣ-ಜ್ಞಾನಗಳೆಲ್ಲವೂ ನನ್ನ ಮಾನಸ ಭೂಮಿಯಲ್ಲಿಯೇ ಇಡಲ್ಪಟ್ಟಿವೆ. ಅಂದಮೇಲೆ ನನಗೆ ಕಣ್ಣು ಕಿವಿಗಳೆಂದರೇನು? ನಾನು ಕಣ್ಣುಗಳಿಲ್ಲದೆ ನೋಡುವೆ; ಕಿವಿಗಳಿಲ್ಲದೆ ಕೇಳುವೆ. ಈ ವ್ಯಕ್ತ ಬ್ರಹ್ಮಾಂಡದ ವೈಚಿತ್ರ್ಯಪೂರ್ಣ ಸೃಷ್ಟಿಯ ಪ್ರತಿಯೊಂದು ಹೆಜ್ಜೆಯ, ಪ್ರತಿಯೊಂದು ತರಂಗದ ಏರಿಳಿತಗಳೊಂದಿಗೆ ನನ್ನ ಸಂಬಂಧವಿದೆ. ಸ್ಥೂಲ, ಸೂಕ್ಷ್ಮ ಮತ್ತು ಕಾರಣ ಇತ್ಯಾದಿ ಎಲ್ಲ ವಿಷಯಗಳನ್ನೂ ನಾನು ತಿಳಿಯುವೆ. ನಾನು ಎಲ್ಲವುಗಳ ವಿಷಯೀ ಇದ್ದೇನೆ. ಆದರೆ ನನ್ನನ್ನು ಅರಿಯುವವನು (ಜ್ಞಾತೃ) ಯಾವನೂ ಇಲ್ಲ. ನನ್ನ ವಿಷಯೀ ಆಗಿ ಯಾರೂ ಇಲ್ಲ.

ನಾನು ಯಾರ ವಿಷಯವೂ ಅಲ್ಲ. ನಾನು ಚಿತ್‌ಸ್ವರೂಪನಾಗಿದ್ದೇನೆ. ಆದ್ದರಿಂದ, ಯಾರೂ ಮನದಿಂದ ನನ್ನ ಮನನ ಮಾಡಲಾರರು.

"ವೇದೈರನೇಕೈರಹಮೇವ ವೇದ್ಯೋ ವೇದಾಂತ
ಕೃತ್ ವೇದಾವಿದೇವಚಾಹಮ್,
ನ ಪುಣ್ಯಪಾಪೇ ಮಮನಾಸ್ತಿ ನಾಶೋ
ನ ಜನ್ಮದೇಹೇಂದ್ರಿಯ ಬುದ್ಧಿರಸ್ತಿ
ನ ಭೂಮಿರಾಪೋ ನ ಬುದ್ಧಿರಸ್ತಿ
ನ ಚಾನಿಲೋಮೇಽ ಸ್ತಿ ನ ಚಾಮ್‌ಬರಂಚ,
ಏವಂ ವಿದಿತ್ವಾ ಪರಮಾತ್ಮರೂಪಂ
ಗುಹಾಶಯಂ ನಿಷ್ಕಲಮದ್ವಿತೀಯಮ್"

ಪ್ರತಿಯೊಂದು ಜ್ಞಾನದ ಒಂದಿಲ್ಲೊಂದು ಜ್ಞೇಯವಿರುತ್ತದೆ. ಹೇಗೆಂದರೆ–ಭೂಗೋಲದ ಜ್ಞೇಯ ಇಲ್ಲವೆ ವಿಷಯವು ಪೃಥ್ವಿಯ ಬೇರೆ ಬೇರೆ ರಾಷ್ಟ್ರಗಳಿಗೆ ಸಂಬಂಧಿಸಿದ, ಇಲ್ಲವೆ ಪ್ರಕೃತಿಗೆ ಸಂಬಂಧಿಸಿದ ಕಾರ್ಯವಾಗಿದೆ. ಗಣಿತ ಪುಸ್ತಕದ ವಿಷಯವು ಬೇರೆ ಬೇರೆ ಪ್ರಕಾರದ ಗಣನೆ–ಲೆಕ್ಕವಾಗಿದೆ. ಅದೇ ಪ್ರಕಾರ,ವೇದ ಮತ್ತಿತರ ಜ್ಞಾನದ ಎಷ್ಟೆಷ್ಟು ಬೇದಗಳಿವೆಯೋ,ಅವೆಲ್ಲವುಗಳ ಮೂಲ ವಿಷಯವು ನಾನೇ ಇದ್ದೇನೆ. ಅಂದರೆ, ತೋರುವ ಜಗತ್ತಿನಲ್ಲಿ, ನಾನು ನೋಡುತ್ತಿರುವ ಖಂಡ ವಸ್ತುಗಳೆಲ್ಲ ನನ್ನ ವಿಕಾಸವಲ್ಲದೆ ಬೇರೇನೂ ಅಲ್ಲ. ನಾನು ಅದೆಷ್ಟೋ ಜನ ಮಂತ್ರ ಪ್ರವಕ್ತಾರನ್ನೂ, ಮಂತ್ರ ದ್ರಷ್ಟಾರನ್ನೂ ಋಷಿಗಳ ರೂಪದಲ್ಲಿ ಕಂಡಿದ್ದೇನೆ. ಅವರು ವೇದಾಂತ ಶಾಸ್ತ್ರದ (ವೇದದ ಜ್ಞಾನಕಾಂಡದ ಕೊನೆಯ ಭಾಗ) ರಚನಾಕಾರರು. ಮತ್ತು ವಿದ್ವತ್‌ಗಣವು ನನ್ನ ಹೊರತಾಗಿ ಬೇರೇನೂ ಅಲ್ಲ. ಅಂದರೆ ಮಹಾಪುರುಷರ ನಾಮ ರೂಪದ ಮಾಧ್ಯಮದಿಂದಲೇ ಬ್ರಹ್ಮವಿದ್ಯೆಯ ಶಿಕ್ಷಣವನ್ನು ಕೊಡುತ್ತಿದ್ದೇನೆ.

ಅನಂತತ್ವದ ಕಾರಣದಿಂದಾಗಿ, ನನ್ನ ದೇಹ, ಇಂದ್ರಿಯ ಮತ್ತು ಕಾರ್ಯಕಾರಿಣಿ ಬುದ್ಧಿಗಳಿರಲಾರವು. ಯಾವಾಗಲೂ ವಿರಾಟ ಭಾವದಲ್ಲಿಯೇ ಸ್ಥಿತನಾಗಿರುವುದರಿಂದ, ನನಗೆ ಪಾಪ ಇಲ್ಲವೆ ಪುಣ್ಯವೆಂಬುದೇನೂ ಇಲ್ಲ. ಜನ್ಮವೂ ಇಲ್ಲ. ಆದ್ದರಿಂದ ನನ್ನ ನಾಶವೂ ಇಲ್ಲ. ನನ್ನ ಅಸ್ತಿತ್ವವು ಕ್ಷಿತಿ, ಆಪ್, ತೇಜ, ಮರುತ್ ಇಲ್ಲವೆ ವ್ಯೋಮ ತತ್ತ್ವಗಳ ಮೇಲೆ ಅವಲಂಬಿಸಿಲ್ಲ. ಇದೇ ರೀತಿ, ಪರಮಾತ್ಮ ರೂಪೀ ಗುಹೆಯಲ್ಲಿ ನೆಲೆಸಿದ, ಇಲ್ಲವೆ ಹೃದಯದಲ್ಲಿ ನೆಲೆಸಿದ ಬುದ್ಧಿ ಸಾಕ್ಷಿಯು, ನಿರ್ಮಲ, ಅದ್ವಿತೀಯ ಬ್ರಹ್ಮನ ಅವಸ್ಥೆಯಲ್ಲಿಯೇ ಸಾಧಕನು



ಉಪಲಬ್ಧಿ ಪಡೆಯುತ್ತಾನೆ. ಅದನು ಅದ್ವಿತೀಯನಾಗಿದ್ದಾನೆ; ನಿರ್ಮಲನಾಗಿದ್ದಾನೆ. ಅವನ ಕಾರಣವೂ ಸಹ, ಅನಾದಿಯಾಗಿದೆ; ಅನಂತವಾಗಿದೆ. ಅವನ ಹೊರಗೆ ಏನೊಂದೂ ಇದರ ಕಾರಣ, ಅವನು ದ್ವಿತೀಯರಹಿತನಾಗಿದ್ದಾನೆ. ಪ್ರಕೃತಿಯ ಪ್ರಭಾವಕ್ಕಿಂತ ಊರ್ಧ್ವದಲ್ಲಿರುವ ಕಾರಣ, ಅವನಲ್ಲಿ ಸಂಕೋಚ ವಿಕಾಸ ಮುಂತಾದ ಕ್ರಿಯೆಗಳು ಘಟಿಸುವ ಸುಯೋಗವಿಲ್ಲ. ಆದ್ದರಿಂದ, ಅವನು ಸತ್ಸ್ವರೂಪನಾಗಿದ್ದಾನೆ. ಅವನಲ್ಲಿ ಸ್ವಜಾತೀಯ, ವಿಜಾತೀಯ, ಮತ್ತು ಸ್ವಗತ ಮುಂತಾದ ಯಾವ ಭೇದಗಳೂ ಇಲ್ಲ. ಈ ಅಂತಿಮ ಅಭೇದಾವಸ್ಥೆಯನ್ನು ತಲುಪುವುದೇ ಸಾಧಕನ ಪರಮ ಪ್ರಾಪ್ತಿಯಾಗಿದೆ.

'ಸಮಸ್ತ ಸಾಕ್ಷಿಂ ಸದಸದ್ ವಿಹೀನಂ
ಪ್ರಯಾತಿಶುದ್ಧಂ ಪರಮಾತ್ಮರೂಪಮ್'

ಸವಿಕಲ್ಪ ಸಮಾಧಿಯ ಪ್ರಥಮ ಅವಸ್ಥೆಯಲ್ಲಿ ಅಸ್ಮಿತಾ ಭಾವವಿರುವ ಕಾರಣ, ಬೃಹತ್ ಭಾವದಲ್ಲಿ ವಿಶ್ವಕಲ್ಪನೆಯ ಕ್ರಿಯೆಯೂ ಇರುತ್ತದೆ. ಆದರೆ, ಸಾಧಕನು ಇದರ ಅಂತಿಮ ಅವಸ್ಥೆಯನ್ನು ತಲುಪಿದಾಗ, ಕ್ರಮೇಣ ಕರ್ಮ ರಾಜ್ಯದಿಂದ ಭಾವ ರಾಜ್ಯದ ಊರ್ಧ್ವದಲ್ಲಿ ಪ್ರವೇಶಿಸುತ್ತಾನೆ, ಆಗಿನ ಅವನ ಅವಸ್ಥೆಯನ್ನು ಸದಸದ್ ವಿಹೀನವಾದ ಒಂದು ಶುದ್ಧ, ಪರಮ ಚೈತನ್ಯ ರೂಪದಲ್ಲಿ, ತಿಳಿಯಬಹುದು. ಆ ಸಮಯದಲ್ಲಿ 'ಕರ್ತೃ ಇದ್ದೇನೆ' ಎಂಬುದೂ ಸಹ ಮನದಲ್ಲಿ ಸುಳಿಯದು. ಸಮಸ್ತ ವಿಶ್ವ ವ್ಯಾಪಾರದ ನಿಶ್ಚೇಷ್ಟ ಸಾಕ್ಷಿಯಷ್ಟೇ ಎಂದು ಆಗ ಮನಸ್ಸಿಗೆ ಅನ್ನಿಸುತ್ತದೆ.

ಕಾರ್ತಿಕ ಪೂರ್ಣಿಮೆ: ೧೯೫೫

## ೨೫

# ವೇದದಲ್ಲಿ ಬ್ರಹ್ಮವಿಜ್ಞಾನ

ಈ ಮುಂಚಿನ ಧರ್ಮ ಮಹಾಚಕ್ರದಲ್ಲಿ ನಾನು ಬ್ರಹ್ಮ ಚಕ್ರವನ್ನು ಕುರಿತು ಕೆಲವು ಮಾತುಗಳನ್ನು ಹೇಳಿದ್ದೆ. ಅವುಗಳಲ್ಲಿ ಸೌರಚಕ್ರ, ಪಾರ್ಥಿವ ಚಕ್ರ ಮತ್ತು ಪರಮಾಣು ಚಕ್ರ (alomic system) ಗಳನ್ನು ತುಲನೆ ಮಾಡುತ್ತ ಬ್ರಹ್ಮಚಕ್ರವನ್ನಷ್ಟೇ ತಿಳಿಸುವ ಪ್ರಯತ್ನ ಮಾಡಿದ್ದೆ. ಸೌರಚಕ್ರದ ಪ್ರಾಣ ಕೇಂದ್ರ (nucleus) ಇಲ್ಲವೆ ಮಹಾ ವ್ಯೂಹವು ಸೂರ್ಯನೇ ಆಗಿದ್ದಾನೆ. ಪೃಥಿವಿ ಮುಂತಾದ ಗ್ರಹಗಳು ಈ ಸೂರ್ಯನಿಂದ ಉದ್ಭವಿಸಿ, ಸೂರ್ಯನನ್ನೇ ಕೇಂದ್ರವಾಗಿರಿಸಿಕೊಂಡು, ಅವನ ನಾಲ್ಕು ಸುತ್ತು ತಿರುಗುತ್ತಿರುತ್ತದೆ. ಅವು ಸೂರ್ಯನಲ್ಲಿ ಸೇರಿ ಹೋಗುವುದೂ ಇಲ್ಲ. ಮತ್ತು ಅವನಿಂದ ದೂರ ಸಿಡಿಯುವುದೂ ಇಲ್ಲ.: ಹೀಗಾಗಲು ಕಾರಣವೆಂದರೆ, ಅವುಗಳ ಮೇಲೆ, ಸಾಧಾರಣವಾಗಿ, ಕೇಂದ್ರತಿಗಾಮೀ ಮತ್ತು ಕೇಂದ್ರಾನುಗಾಮೀ ಎಂಬೆರಡು ಶಕ್ತಿಗಳ ಭಾರಸಾಮ್ಯವಿರುತ್ತದೆ. ಈ ಭಾರಸಾಮ್ಯವು ನಷ್ಟವಾದ ಬಳಿಕ ಒಂದು ಇಲ್ಲವೆ ಅನೇಕ ಗ್ರಹಗಳು ಕೇಂದ್ರಾನುಗಾಮೀ ಪ್ರಾಬಲ್ಯದಿಂದಾಗಿ, ಸೂರ್ಯನಲ್ಲಿ ಸೇರಿ ಹೋಗುತ್ತವೆ. ಇಲ್ಲವೆ ಕೇಂದ್ರಾತಿಗಾಮೀ ಶಕ್ತಿಯ ಮೂಲಕ ಪರಿಚಾಲನೆಗೊಂಡು, ಸೂರ್ಯನಿಂದ ಕ್ರಮೇಣ ದೂರ ಸರಿಯುತ್ತವೆ.

ಸರಿಯಾಗಿ, ಇದೇ ರೀತಿ, ಪಾರ್ಥಿವ ಚಕ್ರದ ಪ್ರಾಣಕೇಂದ್ರವು (nucleus) ಈ ಪೃಥ್ವಿಯೇ ಆಗಿದೆ. ಚಂದ್ರನು ಇದನ್ನೇ ಕೇಂದ್ರವಾಗಿ ಇರಿಸಿಕೊಂಡು, ಇದರ ನಾಲ್ಕೂ ನಿಟ್ಟಿನಲ್ಲಿ ತಿರುಗುತ್ತಿರುತ್ತಾನೆ. ಇಲ್ಲಿಯೂ ಸಹ, ಬ್ರಹ್ಮಚಕ್ರದಲ್ಲಯಂತೆಯೇ ಕೇಂದ್ರಾತಿಗಾಮೀ ಮತ್ತು ಕೇಂದ್ರಾನುಗಾಮೀ ಶಕ್ತಿಗಳು ಸಮಭಾವದಿಂದ ಕಾರ್ಯ ಮಾಡುತ್ತಿರುತ್ತವೆ.



ಪರಮಾಣು ಚಕ್ರದ ಪ್ರಾಣಕೇಂದ್ರದ ನಾಲ್ಕೂ ನಿಟ್ಟಿನಲ್ಲಿ, ವಿದ್ಯುತ್ಕಣ ಸಮೂಹವು ತಿರುಗುತ್ತಿರುತ್ತದೆ. ಅಲ್ಲಿಯೂ ಸಹ, ಇದೇ ಒಂದು ಲೀಲೆಯಿದೆ. ಇದೇ ಒಂದು ಅವಸ್ಥೆಯಿದೆ. ಬ್ರಹ್ಮಚಕ್ರ ಎಂದೊಡನೆ ಈ ವಿರಾಟ (universe) ಇಲ್ಲವೆ ಬ್ರಹ್ಮಾಂಡ ಎಂದು ತಿಳಿಯುತ್ತಾರೆ. ಇದರ ಪ್ರಾಣಕೇಂದ್ರ ಇಲ್ಲವೆ ಮಹಾ ವ್ಯೂಹವಾಗಿದ್ದಾನೆ: ಸಾಕ್ಷೀ ಸ್ವರೂಪನಾದ ಅಕ್ಷರ ಪುರುಷ. ಇವನ ಸುತ್ತು ಮುತ್ತು ತಿರುಗುತ್ತಿರುವ; ಸೂರ್ಯ, ನಕ್ಷತ್ರ ಮೊದಲಾದ ವಸ್ತು ಸಮೂಹವೆಲ್ಲ ಅವನ ಕಲ್ಪನಾಧಾರೆಯೇ: ಆಗಿದೆ. ಇಲ್ಲಿಯೂ ಸಹ ಅದೇ ಕೇಂದ್ರಾತಿಗಾಮೀ ಮತ್ತು ಕೇಂದ್ರಾನುಗಾಮೀ ಶಕ್ತಿಗಳ ಭಾರಸಾಮ್ಯವಿರುತ್ತದೆ. ಶಕ್ತಿಯ ಈ ಸಾಮ್ಯಾವಸ್ಥೆಗೆ ಪ್ರಕೃತಿ ಎನ್ನುತ್ತಾರೆ. ಈ ವಿರಾಟ ಬ್ರಹ್ಮಚಕ್ರದ ಕೇಂದ್ರಾತಿಗಾಮೀ ಶಕ್ತಿಗೆ ತಮೋಗುಣವೆನ್ನುತ್ತಾರೆ. ಇದರ ಹೆಸರೇ ಅವಿದ್ಯಾ. ಕೇಂದ್ರಾನುಗಾಮೀ ಶಕ್ತಿಯೇ ಸತ್ತ್ವಗುಣವಾಗಿದೆ; ಇದನ್ನೇ ವಿದ್ಯಾ ಎನ್ನುತ್ತಾರೆ. ಇದರಿಂದ ಈ ಪ್ರಾಣಕೇಂದ್ರದ ನಾಲ್ಕೂ ನಿಟ್ಟಿಗೆ ತಿರುಗುತ್ತಿರುವ ವಸ್ತು-ಸಮೂಹವು ಮೊತ್ತಮೊದಲು ಸೃಷ್ಟಗೊಂಡಾಗ, ಕೇಂದ್ರಾತಿಗಾಮೀ ಶಕ್ತಿಯೇ ಪ್ರಬಲವಾಗಿತ್ತು. ಅಂದರೆ ಸೃಷ್ಟಿ ಕ್ರಿಯೆಯು ನಿಶ್ಚಯವಾಗಿಯೂ ತಮಃ ಪ್ರಧಾನವಾಗಿತ್ತು. ಎಂಬುದು ನಿಶ್ಚಯವಾಗಿಯೂ ಕಂಡುಬರುತ್ತದೆ. ಯಾವಾಗ ಅವನಿಂದ ಸೃಷ್ಟ ವಸ್ತುಗಳು, ಅವನತ್ತ ಒಂದೇ ಆಗ್ರಹದಿಂದೊಡಗೂಡಿ, ಎಲ್ಲ ವಿರೋಧೀ ಶಕ್ತಿಗಳನ್ನು ತುಚ್ಛವೆಂದು ತಿಳಿದು, ವಿದ್ಯುತ್ ಗತಿಯಿಂದ ಅವನತ್ತ ಹೋಗುವುವೋ, ಆಗ ನಿಶ್ಚಯವಾಗಿ ಶಕ್ತಿಯ ಭಾರಸಾಮ್ಯ ಉಳಿಯದು. ಹೇಗೆಂದರೆ, ಉಲ್ಕೆಯು ಪೃಥ್ವಿಯ ಎದೆಯ ಮೇಲೆ ಬಂದು ಬೀಳುತ್ತದೆಯಷ್ಟೇ. ಸರಿಯಾಗಿ ಅದೇ ರೀತಿ, ಆ ವಸ್ತುಗಳು ಸಹ ಬ್ರಹ್ಮಚಕ್ರದ ಕಕ್ಷ ಪಥವನ್ನು ಬಿಟ್ಟು, ಅದೇ ಮಹಾ ಜಾಗತಿಕ ಪ್ರಾಣ ಕೇಂದ್ರದಲ್ಲಿ ಬಂದು ಸೇರುತ್ತದೆ. ಈ ಬ್ರಹ್ಮಾಭಿಮುಖೀ ಗತಿಯಲ್ಲಿ, ನಿಶ್ಚಯವಾಗಿಯೂ ಕೇಂದ್ರಾನುಗಾಮೀ ಶಕ್ತಿಯೇ ಪ್ರಾಧಾನ್ಯವಾಗಿದೆ. ಆದ್ದರಿಂದ ಮುಕ್ತಿಯ ಹಾದಿಯು ಸತ್ತ್ವ ಗುಣದ ಹಾದಿಯಾಗಿದೆ. ಇದಕ್ಕೆ ಮುಕ್ತಿಯ ಹಾದಿಯೆಂದೇಕೆ ಹೇಳುತ್ತಾರೆ? ಪ್ರಾಣ ಕೇಂದ್ರವನ್ನು ತಲುಪಿದ ಬಳಿಕ ಅದರ ಬೇರಾವ ಸ್ವತಂತ್ರ ಸತ್ತೆಗಳು ಉಳಿಯುವುದಿಲ್ಲವೆಂದು ತಾನೇ? ಪೃಥ್ವಿಯು ಸೂರ್ಯನಲ್ಲಿ ಸೇರಿಹೋದ ಬಳಿಕ, ಪೃಥಿವಿಯ ಪೃಥಿವೀತ್ವವು ಸೂರ್ಯತ್ವದಲ್ಲಿ ಕೂಡಿಕೊಳ್ಳುತ್ತದೆ.

"ಸರ್ವ ಜೀವೇ ಸರ್ವಸಂಸ್ಥೇ ಬೃಹಂತೇ
ತಸ್ಮಿನ್ ಹಂಸೋಬ್ರಾಮ್ಯತೇ ಬ್ರಹ್ಮಚಕ್ರೇ.
ಪೃಥಗಾತ್ಮನಂ ಪ್ರೇರಿತಾರಂಚಮತ್ವಾ
ಜುಷ್ಟಸ್ತತ-ಸ್ತೇನಾ ನಾಮೃತ್ವಮೇಲೆ."

ಈ ಬ್ರಾಹ್ಮೀಕೇಂದ್ರದ ನಾಲ್ಕೂ ನಿಟ್ಟಿನಲ್ಲಿ ಜೀವವು ಅನಾದಿ ಕಾಲದಿಂದ, ತಿರುಗುತ್ತ ನಡೆದಿದೆ. ಇನ್ನೂ ಇದರ ಈ ತಿರುಗುವಿಕೆಯು, ಅದರಲ್ಲಿ ಭೇದ ಭಾವವಿರುವ ವರೆಗೆ ನಡೆದೇ ಇರುತ್ತದೆ. ಅಂದರೆ ಬ್ರಹ್ಮನಿಂದ ತಾನು ಪೃಥಕ್ ಎಂಬ ಭಾವವು ದೂರಾಗುವ ತನಕ, ಸಾಧಕನ ಈ ಸುತ್ತುವರಿಯುವಿಕೆಯು ನಿಲ್ಲುವುದಿಲ್ಲ. ಇನ್ನು ತಿರುಗಿ ತಿರುಗಿ, ಈ ಪ್ರಾಣ ಕೇಂದ್ರದತ್ತ ಅತಿಶಯ ಅನುರಕ್ತಿ ಮೂಡಿದಾಗ,ಅವನನ್ನು ಬಿಟ್ಟು ಬೇರೆಲ್ಲವನ್ನೂ ಮರೆತು ಬಿಡಲು ಬಯಸಿದಾಗ, ಬೇರಾವ ಶಕ್ತಿಯೂ ಅದನ್ನು ಪೃಥಕ್ ಆಗಿ ಇರಿಸಲಾರದು. ಈ ಅತಿಶಯ ಅನುರಕ್ತಿಯನ್ನೇ ಭಕ್ತಿ ಎನ್ನುತ್ತಾರೆ. ಅವನು ಯಾವಾಗಲೂ ತನ್ನ ತೊಡೆಯ ಮೇಲೆ ಮರಳಿ ಎತ್ತಿಕೊಳ್ಳುವನೆಂದು ಜೀವಿಗೆ ತಿಳಿದು ಬಂದೊಡನೆ, ಅವನತ್ತ ಹೋಗುವುದು, ಜೀವಿಗೆ ತೀರ ಸಹಜವೆನಿಸುತ್ತದೆ. ಜೀವಿಗಳನ್ನು ತನ್ನೊಳಗೆ ತೆಗೆದುಕೊಳ್ಳುವ ಅವನ ಇಚ್ಛೆಯೇ, ಜೀವಿಗಳನ್ನು ಕುರಿತು ಅವನ ಕೃಪೆಯಾಗಿದೆ. ನಿಜವಾಗಿಯೂ ಅವನು ಎಲ್ಲರ ಮೇಲೆ ಈ ಕೃಪಾವರ್ಷವನ್ನು ಕರೆಯುತ್ತಿದ್ದಾನೆ. ಭೋಗಸಾಧನೆಯಲ್ಲಿ ಕಣ್ಣು ಕುರುಡಾಗಿರುವುದರಿಂದ, ಜೀವಿಯು ಅವನನ್ನು ಸರಿಯಾಗಿ ಕಾಣಲಾರನು. ಸರಿಯಾಗಿ ತಿಳಿಯಲಾರನು. ಮಹರ್ಷಿ ನಾರದರು "ಮಹತ್ ಕೃಪಯೈವ ಭಗವತ್ ಕೃಪಾ ಲೇಶಾದ್ವಾ" ಎಂದು ಹೇಳಿದ್ದಾರೆ. ಅಂದರೆ, ಇದಕ್ಕೋಸುಗ ಅವನ ಕೃಪೆಯು ತುಂಬಾ ಆವಶ್ಯಕ. ಅವನಂತೂ ಕೃಪೆಯ ಮಳೆ ಸುರಿಸುವನೆಂದು ಈ ಮೊದಲೇ ಹೇಳಲಾಗಿದೆ. ಅಂದ ಮೇಲೆ, ಕೇವಲ ಏಕಾಂತ ಚಿತ್ತದಲ್ಲಿ ಹೊಂದಿಕೊಂಡ ಮನದಲ್ಲಿ, ಅವನ ಕೃಪೆಯನ್ನು ಕುರಿತು ಚಿಂತಿಸುವುದು ಮಾತ್ರ ಅಗತ್ಯವಿದೆ. ಅವನ ಕಲ್ಪನಾ ಧಾರೆಯ ಅಭಿರಾಮ ಗತಿಯಿಂದ ಅವನಿರುತ್ತಾನೆ. ನೀವು ಅವನ ಕೃಪೆಯನ್ನು ಅರಿಯುವ ತನಕ, ಅವನೆಡೆಗೆ ಹೋಗುವ ಪ್ರಯತ್ನವನ್ನು ಮಾಡದಿರುವ ತನಕ, ಅವನ ಈ ಕಲ್ಪನಾ ಚಕ್ರದಲ್ಲಿ, ನೀವು ಗಾಣದೆತ್ತಿನಂತೆ, ಸುತ್ತುವರಿಯಬೇಕಾಗುತ್ತದೆ. ಸಾಧಕ ಕವಿ–ರಾಮದಾಸನು ಹೀಗೆ ಹಾಡಿದ್ದಾನೆ.

"ಮಾ ಮಾಯ ಘುರಾವಿ ಕತ?
ಕೊಲ್ಹೂರ ಚೋಖ–ಢಾಕಾ ಬಲದೇರ ಮತ,



ಘಾನಿ–ಗಾಛೇ ಜುಡೇ ದಿಯೇ ಮಾ,
ಪಾಕ ದಿತೇವೋ ಅವಿರತ."

ಈ ಬ್ರಹ್ಮಚಕ್ರದ ಪ್ರಾಣಕೇಂದ್ರದ ಹೆಸರೇ ಪುರುಷೋತ್ತಮ. ಇವನೇ ಕಲ್ಪನಾಮಯ ಜಗತ್ತಿನ ಅಂದರೆ ಬ್ರಾಹ್ಮೀ ಮನದ ಕ್ಷರ ಮತ್ತು ಅಕ್ಷರಗಳ ಅಧೀಶ್ವರನಾಗಿದ್ದಾನೆ. ಇವನಲ್ಲಿ ಜ್ಞಾತೃತ್ವವೂ ಇದೆ; ಕರ್ತೃತ್ವವೂ ಇದೆ. ಆದರೆ, ಇವನೇ ಸ್ವತಃ ಯಾವ ಕರ್ಮವನ್ನೂ ಮಾಡುವುದಿಲ್ಲ. ವಿಶುಷ್ಕ ವಿಚಾರದಿಂದ ಇವನನ್ನು ನಿರ್ಗುಣನೆಂದೂ ಸಹ ಕರೆಯಲಾಗದು. ಏಕೆಂದರೆ, ಇವನು ಸಮಗ್ರ ಬ್ರಹ್ಮಾಂಡದ ಸಾಕ್ಷಿಯಾಗಿದ್ದಾನೆ. ಈ ಪುರುಷೋತ್ತಮ ಮತ್ತು ಇವನ ಮಾನಸ ವಿಷಯವಾದ ಬ್ರಹ್ಮಾಂಡ; ಇವೆರಡನ್ನೂ ಸೇರಿಸಿ, ಸಗುಣ ಬ್ರಹ್ಮವಾಗಿದೆ. ಗುಣಕ್ಕೆ ಸಂಬಂಧಿಸಿ ವಿಚಾರಿಸಿದರೆ, ಬ್ರಹ್ಮನ ಕರ್ಮ ಭಾವದಿಂದ, ಇವನ ಈ ಜ್ಞಾತೃತ್ವ ಭಾವದಲ್ಲಿರುವ ಅಂತರವೆಂದರೆ, ಕರ್ಮ ಭಾವದಲ್ಲಿ ಗುಣಾಧೀನನಾಗಿರುತ್ತಾನೆ. ಪುರುಷೋತ್ತಮನು ಗುಣಾಧೀಶನಾಗಿದ್ದಾನೆ. ಆದರೆ ಗುಣಗಳೊಂದಿಗೆ ಅವನ ಸಂಬಂಧವಂತೂ ಇದ್ದೇ ಇರುತ್ತದೆ. ಆದ್ದರಿಂದ, ಗುಣಾತೀತನಾದ ಮೇಲೂ ಸಹ, ನಿಜವಾಗಿಯೂ ವಸ್ತು ಸಂಪರ್ಕದ ಯೋಗವಿರುವುದರಿಂದ, ವಿಶುದ್ಧ ವಿಚಾರದಿಂದ ಅವನನ್ನು ನಿರ್ಗುಣನೆಂದೂ ಹೇಳಲಾರೆವು.

ವೇದದಲ್ಲಿ ಸಗುಣ ಬ್ರಹ್ಮನಿಗಾಗಿ, ಗಾಯತ್ರೀ ಛಂದದಲ್ಲಿ ರಚಿತವಾದ ಸಾವಿತ್ರೀ ಋಕ್ ಬಳಸುತ್ತಾರೆ. ಓಂಕಾರದ ಮೊದಲಿನ ಮೂರು ಪಾದಗಳೂ ಸಹ (ಅ, ಉ, ಮ–ಅಂದರೆ ನಾದ ಬಿಂದುವನ್ನು ಮಾತ್ರ ಬಿಟ್ಟು) ಸಗುಣ ಬ್ರಹ್ಮನಿಗಾಗಿ ಬಳಕೆಯಾಗಿವೆ. ಪುರುಷೋತ್ತಮನಿಗಾಗಿ, ಅಂದರೆ ಸಗುಣದ ಪ್ರಾಣಕೇಂದ್ರಕ್ಕಾಗಿ ಅನುಷ್ಟುಪ ಮಂತ್ರವೇ ಪೂರ್ವಕಾಲದಲ್ಲಿ ಬಳಕೆಯಲ್ಲಿತ್ತು. ಗಾಯತ್ರಿ, ಉಷ್ಣಿಕ, ಅನುಷ್ಟುಪ, ಬೃಹತೀ, ಪಂಕ್ತಿ, ತ್ರಿಷ್ಟುಪ ಮತ್ತು ಜಗತೀ ಈ ಏಳು ಶಬ್ದಗಳಲ್ಲಿ ಗಾಯತ್ರೀ ಮತ್ತು ಅನುಷ್ಟುಪಗಳ ಮರ್ಯಾದೆಯು ಸ್ವಲ್ಪ ಹೆಚ್ಚಾಗಿದೆ. ಗಾಯತ್ರೀ ಮಂತ್ರವು ಮೂಲತಃ ಎಂಟು ಅಕ್ಷರದ ಮೂರು ಸಾಲುಗಳಲ್ಲಿ ಹೆಚ್ಚಾಗಿ ಇಪ್ಪತ್ತುನಾಲ್ಕು ಅಕ್ಷರಗಳಲ್ಲಿ ರಚಿತವಾಗಿದೆ. ಅನುಷ್ಟುಪದಲ್ಲಿ ಇಪ್ಪತ್ತೆರಡು ಅಕ್ಷರಗಳಿವೆ. ಪುರುಷೋತ್ತಮನಿಗಾಗಿ ರಚಿತವಾದ ಅನುಷ್ಟುಪದ ಎಂಟು ಅಕ್ಷರಗಳನ್ನು ಹೊಂದಿದ ಪ್ರತಿಯೊಂದು ಪಂಕ್ತಿಯಲ್ಲಿ ಓಂಕಾರದ ಒಂದೊಂದು ಪಾದ ಸ್ವರೂಪವನ್ನು ಎಣಿಕೆ ಮಾಡುತ್ತಾರೆ.

"ಉಗ್ರಂ,ವೀರಂ ಮಹಾವಿಷ್ಣುಂ, ಜ್ವಲಂತಂ, ಸರ್ವತೋಮುಖಮ್,
ನೃಸಿಂಹಂ, ಭೀಷಣಂ,ಭದ್ರಂ,ಮೃತ್ಯುರ್ಮೃತ್ಯು ನಾಮಾಮ್ಯಹಮ್"

ಮೇಲೆ ಹೇಳಿದ ಮಂತ್ರದಲ್ಲಿ ನೃಸಿಂಹನ ವರ್ಣನೆಯಿದೆ. ಮೊತ್ತ ಮೊದಲು ಅವನನ್ನು ಉಗ್ರ ಎಂದಿದ್ದಾರೆ. ಅನು ಅಂದರೆ ಅನು + ಗ್ರಹ ಮಾಡುವವನೇ ಉಗ್ರನು. ನಿಜವಾಗಿಯೂ ಅನುಗ್ರಹಶೀಲ ಇಲ್ಲವೆ ಉಗ್ರನೆಂದು ಯಾರನ್ನು ಕರೆಯಬೇಕು? ಸೃಷ್ಟಿ, ಸ್ಥಿತಿ ಮತ್ತು ಲಯಗಳ ಕ್ರಿಯೆಗಳ ಮೂಲಕ, ಜಗತ್ತನ್ನು ಧರಿಸುವವನು ಉಗ್ರ. ಯಾರ ಅನುಗ್ರಹ ಧಾರೆಯಿಂದ ಅನಾದಿ ಕಾಲದಿಂದಲೂ, ಸೃಷ್ಟಿಯು ಧ್ವಂಸಚಕ್ರದ ನಡುವೆ ನುಗ್ಗುತ್ತಿದ್ದಾನೆಯೋ ಅವನು ಮಾತ್ರ ಉಗ್ರನು. ಈ ಚಿಕ್ಕ ಪೃಥ್ವಿಗೋಸುಗ, ಸೂರ್ಯನು ಉಗ್ರನಾಗಿದ್ದಾನೆ. ಏಕೆಂದರೆ, ನಿಜವಾಗಿಯೂ, ಪೃಥ್ವಿಯ ಸೃಷ್ಟಿ, ಸ್ಥಿತಿ ಮತ್ತು ಲಯಗಳ ಕಾರಣನು ಅವನೇ ಆಗಿದ್ದಾನೆ. ಸರಿಯಾಗಿ ಇದೇ ರೀತಿ, ಬ್ರಹ್ಮಚಕ್ರದ ಕಾರಣನು ಪುರುಷೋತ್ತಮನಾಗಿದ್ದಾನೆ. ಆದ್ದರಿಂದ, ಅವನಿಗಿಂತ ಉಗ್ರರಾದವರಾರೂ ಇರರು; ಬೇರಾವುದೂ ಇರದು.

ವೀರಂ:– ಪುರುಷೋತ್ತಮನನ್ನು ವೀರ ಎನ್ನುತ್ತಾರೆ. ಏಕೆ? ಅವನು ತನ್ನ ಲೋಕಸಾಮಾನ್ಯವಲ್ಲದ, ಸಾಹಸದ ಬಲದಿಂದ, ಬ್ರಹ್ಮಾಂಡದ ಪ್ರತಿಯೊಂದು ಸಮಸ್ಯೆ ಮತ್ತು ಪ್ರತಿಯೊಂದು ಅವಸ್ಥೆಯ ಎದುರು ನಿಂತು ನಡೆಸುತ್ತಾನೆ. ಸಾಹಸದಿಂದ ಸಿದ್ಧಾಂತವನ್ನು ತಲುಪುತ್ತಾನೆ. ಮತ್ತು ಅದಕ್ಕೆ ಅನುಕೂಲಕರ ಕಾರ್ಯ ಮಾಡುತ್ತಾನೆ. ಪ್ರತಿಯೊಂದರೊಂದಿಗೆ ಪ್ರತಿಯೊಂದು ಸತ್ತೆಯೊಂದಿಗೆ, ಯಾವಾಗಲೂ ಯೋಗ್ಯ ಬಳಕೆ ಮಾಡುವವನು, ನಿಶ್ಚಯವಾಗಿಯೂ ವೀರನೇ ಸರಿ.

ಮಹಾವಿಷ್ಣು:– ವಿಷ್ಣು ಎಂದರೆ ವಿರಾಟ, ವ್ಯಾಪಾನ ಶೀಲ ಎಂದರ್ಥ. ಮಾನಸ ಸತ್ತೆಯ ಮೂಲಕ, ತನ್ನ ಅಸ್ತಿತ್ವವನ್ನು ಎಲ್ಲ ತರದ ಸೀಮಾ ಬಂಧನಗಳನ್ನು ಮುರಿದೊಗೆದು, ಅಸೀಮದಲ್ಲಿ ಹಬ್ಬಿಕೊಳ್ಳುವವನನ್ನು ವಿಷ್ಣುವೆಂದು ಕರೆಯದೆ, ಮತ್ತಾರನ್ನು ಕರೆಯುಬಹುದು? ಆದ್ದರಿಂದ ಅವನನ್ನೇ ಮಹಾವಿಷ್ಣುವೆಂದು ಕರೆಯುವುದು ಅತ್ಯಂತ ಯುಕ್ತಿಸಂಗತವಾಗಿದೆ.

ಜ್ವಲಂತ:– ಎಲ್ಲ ಶಕ್ತಿಗಳ ಮೂಲಶಕ್ತಿಯಾದ, ಎಲ್ಲ ಬೆಳಕಿನ ಮಧ್ಯಮಣಿಯಾದ, ಅವನೇ ಜ್ವಲಂತವೆನಿಸುವನು. ಮಹಾ ಜಾಗತಿಕ ಎಲ್ಲ ಪ್ರಕಾಶದ ಮೂಲಶಿಖೆಯೇ ಅವನು; ಪ್ರಾಣ ಶಿಖೆಯೇ ಅವನು. ಅವನ ಬೆಳಕಿನೆದುರು ಬೇರೆ ಬೆಳಕೆಲ್ಲ ಮ್ಲಾನವಾಗುತ್ತದೆ.



"ನ ತತ್ರ ಸೂರ್ಯೋ ಭಾತಿ ನ ಚಂದ್ರ ತಾರಕಮ್,
ನೇ ಮಾ ವಿದ್ಯುತೋ ಭಾಂತಿ ಕುತೋऽ ಯಮಾಗ್ನಿ,
ತಮೇವ ಭಾಂತಮನುಭಾತಿ ಸರ್ವಮ್,
ತಸ್ಯ ಭಾಸಾ ಸರ್ವಮಿದಂ ವಿಭಾತಿ."

ಅಂದರೆ ಅವನೆದುರು ಸೂರ್ಯನಿಗೂ ಸಹ ಜ್ಯೋತಿಷ್ಮಾನನೆಂದು ನಿರ್ಣಯಿಸುವುದು ಕಷ್ಟಸಾಧ್ಯ. ಅಂದ ಮೇಲೆ, ಚಂದ್ರ, ತಾರೆ, ಇಲ್ಲವೆ ಸಿಡಿಲು–ಮಿಂಚುಗಳ ಗತಿಯೂ ಸಹ ಅದೇ ರೀತಿ. ಇನ್ನು ಈ ಅಗ್ನಿಯ ಮಾತನಾಡುವುದಂತೂ ಬರೀ ವ್ಯರ್ಥವಷ್ಟೇ. ಅವನು ಜ್ಯೋತಿಷ್ಮಾನನಾಗಿದ್ದಾನೆ; ಆದ್ದರಿಂದ, ಎಲ್ಲರೂ ಜ್ಯೋತಿಷ್ಮಾನರಾಗಿದ್ದಾರೆ. ಅವನ ಜ್ಯೋತಿಯಿಂದಾಗಿಯೇ ಸರ್ವವೂ ಜ್ಯೋತಿಷ್ಮಾನವಾಗಿದೆ.

ಸರ್ವತೋಮುಖಮ್:– ಅವನು ಸರ್ವಸಾಕ್ಷೀ ಆಗಿದ್ದಾನೆ. ಬ್ರಹ್ಮನಿಂದ ಹಿಡಿದು ಹುಲ್ಲುಕಡ್ಡಿಯ ವರೆಗೆ ಆ ಬ್ರಹ್ಮಸ್ತಂಬ.ಎಲ್ಲ ವಸ್ತುಗಳ ಅಂದರೆ, ಐರಾವತದಿಂದ ಚಿಕ್ಕ ಗೆದ್ದಲು ಹುಳದ ವರೆಗಿನ ಎಲ್ಲ ಜೀವಿಗಳ ಎಲ್ಲ ಕ್ರಿಯೆಗಳ ಸಾಕ್ಷಿಯಾಗಿದ್ದಾನೆ. ಈ ಸರ್ವ ಸಾಕ್ಷಿಯು ಸರ್ವತೋಮುಖನಾಗಲೇಬೇಕಷ್ಟೆ? ದಶ ದಿಕ್ಕುಗಳಲ್ಲಿ ಏನೇನು ಆಗಿದೆಯೋ, ಏನೇನು ಆಗುತ್ತಿದೆಯೋ, ಅದೆಲ್ಲವೂ ಅವನ ಮಾನಸ ಸತ್ತೆಯ ಖಂಡ–ವಿಕಾಸವಾಗಿದೆ. ಆದ್ದರಿಂದ ಅವನು ಸರ್ವರ ಮಹಾನ್‌ಸಾಕ್ಷಿಯಾಗಿದ್ದಾನೆ. ಈಗ ಇರುವ ಮಾತು ತಿಳಿಯಿತೇ? ಮನದಲ್ಲಿ ನೀವು ಯಾವ ಕಲ್ಪನೆಯನ್ನು ಮಾಡುವಿರೋ, ಆ ಭಾವಿತ ವಿಷಯದ ಸಾಕ್ಷಿಯಾಗುವುದಿಲ್ಲವೇ ನೀವು? ಭಾವಿತ ವಿಷಯವನ್ನು ನೋಡಲಿಕ್ಕೋಸುಗ ಯಾವ ರೀತಿ ನೀವು ಮನದ ಕಣ್ಣನ್ನು ಆ ದಿಶೆಯತ್ತ ತೊಡಗಿಸಬೇಕಾಗುವದೋ, ಅದೇ ಪ್ರಕಾರ, ಈ ಸರ್ವ ದೈಶಿಕ ಸೃಷ್ಟಿಯನ್ನು ನೋಡಲಿಕ್ಕಾಗಿ ಪುರುಷೋತ್ತಮನು ಸರ್ವತೋಮುಖನಾಗಲೇಬೇಕಾಗುತ್ತದೆ.

"ಏಷೋ ಹ ದೇವ ಪ್ರದಿಶೋ ನು ಸರ್ವಾ,
ಪೂರ್ವೋ ಹ ಜಾತ ಸ ಊ ಗರ್ಭೇ ಅಂತ,
ಸ ಏವ ಜಾತಃ ಸಃ ಜನಿಷ್ಯಮಾನ,
ಪ್ರತ್ಯಜ ಜನಾಂಸ್ತಿಷ್ಠತೇ ಸರ್ವತೋಮುಖಃ"

—ಯಜುಃ

ಆರು ದಿಶೆಗಳು ಅಂದರೆ, ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ ಮತ್ತು ಅಧಃ ಹಾಗೂ ಊರ್ಧ್ವ ನಾಲ್ಕು ಅನುದಿಶೆಗಳು ಅಂದರೆ ಈಶಾನ್, ಅಗ್ನಿ,

ವಾಯು ಮತ್ತು ನೈಋತ್, ಈ ಎಲ್ಲ ದಿಕ್ಕುಗಳತ್ತ ಅವನ ದೃಷ್ಟಿಯು ಸಮಾನವಾಗಿ ಇರುತ್ತದೆ. ಆದ್ದರಿಂದ ಅವನು ಸರ್ವತೋಮುಖನಾಗಿದ್ದಾನೆ.

ನೃಸಿಂಹ:– ನೃ ಎಂದರೆ ನರ, ಪುರುಷ ಇಲ್ಲವೆ ಚೈತನ್ಯ (consciousness) ಎಂದು ಅರ್ಥ. ಸಿಂಹ ಎಂದರೆ ಶ್ರೇಷ್ಠ ಎಂದು ಅರ್ಥ. ಇವೆರಡೂ ಶಬ್ದಗಳನ್ನು ಜೋಡಿಸಿದರೆ ಇದರ ಅರ್ಥವು ಪುರುಷಶ್ರೇಷ್ಠ ಇಲ್ಲವೆ ಪುರುಷೋತ್ತಮ. ಅಂದರೆ ಪರಮಸತ್ತೆ (Supreme authority) ಎಂದಾಗುತ್ತದೆ. ಈ ಶಬ್ದದ ಅರ್ಥವು ಅರ್ಧ ಮನುಷ್ಯ ಮತ್ತು ಅರ್ಧ ಸಿಂಹ (lion) ದೇಹಧಾರಿಯಾದ ಯಾವುದೇ ವಿಶೇಷ ಜೀವಿಯೆಂದೇನೂ ಆಗುವುದಿಲ್ಲ. ಹೀಗೆಂದು ಹೇಳಿರುವುದು ಸಂಪೂರ್ಣವಾಗಿ ಪುರಾಣಕಾರನ ಕಲ್ಪನೆಯಷ್ಟೇ. ಆ ಪರಮಸತ್ತೆ (Supreme authority) ಯಾದ ಪುರುಷೋತ್ತಮನು ನೃಸಿಂಹ ಪದದಿಂದ ವಾಚ್ಯನಾಗಿದ್ದಾನೆ. ಅವನನ್ನು ಪಡೆಯುವ ಅಭಿಲಾಷೆ ಹೊಂದಿದ ಸಾಧಕರನ್ನು ಸಾಧನಾ–ವಿರೋಧಿ ಶಕ್ತಿಗಳಿಂದ ಅವಶ್ಯವಾಗಿ ರಕ್ಷಿಸುತ್ತ ನಡೆದಿದ್ದಾನೆ. ಪ್ರಹ್ಲಾದರಂಥ ಭಕ್ತರನ್ನು ಹಿರಣ್ಯ ಶರಪುನಿನಂಥ ಸಾಧನಾ ವಿರೋಧಿ ಶಕ್ತಿ (ದೈತ್ಯ) ಗಳಿಂದ ರಕ್ಷಿಸಲೋಸುಗ ಅವನು ಅದೆಷ್ಟೋ ಬಾರಿ, ಕಠಿಣ ಸಂದರ್ಭಗಳ ಸಹಾಯ ಪಡೆಯಬೇಕಾಯಿತು. ಈ ಮಹಾ ಪುರುಷೋತ್ತಮನನ್ನು ಅರ್ಧ ಮಾನವ ಮತ್ತರ್ಧ ಸಿಂಹವೆಂದು ನಗೆಯಾಡುವುದು ನಿಮಗೆಂದೂ ಇಷ್ಟವಲ್ಲ.

ಭೀಷಣ:– ಸರ್ವ ಕರ್ಮದ ಅಂತಿಮ ಅಧ್ಯಕ್ಷನಾದವನು, ತನ್ನ ನ್ಯಾಯ ದಂಡದ ಮರ್ಯಾದೆಯನ್ನು ಅಬಾಧಿತವಾಗಿ ಇರಿಸಲೋಸುಗ, ನಿಶ್ಚಯವಾಗಿಯೂ ಅನೇಕ ಕ್ಷೇತ್ರಗಳಲ್ಲಿ ಭೀಷಣನಾಗಿ ಆಚರಿಸಲೇಬೇಕಾಗುತ್ತದೆ. ಹೀಗೆ ಮಾಡದಿದ್ದರೆ, ಅವನು ಒಂದೇ ದಿಕ್ಕನ್ನು ತೋರಿಸುವನೆಂಬ ದೋಷವು ತಟ್ಟುತ್ತದೆ. ಅವನ ಕಲಂಕವಿಲ್ಲದ ಮೂಗಿಗೆ ಕಳಂಕ ತಗಲುತ್ತದೆ. ತನ್ನ ಕ್ಷುದ್ರ ಸ್ವಾರ್ಥ ಬಂಧನದಲ್ಲಿ ಬದ್ಧನಾದವನನ್ನು ಜೀವ ಎನ್ನುತ್ತೇವೆ. ಆದ್ದರಿಂದ, ಕ್ಷುದ್ರ ಸ್ವಾರ್ಥದಿಂದ ತುಂಬಿದ ವಿಚಾರವು, ಅವನ ಮಾನಸ ಧಾತುವಿಗೆ ದೇಶ, ಕಾಲ ಮತ್ತು ಪಾತ್ರಗಳ ರೂಪ ನೀಡಿ, ಅವನನ್ನು ಸೀಮಿತ ಮತ್ತು ಖಂಡವಾಗಿ ಮಾಡುತ್ತದೆ. ಈ ಸೀಮತ್ವ ಇಲ್ಲವೆ ಜೀವತ್ವದಿಂದಾಗಿ ಅವನಲ್ಲಿ ಅಸೀಮತ್ವದ ಭಾವ ಕುರಿತು ಒಂದು ಭಯಪೂರ್ಣ ಭಾವವನ್ನು ಮೂಡಿಸುತ್ತದೆ. ಇದು ಜೀವನ ಸ್ವಭಾವವಾಗಿದೆ. ತನ್ನ ಸೀಮೆಯ ಆಚೆಯವರಿಂದ ಇಲ್ಲವೆ ತನಗಿಂತ ದೊಡ್ಡವರಿಂದ ಭಯಪಟ್ಟು ಅವನು ಅವರನ್ನು ಹರುಷಗೊಳಿಸಲು ಉದ್ಯುಕ್ತ



ನಾಗುತ್ತಾನೆ? ನಿಮ್ಮ ವಿದ್ಯಾಬುದ್ಧಿ ಧನಗಳಿಗೆ ಹೋಲಿಸಿದರೆ ಯಾರ ವಿದ್ಯಾಬುದ್ಧಿ ಧನ ಇಲ್ಲವೆ ಶಕ್ತಿಗಳು ಅಧಿಕವಾಗಿವೆಯೋ, ಅವುಗಳ ಬಗೆಗೆ ನಿಮ್ಮಲ್ಲಿ ಏಕಾತ್ಮಕ ಭಾವವು ಇಲ್ಲದಿರುವುದರಿಂದ, ನೀವು ನಿಶ್ಚಯವಾಗಿಯೂ ಅವರಿಗೆ ಹೆದರುತ್ತೀರಿ. ಆದರೆ ಯಾವನು ಪುರುಷೋತ್ತಮನೋ, ಯಾವನು ಪ್ರಾಣಗಳ ಪ್ರಾಣನೋ, ಆತ್ಮರ ಆತ್ಮನೋ, ಅಂಥವನೊಂದಿಗೆ ಏಕಾತ್ಮಕ ಭಾವವು ಮೂಡಿದರೆ, ಅವನಿಗೆ ಭಯಪಡುವುದಿಲ್ಲ. ಅವರು ಅವನನ್ನು ಪ್ರೀತಿಸುತ್ತಾರೆ. ಅವರು ಈಶ್ವರಪ್ರೇಮಿಗಳಾಗುತ್ತಾರೆ. ಆದರೆ ತಮ್ಮ ಖಂಡಸತ್ತೆಗೇ ಅಂಟಿಕೊಂಡು ಇರುವವರು ಅವನಿಗೆ ಭಯಪಡುತ್ತಾರೆ. ಅವರು ಈಶ್ವರಭೀರುಗಳಾಗುತ್ತಾರೆ. ಧರ್ಮಭೀರುಗಳಾಗುತ್ತಾರೆ. ಆದ್ದರಿಂದ ವಿಶೇಷ ಸತ್ತೆಯನ್ನು ಕುರಿತು ಮಾತ್ರ ಭೀಷಣ ಶಬ್ದವು ಅನ್ವಯಿಸುತ್ತದೆ.

> "ಭೀಷಾಸ್ಮಾದ್ವಾಯು ಪವತೇ ಭೀಷೋದೇತಿ ಸೂರ್ಯಃ
> ಭೀಷಸ್ಮಾದಗ್ನಿಶ್ಚೇಂದ್ರಶ್ಚ ಮೃತ್ಯುಃ ಧಾವತಿ ಪಂಚಮಃ
> ತಸ್ಮಾದುಚ್ಯತೇ ಭೀಷಣಮಿತಿ."
>
> —ಅಥರ್ವ.

ವಾಯುವು ಅವನ ಭಯದಿಂದ ಬೀಸುತ್ತದೆ. ಅವನ ಭಯದಿಂದಾಗಿಯೇ ಸೂರ್ಯನು ಉದಿಸುತ್ತಾನೆ; ಅಗ್ನಿಯು ಪ್ರಜ್ವಲಿಸುತ್ತಾನೆ. ಇಂದ್ರನು (ಅರ್ಥಾತ್ ಜಡ ಶಕ್ತಿಯು) ತನ್ನ ಕರ್ತವ್ಯವನ್ನು ಪಾಲಿಸುತ್ತಾನೆ. ಇನ್ನು ಮೃತ್ಯುವೂ ಸಹ ತಕ್ಕ ಸಮಯಕ್ಕೆ ಜೀವಿಗಳ ಬಳಿ ಬಂದು ನಿಲ್ಲುತ್ತಾನೆ. ಭೀಷಣನಾದ ಮೃತ್ಯುವೂ ಸಹ, ಯಾರ ಭಯದಿಂದ ನಡುಗುವನೋ, ಅಂಥವನಿಗೆ ಭೀಷಣ ಎನ್ನದೆ ಬೇರಾರನ್ನು ಹಾಗೆ ಕರೆಯಬಲ್ಲೆವು? ಆದ್ದರಿಂದ ವ್ಯಷ್ಟಿ ಸತ್ತೆಯು ಅವನಿಗೆ ಅಂಜುತ್ತದೆ. ವೇದದಲ್ಲಿ ಈ ಬಗ್ಗೆ ಒಂದು ರೂಪಕವಿದೆ. ಒಂದು ಸಲ ದೇವತೆಗಳೆದುರು ಒಂದು ವಿರಾಟ ಜ್ಯೋತಿಷ್ಮಾನ್ ಸತ್ತೆಯು ಆವಿರ್ಭವಿಸಿತು. ಈ ವಿರಾಟ ಸತ್ತೆಯನ್ನು ಪರಿಚಯಿಸಲೋಸುಗ, ದೇವತೆಗಳು ಅಗ್ನಿ, ವಾಯು ಮತ್ತು ಇಂದ್ರರನ್ನು ಕಳಿಸಿದರು. ಆ ಪುರುಷನ ಬಳಿಗೆ ಹೋಗಿ ಅಗ್ನಿಯು ಸ್ವಯಂ ಪರಿಚಯಿಸುತ್ತ, "ನಾನು ಅಗ್ನಿ. ಜಾತವೇದ. ಸುಡುವುದೇ ನನ್ನ ಧರ್ಮ" ಎಂದು ನುಡಿದನು. ಆಗ ಆ ವಿರಾಟ ಪುರುಷನು ಹುಲ್ಲು ಕಡ್ಡಿಯ ಒಂದು ತುಂಡನ್ನು ತೋರಿಸುತ್ತ, "ಹಾಗಾದರೆ ಇದನ್ನು ಸುಡು" ಎಂದನು. ಅಗ್ನಿಯ ಧರ್ಮವೇ ಸುಡುವುದಾಗಿದ್ದರೂ ಸಹ, ಅದು ಶತ ಪ್ರಯತ್ನ ಮಾಡಿವರೂ ಆ ಹುಲ್ಲುಕಡ್ಡಿಯನ್ನು ಸುಡಲಾರದಾಯಿತು. ಬಳಿಕ

ವಾಯುವು ಸಹ, ಆ ವಿರಾಟಸತ್ತೆಯ ಬಳಿಗೆ ಹೋಗಿ ಅದೇ ಪ್ರಕಾರ ನಿಂತಿತು. ತನ್ನನ್ನು ಪರಿಚಯಿಸುತ್ತ, "ನಾನು ವಾಯು, ನಾನು ಮಾತರಿಶ್ವ. ಹಾರಿಸುವುದೇ ನನ್ನ ಧರ್ಮ" ಎಂದಿತು. ಆದರೆ ಈ ಮದೋನ್ಮತ್ತ ವಾಯುವೂ ಸಹ ಆ ಹುಲ್ಲುಕಡ್ಡಿಯ ಒಂದು ತುಂಡನ್ನು ಸಹ ಹಾರಿಸದಾಯಿತು. ಇದಾದ ನಂತರ ಇಂದ್ರನು ಮಾತ್ರ ಆ ಪುರುಷನನ್ನು ಪರಿಚಯಿಸಲು ಶಕ್ತನಾದನು. ಈ ಘಟನೆಯ ನಂತರ, ದೇವತಾಗಣಕ್ಕೆ ಬಂದು ತಥ್ಯವು ಮನದಟ್ಟಾಯಿತು. ಅದೆಂದರೆ, ತಮ್ಮಲ್ಲಿರುವ ಶಕ್ತಿಯು ತಮ್ಮದೇ ಅಲ್ಲ. ಅವನ (ವಿರಾಟ ಪುರುಷನ) ಶಕ್ತಿಯಿಂದಲೇ ಅವರು ಶಕ್ತಿವಂತರಾಗಿದ್ದಾರೆ. ಆ ಎಲ್ಲರ ಖಂಡ ಸತ್ತೆಗಳು ಅವನ ಅಣತಿಗೊಳಗಾಗಿವೆಯಷ್ಟೇ. ಆದ್ದರಿಂದ ಅವನ ಭಯದಿಂದ ಎಲ್ಲ ದೇವತೆಗಳು ತಟಸ್ಥರಾಗಿದ್ದಾರೆ.

ಭದ್ರ:– ಅವನು ಮಂಗಳಸ್ವರೂಪನಾಗಿದ್ದಾನೆ. ಶಿವಸ್ವರೂಪನಾಗಿದ್ದಾನೆ. ಅವನ ಚಿಂತನ ಧಾರೆಯು ಜೀವಸಮೂಹವನ್ನು ಮತ್ತು ಜಗತ್ತನ್ನು ಕಲ್ಯಾಣ ಮಾರ್ಗದ ಮೇಲೆ ನಡೆಸಬೇಕೆಂಬುದೆ ಆಗಿದೆ. ಅವನಿಗೆ ಸಮಾನವಾದ ಕಲ್ಯಾಣ ಕಾರಿಯು ಯಾವುದೂ ಇದ್ದಿಲ್ಲ; ಯಾವುದೂ ಇರುವುದೂ ಇಲ್ಲ. ಆದ್ದರಿಂದಲೇ ಅವನು ಭದ್ರ ಪದವಾಚ್ಯನಾಗಿದ್ದಾನೆ.

ಮೃತ್ಯುಮೃುತ್ಯು:– ಇಲ್ಲಿ ಮೃತ್ಯುಮೃುತ್ಯು ಶಬ್ದವನ್ನು ಇಬ್ಬಗೆಯಾಗಿ ಅರ್ಥೈಸಬಹುದು. ಒಂದರ್ಥವೆಂದರೆ ಮೃತ್ಯುವು ಅವನಿಗೆ ಭಯಪಡುತ್ತದೆ. ಅವನ ನಿರ್ದೇಶಾನುಸಾರ ಮೃತ್ಯುವು ಯಾವಾಗಲೂ ಜೀವಿಗಳ ಹಿಂದೆ ಹಿಂದೆ ಹೋಗುತ್ತದೆ. ಅರ್ಥಾತ್ ಜೀವಿಯು ಮರಣಕ್ಕೆ ಎಷ್ಟೊಂದು ಅಂಜುವನೋ, ಮೃತ್ಯುವೂ ಸಹ ಅವನಿಗೆ ಅಷ್ಟೊಂದು ಅಂಜುತ್ತದೆ. ಆದ್ದರಿಂದ ಅವನು ಮೃತ್ಯುಮೃುತ್ಯುವಾಗಿದ್ದಾನೆ. ಇನ್ನು ಎರಡನೆಯ ಅರ್ಥವೆಂದರೆ ಈ ತೋರು ಜಗತ್ತಿನಲ್ಲಿ, ಎಲ್ಲ ವಸ್ತುಗಳು ಪುರಣಿಸಿದ ಬಳಿಕ ಸಹ ಮೃತ್ಯುವಿನ ಮೃತ್ಯು ವಾಗುವುದಿಲ್ಲ. ಅಂದರೆ ಜೀವಿಯು ಒಂದು ಸಲವಷ್ಟೇ ಸಾಯುವುದಿಲ್ಲ. ಬಾರಿ ಬಾರಿಗೆ ಸಾಯುತ್ತಾನೆ. ಮತ್ತು ಜನಿಸುತ್ತಾನೆ. ಈ ಅಸಂಖ್ಯ ಮರಣಗಳು ಮತ್ತು ಅಸಂಖ್ಯ ಸಲ ಅವನೆದುರು ಬಂದು ಹೋಗುತ್ತಿರುತ್ತವೆ. ಆದರೆ, ಈ ಪುರುಷೋತ್ತಮನಲ್ಲಿ ನೆಲೆಗೊಂಡವರಿಗೆ ಮಹಾಮೃತ್ಯುವೊದಗುತ್ತದೆ. ಅಂದರೆ ಅವನಿಗೆ ಲೌಕಿಕ ಮೃತ್ಯುವಿನೊಂದಿಗೆ ಮೃತ್ಯುವಿನ ಮೃತ್ಯುವೂ ಆಗುತ್ತದೆ. ಇದಾದ ಬಳಿಕ, ಅನಂತರದ ಮೃತ್ಯುವಿನ ಯಾರ ಸಂಭಾವ್ಯತೆಯೂ ಉಳಿಯದು. ಅವನ ಕೃಪೆಯಿಂದಾಗಿಯೇ ಜೀವನು ಈ ಮಹಾಮರಣವನ್ನು ಪಡೆಯುತ್ತಾನೆ.



ಇದರಿಂದ ಅವನು ಮೃತ್ಯುವಿನ ಮೃತ್ಯುವಾಗಿದ್ದಾನೆ. ಆ ಪುರುಷೋತ್ತಮನಿಗೇ ನಾನು ನಮಸ್ಕರಿಸುತ್ತೇನೆ.

ಇಲ್ಲಿ ಒಂದು ಪ್ರಶ್ನೆ ಏಳಬಹುದಾಗಿದೆ. ಏನೆಂದರೆ, ಈ ಪುರುಷೋತ್ತಮನು ತುರೀಯದಿಂದ ಅಭಿನ್ನವಾಗಿದ್ದರೆ, ಅವನನ್ನು ಕುರಿತು ಉಗ್ರ ವೀರ, ಮುಂತಾದ ವಿಶೇಷಣಗಳನ್ನು ಯಾವ ಪ್ರಕಾರ ಜೋಡಿಸಬಲ್ಲೆವು? ವಾಸ್ತವವಾಗಿ ಈ ಶಬ್ದಗಳೆಲ್ಲವೂ ಅಕ್ಷರ ಬ್ರಹ್ಮನ ವಸ್ತುವಿಗೆ ಸಂಬಂಧಿಸಿದ (ಗುಣಾಧೀನವಲ್ಲದ)ವಿಶೇಷ ವಿಶೇಷ ಅವಸ್ಥೆ ಇಲ್ಲವೆ ಅವಸ್ಥೆಗಳ ಸಂಬಂಧದಲ್ಲಿಯೇ ಹೇಳಿದವುಗಳಾಗಿವೆ. ಈ ಅವಸ್ಥೆ ಇಲ್ಲವೆ ಅವಸ್ಥೆಗಳ ಬಗ್ಗೆ ಬೇರೆ ಶಬ್ದ ಬಳಸುವುದಾದರೆ, ಕೂಟಸ್ಥ ಅವಸ್ಥೆ ಎನ್ನಬಹುದು. ಅವನ ವಿಶುದ್ಧ ತುರೀಯ ಅವಸ್ಥೆಗೋಸುಗ ಈ ಶಬ್ದಗಳ ಪ್ರಯೋಗವು ತುಂಬಾ ಇಷ್ಟಕರವಾಗಿದೆ. ತುರಿಯಾವಸ್ಥೆಯು ಮೊದಲ ಮೂರು ಚರಣಗಳಲ್ಲಿ, ಪ್ರಕೃತಿಯ ಸ್ಫುಟ ಇಲ್ಲವೆ ಅರ್ಧಸ್ಫುಟ ಪ್ರಭಾವದ ಕಾರಣ, ಎಲ್ಲಿ ಪ್ರಕಟ ಇಲ್ಲವೆ ಅಪ್ರಕಟ ಭಾವದಲ್ಲಿ, ಅವನ ಸಾಕ್ಷಿತ್ವವು ಇರುವುದೋ, ಅಲ್ಲಿ ಅದನ್ನೇ ಪುರುಷೋತ್ತಮ ಭಾವವೆಂದು ಕರೆಯಬಹುದು. ತುರೆಯಾವಸ್ಥೆಯ ನಾಲ್ಕನೆಯ ಚರಣದಲ್ಲಿ, ಇದು ನಿರ್ಗುಣಾವಸ್ಥೆ ಇಲ್ಲವೆ ವಿಶುದ್ಧ ತುರಿಯಾವಸ್ಥೆ ಇಲ್ಲವೆ ನಿರಕ್ಷರ ಅವಸ್ಥೆಯಾಗಿದೆ. ಈ ಅವಸ್ಥೆಗೆ ಈಶ್ವರ ಗ್ರಾಸ ಎಂದೂ ಕರೆಯುವುದುಂಟು. ಏಕೆಂದರೆ, ಇಲ್ಲಿ ಈಶ್ವರನಿಗೆ ಸಂಬಂಧಿಸಿದ ಸಮಸ್ತ ವಿಭೂತಿಗಳೇ ಪರಮ ಪರಿಸಮಾಪ್ತಿ ಪಡೆಯುತ್ತವೆ.

ಬ್ರಹ್ಮ ಚಕ್ರದಲ್ಲಿ ನೃಸಿಂಹ ಇಲ್ಲವೆ ಪುರುಷೋತ್ತಮನೇ ಮೂಲ ವ್ಯೂಹವಾಗಿದ್ದಾನೆ. ಮತ್ತು ವಾಯು, ಸೂರ್ಯ, ಅಗ್ನಿ, ಇಂದ್ರ ಮುಂತಾದವುಗಳು ಉಪವ್ಯೂಹಗಳಾಗಿವೆ. ಆದ್ದರಿಂದ ನೃಸಿಂಹ ಉಪಾಸನೆಗೆ ಪಂಚವ್ಯೂಹಾತ್ಮಕ ಉಪಾಸನೆಯೆನ್ನುತ್ತಾರೆ. ಮತ್ತು ಅನುಷ್ಟುಪ ಮಂತ್ರವು ಈ ಪಂಚವ್ಯೂಹಾತ್ಮಕ ನೃಸಿಂಹನಿಗಾಗಿಯೇ ರಚಿತವಾಗಿದೆ,

ಪ್ರಸಂಗಾನುಸಾರ ನಾನು ಅನೇಕ ಬಾರಿ,ನಿಮ್ಮ ಬಳಿ ಪ್ರಣವ ಇಲ್ಲವೆ ಓಂಕಾರದ ಮಾತನ್ನು* ನಾನು ಹೇಳಿರುವೆ.ಇಲ್ಲಿಸಾಧಾರಣ ಮನದಲ್ಲಿ ಒಂದುಪ್ರಶ್ನೆಏಳಬಹುದಾಗಿದೆ.ಏನೆಂದರೆ,ಪ್ರಣವ ಮತ್ತು ಅನುಷ್ಟುಪ್ ಇವೆರಡರಲ್ಲಿ ಯಾವುದುಶ್ರೇಷ್ಠವಾಗಿದೆ? ಅಥವಾ ಒಂದು ವೇಳೆ ಎರಡೂ ಸಮಾನವಾಗಿದ್ದರೆ, ಆಗ ಇವುಗಳ

---

*(ಓಂಕಾರದ ಶುದ್ಧ ಉಚ್ಚಾರಣೆಯು Onm'k'ara Onunk'a'ra ಬಂಗಾಳಿಯಲ್ಲಿ ಓಂಕಾರ ಲಿಪಿಗೆ ಸಂಬಂಧಿಸಿದ ಅನಾನುಕೂಲದ ಕಾರಣ ಈ ಪುಸ್ತಕದಲ್ಲಿ ಓಂಕಾರ ಇಲ್ಲವೆ ಓಜಕಾರ ಎಂದೂ ಬರೆಯಲಾಗಿದೆ.)

ಪೃಥಕ್ ಅಸ್ಥಿತ್ವದ ಆವಶ್ಯಕತೆಯಾದರೂ ಏನಿದೆ? ಇದಕ್ಕೆ ಉತ್ತರವಾಗಿ ಹೀಗೆ ಹೇಳಬಹುದು. ಅನುಷ್ಟುಪ್ ಕೇವಲ ಪುರುಷೋತ್ತಮನನ್ನು ಕುರಿತು ಬಳಕೆಯಾಗುತ್ತದೆ. ಆದರೆ ಪ್ರಣವ ಇಲ್ಲವೆ ಓಂಕಾರವನ್ನು ಸಂಪೂರ್ಣ ಬ್ರಹ್ಮ ಚಕ್ರವನ್ನು ಕುರಿತು ಬಳಸುತ್ತಾರೆ. ಅನುಷ್ಟುಪ ಕೇವಲ ಮೂಲ ವ್ಯೂಹಕ್ಕಾಗಿ ಮತ್ತು ಓಂಕಾರವು ಪಂಚ ವ್ಯೂಹವನ್ನು ಕೂಡಿಕೊಂಡ ಸಮಗ್ರ ಬ್ರಾಹ್ಮೀ ವಿಕಾಸಕ್ಕಾಗಿ ಬಳಕೆಯಾಗುತ್ತಿದೆ. ಆಗ ಓಂಕಾರವು ಅನುಷ್ಟಪದ ಸ್ಥಾನದಲ್ಲಿ ಸಹ ಓಂಕಾರದ ಅ, ಉ, ಮ, ಮತ್ತು ನಾದ ಬಿಂದು ಎಂಬ ನಾಲ್ಕು ಪಾದಗಳಲ್ಲಿ ರಚಿತವಾಗಿದೆ. ಇವುಗಳಲ್ಲಿ ಮೊದಲನೆಯ ಮೂರು ಪಾದಗಳು, ಸಗುಣದ ಬೋಧಕವಾಗಿದೆ. ಮತ್ತು ನಾದ ಬಿಂದುವು ನಿರ್ಗುಣದ ಬೋಧಕವಾಗಿದೆ.

ಭೂತಂ ಭವದ್ಭವಿಷ್ಯದೀತಿ ಸರ್ವಮೋಂಕಾರ ಏವ,
ಯಚ್ಚಾನ್ಯತ್ತ್ರಿಕಾಲಾತೀತ ತದೋಪ್ಯೋಂಕಾರ ಏವ
— ನೃಸಿಂಹ ತಾಪನೀಯ ಶ್ರುತಿ.

ಅಂದರೆ ಭೂತ, ವರ್ತಮಾನ ಮತ್ತು ಭವಿಷ್ಯತ್ ಇವೆಲ್ಲವೂ ಓಂಕಾರದಲ್ಲಿ ನೆಲೆಸಿವೆ. ಆದಕಾರಣ, ಓಂಕಾರವು ಸಗುಣಬ್ರಹ್ಮನ ಸ್ಪಂದನಗಳ ವಿಕಾಸದ ಶಾಬ್ದಿಕ ಅಭಿವ್ಯಕ್ತಿಯಾಗಿದೆ. ಆದ್ದರಿಂದ ಎಲ್ಲಿ ಸೃಷ್ಟಿ ಇದೆಯೋ, ಅದು ಭೂತ, ವರ್ತಮಾನ ಮತ್ತು ಭವಿಷ್ಯದಲ್ಲಿಯೇ ಆಗಿರಲೊಲ್ಲದೇಕೆ, ಓಂಕಾರದಿಂದ ಪೃಥಕ್ ಆಗಿರಲಾರದು. ಸೃಷ್ಟಿಯು ವಿಕಾಸವಿರುವವರೆಗೆ, ದೇಶ, ಕಾಲ ಮತ್ತು ಪಾತ್ರಗಳು ಇರುತ್ತವೆ. ಸಗುಣ ಬ್ರಹ್ಮನ ಕಲ್ಪನಾಧಾರೆಯೊಂದಿಗೆ ಅವನ ಸೃಷ್ಟಿಯು ಆಗಿದೆ, ಆಗುತ್ತಿದೆ ಮತ್ತು ಮುಂದೆಯೂ ಆಗುವದು. ಹೀಗೆ ಈ ಓಂಕಾರಾತ್ಮಕ ಕಲ್ಪನಾಧಾರೆಯನ್ನು ಬಿಟ್ಟು,ಸಗುಣ ಬ್ರಹ್ಮನ ಈ ಅಸ್ತಿತ್ವವು ಇರಲಾರದು. ಆದ್ದರಿಂದ ಸಗುಣ ಬ್ರಹ್ಮನ ಅಸ್ತಿತ್ವವು, ಕೇವಲ ಸಗುಣ ಬ್ರಹ್ಮನದೇ ಏಕೆ? ಎಲ್ಲ ವಸ್ತುಗಳ ಅಸ್ತಿತ್ತ್ವವು ಅವನ ಕ್ರಿಯೆಯ ಆಳತೆಯ ಮೇಲೆ ಅವಲಂಬಿಸಿದೆ. ಕ್ರಿಯೆಯ ಗತಿಶೀಲತೆಯ ಮೇಲೆ ಮನದ ವಿಶೇಷ ಕಲ್ಪನೆಯ ಹೆಸರೇ ಕಾಲ. ಮನದ ಸಹಾಯದಿಂದ ಈ ಗತಿಶೀಲತೆಯನ್ನು ಗ್ರಹಿಸುವವನೇ ಪಾತ್ರ. ಇನ್ನು ಪಾತ್ರ ಮತ್ತು ಕಾಲಗಳ ಸಂಬಂಧವನ್ನು ಸ್ಥಾಪಿಸುವ ಸತ್ತೆಯೇ ದೇಶ. ಈ ಮೂರರ ಅಸ್ತಿತ್ತ್ವವು ಮಾನಸಿಕ ಕ್ರಿಯಾಶೀಲತೆಯ ಮೇಲೆ ಅರ್ಥಾತ್ ಕಲ್ಪನಾಧಾರೆ, ಇಲ್ಲವೆ ಓಂಕಾರದ ಮೇಲೆ ಅವಲಂಬಿಸಿದೆ.



ಸೂರ್ಯೋದಯದಿಂದ ಹಿಡಿದು ಸೂರ್ಯಾಸ್ತದ ತನಕ ವರ್ಷಾರಂಭದಿಂದ ಹಿಡಿದು ವರ್ಷಾಂತದ ತನಕ, ಸರ್ವವೂ ಕಾಲದ ಸುವಿಸ್ತೀರ್ಣ ಪರಿಧಿಯ ಅಂಗಗಳೇ ಆಗಿವೆ. ಆದ್ದರಿಂದ, ಅವು ಓಂಕಾರದ ವಿಕಾಸಗಳೇ ಆಗಿವೆ. ಯಾವುದೊಂದು ವಿಶೇಷ ದೇಶಬಿಂದುವಿನಿಂದ ಎರಡನೆ ದೇಶಬಿಂದುವಿನ ದೂರತ್ತ್ವವು ಎಷ್ಟು ಅಲ್ಪ ಇಲ್ಲವೆ ಅಧಿಕವಾಗಿರಲೊಲ್ಲದೇಕೆ, ಅದು ದೇಶ ಸತ್ತೆಯ ವಿಸ್ತೃತ ಪರಿಧಿಯ ಅಂಗವೇ ಅಗಿದೆ. ಆದ್ದರಿಂದ ಅದು ಓಂಕಾರದ ವಿಕಾಸವಾಗಿದೆ. ಇದು ಕಾರಣ, ಕಾಲದ ಆಳತೆಯೊಳಗೆ ನಾವು ಏನೇನನ್ನು ಯೋಚಿಸಬಲ್ಲೆವೋ, ಇಲ್ಲವೆ ಯೋಚಿಸಲಾರೆವೋ, ಅದೆಲ್ಲವೂ ಓಂಕಾರಗತವಾಗಿದೆ ಎಂದು ಹೇಳಿದ್ದೆ. ಸಗುಣ ಬ್ರಹ್ಮನು ದೇಶ ಕಾಲ, ಪಾತ್ರಗಳನ್ನೊಳಗೊಂಡಿರುವ ಕಾರಣ ಸೋಪಾಧಿಕನಾಗಿದ್ದಾನೆ. ಅವನು ನಿರ್ಗುಣ ಬ್ರಹ್ಮನಂತೆ ನಿರುಪಾಧಿಕ ಸತ್ತೆಯಲ್ಲ. ದೇಶ, ಕಾಲ ಮತ್ತು ಪಾತ್ರಗಳು ಸೋಪಾಧಿಕವಾಗಿವೆ. ಮತ್ತು ಪರಾವಲಂಬಿಗಳಾಗಿವೆ. ಆದ್ದರಿಂದ ಇವಾವುಗಳೂ ಸಹ, ಪರಮ ಸತ್ಯ (absolute trath) ಅಲ್ಲ. ಅಪೇಕ್ಷಿಕ ಸತ್ಯ (Relative trath). ಶಾಸ್ತ್ರದಲ್ಲಿ ಹೀಗೆ ಹೇಳಲಾಗಿದೆ.

'ಪ್ರಾಣವಾತ್ಮಕಂ ಬ್ರಹ್ಮ'
—ತ್ರಿಪಾದ-ವಿಭೂತಿ–ನಾರಾಯಣ ಶ್ರುತಿ,

ತಸ್ಯವಾಚಕಃ ಪ್ರಣವಃ
—ಪಾತಂಜಲಿ.

ಅಂದ ಮೇಲೆ, ಸೃಷ್ಟಿ, ಸ್ಥಿತಿ ಮತ್ತು ಲಯ–ಅ, ಉ, ಮ–ಗಳಿಂದ ಕೂಡಿದ ಪ್ರಣವವೇ ಸಮಗ್ರ ಬ್ರಾಹ್ಮೀಸತ್ತೆಯ ವಾಚಕ ಇಲ್ಲವೆ ದ್ಯೋತಕವಾಗಿದೆ. ಒಂದು ವೇಳೆ, ಇದು ಹೀಗೆಯೇ ಆಗಿದ್ದರೆ, ಬ್ರಹ್ಮವೂ ಸಹ ಅಪೇಕ್ಷಿಕ ಸತ್ಯವಾಗುತ್ತಿತ್ತು. ಸಂಸ್ಕಾರಕ್ಕೆ ಅಧೀನವಾದ ಜೀವವು ದಗ್ಧ, ಕೈವಲ್ಯಸಿದ್ಧ ಮತ್ತು ಸಗುಣಬ್ರಹ್ಮರಲ್ಲಿ ಯಾವುದೇ ಭೇದವಿರದು. ಈ ಅವಸ್ಥೆಯಲ್ಲಿ ಸಗುಣಬ್ರಹ್ಮನ ಮೇಲೆ ಯಾವುದೇ ನಿರ್ಗುಣ ಸತ್ತೆಯಧೂ ಸಹ ಸಾಧನೆ ಇಲ್ಲವೆ ಸಿದ್ಧಿಗೋಸುಗ ಅವಶ್ಯಕತೆಯಿಲ್ಲ. ಆದ್ದರಿಂದ, ಓಂಕಾರವು ಕೇವಲ ಮೊದಲಿನ ಮೂರು ಪಾದಗಳಲ್ಲಿಯಷ್ಟೇ ಪೂರ್ಣ ಬ್ರಾಹ್ಮೀ ಸತ್ತೆಯ ದ್ಯೋತಕ ಇಲ್ಲವೆ ವಾಚಕವಾಗಿಲ್ಲ. ಅದರ ನಾಲ್ಕನೆಯದೂ ಒಂದು ಪಾದವಿದೆ. ಸಾಕ್ಷಿತ್ವಯುಕ್ತ ಪುರುಷೋತ್ತಮನು ಈ ನಾಲ್ಕನೆಯ ಪಾದದಲ್ಲಿ ಅಂದರೆ ಅರ್ಧಮಾತ್ರೆಯಲ್ಲಿಯೇ ನೆಲೆಸಿದ್ದಾನೆ. ಆದ್ದರಿಂದ ಅ, ಉ, ಮ ಮತ್ತು ಅರ್ಧಮಾತ್ರೆಗಳು

ಯಥಾ ಕ್ರಮದಿಂದ, ಸೃಷ್ಟಿ, ಸ್ಥಿತಿ ಮತ್ತು ಲಯ ಹಾಗೂ ಸಾಕ್ಷಿತ್ವ ಈ ನಾಲ್ಕರ ದ್ಯೋತಕವಾಗಿದೆ. ವಿಶುದ್ಧ ವಿಚಾರದಿಂದ, ಈ ಪುರುಷೋತ್ತಮನು ನಿರ್ಗುಣನಲ್ಲ ಎಂದು ಮೊದಲೇ ಹೇಳಿದ್ದೇನೆ. ಏಕೆಂದರೆ, ಇವನ ಸಾಕ್ಷಿತ್ವ ಇಲ್ಲವೆ ವಸ್ತುಲಿಪ್ತ ಭಾವವು ಉಳಿದುಬಿಟ್ಟಿದೆ. ಇದರಿಂದ, ವಸ್ತುಲಿಪ್ತ ಭಾವದ ಹೊರಗೆ, ವಿಶುದ್ಧ ನಿರ್ಗುಣ ಸತ್ತೆಯಲ್ಲಿ ಸಾಧಕನು ನೆಲೆಸಿದಾಗ ಓಂಕಾರದ ಅವಶೇಷವು ಇರುವುದಿಲ್ಲ. ಓಂಕಾರವು ಭೂತ, ವರ್ತಮಾನ ಮತ್ತು ಭವಿಷ್ಯತ್ತು ಈ ಮೂರನ್ನು ಹಿಡಿದುಕೊಂಡಿದೆ. ಮತ್ತು ಕಾಲಾತೀತ ತುರೀಯ ಅವಸ್ಥೆಯ ಮೊದಲ ಮೂರು ಪಾತಗಳೂ ಸಹ ಓಂಕಾರವೇ ಆಗಿದೆ.

ಓಂಕಾರವು ಸ್ಫುರಣ ಕ್ರಿಯೆಯ ಧ್ವನಿಯಾಗಿದೆ; ಪ್ರಕಾಶದ ಬೀಜವಾಗಿದೆ; ಎಂದು ಮೊದಲೇ ಹೇಳಿದ್ದೇನೆ. ಕಾಲಾತೀತದ ಎದೆಯ ಮೇಲೆ ಸೃಷ್ಟಿಯ ಸ್ಥಿತಿ ಮತ್ತು ಲಯಗಳ ಕ್ರಿಯಾ ತರಂಗಗಳು ಏಳುತ್ತಿರುವವರೆಗೆ ಓಂಕಾರವು ಸೃಷ್ಟಿ, ಸ್ಥಿತಿ ಮತ್ತು ಲಯಗಳ ನಡುವಿನ ರೂಪದಲ್ಲಿ ಅಂದರೆ ಅ, ಉ, ಮ ಗಳ ರೂಪದಲ್ಲಿ ಇರುತ್ತದೆ. ಆದ್ದರಿಂದ, ಓಂಕಾರವು ಉಚ್ಚಾರಣೆ ಮಾಡುವ ವಸ್ತುವಲ್ಲ. ಓಂಕಾರವು ಶ್ರವಣ ಮಾಡುವುದಕ್ಕಿದೆ. ಮಾನವನ ಕಂಠವು ಆ ಧ್ವನಿಗೆ ಸರಿಯಾದ ಭಾವದಿಂದ ರೂಪ ನೀಡಲಾರದು. ಆದ್ದರಿಂದ ಅದನ್ನುಚ್ಚರಿಸುವ ವ್ಯರ್ಥ ಚೇಷ್ಟೆಯನ್ನು ಬಿಡು. ಈ ಓಂಕಾರದ ಪ್ರಕಾಶಮಾನ ರೂಪವನ್ನು ಹಿಡಿದು ಸಾಧಕನು ಮೊದಲಿನ ಅರ್ಧಮಾತ್ರೆಯಿಂದ ಮತ್ತು ಇದಾದ ಬಳಿಕ, ತುರೀಯದ ನಾಲ್ಕನೇ ಪಾದದಲ್ಲಿ ನಿರ್ಗುಣ, ನಿಷ್ಕಲ ಬ್ರಹ್ಮದಲ್ಲಿ ಉಪನೀತನಾಗುತ್ತಾನೆ. ಈಶ್ವರ ಗ್ರಾಸದಲ್ಲಿ ಪರಮ ಶಾಂತಿಯನ್ನು ಪಡೆಯುತ್ತಾನೆ. ಯಮನು ನಚಿಕೇತನಿಗೆ ಹೀಗೆ ಹೇಳಿದ್ದಾನೆ.

"ಸರ್ವೇ ವೇದಾ ಯತ್ಪದಮಾಮನಂತಿ, ತಪಾಂಸಿ ಸರ್ವಾಣಿ,
ಚ ಯದ್ವದಂತಿ, ಯದಿಚ್ಛಂತೋ ಬ್ರಹ್ಮಚರ್ಯಂಚರಂತಿ,
ತತ್ತೇ ಪದಂ ಸಂಗ್ರಹೇಣ ಬ್ರವೀಮ್ಯೋಮಿತ್ಯೇತತ್"

—ಕಾಠಕ ಶ್ರುತಿ.

ಆದ್ದರಿಂದ, ಓಂಕಾರವು ಸಗುಣ ಮತ್ತು ನಿರ್ಗುಣಗಳೆರಡರ ದ್ಯೋತಕವಾಗಿದೆ; ಎಂಬುದನ್ನು ತಿಳಿ. ಓಂಕಾರದಲ್ಲಿ ಬಳಸಿದ ( . ) ಬಿಂದುವು ನಿರ್ಗುಣದ ಮೊದಲಿನ ಮೂರು ಪಾದಗಳ ಬೋಧಕವಾಗಿದೆ. ಅ, ಉ, ಮ ಸಗುಣದ ಬೋಧಕವಾಗಿದೆ. ಮತ್ತು ನಾದ ಚಿಹ್ನೆಯು ( ◡ ) ಸಗುಣ



ನಿರ್ಗುಣಗಳ ಪಾರ್ಥಕ್ಯವನ್ನು ನಿರ್ಧರಿಸುತ್ತದೆ. ಬಿಂದುವಿನ ವಿಪುಲ ವರ್ಣನೆಯನ್ನು ಮಾಡಲಾರೆವು. ಆದ್ದರಿಂದ ಬಿಂದುವನ್ನು ನಿರ್ಗುಣ ಬ್ರಹ್ಮದ ಬೋಧಕ ರೂಪದಲ್ಲಿ ಬಳಸುತ್ತಾರೆ. ಬಿಂದುವಿಗೆ ಸ್ಥಾನವೇನೋ ಇದೆ; ಆದರೆ ಅದಕ್ಕೆ ಪರಿಮಾಣವಿಲ್ಲ.

ಪುರುಷೋತ್ತಮನ ಲಕ್ಷಣಗಳನ್ನು ಈ ಮುಂಚೆ ತಿಳಿಸಿದ್ದೇನೆ. ಈಗ ಸಗುಣ ಬ್ರಹ್ಮನ ಲಕ್ಷಣವನ್ನು ಹೇಳುವೆ. ಇಷ್ಟು ಹೇಳಿ, ಮುಗಿಸಿಬಿಡಲಾರೆವು. ಆದರೂ ಸಹ, ವೇದದ ಭಾಷೆಯಲ್ಲಿ ಏನಿನಿತು ಹೇಳಿರುವರೋ, ಆ ಕುರಿತು ಸ್ವಲ್ಪ ಹೇಳುವೆ. ಭಾಷೆಯಲ್ಲಿ ಸಗುಣ ಬ್ರಹ್ಮನನ್ನು ಕುರಿತು ಕೈವಲ್ಯ ಶ್ರುತಿಯಲ್ಲಿ ಹೀಗೆ ಹೇಳಿದ್ದಾರೆ.

"ಮಯ್ಯೇವ ಸಕಲಂ ಜಾತಮ್,
ಮಯಿ ಸರ್ವಂ ಪ್ರತಿಷ್ಠಿತಮ್
ಮಯಿ ಸರ್ವಂ ಲಯಂ ಯಾತಿ
ತದ್ ಬ್ರಹ್ಮಾದ್ವಯ ಯಮಸ್ಮ್ಯಹಮ್"

"ಜಾಗ್ರತ್ ಸ್ವಪ್ನ ಸುಷುಪ್ತ್ಯಾದಿ
ಪ್ರಪಂಚ ಯದ್ ಪ್ರಕಾಶತೇ
ತದ್ ಬ್ರಹ್ಮಾಹಮಿತಿ, ಜ್ಞಾತ್ವಾ
ಸರ್ವ ಬಂಧೈಃ ಪ್ರಮುಚ್ಯತೇ"

ಋಗ್ವೇದದಲ್ಲಿ ಹೀಗೆ ಹೇಳಿದ್ದಾರೆ.

"ಯತೋ ವಾ ಇಮಾನಿ ಭೂತಾನಿ ಜಾಯಂತೇ
ಯೇನ ಜಾತಾನಿ ಜೀವಂತಿ,
ಯತ್ ಪ್ರಯನತ್ಯಭಿಶಂವಿಶಂತಿ,
ತದ್ ವಿಜಿಜ್ಞಾಸಸ್ವ ತದ್‌ಬ್ರಹ್ಮಾ"

ಮಹಾನಿರ್ವಾಣ ತಂತ್ರದಲ್ಲಿ ಹೀಗೆ ಹೇಳಿದ್ದಾರೆ.

"ಯತೋ ವಿಶ್ವಂ ಸಮುದ್ಭೂತ
ಯೇನ ಜಾತಂಚ ತಿಷ್ಟತಿ
ಯಸ್ಮಿನ್ ಸರ್ವಾಣಿ ಲೀಯಂತೇ
ಜ್ಞೇಯಂ ತದ್ ಬ್ರಹ್ಮಲಕ್ಷಣೈಃ"

ನೃಸಿಂಹ ಉತ್ತರ ತಾಪನೀಯ ಶ್ರುತಿಯಲ್ಲಿ ಹೀಗೆ ಹೇಳಿದ್ದಾರೆ.

"ಸರ್ವಹ್ಯೇತದ್ ಬ್ರಹ್ಮ. ಅಯಮಾತ್ಮಾ ಬ್ರಹ್ಮ, ತಮೇ ತಮೋತ್ಮಾನ ಮೋಮಿತಿ ಬ್ರಹ್ಮಣೈ. ಕೀಕೃತ್ವ ಬ್ರಹ್ಮಜಾತ್ಮನಾ ಓಮಿತ್ಯೇಕೀಕೃತ್ಯ ತದೇಕ ಮಜರಮಮೃತಮಭಯಮೋಮಿತ್ಯನುಭೂಯ ತಮ್ಮಿನ್ನಿದಂ ಸರ್ವಂ ತ್ರಿ ಶರೀರಂ ಆರೋಪ್ಯ ತನ್ಮಯಂ ಹಿ ತದೇವೇತಿ ಸಂಹರೇದೋಮಿತಿ."

ನೀವು ಯಾವುದನ್ನು ನೋಡುತ್ತಿರೋ, ಚಿಂತಿಸುವಿರೋ, ಇಲ್ಲವೆ ಅನು ಭವಿಸುವಿರೋ, ಇಲ್ಲವೆ ಯಾವುದು ನಿಮ್ಮ ದರ್ಶನ ಚಿಂತನ ಮತ್ತು ಅನುಭವ ಗಳಿಗೆ ಅತೀತವಾಗಿದೆಯೋ, ಅದೆಲ್ಲವೂ ಸಗುಣಬ್ರಹ್ಮ ಇಲ್ಲವೆ ಓಂಕಾರವಾಗಿದೆ. ನಿಮ್ಮ ಆತ್ಮವೂ ಸಹ ಬ್ರಹ್ಮವೇ ಆಗಿದೆ. ನಿಮ್ಮ ಅಸ್ತಿತ್ವ ಇಲ್ಲವೆ ಜಗತ್ತು ಮತ್ತು ಬ್ರಹ್ಮ ಹಾಗೂ ಓಂಕಾರಗಳ ನಡುವೆ ಒಂದೇ ಭಾವವಿದೆ. ನಿಮ್ಮ ಅಸ್ತಿತ್ವ, ಜಗತ್, ಇಲ್ಲವೆ ಬ್ರಹ್ಮ ಇವೆಲ್ಲ ಪ್ರಥಕ್ ಪೃಥಕ್ ಸತ್ತೆಗಳೇನಲ್ಲ. ಈ ಜಡ ಜಗತ್ತಿನೊಂದಿಗೆ ತನ್ನ ಆತ್ಮಿಕ ಅಸ್ತಿತ್ವವನ್ನು ಬ್ರಹ್ಮನೊಂದಿಗೆ ಒಂದಾ ಗಿಸು. ಆಗ ಮಾತ್ರ ನೀನು ನಿನ್ನನ್ನು ಓಂಕಾರ ಸ್ವರೂಪವೆಂದು ಸಾಕ್ಷಾತ್ಕರಿಸಿ ಕೊಳ್ಳುವೆ. ಅಂದರೆ, ಆ ಅವಸ್ಥೆಯಲ್ಲಿ ಓಂಕಾರದೊಂದಿಗೆ ನಿಮಗೆ ಏಕಭಾವ ವುಂಟಾಗುತ್ತದೆ. ಈ ಪ್ರಕಾರ, ಓಂಕಾರದೊಂದಿಗೆ ತನ್ನನ್ನು ಏಕಭಾವದಲ್ಲಿ ಪ್ರತಿಷ್ಠಿತಗೊಳಿಸಿದ ಮೇಲೆ, ಕೇವಲ ಒಂದೇ ಸತ್ತೆಯು ಉಳಿಯುತ್ತದೆ. ಅದರ ಸ್ವರೂಪವು ವಿಕೃತಿಯಲ್ಲ. ಆ ಅವಸ್ಥೆಯು ವಿಕೃತಿರಹಿತವಾಗಿದೆ. ಏಕೆಂದರೆ ವಿಕೃತಿಗಾಗಿ ಎರಡು ಸತ್ತೆಗಳಿರಬೇಕಾದುದು ಆವಶ್ಯಕ. ಎಲ್ಲಿಯ ವರೆಗೆ ಅದು ಏಕಸತ್ತೆಯಾಗಿರುವುದೋ, ಅಲ್ಲಿಯ ವರೆಗೆ ವಿಕೃತಿಗೆ ಅನುವು ಎಲ್ಲಿ? ಕೇವಲ ಹಾಲು ಮಾತ್ರವಿದ್ದು 'ಹೆಪ್ಪು' (ದಧ್ಯಮ್ಲ) ಇರದಿದ್ದರೆ, ಹಾಲಿನಿಂದ ಮೊಸರಿನ ರೂಪದಲ್ಲಿ ವಿಕೃತಿ ಹೇಗೆ ಸಂಭವಿಸುವುದು? ಅಂದರೆ, ಹಾಲನ್ನು ಮೊಸರಾಗಿ ಪರಿಣಮಿಸಲು ಎರಡನೆಯ ಸತ್ತೆಯಾದ ಹೆಪ್ಪಿನ ಪ್ರಯೋಜ ನೆಯು ಅಪರಿಹಾರ್ಯವಾಗಿದೆ. ಆದ್ದರಿಂದ ಏಕತ್ವದ ಕಾರಣ ಬ್ರಹ್ಮವು ಅಜರವಾಗಿದೆ.

ಸರಿಯಾಗಿ ಇದೇ ರೀತಿ, ಒಂದೇ ಸತ್ತೆ ಇರುವಲ್ಲಿ ಮೃತ್ಯುವೂ ಇರ ಲಾರದು. ಏಕೆಂದರೆ, ಮೃತ್ಯುವೂ ಸಹ ಒಂದು ಪ್ರಕಾರದ ಅವಸ್ಥಾ ಭೇದವಷ್ಟೇ. ಮೃತ್ಯುವೂ ವಿಕೃತಿಯಾಗಿದೆ. ಮೃತ್ಯುವು ಇಲ್ಲದೆಡೆಗೆ ವಿಕೃತಿಯೂ ಇರದು. ಆದ್ದರಿಂದ ಓಂಕಾರವು ಅಮೃತತ್ವದಲ್ಲಿ ಪ್ರತಿಷ್ಠಿತವಾಗಿದೆ. ಸರಿಯಾಗಿ ಅದೇ ಪ್ರಕಾರ, ಭಯವಿರುವುದರಿಂದ, ಉಳಿದೆರಡು ಸತ್ತೆಗಳ ಇರವೂ ಸಹ



ಪ್ರಯೋಜನಕಾರಿಯಾಗಿದೆ. ಯಾವುನು ಭಯಪಡುವನೋ ಅವನು, ಮತ್ತು ಯಾವ ಕಾರಣಕ್ಕಾಗಿ ಭಯ ಪಡುವನೋ ಅದು. ಒಂದೇ ಸತ್ತೆಯು ಇರುವಲ್ಲಿ ಕಾರ್ಯ ಕಾರಣ ಎಂಬ ಪೃಥಕ್ ಭಾವವಿಲ್ಲದಿರುವುದರಿಂದ, ಭಯವಂತೂ ಇರಲಾರದು. ಆದ್ದರಿಂದ ಆ ಮಹತ್ ಪದವು ಅಭಯವಾಗಿದೆ. ಆ ಪದ ತಲುಪುವುದರಿಂದ ಜೀವಸತ್ತೆಯೂ ಸಹ ಅಭಯವೇ ಆಗುತ್ತದೆ. ಸಾಧಕ ರಾಮಪ್ರಸಾದನು ಹೇಳುವುದೇನಂದರೆ–

"ಅಭಯ ಪದೇ ಪ್ರಾಣ ಸಂಪೇಛಿ,
ಆರ ಕಿ ಶಮನ ಭಯ ರೇಖೇಛಿ"

ಈ ಅವಿಕೃತ, ಅಮರ, ಅಭಯ ಓಂಕಾರದಲ್ಲಿ ನೀವು ಮೂರು ಶರೀರ ಗಳನ್ನು ಆರೋಪಿಸುತ್ತೀರಿ. ಜೀವವೇ ಜಾಗ್ರತ, ಸ್ವಪ್ನ, ಸುಷುಪ್ತಿ ಮತ್ತು ಸ್ವರೂಪವೆಂಬ ನಾಲ್ಕು ಸತ್ತೆಗಳ ಸಮಷ್ಟಿಯಾಗಿದೆ. ಇಲ್ಲಿ ಮೂರು ಶರೀರ ಗಳೆಂದರೆ ಜಾಗ್ರತ, ಸ್ವಪ್ನ ಮತ್ತು ಸುಷುಪ್ತಿಗಳೆಂಬ ಬೋಧವಷ್ಟೇ. ಈ ಮೂರು ಶರೀರಗಳು, ನಾಲ್ಕನೇಯ ಸ್ವರೂಪಾವಸ್ಥೆಯ ವಿಕೃತಿಗಳಷ್ಟೇ. ಈ ಮೂರು ಶರೀರಗಳನ್ನು ಬ್ರಹ್ಮನಲ್ಲಿ ಆರೋಪಿಸು ಮತ್ತು ಹಾಗೆಯೇ ಆ ಭಾವ ದಲ್ಲಿ ತನ್ಮಯನಾಗು. ಆ ಸಮಯದಲ್ಲಿ 'ನಾನೇ ಸ್ವತಃ ಓಂಕಾರಾತ್ಮಕನಿರುವೆ.' ಅಂದರೆ ನಾನು ಸ್ವಯಂ ಓಂಕಾರನಾಗಿದ್ದೇನೆ. ಹಾಗೂ ನಾನು ನನ್ನ ಸ್ವರೂಪ ಮತ್ತು ಸ್ವಭಾವದಲ್ಲಿಯೇ ಇದ್ದೇನೆ, ಎಂಬ ಅರಿವಾಗುತ್ತದೆ. ಆದ್ದರಿಂದ, ಜೀವಿಗಳಲ್ಲಿ ಎಂದಾದರೂ, ಯಾವುದಾದರೂ ಜಡದ ಚಿಂತೆಯು ಉದಿಸಿದರೆ, ಅದರಲ್ಲಿ ಬ್ರಹ್ಮಭಾವವನ್ನು ಆರೋಪಿಸುವುದು ಯೋಗ್ಯವಾಗಿದೆ. ಮತ್ತು ಹೀಗೆ ಮಾಡುವುದರಿಂದ,ಯಾವುದೇ ಅವಸ್ಥೆಯಲ್ಲಿಯೂ ಅವನು ಓಂಕಾರದಿಂದ ಬೇರೆಯಾಗಿರಬೇಕಾಗಿಲ್ಲ. ಈ ತ್ರಿ ಶರೀರಗಳೇನು? ಇವು ಯಾರವು? ಇದೂ ಸಹ ಮನದ ಸ್ವಾಭಾವಿಕ ಪ್ರಶ್ನೆಯೇ ಆಗಿದೆ. ಈ ತ್ರಿ ಶರೀರಗಳು ಕೇವಲ ಜೀವರಲ್ಲಿ ಮಾತ್ರ ಇವೆ. ಆದರೆ ಬ್ರಹ್ಮನಲ್ಲಿ ಇಲ್ಲ.

"ತ್ವಂ ವಾ ಏತಂ ತ್ರಿಶರೀರಮಾತ್ಮನಂ ತ್ರಿಶರೀರಂ ಏವಂ
ಬ್ರಹ್ಮಾತ್ಮಾನು ಸಂದಧ್ಯಾತ್"
—ಅಥರ್ವ.

ಜಾಗ್ರತ, ಸ್ವಪ್ನ ಮತ್ತು ಸುಷುಪ್ತಿಗಳ ಭೇದದ ಕಾರಣ, ಜೀವಿಗಳ ತ್ರಿಶರೀರವಿದೆ. ಮತ್ತು ಈ ಮೂರು ಅವಸ್ಥೆಗಳಲ್ಲಿಯೇ ಅವನು ತನ್ನನ್ನು ಬ್ರಹ್ಮನಿಂದ ಪೃಥಕ್ ಎಂದು ತಿಳಿಯುತ್ತಾನೆ. ಜೀವ ಇಲ್ಲವೆ ಬ್ರಹ್ಮಗಳೆರಡೂ

ಸತ್ತೆಗಳ ಅವಸ್ಥಾಭೇದವು ಗುಣಕ್ಕೆ ಸಂಬಂಧಿಸಿದ ಭೇದದಿಂದ ನಿರ್ಧರಿಸಲ್ಪಡುತ್ತದೆ. ಈ ಜಾಗ್ರತ–ಸ್ವಪ್ನ–ಸುಷುಪ್ತಿ ಮುಂತಾದ ಅವಸ್ಥಾ ಭೇದಗಳು ಸತ್ತ್ವ, ರಜಃ ಮತ್ತು ತಮೋಗುಣಗಳಲ್ಲಿ ಹೆಚ್ಚು ಕಡಿಮೆಯಾಗುವುದರಿಂದ ಉಂಟಾಗುತ್ತವೆ.

ಜೀವಿಯ ವಿಕಾಸವು ಜೀವಿಯ ಕ್ಷುದ್ರ ದೇಹ–ಕೇಂದ್ರಿಕವಾಗಿದೆ. ಆದರೆ ಬ್ರಾಹ್ಮೀ ವಿಕಾಸವು ಈ ಅತಿ ಬೃಹತ್ತದ ವಿಶ್ವಬ್ರಹ್ಮಾಂಡವಾಗಿದೆ. ಬ್ರಾಹ್ಮೀ ವಿಕಾಸದಲ್ಲಿಯೂ ಮೂರು ಗುಣಗಳೇ ಕ್ರಿಯಶೀಲವಾಗಿವೆಯೆಂದು ಈ ಮೊದಲೇ ಹೇಳಿದ್ದೇನೆ. ಮತ್ತು ಬ್ರಾಹ್ಮೀ ವಿಕಾಸದ ಮೂರು ಗುಣಗಳು ಪ್ರಕಟ ಅವಸ್ಥೆಯಲ್ಲಿಯೇ ಇರುತ್ತವೆ. ಜೀವರ ಮೂರು ಅವಸ್ಥೆಗಳ ಸ್ಥಿತಿಯು ಅಲ್ಲಿ, ಆ ಸಮಯಕ್ಕೆ ಆಗಬಲ್ಲದು. ಇದರ ಕಾರಣವೇನೆಂದರೆ, ಜೀವರ ಸ್ಥೂಲ, ಸೂಕ್ಷ್ಮ ಮತ್ತು ಕಾರಣಾತ್ಮಕ ಅಸ್ತಿತ್ವಗಳು ಸಂಪೂರ್ಣವಾಗಿ ಬ್ರಹ್ಮನ ಕಲ್ಪನೆಯ ಮೇಲೆಯೇ ಅವಲಂಬಿಸಿವೆ. ಅವನ ಸ್ಥೂಲ ಶರೀರವು ಬ್ರಹ್ಮನ ಕಲ್ಪನೆಯಿಂದ ಸೃಷ್ಟವಾದ ಪಂಚಭೂತಗಳಿಂದ ಕೂಡಿದ ಜಗತ್ತಿನ ಉಪಾದಾನಗಳಿಂದ ನಿರ್ಮಿತವಾಗಿದೆ. ಅರ್ಥಾತ್ ಅವನ ಕಾಮುಮಯ ಕೋಶದಲ್ಲಿಯೇ ಸೃಷ್ಟವಾಗಿದೆ. ಬ್ರಹ್ಮನ ಈ ಕಾಮುಮಯ ಕೋಶದಿಂದಲೇ ಜೀವಾತ್ಮನ ಅಸಂಖ್ಯಾತ ದೇಹಗಳ ನಿರ್ಮಾಣವಾಗಿದೆ. ಏಕೆಂದರೆ, ಅವುಗಳು ತಮ್ಮ ವ್ಯಷ್ಟಿಭಾವವನ್ನು ರಕ್ಷಿಸಿಕೊಳ್ಳಲೋಸುಗ, ಆಧಾರಕ್ಕೆ ಸಂಬಂಧಿಸಿದ ಭೇದಗಳನ್ನು ಇರಿಸಿಕೊಳ್ಳಬೇಕಾಗುತ್ತದೆ. ಇಲ್ಲವಾದರೆ, ಅವುಗಳಲ್ಲಿ ಸ್ವಾತಂತ್ರ್ಯವು ಉಳಿಯುವುದಿಲ್ಲ. ಬ್ರಾಹ್ಮೀ ಕಲ್ಪನೆಯ ಧಾರೆಯನ್ನು ಹೊತ್ತೊಯ್ಯುವುದಕ್ಕೋಸುಗ, ಮನೋಮಯ ಜಗತ್ತಿನಲ್ಲಿ ಇರುವ ವಸ್ತುಭೇದವು ಅಪರಿಹಾರ್ಯವಾಗುತ್ತದೆ. ಅದಕ್ಕೋಸುಗ, ಜೀವರ ಅಸಂಖ್ಯ ದೇಹಗಳ ಸೃಷ್ಟಿಯು, ನಿಶ್ಚಯವಾಗಿಯೂ, ಪ್ರಯೋಜನಕಾರಿಯಾಗಿರುವಂತೆ ಅವಶ್ಯವೂ ಆಗಿದೆ. ಇಲ್ಲವಾದರೆ, ವಸ್ತುಗತ ಭೇದವಿಲ್ಲದಿರುವುದರಿಂದ ಕಲ್ಪನೆಯು ಸ್ಥಾಣುವಾಗುತ್ತದೆ. ಭೋಗಿಸದ ಸಂಸ್ಕಾರಗಳ ಕ್ಷಯಕ್ಕಾಗಿ ಸಗುಣಬ್ರಹ್ಮನು ಕಲ್ಪಿಸುತ್ತ ಸಾಗಲೇಬೇಕಾಗುತ್ತದೆ. ಆ ಕಾಲಕ್ಕೆ ಭೇದಾತ್ಮಕ ಜಗತ್ತಿನ ಸೃಷ್ಟಿ ಮಾಡುವುದೇ ಅವನ ಧರ್ಮವಾಗುತ್ತದೆ. ಜೀವಿಯ ಕರ್ಮ ಮತ್ತು ಪ್ರತಿಕರ್ಮಗಳ ಭೋಗವು ಈ ಆಧಾರಗಳ ಮಾಧ್ಯಮದಿಂದ ಆಗುತ್ತಿರುತ್ತದೆ. ಮತ್ತು ಈ ಜೀವಸತ್ತೆಯು ಬ್ರಹ್ಮೀ ಸತ್ತೆಯಿಂದ ತನ್ನ ಪೃಥಕ್–ಅಸ್ತಿತ್ವವನ್ನು ತ್ಯಜಿಸಿದಾಗ, ಪೃಥಕ್ ಭಾವದಿಂದಾಗಿ ಕರ್ಮಫಲಭೋಗದ ಕಾರಣವಿಲ್ಲದಿರುವುದರಿಂದ, ಅಂದರೆ, ಭಾವ-ವಿಮುಕ್ತ



ನಾಗುವ ಕಾರಣ, ಅವನ ಸ್ವತಂತ್ರ ದೈಹಿಕ ಸತ್ತೆಯೂ ಇರುವುದಿಲ್ಲ. ಪಂಚ-ಭೂತಗಳ ಹೆಸರಿನ ಈ ತೋರು ಜಗತ್ತು, ಬ್ರಹ್ಮನ ಕಾಮುಮಯ ಶರೀರವಾಗಿದೆ. ಅಂದರೆ ಅವನ ಮಾನಸ ದೇಹವಾಗಿದೆ. ಅವನ ಯಾವುದೇ ಸೀಮಿತ ಜಡ–ಶರೀರವಲ್ಲ. ಮತ್ತು ಇದರಿಂದ ಅವನ ಜಡಶರೀರವನ್ನು ಕೇಂದ್ರವಾಗಿರಿಸಿಕೊಂಡು ಯಾವುದೇ ಜಾಗ್ರತ, ಸ್ವಪ್ನ ಇಲ್ಲವೆ ಸುಷುಪ್ತಿ ಅವಸ್ಥೆಗಳು ಇರಲಾರವು. ಅವನದೆಲ್ಲವೂ ಮಾನಸಿಕವಾಗಿದೆ.

ಜಾಗ್ರದಾವಸ್ಥೆ ಇಲ್ಲವೆ ಮೊದಲನೆಯ ಪಾದ:–

> "ಸ್ಥೂಲತ್ವಾತ್ ಸೂಕ್ಷ್ಮ ಭುಕ್ತ್ವಾಚ್ಚ ಸೂಕ್ಷ್ಮತ್ವಾತ್
> ಸೂಕ್ಷ್ಮಭುಕ್ತ್ವಚ್ಚೈಲ ಕ್ಯಾದಾನಂದ ಭೋಗಾಚ್ಚ ಸೋಽ ಯ-
> ಮಾತ್ಮಾ ಚತುಷ್ಪಾಜ್ಜಾಗರಿತ–ಸ್ಥಾನಃ ಸ್ಥೂಲಪ್ರಜ್ಞ
> ಸಪ್ತಾಂಗ ಏಕೋನಿವಂಶತಿ ಮುಕ್ತಃ ಸ್ಥೂಲಭುಕ್,
> ಚ ಭೂರಾತ್ಮಾ ವಿಶ್ವೋ ವೈಶ್ವಾನರಃ ಪ್ರಥಮಃ ಪಾದಃ"

ಜಾಗ್ರತ ಅವಸ್ಥೆಯೇ ಆತ್ಮನ ಸ್ಥೂಲತಮ ಅವಸ್ಥೆಯಾಗಿದೆ. ಏಕೆಂದರೆ, ಈ ಅವಸ್ಥೆಯಲ್ಲಿಯೇ ಅವನ ಉಪಜೀವನವಿದೆ. ಸ್ಥೂಲ ಜಗತ್ತಿನಿಂದ ತನ್ಮಾತ್ರೆಗಳನ್ನು ಗ್ರಹಿಸುವುದು, ಇಲ್ಲವೆ ಆ ಕುರಿತು ಕಾಮನೆಗಳನ್ನು ಮಾಡುವುದು, ಆ ಕಾಮನೆಗಳನ್ನು ಕಾರ್ಯರೂಪಕ್ಕಿಳಿಸುವುದು, ಕಾಮನೆಗಳನ್ನು ಬಹಿರ್ಮುಖಗೊಳಿಸುವುದು, ಜೀವಿಯ ಸಂವೇದನೆಗಳೂ ಸಹ ಸ್ಥೂಲ ಭೋಗಾತ್ಮಕವಾಗಿವೆ. ಸಂವೇದನೆಗಳು ಕಾರ್ಯದಲ್ಲಿ ಪರಿಣಮಿಸುತ್ತವೆ. ಆ ಕಾರ್ಯವೂ ಸಹ ಸ್ಥೂಲ ಭೋಗವನ್ನೇ ಕೇಂದ್ರವಾಗಿರಿಸಿಕೊಂಡಿರುತ್ತದೆ. ಆದ್ದರಿಂದ ಜಾಗ್ರತ ಅವಸ್ಥೆಯಲ್ಲಿ ಜೀವಿಯು ಸ್ಥೂಲಭುಕ್ ಆಗಿದ್ದಾನೆ. ಅಂದರೆ ಸ್ಥೂಲ ಜಗತ್ತೇ ಅವನ ಭಕ್ಷ್ಯವಾಗಿದೆ. ಜಾಗ್ರದವಸ್ಥೆಯಲ್ಲಿ ಅವನು ಸೂಕ್ಷ್ಮಭುಕ್ ಸಹ ಆಗಿದ್ದಾನೆ. ಏಕೆಂದರೆ, ಈ ಸ್ಥೂಲಭೋಗಾತ್ಮಕ ಕ್ರಿಯೆಗಳ ಉಗಮವು ಸೂಕ್ಷ್ಮ ಮಾನಸಿಕತೆಯಲ್ಲಿಯ ಮಧ್ಯದಲ್ಲಿದೆ. ಆದರ ನಿಜವಾದ ಭೋಗವು ತಕ್ಕ ವಿಚಾರದೃಷ್ಟಿಯಿಂದ ನೋಡಿದರೆ, ಮಾನಸಿಕ ಸ್ತರದಲ್ಲಿಯೇ ಇರುತ್ತದೆ. ಮನವು ಸರಿಯಾಗಿ ಇಲ್ಲದಿರುವ ಕಾರಣ, ಒಳ್ಳೆಯ ದೃಶ್ಯಗಳ, ಒಳ್ಳೆಯ ಖಾದ್ಯಗಳ ಮತ್ತು ಒಳ್ಳೆಯ ಪೇಯಗಳ ಭೋಗವನ್ನು ಸಹ ಸರಿಯಾಗಿ ಮಾಡುತ್ತಿಲ್ಲ. ಈ ಜಾಗ್ರದಾವಸ್ಥೆಯಲ್ಲಿಯ ಆತ್ಮನನ್ನು ನಾಲ್ಕನೆಯ ಪಾದವೆಂದು ಕರೆಯುತ್ತಾರೆ. ಮತ್ತು ಅದರ ಮಧ್ಯೆ ಅಪ್ರಕಟಿತವಾಗಿ ಸ್ವಪ್ನ ಮತ್ತು ಸುಕ್ಷಪ್ತಿ ಹಾಗೂ

ತುರೀಯ ಅವಸ್ಥೆಯಿತ್ತವೆ. ಈ ಜಾಗ್ರದವಸ್ಥೆಯು ಸ್ಥೂಲಪ್ರಜ್ಞೆಯಾಗಿದೆ. ಅಂದರೆ, ಸ್ಥೂಲವಸ್ತುಗಳ ಜ್ಞಾನವನ್ನು ಆಹಾರಣ (ತಂದುಕೊಳ್ಳುವುದು) ಮಾಡಿಕೊಳ್ಳುವುದೇ ಅವನ ಕೆಲಸವಾಗಿದೆ. ಇಲ್ಲವೆ ಜಾಗ್ರದಾವಸ್ಥೆಯ ಮೂಲಕ ಇದನ್ನು ಪಡೆಯಲಾಗುತ್ತದೆ. ಈ ಸ್ಥೂಲಪ್ರಜ್ಞೆಯು ಜಾಗ್ರದಾವಸ್ಥೆಯು ಏಳು ಅಂಗ ಹೊಂದಿದೆ. ಅಂದರೆ, ಸಪ್ತ ಚಕ್ರಗಳನ್ನೊಳಗೊಂಡ ಪಂಚಭೂತ ಗತ, ಚಿತ್ತ, ಅಹಂ ತತ್ತ್ವ ಮತ್ತು ಮಹತ್ತತ್ತ್ವವಾಗಿದೆ. ಇದಕ್ಕೆ ಹತ್ತೊಂಬತ್ತು ಮುಖಗಳಿವೆ. ಅಂದರೆ ಇದರ ವಿಕಾಸವು ಹತ್ತೊಂಬತ್ತು ತತ್ತ್ವಗಳಿಂದಾಗಿದೆ. ಅಂದರೆ ಹತ್ತು ಇಂದ್ರಿಯಗಳು, ಐದು ವಾಯುಗಳು, ಚಿತ್ತ ಅಹಂ ತತ್ತ್ವ ಮಹತ್ತತ್ತ್ವ ಮತ್ತು ಮೂಲ ಪ್ರಕೃತಿಯಿಂದ ಮುಕ್ತವಾಗಿದೆ. ಈ ಜಾಗ್ರದಾವಸ್ಥೆಯಲ್ಲಿ ಸಕಲ ವಸ್ತುಗಳೂ ಇವನ ಭಕ್ಷ್ಯಗಳಾಗಿವೆ. ಆದ್ದರಿಂದಲೇ ಇವನನ್ನು ವಿಶ್ವ ಇಲ್ಲವೆ ವೈಶ್ವಾನರ ಎನ್ನುತ್ತಾರೆ. ಇದುವೇ ಆತ್ಮನ ಮೊದಲನೆಯ ಪಾದವಾಗಿದೆ. ಜಾಗ್ರದಾವಸ್ಥೆಯ ಅಭಿಮಾನಿಯಾದ ಸಾಕ್ಷೀಪುರುಷನನ್ನು ಜೀವ ಭಾವದಲ್ಲಿ ವಿಶ್ವ ಎನ್ನುತ್ತಾರೆ. ಮತ್ತು ಪರಮಾತ್ಮ ಭಾವದಲ್ಲಿ ವೈಶ್ವಾನರ ಇಲ್ಲವೆ ವಿರಾಟನೆನ್ನುತ್ತಾರೆ.

ಸ್ವಪ್ನಾವಸ್ಥೆ ಇಲ್ಲವೆ ಎರಡನೆಯ ಪಾದ:–

"ಸ್ವಪ್ನ ಸ್ಥಾನಃ ಸೂಕ್ಷ್ಮಪ್ರಜ್ಞಃ ಸಪ್ತಾಂಗ,
ಏಕೋನಿವಿಂಶತಿ ಮುಖಃ ಸೂಕ್ಷ್ಮಭುಕ್ ಚತುರಾತ್ಮಾ
ತೈಜಸೋ ಹಿರಣ್ಯಗರ್ಭೋ ದ್ವಿತೀಯಃ ಪಾದಃ"

ಈ ಆತ್ಮನ ಉಪಜೀವ್ಯವು ಸಂಪೂರ್ಣವಾಗಿ ಮಾನಸ ದೇಹವೇ ಇರುವಾಗ, ಅಂದರೆ, ಭೋಗವಸ್ತುಗಳು ಚಿಂತನ ಜಗತ್ತಿಗೆ ಮಾತ್ರ ಸೀಮಿತವಾಗಿರುವಾಗ, ಆ ಅವಸ್ಥೆಯನ್ನು ಸ್ವಪ್ನಾವಸ್ಥೆಯೆನ್ನುತ್ತಾರೆ. ಸ್ವಪ್ನಾವಸ್ಥೆಯಲ್ಲಿ ಕೈಕಾಲು ಮುಂತಾದ ಇಂದ್ರಿಯ ಸಮೂಹವು ಇದ್ದಕ್ಕಿದ್ದಂತೆಯೇ ಇರುತ್ತದೆ. ಮತ್ತು ಹತ್ತೊಂಬತ್ತು ಮುಖಗಳೂ ಸರಿಯಾಗಿಯೇ ಇರುತ್ತವೆ. ಆದರೆ ಆ ಕಾಲಕ್ಕೆ ಆತ್ಮನು ಸ್ಥೂಲ ಜಗತ್ತಿನಿಂದ ಯಾವುದೇ ಭಕ್ಷ್ಯವನ್ನು ಗ್ರಹಿಸುವುದಿಲ್ಲ. ಆದ್ದರಿಂದ ಆ ಕಾಲಕ್ಕೆ ಆತ್ಮನು ಸೂಕ್ಷ್ಮಭುಕ್ ಆಗಿರುತ್ತಾನೆ. ಅರ್ಥಾತ್ ಮಾನಸಿಕ ಭೂಮಿಯಿಂದ ಗ್ರಹಿಸಿದ ವಸ್ತುಗಳನ್ನಷ್ಟೇ ನೇರವಾಗಿ ಗ್ರಹಿಸುತ್ತಾನೆ. ಅವನ ಉತ್ಥಾನವು ಆ ಕಾಲದಲ್ಲಿ ಇಂದ್ರಿಯಗಳು ಗ್ರಹಿಸಿದ ತನ್ಮಾತ್ರೆಗಳ ಮೇಲೆ ಅವಲಂಬಿಸಿರುವುದಿಲ್ಲ. ಅದು ಮೊದಲೇ ಗ್ರಹಿಸಿದ ತನ್ಮಾತ್ರೆಗಳ



ಮೇಲೆ ಅವಲಂಬಿಸಿರುತ್ತದೆ. ಇಲ್ಲವೆ ಸರ್ವಜ್ಞ ಬೀಜನ ಉತ್ಥಾನ ತರಂಗಗಳನ್ನವಲಂಬಿಸಿರುತ್ತದೆ. ಈ ಕಾಲಕ್ಕೆ ಸಹ, ನಾಲ್ಕನೆಯ ಆತ್ಮನೂ ಇರುತ್ತದೆ. ಅಂದರೆ, ಜಾಗ್ರತ ಸುಷುಪ್ತಿ ಮತ್ತು ತುರೀಯಗಳು ಸ್ವಪ್ನಾವಸ್ಥೆಯಲ್ಲಿಯೂ ನೆಲೆಸಿರುತ್ತವೆ. ಸ್ವಪ್ನಾವಸ್ಥೆಯ ಅಭಿಮಾಸಿಯಾದ ಜೀವಾತ್ಮನಿಗೆ ತೈಜಸನೆನ್ನುತ್ತಾರೆ. ಮತ್ತು ಸ್ವಪ್ನಾವಸ್ಥೆಯ ಅಭಿಮಾನಿಯಾದ ಪರಮಾತ್ಮನಿಗೆ ಹಿರಣ್ಯಗರ್ಭನೆನ್ನುತ್ತಾರೆ. ಇಲ್ಲಿ ಹಿರಣ್ಯಗರ್ಭ ಶಬ್ದವು ಸಗುಣಬ್ರಹ್ಮನಿಗಾಗಿ ವ್ಯಾಪಕ ಭಾವದಿಂದ ಬಳಕೆಯಾಗಿದೆ.

ಸುಷುಪ್ತಾವಸ್ಥೆ ಇಲ್ಲವೆ ಮೂರನೆಯ ಪಾದ:

'ಯತ್ರ ಸುಪ್ತೋ ನ ಕಂಚನ ಕಾಮಂ ಕಾಮಯತೇ ನ
ಕಂಚನ ಸ್ವಪ್ನಂ ಪಶ್ಯಂತಿ
ತತ್ಸುಷುಪ್ತಂ ಸುಷುಪ್ತ ಸ್ಥಾನಃ ಏಕೀಭೂತಃ
ಪ್ರಜ್ಞಾನ ಘನ ಏವ ಆನಂದಮಯೋ ಹ್ಯಾನಂದ ಭುಕ್
ಚೇತೋಮುಖಶ್ಚತುರಾತ್ಮ ಪ್ರಾಜ್ಞ ಈಶ್ವರಃಸ್ತೃತೀಯಃ ಪಾದ

ಸುಷುಪ್ತಿ ಆವಸ್ಥೆಯಲ್ಲಿ, ಕಾಮಮಯ ಕೋಶ ಮತ್ತು ಮನೋಮಯ ಕೋಶಗಳು ಏನೂ ಕಾರ್ಯ ಮಾಡದಿರುವಾಗ, ಅಂದರೆ ಆತ್ಮದ ಆಧಾರದಲ್ಲಿ ಯಾವುದೇ ಕಾಮನಾತ್ಮಕ ತರಂಗಗಳು ಏಳದಿರುವಾಗ, ಯಾವುದೇ ಪ್ರಕಾರದ ಸ್ವಪ್ನಗಳು ಕಾಣಬರದಾಗ, ಆ ಅವಸ್ಥೆಯನ್ನು ಸುಷುಪ್ತಿ ಅವಸ್ಥೆ ಎನ್ನುತ್ತಾರೆ. ಜಾಗ್ರದವಸ್ಥೆಯಲ್ಲಿ ಕಾಮಮಯ ಕೋಶ ಮತ್ತು ಮನೋಮಯ ಕೋಶಗಳೆರಡೂ ಕಾರ್ಯ ಮಾಡುತ್ತವೆ. ಮನೋಮಯ ಕೋಶದಲ್ಲಿ, ಚಿಂತನ ತರಂಗಗಳು ಉದಿಸುತ್ತವೆ. ಅನಂತರ, ಕಾಮಮಯ ಕೋಶದ ಮಾಧ್ಯಮದಿಂದ ಅವು ಕಾರ್ಯರೂಪಕ್ಕಿಳಿಯುತ್ತವೆ. ಜಾಗ್ರದವಸ್ಥೆಯಲ್ಲಿ ಮನೋಮಯ ಕೋಶದ ಭೂಮಿಕೆಯೇ ಮುಖ್ಯವಾಗಿದೆ. ಆದರೆ ಸ್ವಪ್ನಾವಸ್ಥೆಯಲ್ಲಿ ಮನೋಮಯ ಕೋಶವು ಶಾರೀರಿಕ ಜಡತೆಯ ಕಾರಣದಿಂದ, ಕಾಮಮಯ ಕೋಶವನ್ನು ಸರಿಯಾಗಿ ನಿಯಂತ್ರಿಸಲಾರದಾಗುತ್ತದೆ. ಆದ್ದರಿಂದ ಅಲ್ಲಿಯೂ ಮನೋಮಯ ಕೋಶವೇ ಮುಖ್ಯವಾಗಿದೆ. ಆದರೆ ಸುಷುಪ್ತಿಯ ಅವಸೆಯಲ್ಲಿ ದೈಹಿಕ ಜಡತೆಯೊಂದಿಗೇನೇ ಚಿಂತನ-ಶಕ್ತಿಯು, ಅಂದರೆ ಮನೋಮಯ ಕೋಶವು, ಸಹ ನಿಷ್ಕ್ರಿಯವಾಗುತ್ತದೆ. ಆಗ ಕೇವಲ ಕಾರಣ ಮನವು, ಅತಿಮಾನಸ, ವಿಜ್ಞಾನಮಯ ಮತ್ತು ಹಿರಣ್ಮಯ ಕೋಶಗಳು ಮಾತ್ರ ಉಳಿದಿರುತ್ತದೆ. ಹಾಗಾದರೆ, ಈ ಸುಷುಪ್ತಿ ಅವಸ್ಥೆಯಲ್ಲಿ ಸ್ವಪ್ನವು ಹೇಗೆ ಆಗುವುದು? ಅಂದರೆ

ಸುಷುಪ್ತಿ ಮತ್ತು ಜಾಗ್ರತೆಗಳ ನಡುವೆ ಸ್ವಪ್ನದ ಸ್ತರವು ಹೇಗೆ ಉದ್ಭವಿಸುತ್ತದೆ?

ಸ್ವಪ್ನವೆಂದರೇನು? ಬೇರೆ ಬೇರೆ ಇಂದ್ರಿಯಗಳು ಗ್ರಹಿಸಿದ ಭಾವವು ಕಾಮಮಯ ಕೋಶವನ್ನು ಕಲಕಿದಾಗ, ಇಲ್ಲವೆ ಕಾಮಮಯ ಕೋಶದಲ್ಲಿ ಇಂದ್ರಿಯಾತ್ಮಕ ಇಲ್ಲವೆ ಜಡಾತ್ಮಕ ಭಾವಧಾರಯು ಉಗ್ರಭಾವವು ಉದಿಸಿದಾಗ ಕಾಮಮಯ ಕೋಶದ ಹಾಗೂ ಮನದ ಸ್ಥೂಲ ಆಧಾರವಾದ ಸ್ನಾಯು ಪುಂಜವು ಚಂಚಲವಾಗುತ್ತದೆ. ಮತ್ತು ಸ್ನಾಯು ಕೋಶದಲ್ಲಿ ಆ ಚಂಚಲತೆಯು ಮುದ್ರೆ ಬೀಳುತ್ತದೆ. ಈ ಮುದ್ರೆಯು ತನ್ನ ಗುರುತ್ತ್ವಕ್ಕೆ ಅನುಸರಿಸಿ, ಕೆಲವೊಮ್ಮೆ ಅಲ್ಪ ಸ್ಥಾಯಿಯಾಗಿಯು ಮತ್ತೇ ಕೆಲವೊಮ್ಮೆ ಅಲ್ಪ ಸ್ಥಾಯಿಯಾಗಿಯೂ ಮತ್ತೆ ಕೆಲವೊಮ್ಮೆ ದೀರ್ಘಸ್ತಾಯಿಯಾಗಿಯೂ ಇರುತ್ತದೆ. ಗುರುತ್ತ್ವ ಪೂರ್ಣ ಮುದ್ರೆಯು ಸಹ ಆಗಾಗ ವಿರುದ್ಧ ಧರ್ಮದ ತಳ ಮಳ ಅಥವಾ ಚಂಚಲತೆಯ ಪ್ರಭಾವದಿಂದ ಅದರಿಂದ ಉತ್ಪನ್ನವಾದ ನವೀನ ಮುದ್ರೆಯನ್ನು ಗ್ರಹಿಸಲು ಬಾಧ್ಯಸ್ಥವಾಗುತ್ತವೆ. ಮತ್ತು ಆ ಮೊದಲೇ ಗ್ರಹಿಸಿದ ಮುದ್ರೆಯ ದೀರ್ಘ ಸ್ಥಾಯಿತ್ತ್ವವು ನಷ್ಟವಾಗುತ್ತದೆ. ನಿದ್ರಿತ ಅವಸ್ಥೆಯಲ್ಲಿ ಒಂದು ವೇಳೆ, ಎಂದಾದರೂ ಶಾರೀರಿಕ ಕಾರಣದಿಂದ, ಮಾನವನ ಸ್ನಾಯು ತಂತುಗಳು ಚಂಚಲವಾದರೆ, ಮತ್ತು ತತ್ಫಲವಾಗಿ ಅಥವಾ ಉಗ್ರಭಾವದಿಂದ ಚಿಂತೆ ಮಾಡಿದುದರಿಂದ ಮತ್ತಿಷ್ಕದಲ್ಲಿ ಹುಟ್ಟಿದ ತಾಪದ ಕಾರಣದಿಂದ ಸ್ನಾಯು ಕೋಶದಲ್ಲಿ ಚಂಚಲತೆಯು ಉಂಟಾಗುತ್ತದೆ. ಈ ಚಂಚಲತೆಯು ಸ್ನಾಯು ಕೋಶವಲ್ಲಿ ಕೂಡಿಬಿದ್ದ ಮುದ್ರೆಗಳಿಗೆ ಅನುರೂಪವಾದ ಮಾನಸ ಭೂಮಿಯಲ್ಲಿ ವೃತ್ತಿಗಳನ್ನು ಉತ್ಪನ್ನ ಮಾಡುತ್ತವೆ. ಈ ರೀತಿ, ಕಲಕಿದ ಚಿತ್ತವು (ಮನೋಮಯ ಕೋಶ) ಆ ಕಾಲಕ್ಕೆ ಒಂದು ಇಲ್ಲವೆ ಒಂದಕ್ಕಿಂತ ಹೆಚ್ಚು ಮುದ್ರೆಯಿಂದ ಉತ್ಪನ್ನವಾದ ಕಲ್ಪನಾಧಾರೆಯನ್ನು ಸತ್ಯವಸ್ತುವೆಂದು ಬಗೆದು ಗ್ರಹಿಸುತ್ತದೆ. ಸ್ಥೂಲ ಇಂದ್ರಿಯಗಳು ಕಾರ್ಯವನ್ನು ನಿಲ್ಲಿಸಿದುದರ ಫಲವಾಗಿ, ಮೊದಲೇ ಗ್ರಹಿಸಿದ ವೃತ್ತಿಗಳಿಂದ ಉದ್‌ಭೂತವಾದ ತದಾಕಾರ ಹೊಂದಿದ ವೃತ್ತಿಗಳು ಆ ಕಾಲಕ್ಕೆ ಕಲ್ಪನೆಯ ರೂಪದಲ್ಲಿ ಗೋಚರಿಸುವದಿಲ್ಲ. ಆದರೆ ಅವು ವಾಸ್ತವ ರೂಪದಲ್ಲಿಯೇ ಹೊಳೆಯುತ್ತವೆ. ಇಂಥ ಸ್ವಪ್ನಗಳು ಹೆಚ್ಚಾಗಿ ಮಿಥ್ಯೆಯಾಗಿರುತ್ತವೆ. ಏಕೆಂದರೆ ವಾಸ್ತವದಲ್ಲಿ ಇವುಗಳೆಲ್ಲ ಕೇವಲ ಕಲ್ಪನೆಗಳಾಗಿವೆ. ಅಥವಾ ಬೇರೆ ಬೇರೆ ಛಿದ್ರ ಛಿದ್ರವಾದ ಕಲ್ಪನಾಧಾರಗಳೊಂದಿಗೆ ಸಂಗ್ರಹಿಸಲ್ಪಡುತ್ತವೆ. ಇವುಗಳಲ್ಲಿ ನಾವು ಮನೆಯ ಆಡು ಭಾಷೆಯಲ್ಲಿ ಉಲ್ಟಾ-ಪಲ್ಟಾ



ಸ್ವಪ್ನಗಳೆನ್ನುತ್ತೇವೆ. ಮಸ್ತಿಷ್ಕ ಅಥವಾ ಮಸ್ತಕವು ರೋಗಗ್ರಸ್ತವಾದರೆ, ಅಂದರೆ ಬಹುದಿನ ರೋಗಿಯಾಗಿರುವವರಿಂದ ಸ್ನಾಯು ತಂತುಗಳು ದುರ್ಬಲವಾದರೆ, ಅಥವಾ ಪಚನ ಯಂತ್ರವು ದುರ್ಬಲವಾದರೆ, ಅಥವಾ ಅವರು ಸಾಧಾರಣವಾಗಿ ಇಂಥ ಕಾಮನಾರ್ಥಕ ಸ್ವಪ್ನಗಳನ್ನು ನೋಡುತ್ತಾರೆ. ಕಾಮಜ ಸ್ವಪ್ನ (dream) ಎಂದು ಇದರ ಹೆಸರು. ನಾನು ಈ ಮೊದಲೇ ಚಿಂತಿತ ವಿಷಯ ಅಥವಾ ಮೊದಲಿನ ಚಿಂತಾ ಸಮೂಹದ ಹಾಗೆಯೇ, ಅಥವಾ ಭಿನ್ನ ಭಿನ್ನವಾಗಿಯೇ, ಆದ ಅಭಿವ್ಯಕ್ತಿಗಳಾಗಿವೆ. ಹೆಚ್ಚಾಗಿ ಊಟ ಮಾಡಿದ ಫಲವಾಗಿಯೂ ಜನರು ಈ ಪ್ರಕಾರದ ಸ್ವಪ್ನಗಳನ್ನು ನೋಡುತ್ತಾರೆ. ಪವಿತ್ರ ಚಿಂತನೆ ಉಳ್ಳವರು. ಪವಿತ್ರ ವಿಚಾರವುಳ್ಳವರು ಮತ್ತು ಸಂಯಮವಿರಿಸಿ ಊಟ ಮಾಡುವವರು ಸಾಮಾನ್ಯವಾಗಿ ಇಂಥ ಸ್ವಪ್ನಗಳನ್ನು ನೋಡುವದು ಕಡಿಮೆ. ಈ ಪ್ರಕಾರದ ಸ್ವಪ್ನಗಳೆಂದೂ ಗಂಭೀರ ನಿದ್ರಾವಸ್ಥೆಯಲ್ಲಿ ಬೀಳುವದಿಲ್ಲ.

ಇನ್ನೂ ಒಂದು ತರದ ಸ್ವಪ್ನಗಳು ಇರುತ್ತವೆ. ಮಾನವನು ಗಾಢ ನಿದ್ರೆಯಲ್ಲಿರುವಾಗ, ಸಹ ಅವನು ಮನೋಮಯ ಕೋಶದಲ್ಲಿ ವಿಪತ್ತು, ಒಳ್ಳೆಯ ಸಂವಾದ ಇಲ್ಲವೆ ಕೆಟ್ಟ ಸಂವಾದಗಳು ಸ್ವಪ್ನರೂಪದಲ್ಲಿ ಉದಿಸುತ್ತವೆ. ಸರ್ವಜ್ಞವಾದ ಕಾಮಮಯ ಮತ್ತು ಮನೋಮಯ ಕೋಶಗಳು ಚಂಚಲತೆಯ ಕಾರಣ ಮತ್ತು ತಮ್ಮ ಪ್ರಕಾಶಗತ ಅಕ್ಷಮತೆಯ ಕಾರಣ, ತಮ್ಮ ಈ ಸರ್ವಜ್ಞತೆಯ ಸ್ಫುರಣವನ್ನು ಪ್ರಕಾಶಗೊಳಿಸಲಾರರು. ಅದರೆ, ವ್ಯಕ್ತಿಯು ವಿಶೇಷ ಭಾವದಿಂದ ಯಾವ ಸಕಲ ವಿಷಯಗಳಲ್ಲಿ, ವಿಶೇಷ ಭಾವದಿಂದ ತಗಲಿಕೊಂಡಿರುತ್ತಾನೆಯೋ, ಅಥವಾ ಕೆಲವೊಂದು ವಿಷಯಗಳಿಗೆ ಯಾವನೊಬ್ಬ ವ್ಯಕ್ತಿಯು ವಿಶೇಷ ಭಾವದಿಂದ ವಶವರ್ತಿಯಾಗಿರುತ್ತಾನೆಯೋ, ಸಂಕ್ರಾಂತ ಭೂತ, ವರ್ತಮಾನ ಮತ್ತು ಬರಲಿರುವ ಕಾಲದ ಭಾವವನ್ನು ಈ ಕಾರಣ ಮನವು ಘೋರ ನಿದ್ರೆಯಲ್ಲಿರುವ ಮನುಷ್ಯನ ಶಾಂತ, ಮನೋಮಯ ಇಲ್ಲವೆ ಕಾಮಮಯ ಕೋಶದಲ್ಲಿ ಅಂಥ ವಿಷಯಗಳು ಪುಟಿದೇಳುತ್ತವೆ. ಆದರೆ ಮನದ ಉಗಮದಿಂದ ಬಂದ ಸ್ಪಂದನ ಧಾರೆಯು, ಮನೋಮಯ ಕೋಶವನ್ನು ಸ್ಪಂದಿಸಿದಾಗ, ಒಂದು ರೀತಿಯ ಸ್ವಪ್ನವು ಬೀಳುತ್ತಗೆ. ಮತ್ತು ಆ ಸ್ವಪ್ನವು ನಿರರ್ಥಕವಿರದು. ಏಕೆಂದರೆ, ಅದರ ಪ್ರೇರಕನಾಗಿ ಸರ್ವಜ್ಞ ಮನವೇ ಇದೆ. ಇದಕ್ಕೆ ಜ್ಞಾನಜ ಸ್ವಪ್ನವೆಂದು (Supramental vision) ಹೆಸರಿಸಬಹುದು. ಕೆಲವೊಮ್ಮೆ ಜಾಗ್ರದವಸ್ಥೆಯಲ್ಲಿಯೂ ಕಾರಣ ಮನದ ಜ್ಞಾನ

ಪ್ರಭಾವವು ಸೂಕ್ಷ್ಮಮನದಲ್ಲಿ ಸಂಚಾರಿತವಾಗುತ್ತದೆ. ಮತ್ತು ಇದರ ಫಲವಾಗಿ, ಮಾನವನು ಜಾಗ್ರತೆ ಅವಸ್ಥೆಯಲ್ಲಿಯೂ ಸಹ, ಸ್ವಲ್ಪ ಘಟನೆಗಳನ್ನೂ ಸಹ ತಿಳಿಯಬಲ್ಲನು. ಇದಕ್ಕೆ ಪ್ರತಿಸಂವೇದನಿಕ ತಥ್ಯಾನುಭೂತಿ ( Telepathic vision)ಎಂದು ಹೆಸರು ನೀಡಬಹುದು. ಈ ಪ್ರತಿಸಂವೇದನಿಕ ತಥ್ಯಾನುಭೂತಿಯ ಅವಸ್ಥೆಯಲ್ಲಿ, ಅಂದರೆ, ಸ್ಥೂಲಮನವು ಹೆಚ್ಚು ಹೆಚ್ಚಾಗಿ ಸ್ಥಿರಭಾವವನ್ನು ಹೊಂದಿದಾಗ, ಮಾನವನು ದೂರದಲ್ಲಿರುವ ಪ್ರಿಯ ಜನರಿಗೆ ಸಂಬಂಧಿಸಿದ ಘಟನೆಗಳನ್ನು, ಕಣ್ಣಾರೆ ಹೊರ ಜಗತ್ತಿನಲ್ಲಿಯೇ ಕಾಣಬಲ್ಲನು. ಇಲ್ಲವೆ ಕಂಡಿದ್ದೇನೆ, ಎಂಬ ಅನುಮಾನ ತಾಳುತ್ತಾನೆ. ಇದನ್ನೆ ಪ್ರತಿಸಂವೆದನಿಕ ದಿವ್ಯದೃಷ್ಟಿ (Telepathic clairvoyance) ಎಂದು ಕರೆಯಬಹುದು. ಈ ಸಂಗತಿಗಳನ್ನು ಬಹಳ ಜನರು ಪ್ರೇತಾತ್ಮಕ ಕ್ರಿಯೆಯೆಂದು ತಿಳಿದು, ಪ್ರೇತ–ತತ್ತ್ವದಲ್ಲಿ ವಿಶ್ವಾಸ ತಾಳುತ್ತಾರೆ. ವಾಸ್ತವದಲ್ಲಿ ಪ್ರೇತಾತ್ಮಗಳೊಂದಿಗೆ ಈ ಘಟನೆಗಳ ಯಾವುದೇ ಸಂಬಂಧವಿಲ್ಲ. ಪ್ರತಿಸಂವೇದನಿಕ ತಥ್ಯಾನುಭೂತಿ ಮತ್ತು ಪ್ರತಿಸಂವೇದನಿಕ ದಿವ್ಯದೃಷ್ಟಿಗಳು ಜ್ಞಾನಜ ಸ್ವಪ್ನದ ಜಾತಿಯವೇ ಆಗಿವೆ. ಬ್ರಹ್ಮಾಂಡವನ್ನು ಅರಿಯಬಲ್ಲ, ಕಾರಣ ಮನದಿಂದಲೇ ಇವು ಭಾವ ಇಲ್ಲವೆ ಅನುಭೂತಿಯನ್ನು ಹೊಂದಿ, ಹುಟ್ಟಿಕೊಳ್ಳುತ್ತವೆ. ಭೂತ–ಪ್ರೇತಗಳಲ್ಲಿ ವಿಶ್ವಾಸ ವಿರಿಸುವುದು, ಇತಿಹಾಸ ಪೂರ್ವದ ಮಾನವರು ಅಂಜುಗುಳಿ ಮಾನಸಿಕತೆಯನ್ನೇ ಒತ್ತಾಯಪೂರ್ವಕ ಸಮರ್ಥಿಸಿದಂತಲ್ಲದೆ ಬೇರೇನೂ ಅಲ್ಲ. ಆಗ ಕಾಮಮಯ ಕೋಶದ ಕ್ರಿಯಾಶೀಲತೆಯ ಕಾರಣ, ಜ್ಞಾನಜ ಸ್ವಪ್ನಕ್ಕೆ ಹೋಲಿಸಿದಾಗ, ಪ್ರತಿಸಂವೇದನಿಕ ದಿವ್ಯದೃಷ್ಟಿಯ ಘಟನೆಯನ್ನು ನಾವು ಕಾಣುವುದು ಇನ್ನೂ ಕಡಿದು. ಆದಾಗ್ಯೂ ಸಹ, ಜ್ಞಾನಜ ಸ್ವಪ್ನವು ಸ್ವತಃ ಮಾನವ ಜೀವನದಲ್ಲಿ ಎಂಟು-ಹತ್ತು ಬಾರಿಗಿಂತ ಹೆಚ್ಚು ಸಲ, ಸಾಮಾನ್ಯವಾಗಿ, ಕಂಡುಬರುವದಿಲ್ಲ. ಈ ಪ್ರಸಂಗದಲ್ಲಿ, ಸಾಧನೆ ಇಲ್ಲವೆ ಸಂಸ್ಕರಗಳಿಗೆ ಸಂಬಂಧಿಸಿದ ಕಾರಣಗಳ ಮೇಲೆ, ಇವುಗಳ ಬರು ಹೋಗುಗಳ ಅಲ್ಪತೆ ಇಲ್ಲವೆ ಅಧಿಕತೆಯ ಬಹುಶಃ ನೂರಕ್ಕೆ ನೂರರಷ್ಟು, ಅವಲಂಬಿಸಿದೆ. (ಸ್ವಕೃತ–ತಥ್ಯಾನುಭೂತಿ ಇಲ್ಲವೆ ಸ್ವಕೃತ-ದೃಷ್ಟಿಗಳು ಸ್ವಲ್ಪ ಬೇರೆಯೇ ಆಗಿವೆ; ಎಂಬುದನ್ನು ತಿಳಿಯಬೇಕು.)

ಜ್ಞಾನಜ ಸ್ವಪ್ನದಲ್ಲಿಯೂ ಸಹ, ಮಾನವನು ಸರಿಯಾಗಿ ವಿಷಯದ ಉಪಲಬ್ಧಿ ಪಡೆಯುವದಿಲ್ಲ. ಏಕೆಂದರೆ, ಅಲ್ಲಿ ಸಾಧಾರಣವಾಗಿ, ಅವನ ವ್ಯಕ್ತಿಗತ ಸಂಸ್ಕಾರಗಳ ಮಾಧ್ಯಮದಿಂದಲೇ ಈ ಬೋಧ–ತರಂಗಗಳ ಸ್ಫುರಣವು ಏಳುತ್ತದೆ. ಹೇಗೆಂದರೆ, ಯಾವುದೊಂದು ದೇಶದಲ್ಲಿ ಕೃಷಿಕಾರ್ಯ, ಎಣ್ಣೆ



ಕಾಳು ಅರೆಯುವಿಕೆ, ಬಂಡಿ ನಡೆಸುವುದೇ ಮೊದಲಾದ ಕಾರ್ಯಗಳಿಗೋಸುಗ ಹಸು ತುಂಬಾ ಅನಿವಾರ್ಯವಾಗಿರುತ್ತದೆ. ಸ್ವಾಭಾವಿಕ ನಿಯಮಾನುಸಾರ, ಆ ದೈಶಗಳ ಜನರು, ಆ ಹಸುವನ್ನು ಹೆಚ್ಚು ಶ್ರದ್ಧೆಯಿಂದ ನೋಡುತ್ತಾರೆ. ಮತ್ತು ಮಗುವಿದ್ದಾಗಿನಿಂದಲೂ ಹಸುವಿನ ಹಾಲನ್ನು ಕುಡಿಯುತ್ತ ಬಂದಿರುವದರಿಂದ ಅದನ್ನು ತಾಯಿಯಷ್ಟೇ ಪೂಜ್ಯ ಎಂದು ಒಪ್ಪಿಕೊಂಡಿದ್ದಾರೆ. ಅವರು ಆರೋಗ್ಯವಂಥ ಸಖಲ ಮತ್ತು ಸುಲಕ್ಷಣವಾದ ಹಸುವನ್ನು ಸೌಭಾಗ್ಯದ ಪ್ರತೀಕವೆಂದೂ ಒಪ್ಪುತ್ತಾರೆ. ಈವೆಲ್ಲವೂ ಹಸುವಿಗೆ ಸಂಬಂಧಿಸಿದ ವ್ಯವಹಾರಿಕ ಪ್ರಯೋಜನಗಳಿಂದ ಅವರಲ್ಲಿ ಹುಟ್ಟಿದ ಸಂಸ್ಕಾರಗಳಾಗಿವೆ. ಆ ದೇಶದ ಯಾವನೋ ಒಬ್ಬ ಮನುಷ್ಯನು ಯಾವುದೋ ಒಂದು ಆಕಳು ಹುಲ್ಲು ಕಡ್ಡಿ ತಿಂದು ತಿಂದು, ಸೊಂಗಿ ಸಣ್ಣಾಗ ಹತ್ತಿರುವದನ್ನು ತನ್ನ ಸ್ವಪ್ನದಲ್ಲಿ ನೋಡುತ್ತಾನೆಂದು ತಿಳಿಯಿರಿ. ಇನ್ನೊಂದು ಆಕಳು ಬರುತ್ತದೆ, ಅದರ ಅವಸ್ಥೆಯು ಹಾಗೆ ಆಯಿತು. ಇನ್ನೂ ಒಂದು ಆಕಳು ಬಂದಿತು. ಅದರೆ ಆವಸ್ಥೆಯು ಅಂತೆಯೇ ಆಯಿತು. ಆದರೆ ಹೀಗೆ ಅವನೆಂದೂ ಚಿಂತಿಸಿರಲಿಲ್ಲ. ಸ್ವಪ್ನದಿಂದ ಬಹುತೇಕ ಮೂರು ವರುಷ ಬರಗಾಲ ಬರುವ ಸಂಭವವಿದೆ; ಎಂಬ ಅರ್ಥವು ಹೊರಡುತ್ತದೆ. ಹಸು ಮತ್ತು ಧ್ಯಾನವನ್ನು ಸೌಭಾಗ್ಯದ ಪ್ರತೀಕವೆಂದು ತಿಳಿದುದರಿಂದ ಆ ಸೊರಗಿದ ಆಕಳು ಮತ್ತು ಒಣಗಿದ ಹುಲ್ಲು ಇವುಗಳ ಮಾಧ್ಯಮದಿಂದ ದುರ್ಭಾಗ್ಯದ ಸಂಕೇತದ ಸೂಚನೆ ಸಿಗುತ್ತದೆ. ಆದುದರಿಂದ, ಸ್ವಪ್ನದ ಮಾಧ್ಯಮದಿಂದ ಸತ್ಯವನ್ನು ತಿಳಿಯುವವಕ್ಕೋಸುಗ ಮತ್ತು ಮದೋಮಯ ಮತ್ತು ಕಾಮಮಯ ಕೋಶಗಳ ಮೇಲೆ ಸ್ವಲ್ಪ ಹೆಚ್ಚು ಪ್ರಮಾಣದಲ್ಲಿ ಅಧಿಕಾರ ವಿರಿಸಿಕೊಳ್ಳುವ ಅವಶ್ಯಕತೆಯು ಮಾನವನಿಗೆ ಇದೆ. ಸಾಧನೆಯ ಮೂಲಕ ಮನೋಮಯ ಮತ್ತು ಕಾಮಮಯ ಕೋಶಗಳನ್ನು ನಿಯಂತ್ರಿಸಿಕೊಂಡವರು ಜಾಗ್ರತ ಅವಸ್ಥೆಯಲ್ಲಿ ಸಹ ಭೂತ, ವರ್ತಮಾನ ಇಲ್ಲವೆ ಭವಿಷ್ಯಗಳ ಚಿತ್ರವನ್ನು ಅಲ್ಪ ಪ್ರಯತ್ನದ ಮೂಲಕ ಕಾಣಬಲ್ಲರು; ಧ್ಯಾನ ಯೋಗದಲ್ಲಿ ಮುನಿ, ಋಷಿಗಳ ದಿವ್ಯದರ್ಶನ ಇಲ್ಲವೆ ದೂರ ದರ್ಶನಗಳು ಸಹ ಸರಿಯಾಗಿ ಇದೆ ಬಗೆಯವಾಗಿವೆ. ಸ್ಫಟಿಕ ದರ್ಶನ, ನಖದರ್ಶನ ಮುಕುರ ನಖದರ್ಶನ, ಮುಂತಾದವುಗಳ ಸಹಾಯದಿಂದಲೂ ಸಹ ಬಹಳಷ್ಟು ಭೂತ ಭವಿಷ್ಯತ್ ಇಲ್ಲವೆ ದೂರದರ್ಶನಗಳ ಕ್ಷಮತೆಯು ಸಾಧಾರಣ ಮನುಷ್ಯನಲ್ಲಿಯೂ ಸಹ, ಸ್ವಲ್ಪ ಸ್ವಲ್ಪ ಪ್ರಕಟವಾಗುತ್ತದೆ. ಅದೂ ಸಹ, ಬೇರೆ ಏನು ಅಲ್ಲ. ಉಜ್ಜ್ವಲವಾದ ವಿಶೇಷ ವಸ್ತುವಿನತ್ತ ಆಗ್ರಹವನ್ನು ಕೇಂದ್ರೀಕರಿಸುವದರಿಂದ ಕಾಮಮಯ ಮತ್ತು ಮನೋಮಯ

ಕೋಶಗಳು ಕಾರಣ ಮನದಲ್ಲಿ ಅಂಶತಃ ಒಂದುಗೂಡುವುದರಿಂದ ಜ್ಞಾನ ಭೂಮಿಯು ವಿಸ್ತರಿಸುತ್ತದೆ. ಸಮ್ಮೋಹಿತ (hipnotised) ಅಥವಾ ಪ್ಲಾಂಚೆಟಿನಲ್ಲಿ ಸೇರಿದ ಅವಸ್ಥೆಯಲ್ಲಿ ಸಹ, ಕಾಮಮಯ ಮತ್ತು ಮನೋಮಯ ಕೋಶಗಳ ಕಾರ್ಯವು ನಿಲ್ಲುವದರ ಫಲವಾಗಿ, ಕೊನೆ ಕೊನೆಗೆ, ಆ ಅವಸ್ಥೆಗಾಗಿಯೇ ವಿಶೇಷ ವ್ಯಕ್ತಿಯ ಜ್ಞಾನದ ಪರಿಧಿಯು ಸ್ವಲ್ಪ ದೊಡ್ಡದಾಗುತ್ತದೆ. ಇಲ್ಲಿ ಒಂದು ಮಾತನ್ನು ಸರಿಯಾಗಿ ಲಕ್ಷ್ಯದಲ್ಲಿಡಬೇಕು. ಏನೆಂದರೆ, ಯಾವುದೊಂದು ವಿಷಯದ ಸಂಬಂಧವಾಗಿ ಯಾವನೊಬ್ಬನ ಮನದಲ್ಲಿ ಒಂದು ವೇಳೆ ಯಾವುದೊಂದು ಸಂಸ್ಕಾರ ಇಲ್ಲವೆ ಪೂರ್ವಗ್ರಹಿತ ಸಿದ್ಧಾಂತವು ಇದ್ದರೆ, ಆಗ ಸಂಮ್ಮೋಹಿತ (hypnotised)ಇಲ್ಲವೆ ಆವಿಷ್ಟ ಅವಸ್ಥೆಯಲ್ಲಿ ಅಥವಾ ನಖ ದರ್ಪಣ ಇಲ್ಲವೆ ಮುಕುರಗಳಲ್ಲಿ (ಕನ್ನಡಕಗಳಲ್ಲಿ) ತನ್ನ ಸಂಸ್ಕಾರದ ಪ್ರತಿಫಲವನ್ನೇ ಕಾಣುತ್ತಾನೆ. ಅಂದಾಜು ನೂರಕ್ಕೆ ನೂರರಷ್ಟು ಕ್ಷೇತ್ರಗಳಲ್ಲಿ ಹೀಗೆಯೇ ಆಗುತ್ತದೆ. ಅಂದರೆ ಆವಿಷ್ಟ ಮನುಷ್ಯನು ತನ್ನ ಸಂಸ್ಕಾರಗಳಿಗೆ ಅನುಸರಿಸಿ ಮಾತನಾಡುತ್ತಾನೆ. ಮತ್ತು ಜನರು ವಿಸ್ಮಯದಿಂದ, ಮಾತು ಮೂಕವಾಗಿ, ಅವನ ಮಾತುಗಳನ್ನೇ ಅಂತಿಮ ಸತ್ಯವೆಂದು ತಿಳಿದು ಕೈ ಜೋಡಿಸಿಕೊಂಡು, ಅವನತ್ತ ನೋಡುತ್ತ ಕುಳಿತುಕೊಳ್ಳುತ್ತಾರೆ. ಯಾರು ಭೂತ, ಪ್ರೇತ, ಠಾಕೂರ, ಗೋಸಾಯಿ, ಮೈಮೇಲೆ ಬಂದಿರುವರೆಂದು,ಅಭಿನಯ ಮಾಡುವರೋ, ಅವರು ಮೊದಲಿನಿಂದ ಕೊನೆಯ ವರೆಗೆ ಠಕ್ಕರಾಗಿದ್ದಾರೆ. ಪ್ರಾರಂಭದಿಂದ ಕೊನೆಯ ವರೆಗೆ ಡಾಂಭಿಕರಾಗಿದ್ದಾರೆ, ಇನ್ನು ಯಾರು ಅಭಿನಯ ಮಾಡುವದಿಲ್ಲವೋ, ಅಂದರೆ ಯಾರು ನಿಷ್ಠೆಯಿಂದಲೇ ಭೂತ, ಪ್ರೇತ, ಠಾಕೂರ ಗೋಸಾಯಿಗಳನ್ನು ಅಹ್ವಾನಿಸಿರುವರೋ (ಭಯ ಇಲ್ಲವೆ ಭಕ್ತಿಯಿಂದ) ಇಲ್ಲವೆ ಯಾರು ಪ್ಲಾಂಚೆಟ್ಟಿನಲ್ಲಿ ಕುಳಿತುಕೊಳ್ಳುವರೋ, ಅವರ ವಿಷಯದಲ್ಲಿಯೇ ನಾನು ಹೇಳುತ್ತಿದ್ದೇನೆ. ಆ ಸರ್ವರ ಹೇಳಿಕೆಯು ಸಹ ನೂರಕ್ಕೆ ನೂರರಷ್ಟು ಭಾಗ ತಮ್ಮ ಪೂರ್ವ ಗ್ರಹಿತ ಸಿದ್ಧಾಂತ ಇಲ್ಲವೆ ಸಂಸ್ಕಾರದ ಅಭಿವ್ಯಕ್ತ ಮಾತ್ರ ಆಗಿದೆ. ಆ ಅವಸ್ಥೆಯಲ್ಲಿ ಅವನು ಸ್ವಲ್ಪ ಮಾನಸಿಕ ಏಕಾಗ್ರತೆಯು ಇರುವದರಿಂದ, ಒಂದೆರಡು ಆಣೆಯಷ್ಟು ಮಾತುಗಳು ಸತ್ಯವಾಗಿರುತ್ತವೆ. ಆದರೆ ಹೀಗೆ ಸತ್ಯವಾಗುವದು ಸಹ, ಎಲ್ಲ ಕಾಲದಲ್ಲಿ ಕಾರಣ ಮನದ ಸೂಚನೆಯಿಂದಲ್ಲ. ಏಕೆಂದರೆ, ಬಹಳಷ್ಟು ಮಾತುಗಳಲ್ಲಿ ಒಂದೆರಡು ಸತ್ಯವಾಗುವ ಸಂಭವವು ಸಾಮಾನ್ಯವಾಗಿ ಅಸ್ವಾಭಾವಿಕವೇನಲ್ಲ. ಈ ರೀತಿ ಅತಿ ಸಾಧಾರಣ ಮನುಷ್ಯನ ಕ್ಷೇತ್ರದಲ್ಲಿಯೂ ಸಹ ಆಗಬಲ್ಲದು. "ಗಿಡದಲ್ಲಿ ಕಾಗೆ ಸತ್ತಿತು. ಫಕೀರನ ಪ್ರಭಾವ ಬೆಳೆಯಿತು.



ಎಂದು ಹೇಳುತ್ತಾರಲ್ಲವೇ? ಅಂದರೆ, ಕಾಗೆಯು ಹೇಗೋ ಸಾಯುತ್ತದೆ. ಬಿರುಗಾಳಿಯಂತೆ ಸುದ್ಧಿ ಹಬ್ಬುತ್ತಿದೆ ಸಾಧುವಿನದು. (ಫಕೀರನ ಶಾಪದಿಂದಲೇ ಕಾಗೆ ಮರಣಸಿತೆಂದು ಮೂರ್ಖ ಜನರು ತಿಳಿಯುತ್ತಾರೆ).

ಸುಷುಪ್ತಾವಸ್ಥೆ:

ಯಾವ ಅವಸ್ಥೆಯಲ್ಲಿ ಮನೋಮಯ ಮತ್ತು ಕಾಮಮಯ ಕೋಶಗಳು ಕಾರ್ಯ ಮಾಡುವುದಿಲ್ಲವೋ, ಅಂದರೆ, ಯಾವಾಗ ಜೀವಿಯು ಯಾವುದೇ ವಿಶೇಷ ವಾಸನೆ ಇಲ್ಲವೆ ಕಾಮನೆಗಳನ್ನು ಇಟ್ಟುಕೊಂಡು, ತನ್ನ ಶರೀರವನ್ನು ನಿಯಂತ್ರಿಸುವುದಿಲ್ಲವೋ, ಇಲ್ಲವೆ ಯಾವ ಸ್ವಪ್ನವನ್ನು ನೋಡುವುದಿಲ್ಲವೋ, ಈ ಅವಸ್ಥೆಯನ್ನು ಶಾಸ್ತ್ರೀಯ ಭಾಷೆಯಲ್ಲಿ ಸುಷುಪ್ತಾವಸ್ಥೆ ಎನ್ನುತ್ತಾರೆ. ಅಂದರೆ, ಕಾಮನೆ ಮಾಡಿದ ಮೇಲೆ ಇಲ್ಲವೆ ಸ್ವಪ್ನವನ್ನು ನೋಡಿದ ಮೇಲೆ, ತೀರಿತು; ಆ ಅವಸ್ಥೆಯನ್ನು ಸುಷುಪ್ತಿ ಎನ್ನಕೂಡದು. ಆ ಸಮಯದಲ್ಲಿ, ಮನನಲ್ಲಿ ಯಾವುದೇ ವಿಶೇಷ ಜಿಂತನೆಗೆ ಸಂಬಂಧಿಸಿದ ಇಲ್ಲವೆ ಹೊರಗಿನ ವಿಕಾಸಗಳು ಇಲ್ಲದಿರುವುದರಿಂದ, ಜೀವಿಗಳಿಗೆ ಅದು ಪ್ರಜ್ಞಾನಘನ ಅವಸ್ಥೆಯಾಗಿದೆ. ಈ ಪ್ರಜ್ಞಾನ ಘನತ್ವದಿಂದಾಗಿಯೇ ಜೀವಿಯು ಆ ಕಾಲಕ್ಕೆ ಒಂದು ವಿಶೇಷ ಆನಂದವನ್ನು ಅನುಭವಿಸುತ್ತಾನೆ. ಸ್ಥೂಲ, ಸೂಕ್ಷ್ಮ ಮನಗಳು ಇಲ್ಲದಿರುವ ಕಾರಣ, ಸುಖ ಇಲ್ಲವೆ ದುಃಖ, ಹರ್ಷ ಇಲ್ಲವೆ ವಿಷಾದ ಮುಂತಾದವುಗಳು. ಏನಿತೂ ವೇದ್ಯವಾಗುವುದಿಲ್ಲ. ಆದ್ದರಿಂದ, ಅವನು ಆ ಅವಸ್ಥೆಯಲ್ಲಿ, ಒಂದು ಪ್ರಕಾರದ ಆನಂದವನ್ನು ಪಡಯುತ್ತಾನೆ. ಜಾಗ್ರತ ಇಲ್ಲವೆ ಸ್ವಪ್ನಾವಸ್ಥೆಗಳಲ್ಲಿ, ಸ್ಥೂಲ ಮತ್ತು ಸೂಕ್ಷ್ಮ ಸ್ತರಗಳಲ್ಲಿ ವಸ್ತುದರ್ಶನವಾಗುತ್ತದೆ. ಆದ್ದರಿಂದ ವಾಸ್ತುಗತ ಭೇದವೂ ಸಹ ಆ ಅವಸ್ಥೆಯಲ್ಲಿ ಇರುತ್ತದೆ. ಆದರೆ ಸುಷುಪ್ತಿ ಅವಸ್ಥೆಯಲ್ಲಿ, ಸ್ಥೂಲ ಮತ್ತು ಸೂಕ್ಷ್ಮ ಕ್ರಿಯೆಗಳು ಇಲ್ಲದಿರುವ ಕಾರಣ, ವಸ್ತುಗಳಿಗೆ ಸಂಬಂಧಿಸಿದ ಭೇದ ಜ್ಞಾನವೂ ಸಹ ಅಡಗುತ್ತದೆ. ಭೇದ ರಹಿತ ಅವಸ್ಥೆಯು ಒಂದು ವಿಶೇಷ ಪ್ರಕಾರದ ಆನಂದದ ಅವಸ್ಥೆಯಾಗಿದೆ. ಮತ್ತು ಇದೇ ಕಾರಣದಿಂದ, ಜೀವಿಯು ಸುಷುಪ್ತಾವಸ್ಥೆಯಲ್ಲಿ ಆನಂದವನ್ನು ಪಡೆಯುತ್ತಾನೆ. ಆದರೆ ಸುಷುಪ್ತಿಯು ಈ ಏಕೀಭಾವದ ಅವಸ್ಥೆಯು ಸರಿಯಾಗಿ ಆತ್ಮ ವ್ಯಾಪ್ತಿಯು ಇಲ್ಲವೆ ಕೈವಲ್ಯದ ಅವಸ್ಥೆಯೇನೂ ಅಲ್ಲ.ವಸ್ತುಗತ ಭೇದ ಜ್ಞಾನವು ಎರಡು ತರದಿಂದ ಅಡಗುತ್ತದೆ. ಅತಿ ಉಜ್ವಲ ಜ್ಯೋತಿಯಿಂದ ಸಹ ವಸ್ತು ಭೇದವು ಅಡಗುತ್ತದೆ. ಕಾರಣವೆಂದರೆ, ಆ ಕಾಲಕ್ಕೆ ಎಲ್ಲ ವಸ್ತುಗಳು ಜ್ಯೋತಿ ಸ್ವರೂಪವಲ್ಲಿ ಪ್ರತಿಭಾಸಿಸುತ್ತವೆ. ಇನ್ನು ಅಂತಿಮ ಅಂಧಕಾರದಲ್ಲಿ ಸಹ

ವಸ್ತುಗತ ಭೇದಭಾವವು ಅಡಗುತ್ತದೆ. ಆ ಕಾಲಕ್ಕೆ ಕೇವಲ ಒಂದು ಸೂಜಿಯ ಮೊನೆಯನ್ನು ಸೀಳಬಹುದಾದ ಅಂಧತಾಮಿಶ್ರವು ಕಂಡುಬರುತ್ತದೆ. ಮತ್ತು ಇದರಲ್ಲಿ ಎಲ್ಲರೂ ತಮ್ಮ ತಮ್ಮ ರೂಪರೇಷೆಗಳನ್ನು ಕಳೆದುಕೊಂಡು ಕೂಡುತ್ತಾರೆ. ನಿದ್ರೆಯ ಏಕೀಭಾವವು ಆ ಮೋಹಾತ್ಮಕ, ಅಂಧಕಾರಾತ್ಮಿಕ ಏಕೀಭಾವವಾಗಿದೆ. ಅಂದರೆ, ವಸ್ತುದರ್ಶನದ ಕ್ಷಮತೆಯು ಸರಿಯಾಗಿಯೇ ಇರುತ್ತದೆ. ವಸ್ತುವೂ ಸಹ ಸರಿಯಾಗಿಯೇ ಇರುತ್ತದೆ. ಕೇವಲ ಅದನ್ನು ನೋಡಲಾರೆವಷ್ಟೇ.

ಆದ್ದರಿಂದ ನಿದ್ರಿತ ಅವಸ್ಥೆಯ ಆನಂದವು ತಾಮಸಿಕ ಆನಂದವಾಗಿದೆ. ಸುಷುಪ್ತಿಯು ಭಂಗವಾದ ಬಳಿಕ, ಜೀವಿಗಳಲ್ಲಿ ಸ್ವಪ್ನಾವಸ್ಥೆಯು ಬರುತ್ತದೆ. ಅಥವಾ ಜಾಗ್ರತಾವಸ್ಥೆಯು ಬಂದು ನಿಲ್ಲುತ್ತದೆ. ಈ ಜಾಗ್ರತ ಮತ್ತು ಸ್ವಪ್ನಾವಸ್ಥೆಗಳ ಸಪ್ತ ಅಂಗಗಳು ಮತ್ತು ಹತ್ತೊಂಬತ್ತು ಮುಖಗಳು ಸುಷುಪ್ತಾವಸ್ಥೆಯಲ್ಲಿ ಬೀಜ ರೂಪದಿಂದ ಇರುತ್ತವೆ. ನಷ್ಟವಾಗುವುದಿಲ್ಲ. ಆದ್ದರಿಂದ, ಈ ಅವಸ್ಥೆಯಲ್ಲಿಯೂ ಸಹ, ಪೂರ್ಣಾನಂದವು ಎಂದಿಗೂ ಆಗಲಾರದು. ಜೀವ ಭಾವದಲ್ಲಿ ಈ ಅವಸ್ಥೆಗೆ ಪ್ರಾಜ್ಞ ಎನ್ನುತ್ತಾರೆ. ಪರಮಾತ್ಮ ಭಾವದಲ್ಲಿ ಈ ಅವಸ್ಥೆಗೆ ಈಶ್ವರ ಎನ್ನುತ್ತಾರೆ. ದಾರವಲ್ಲಿ ಮಣಿಗಳನ್ನು ಪೋಣಿಸಿರುವಂತೆಯೇ ಸಮಸ್ತ ಜಗತ್ತು ಇವನಲ್ಲಿ ಪೋಣಿಸಲ್ಪಟ್ಟಿದೆ. ಇದರಿಂದಾಗಿ ಇವನನ್ನು ಸೂತ್ರೇಶ್ವರ ಎಂದೂ ಕರೆಯುತ್ತಾರೆ. ಸೂತ್ರವೇ ಜೀವ ಭಾವವನ್ನು ಸುತ್ತಿದೆ. ಅರಳೆಯ ದಾರವನ್ನು ಬ್ರಹ್ಮಸೂತ್ರ ಇದವೆ ಸೂತ್ರೇಶ್ವರನೆಂದು ಒಪ್ಪುವುದು ತೀರ ಅಸಂಗತವಾಗಿದೆ. ಸುಷುಪ್ತಿ ಅಸ್ಥೆಯ ಅಭಿಮಾನೀ ಪುರುಷನನ್ನು ಪ್ರಾಜ್ಞ ಎಂದು ಕರೆಯುವ ಕಾರಣವೇನೆಂದರೆ, ಈ ಅವಸ್ಥೆಯಲ್ಲಿ ಸರ್ವಜ್ಞಾನ ಶಕ್ತಿಯ ಬೀಜವು ಹುದುಗಿರುತ್ತದೆ. ಜ್ಞಾನವಿದೆ; ಸ್ಫುರಣದ ಸಂಭವನೀಯತೆಯಿದೆ. ಆದರೆ ಅಂಧಕಾರದ ಕಾರಣ, ಭೇದ–ಜ್ಞಾನವಿಲ್ಲ. ಸುಷುಪ್ತಿ ಅವಸ್ಥೆಯು ಸರಿಯಾಗಿ ಈ ರೀತಿಯಾಗಿವೆ. ಜಾಗ್ರತ ಮತ್ತು ಸ್ವಪ್ನಾವಸ್ಥೆಗಳ ಬೀಜವು ಈ ಅವಸ್ಥೆಯಲ್ಲಿ ಸರಿಯಾಗಿಯೇ ಉಳಿದುಕೊಂಡಿದೆ. ಆದ್ದರಿಂದ ಇದರ ಆನಂದವು ಪೂರ್ಣಾನಂದವಲ್ಲ; ಆದು ಖಂಡಾನಂದವಷ್ಟೇ.

"ಏಷ ಸರ್ವೇಶ್ವರ ಏಷ ಸರ್ವಜ್ಞ ಏಷೋಽಂತರ್ಯಾಮ್ಯೇಷಯೋನಿಃ ಸರ್ವಸ್ಯ ಪ್ರಭವಾಪ್ಯಯೌ ಹಿ ಭೂತಾನಾಂ ತ್ರಯಮಪ್ಯೇತದ್ ಸುಷುಪ್ತಂ ಸ್ವಪ್ನಂ ಮಾಯಾ ಮಾತ್ರಂ ಚಿದೇಕ ರಸೋ ಹ್ಯಯಾತ್ಮಾ ಅಥ ಚತುರ್ಥಶ್ಚತುರಾತ್ಮಾ ತುರಿಯಾವಸಿತತ್ವಾ ದೇ ಕೈಕಸ್ಯೋತಾನುಜ್ಞಾಽವಿಕಲ್ಪೈಸ್ತ್ರಯಮಪ್ಯಾಪಿ



ಸುಷುಪ್ತಮ್, ಸ್ವಪ್ನಮ್ ಮಾಯಾ ಮಾತ್ರಂ ಚಿದೇಕರಸೋ ಹ್ಯಥಾಯಂ ಆದೇಶೋ ನ ಸ್ಥೂಲ ಪ್ರಜ್ಞಂ ನ ಸೂಕ್ಷ್ಮ ಪ್ರಜ್ಞಂ ನೋಭಯತಃ ಪ್ರಜ್ಞಂ ನ ಪ್ರಜ್ಞಂ ನಾಪ್ರಜ್ಞಂ ನ ಪ್ರಜ್ಞಾನಘನಮದೃಷ್ಟಮೇವ ಮಹಾರ್ಯಂ ಗ್ರಾಹ್ಯಮಲಕ್ಷಣ ಮಚಿಂತ್ಯ ಮವ್ಯಪದೇಶ್ಯಮೇಕಾತ್ಮ್ಯೈಕಾತ್ಮ ಪ್ರತ್ಯಯಸಾರಂ ಪ್ರಪಂಚೋಪಶಮಂ ಶಿವಂ ಶಾಂತಂ ಅದ್ವೈತಂ ಮನ್ಯಂತೇ ಸ ಏವಾತ್ಮಾಸ್ಸೈಷ ವಿಜ್ಞೇಯ ಈಶ್ವರ ಗ್ರಾಸಸ್ತುರೀಯ ಸ್ತುರೀಯ.

ತುರೀಯ ಅವಸ್ಥೆಯು ಸರ್ವಜ್ಞ ಇಲ್ಲವೆ ಸರ್ವೇಶ್ವರವಲ್ಲ. ಏಕೆಂದರೆ, ಸ್ವಲ್ಪ ತಿಳಿಯಲೋಸುಗ, ಜ್ಞಾತೃ, ಜ್ಞೇಯ ಜ್ಞಾನ ಇತ್ಯಾದಿ ಬೇರೆ ಬೇರೆ ಸತ್ತೆಗಳ ಇರವು ಅಪರಿಹಾರ್ಯವಾಗಿದೆ. ಯಾವುದೊಂದರ ಮೇಲೆ ಈಶ್ವರತ್ವ ಇಲ್ಲವೆ ನಿಯಂತ್ರಣಾಧಿಕಾರ ವಿರಿಸಲೋಸುಗ, ನಿಯಂತೃ, ನಿಯಂತ್ರಣ ಮತ್ತು ನಿಯಂತ್ರಿತ ಇತ್ಯಾದಿಗಳ ಅಸ್ತಿತ್ವವಿಲ್ಲದೆ ಸಂಭವಿಸದು. ಆದ್ದರಿಂದ ಸರ್ವಜ್ಞ ಅರ್ಥಾತ್ ಸರ್ವವನ್ನು ಅರಿಯುವ ಭಾವವು, ತನ್ನ ಜ್ಞಾತೃ ಸತ್ತೆಯನ್ನು ಹೊರತುಪಡಿಸಿ, ಉಳಿದವುಗಳಿಂದ ಅರ್ಥಾತ್ ಜ್ಞೇಯಸತ್ತೆ ಸಮೂಹಗಳಿಂದ ಬೇರೆಯಾಗಿ ಇರುವವರೆಗೆ, ಇರುತ್ತದೆ. ಸರ್ವೇಶ್ವರತ್ವದ ಸಂಬಂಧದಲ್ಲಿಯೂ ಸಹ, ಸರಿಯಾಗಿ ಇದೇ ಪ್ರಕಾರದ ಮಾತು ಸರಿಯಾಗಬಹುದಾಗಿದೆ. ಅಂದರೆ, 'ನಾನು' ಎಲ್ಲದರ ಈಶ್ವರನಿದ್ದೇನೆ. ಈ ಭಾವದಲ್ಲಿಯೇ ಎಲ್ಲದರಿಂದ ನಿಜ ಸ್ವರೂಪದ ಪೃಥಕ್ ಭಾವವನ್ನಿರಿಸಿಕೊಳ್ಳುವ ಆವಶ್ಯಕತೆ ಇರುತ್ತದೆ. ತುರೀಯ ಅವಸ್ಥೆಯಲ್ಲಿ ಎರಡನೆಯ ಸರ್ವಸತ್ತೆಗಳ ಅಸ್ತಿತ್ವ ಬೋಧವು ಇರುವುದಿಲ್ಲ. ಅರ್ಥಾತ್ ಒಂದೇ ಸತ್ತೆ ಇರುತ್ತದೆ. ಆದ್ದರಿಂದ ತುರೀಯ ಆತ್ಮನು ಯಾವುದರ ಜ್ಞಾತೃವಾಗಲಾರನು. ಯಾವುದರ ಈಶ್ವರನೂ ಆಗಲಾರನು. ಸರ್ವಜ್ಞತ್ವ, ಈಶ್ವರತ್ವ ಭಾವವುಳ್ಳ ಆತ್ಮವನ್ನು ಪ್ರಾಜ್ಞ ಎನ್ನುತ್ತಾರೆ; ತುರೀಯನೆಂದಲ್ಲ. ಪ್ರಾಜ್ಞನು ಸಕಲದ ಮೂಲ. ಸಕಲದ ಪ್ರೇರಕ. ಜಗದಿರವಿನ ಸಿದ್ಧಿಯ ಕಾರಣನು. ಆದ್ದರಿಂದ, ಅವನ ಶರೀರಕ್ಕೆ ಕಾರಣ–ಶರೀರವೆಂದು ಕರೆದಿದ್ದಾರೆ. ಅವನು ಸ್ವಯಂ ಸುಷುಪ್ತಾತ್ಮ ಇಲ್ಲವೆ ಕಾರಣಾತ್ಮನಾಗಿದ್ದಾನೆ. ತುರೀಯನು ಸಾಕ್ಷೀ ಚೈತನ್ಯನು. ಮತ್ತು ಕಾರಣ ಶರೀರನು. ಇಲ್ಲವೆ ಕಾರಣ-ಬ್ರಹ್ಮನು. ಬ್ರಾಹ್ಮಸ್ಫೋಟದ ಗುಣಾನ್ವಿತ, ವಿಶೇಷ ವಿಕಾಸವಾಗಿದ್ದಾನೆ. ಮತ್ತು ಈ ವಿಕಾಸವು ಅನೇಕ ಖಂಡ–ಖಂಡ, ಅನಂತ ವಿಕಾಸಗಳ ಮಾಧ್ಯಮದಿಂದ, ತನ್ನನ್ನು ಪರಮ ಚೈತನ್ಯದೊಂದಿಗೆ, ಮಹಾ ಮಿಲನದ ಕಾಮನೆಯಿಂದ ಸ್ಫುರಣದ ಹಾದಿಯಲ್ಲಿ ಕರೆದೊಯ್ಯುತ್ತದೆ. ಬ್ರಾಹ್ಮಸ್ಫೋಟದ ಗುಣಾನ್ವಿತ ಭಾವ

ಧಾರೆಯ ವಿಕಾಸದ ಅಂದರೆ, ಸಂಚರ ಕ್ರಿಯೆಯ, ಮೊದಲನೆಯ ಅವಸ್ಥೆಯ ಹೆಸರೇ ಕಾರಣ ಶರೀರ. ಅದರ ಅಭಿಮಾನೀ ಪುರುಷನೇ ಕಾರಣಾತ್ಮ. ಕಾರಣ ಶಬ್ದದ ಅರ್ಥವೆಂದರೆ, ಬೀಜ. ಇವನ ಶರೀರವು ವಿಶ್ವದ ಬೀಜವಾಗಿದೆ. ಆದ್ದರಿಂದ, ಇವನು ಕಾರಣಾತ್ಮನು. ಇಡೀ ವಿಶ್ವ-ವಿಕಾಸದ ಭಾವವು ಅವನ ಈ ಅವಸ್ಥೆಯಲ್ಲಿ ಗುಪ್ತವಾಗಿ ಇದೆ. ಮತ್ತು ಇದರಿಂದ ಇವನು ಈ ಎಲ್ಲ ಸತ್ತೆಗಳ ಮೂದ್ರಷ್ಟಾ ಆಗಿದ್ದಾನೆ. ಇವನೇ ಸರ್ವ ವಿಕಾಸಗಳ ಮೂಲಭಾವನೆಯ ನಿಯಂತ್ರಕನಾಗಿದ್ದಾನೆ. ಆದ್ದರಿಂದ ಇವನು ಸರ್ವಜ್ಞ. ಮತ್ತು ಸರ್ವೇಶ್ವರನಾಗಿದ್ದಾನೆ. ಪ್ರತಿ-ಸಂಚರ ಕ್ರಿಯೆಯ ಉಳಿದ ಅವಸ್ಥೆಯಲ್ಲಿ ಹೆಚ್ಚು ಕಡಿಮೆ ಸಂಚರದ ಮೊದಲಿನ ಅವಸ್ಥೆಯಂತೆಯೇ ಇರುತ್ತದೆ. ಆದರೆ, ಈ ಎರಡರಲ್ಲಿ ಮುಖ್ಯ ಭೇದವೆಂದರೆ, ಸಂಚರ ಕಾಲದಲ್ಲಿ ಕಾರಣಾತ್ಮಕ ಬೀಜವು ಅಂಕು ರೋದ್ಗಮದ ಸಂಭಾವ್ಯತೆಯಿಂದ ಕೂಡಿದೆ. ಆದರೆ, ಪ್ರತಿ ಸಂಚರದ ಕೊನೆಯ ಸ್ತರದಲ್ಲಿ, ಸರಿಯಾಗಿ, ಇದರ ವಿಪರೀತ ಸ್ಥಿತಿಯಿದೆ. ಅರ್ಥಾತ್ ಅಂಕುರೋದ್ಗಮದ ಅಭಾವದ ಕಾರಣ, ಅದು ಮೂಲ ಸತ್ತೆಯಲ್ಲಿ ಮರಳಿ ಬರುತ್ತದೆ. ಮರಳುವ ಈ ಮಾರ್ಗದ, ಕಾರಣ ಶರೀರವನ್ನು ವಿಶುದ್ಧ ವಿಚಾರದಿಂದ ಕಾರಣ ಶರೀರವೆನ್ನದೆ, ಸಾಮಾನ್ಯ ಶರೀರವೆಂದು ಕರೆಯುವುದು ಹೆಚ್ಚು ಸಂಗತವಾಗಿದೆ.

ತುರೀಯ ಬ್ರಹ್ಮನು (ನೃಸಿಂಹ ಇಲ್ಲವ ಪುರುಷೋತ್ತಮ) ಕಾರಣ ಶರೀರದೊಂದಿಗೆ ನಾಲ್ಕು ಪ್ರಕಾರದ ಯೋಗ ಇಲ್ಲವೆ ವಿನಿಯೋಗಗಳಲ್ಲಿ ನಿರತನಾಗಿರುತ್ತಾನೆ.

(೧) ಓತಯೋಗ. (೨) ಅನುಜ್ಞಾತಾಯೋಗ. (೩) ಅನಜ್ಞಾಯೋಗ. (೪) ಅವಿಕಲ್ಪಯೋಗ.

(೧) ಓತಯೋಗ:–

ಎಲ್ಲಿ ಬ್ರಹ್ಮನು ತುರೀಯ ಕಾರಣ-ಶರೀರದ ಜ್ಞಾತೃ ರೂಪದಲ್ಲಿ, ಸದಾದಿ ರೂಪದಲ್ಲಿ, ಎಲ್ಲೆಡೆಗೆ ವ್ಯಾಪ್ತನಾಗಿ, ಇರುವನೋ, ಅಲ್ಲಿಯ ಅವನ ಆ ಅವಸ್ಥೆಗೆ ಓತಯೋಗವೆಂದು ಕರೆಯುತ್ತಾರೆ. ಹೇಗೆಂದರೆ, ಸೂರ್ಯನ ಕಿರಣಗಳ ಮಾಧ್ಯಮದಿಂದ ತನ್ನದೇ ಗುಣಾತ್ಮಕ ವಿಕಾಸವಾದ ಪೃಥ್ವಿಯೊಂದಿಗೆ ಮುಕ್ತನಾಗಿ ಇರುತ್ತಾನೆ. ಓತಯೋಗವೂ ಸಹ ಇದೇ ತೆರನಾಗಿರುತ್ತದೆ. ಇಲ್ಲಿ ಸೂರ್ಯನ ಕಿರಣಗಳು ಸೂರ್ಯನ ವಿಶೇಷ ಅವಸ್ಥೆಗಳೇ ಆಗಿವೆ. ಮತ್ತು ಅದೇ ವಿಶೇಷ ಅವಸ್ಥೆಯ ಮಾಧ್ಯಮದಿಂದ, ಸೂರ್ಯನೇ ಪೃಥ್ವಿಯೊಂದಿಗೆ



ಯೋಗ-ಯುಕ್ತನಾಗಿರುತ್ತಾನೆ. ಈ ಕಿರಣಗಳು ಪೃಥ್ವಿ ಮತ್ತು ಇತರೇತರ ಗ್ರಹಗಳ ಅಣು, ಪರಮಾಣುವಿನಲ್ಲಿ ಒಳಸೇರಿ, ಅಂಗಾಂಗಿ ಭಾವದಿಂದ ಕೂಡಿಕೊಂಡಿದೆ. ಪುರುಷೋತ್ತಮನೂ ಸಹ, ಸರಿಯಾಗಿ ಇದೇ ರೀತಿ, ಸ್ಫುಟ ಜೀವಾತ್ಮ ಇಲ್ಲವೆ ಅಸ್ಫುಟ ಜೀವಾತ್ಮ (ಜಡ ಇಲ್ಲವೆ ಜಗತ್ತು) ರೊಂದಿಗೆ ತನ್ನ ಸಾಕ್ಷೀರೂಪದಲ್ಲಿ, ಅಂಗಾಂಗಿ ಭಾವದಿಂದ, ಅವುಗಳೊಂದಿಗೆ ಮುಕ್ತನಾಗಿದ್ದಾನೆ. ತುರೀಯದ ಈ ಯೋಗಯುಕ್ತ ಅವಸ್ಥೆಯನ್ನು ಓತಯೋಗವೆನ್ನುತ್ತಾರೆ. ಸಾಮಾನ್ಯ ಭಾವದಿಂದ ಯಾವುದನ್ನು ಓತಯೋಗವೆಂದು ಕರೆಯುತ್ತೇವೆಯೋ, ವ್ಯಾಪಕ ಭಾವದಿಂದ ಅದನ್ನೇ ಪ್ರೋತಯೋಗವೆಂದೂ ಕರೆಯುತ್ತಾರೆ.ಅಂದರೆ, ಯಾವ ಯೋಗದ ಮೂಲಕ ಅಣು (unit) ಸಾಕ್ಷಿತ್ವವು ಇರುವುದೋ, ಅದಕ್ಕೆ ಓತಯೋಗವೆಂದು ಹೆಸರು. ಇನ್ನೂ ಸಮಷ್ಟಿಯ (collectivity) ಸಾಕ್ಷಿತ್ವವು ಯಾವುದರ ಮೂಲಕ ಇರುವುದೋ, ಅದಕ್ಕೆ ಪ್ರೋತ ಎಂದು ಹೆಸರು.

ನೃಸಿಂಹನ ಕಾರಣ ಶರೀರದೊಂದಿಗೆ ಓತಯೋಗದಲ್ಲಿ ಮುಕ್ತನಾಗಿದ್ದಾನೆ; ಸೂರ್ಯನು ಕಾರಣ (ಪೃಥ್ವಿ) ದೊಂದಿಗೆ ಪ್ರೋತ ಯೋಗದಲ್ಲಿ (ಕಿರಣಗಳ ಮಾಧ್ಯಮದಿಂದ) ಮುಕ್ತನಾಗುತ್ತಾನೆ. ಪುರುಷೋತ್ತಮನು ಜ್ಞಾತೃಭಾವವಾಗಿರುವಾಗ, ಕಾರಣ-ಶರೀರವು ಜ್ಞೇಯ ಭಾವವಾಗಿರುತ್ತದೆ. ಜ್ಞಾತೃ ಭಾವವು ಅಕ್ಷರವಿರುವಲ್ಲಿ, ಕ್ಷರವು (ಅಂದರೆ ಸ್ವ-ರೂಪದಿಂದ ಸರಿದದ್ದು) ಜ್ಞೇಯ ಭಾವವಾಗುತ್ತದೆ. ಜ್ಞಾತೃ ಭಾವವು ಅಚ್ಯುತನಾಗಿದ್ದರೆ, ಚ್ಯುತವು (ಅಂದರೆ ಸ್ವರೂಪದಿಂದ ಚ್ಯುತವಾದುದು) ಜ್ಞೇಯ ಭಾವವಾಗುತ್ತದೆ. ಜ್ಞಾತೃ ಭಾವವು ಪರ ಇಲ್ಲವೆ ಪರಬ್ರಹ್ಮನಿರುವಲ್ಲಿ, ಜ್ಞೇಯಭಾವವು ಅಪರ ಇಲ್ಲವೆ ಅಪರ ಬ್ರಹ್ಮವಾಗಿರುತ್ತದೆ.

ಈ ಜ್ಞಾತೃಭಾವವು ಅಪರಿಚ್ಛಿನ್ನವಾಗಿರುತ್ತದೆ; ಮತ್ತು ಜ್ಞೇಯ ಭಾವವು ಪರಿಚ್ಛಿನ್ನವಾಗಿರುತ್ತದೆ.

(೨) ಅನುಜ್ಞಾತಾ ಯೋಗ:–

ಶರೀರದಲ್ಲಿ ತುರೀಯ ಬ್ರಹ್ಮನು ಓತಯೋಗದಿಂದ ಮುಕ್ತನಾಗಿರುವನೆಂದ ಮೇಲೆ, ಶರೀರವು ಸಹ ಬ್ರಹ್ಮವಲ್ಲವೇನು? ಇದೂ ಬ್ರಹ್ಮವೇ ಮತ್ತು ಜೀವಾತ್ಮನು ಕಾರಣ ಶರೀರದಲ್ಲಿ ಬ್ರಹ್ಮಭಾವವನ್ನು ಆರೋಪಿಸಿ, ಅದರತ್ತ ಧಾವಿಸಿದಾಗ, ಆ ಪ್ರಕಾರಾಂತರದಿಂದ ಕಾರಣ ಶರೀರದಲ್ಲಿಯೇ ತುರೀಯ ಭಾವವನ್ನು ಆರೋಪಿಸುತ್ತಾನೆ. ಕಾರಣಾತ್ಮನೇ ಬ್ರಹ್ಮ.

ಈ ಭಾವವು ತುರೀಯ ಅವಸ್ಥೆಯ ಮುಂಚಿನ ಭಾವವಾಗಿರುವ ಕಾರಣ, ತುರೀಯದ ಈ ಅವಸ್ಥೆಯನ್ನು ಅನುಜ್ಞಾತಾ ಯೋಗವೆನ್ನುತ್ತಾರೆ. ವ್ಯಾಪಕ ದೃಷ್ಟಿಯಿಂದ, ಪೃಥ್ವಿಯೊಂದಿಗೆ ಜನ್ಮ, ಸ್ಥಿತಿ ಮತ್ತು ಮೃತ್ಯುಗಳಿಗೆ ಸಂಬಂಧಿಸಿದ ಅಚ್ಛೇದ್ಯ ಸಂಪರ್ಕವನ್ನು ತಿಳಿದುಕೊಂಡು, ಸೂರ್ಯನನ್ನು ಪರಿಚಯಿಸಿಕೊಳ್ಳಬೇಕು. ವಾಸ್ತವದಲ್ಲಿ ಪೃಥ್ವಿಯು ಸವರ್ಯನಿಂದ ಧಾತುಗಳ ವಿಚಾರದಿಂದ ನೋಡಿದರೆ ಬೇರೆಯಾಗಿಲ್ಲ. ಈ ಅರಿವನ್ನು ಮೂಡಿಸುವ ಯೋಗಕ್ಕೆ ಅನುಜ್ಞಾತಾ ಯೋಗವೆಂದು ನಾವು ಕರೆಯುತ್ತೇವ.

ಈ ಅನುಜ್ಞಾತಾ ಯೋಗದಲ್ಲಿ, ಜ್ಞಾತೃ-ಜ್ಞೇಯ ಸಂಪರ್ಕವು ಸ್ಫುಟ ಭಾವದಿಂದ ಇರದಿರುವುದರಿಂದ ಸಹ, ಅರ್ಧ ಸ್ಫುಟ ಭಾವವಿರುತ್ತದೆ. ಆದ್ದರಿಂದ ಓತಯೋಗದಂತೆ ಇದನ್ನು ಸಹ ತುರೀಯದ ಅಂತಿಮ ಅವಸ್ಥೆಯೆಂದು ಹೇಳಲಾರೆವು.

(೩) ಅನುಜ್ಞಾ ಯೋಗ:-

ಪರಿಚ್ಛಿನ್ನ, ಸೋಪಾಧಿಕ ಇಲ್ಲವೆ ಸವಿಶೇಷ ಸತ್ತೆಯು, ಯಾವಾಗ ಧ್ಯಾನ ಯೋಗದಲ್ಲಿ, ಅಪರಿಚ್ಛಿನ್ನ, ನಿರುಪಾಧಿಕ ಇಲ್ಲವೆ ನಿರ್ವಿಶೇಷ ಭಾವಾತ್ಮಕ ಅವಸ್ಥೆಯಲ್ಲಿ ಉಪಹತನಾಗುತ್ತಾನೆ. ಇಲ್ಲವೆ ಅ ಭಾವವನು ತಾಳುವ ಪ್ರಯತ್ನ ನಡೆದಿರುತ್ತದೆ. ಇಂಥ ಅವಸ್ಥೆಯ ಭಾವವನ್ನು ಅನುಜ್ಞಾ ಯೋಗವೆನ್ನುತ್ತಾರೆ. ಅಂದರೆ, ಜ್ಞಾನ ಸಾಧನೆಯಲ್ಲಿ,ಪೃಥ್ವಿ ಮತ್ತು ಸೂರ್ಯರಲ್ಲಿ ಯಾವುದೇ ಧಾತುವಿಗೆ ಸಂಬಂಧಿಸಿದ ಇಲ್ಲವೆ ಸ್ವಭಾವಕ್ಕೆ ಸಂಬಂಧಿಸಿದ ಅಭೇದವನ್ನು ತಿಳಿದು ಪೃಥ್ವಿಯು ಸೂರ್ಯನ ಪರಿಚ್ಛಿನ್ನ ರೂಪವೆಂದು ಗ್ರಹಿಸುವ ಪ್ರಯತ್ನ ಮಾಡುತ್ತಾನೆ. ಈ ಯೋಗದಲ್ಲಿಯೂ ಸಹ, ದ್ವೈತ-ಭಾವವು ಅಸ್ಫುಟ ರೂಪದಲ್ಲಿ ಇರುತ್ತದೆ.

(೪) ಅವಿಕಲ್ಪ ಯೋಗ:-

ಇದರಲ್ಲಿ ಬೇರಾವ ಎರಡನೆಯ ಭಾವಕ್ಕೆ ಇಂಬಿಲ್ಲ. ಇಲ್ಲಿ ಸತ್ತೆಯು ಕೇವಲ ಏಕಾತ್ಮ ಪ್ರತ್ಯಯ ಸಾರವಾಗಿರುತ್ತದೆ. ಇಲ್ಲಿ ಆತ್ಮನು ಕೇವಲ ಜ್ಞಾನ ಸ್ವರೂಪನು. ಆತ್ಮನು ಈ ಅವಸ್ಥೆಯಲ್ಲಿ ಜ್ಞೇಯ, ಜ್ಞಾನ, ಜ್ಞಾತೃ ಈ ವಿಭಿನ್ನ ಭಾವಗಳ ಸರ್ವ ಪ್ರಕಾರದ ಗುಣಗಳ ಛಾಯೆಯೆಂದು ಗ್ರಹೀತವಾಗಿರುತ್ತಾನೆ. ಈ ಅವಿಕಲ್ಪ ಅವಸ್ಥೆಯಲ್ಲಿ ಇರುವಿಕೆಯು, ನಿರ್ಬೀಜ ಕೈವಲ್ಯ ಸ್ಥಿತಿ, ಇಲ್ಲವೆ ನಿರ್ವಿಕಲ್ಪ ಸಮಾಧಿಯ ಶಾಶ್ವತ ಭಾವವಾಗಿದೆ.



ಈ ತುರೀಯ ಬ್ರಹ್ಮನನ್ನೂ ಸ್ಥೂಲಪ್ರಜ್ಞ ಎಂದು ಕರೆಯಲಾರೆವು. ಏಕೆಂದರೆ, ಸ್ಥೂಲ ವಿಷಯದಿಂದ ಕೂಡಿದ ಬುದ್ಧಿಯಿಂದ ಇಲ್ಲವೆ ಜ್ಞಾನದಿಂದ, ಅವನು ಜ್ಞೇಯವಾಗಲಾರನು. ಅವನನ್ನು ಸೂಕ್ಷ್ಮ ಪ್ರಜ್ಞ ಎಂದೂ ಕರೆಯಲಾರೆವು. ಏಕೆಂದರೆ, ಸೂಕ್ಷ್ಮದಿಂದ ಸೂಕ್ಷ್ಮತಮ ಬುದ್ಧಿ ಇಲ್ಲವೆ ಸಂಕಲ್ಪ-ವಿಕಲ್ಪಾತ್ಮಕ ಮನೀಷೆಯ ಮೂಲಕವೂ ಅವನು ಜ್ಞೇಯವಾಗಲಾರನು. ಇನ್ನು ಅವನನ್ನು ಉಭಯಪ್ರಜ್ಞ ಎಂದೂ ಕರೆಯಲಾರೆವು. ಅರ್ಥಾತ್ ಸ್ಥೂಲ ಬುದ್ಧಿಯೂ ಇಲ್ಲ; ಸೂಕ್ಷ್ಮ ಬುದ್ಧಿಯೂ ಇಲ್ಲ. ಮತ್ತು ಈ ಎರಡರ ನಡುವಿನ ಯಾವುದೋ ಭಾವದಿಂದ ಅವನು ಜ್ಞೇಯನಾಗುವನೆಂದೂ ಸಹ ಅಲ್ಲ. ಜ್ಞಾನ ಮತ್ತು ಬುದ್ಧಿಯ ಘನತ್ವದ ಅವಸ್ಥೆಯಲ್ಲಿ ಅವನು ಪ್ರಾಪ್ಯನಾಗಿದ್ದಾನಷ್ಟೇ. ಇಲ್ಲವೆ ಅವನು ಜ್ಞಾನ ಮತ್ತು ಬುದ್ಧಿಗಳ ಘನತ್ವದ ಅವಸ್ಥೆಯೇ ಆಗಿದ್ದಾನೆ; ಎಂದು ಹೇಳುವುದೂ ಸರಿಯಾಗದು. ಏಕೆಂದರೆ, ಅವನ ಅವಸ್ಥೆಯು ವಾಸ್ತವವಾಗಿ, ಪ್ರಜ್ಞಾನ ಘನ ಅವಸ್ಥೆಯಾದರೂ ಸಹ, ಅದರಲ್ಲಿ ಸರ್ವಜ್ಞತ್ವ ಮತ್ತು ಸರ್ವೇಶ್ವರತ್ವದ ಬೀಜವಿದ್ದೇ ಇರುತ್ತದೆ. ಹೀಗೆ ಅವನು ಅವಿಕಲ್ಪ ಇಲ್ಲವೆ ನಿರ್ಬೀಜನಂತೂ ಅಲ್ಲವೇ ಅಲ್ಲ; ತುರೀಯನೂ ಸಹ ಅಲ್ಲ. ಪ್ರಜ್ಞಾನಘನ ಅವಸ್ಥೆಯನ್ನು ನಾವು ಕಾರಣ ಮನ ಎನ್ನುತ್ತೇವೆ. ಇದುವೇ ವ್ಯಷ್ಟಿ-ಸಮಷ್ಟಿ ಭೇದದಿಂದ ಪ್ರಾಜ್ಞ ಮತ್ತು ಸೂತ್ರೇಶ್ವರ ಹೆಸರಿನಿಂದ ಪರಿಚಿತವಿದೆ. ವಾಸ್ತವವಾಗಿ ಯಾವುದೂ ಸ್ಥೂಲ ಪ್ರಜ್ಞೆಯೂ ಅಲ್ಲ; ಸೂಕ್ಷ್ಮ ಪ್ರಜ್ಞೆಯೂ ಅಲ್ಲ; ಉಭಯ ಪ್ರಜ್ಞೆಯೂ ಅಲ್ಲ. ಪ್ರಜ್ಞಾನಘನವೂ ಅಲ್ಲ; ಎಂದಾದರೆ, ಮನಸ್ಸು ಇಲ್ಲವೆ ಮನನ ಕ್ರಿಯೆಗಳೊಂದಿಗೆ ಅದರ ಯಾವುದೇ ಸಂಬಂಧವಿರದು. ಈ ಸತ್ತೆಯು ಮನದ ಪರಿಧಿಯಾಚೆಯದು. ಅದು ಯಾವಾಗಲೂ ವಿಶೇಷಣಗಳಿಂದ ಮುಕ್ತವಾಗಿದೆ. ಅಥವಾ ಅದರ ಜ್ಞಾನ ಇಲ್ಲವೆ ಬುದ್ಧಿಯಲ್ಲಿ ಸಾಧಾರಣತ್ವ, ಅಸಾಧಾರಣತ್ವ, ಘನತ್ವ, ಅಘನತ್ವ ಇತ್ಯಾದಿ ಭಾವಗಳಿಲ್ಲ. ಅದು ಮನದ ಪರಿಧಿಯಾಚೆಗಿರುವುದರಿಂದ, ಇಂಥ ಮಾತನ್ನು ಸಹ ಹೇಳಲಾಗದು. ಇಷ್ಟೆಲ್ಲ ಹೇಳುವುದರ ಮಥಿತಾರ್ಥವೇನೆಂದರೆ, ಅವನಿಗೆ ಧನಾತ್ಮಕ ಇಲ್ಲವೆ ಋಣಾತ್ಮಕ ವಿಶೇಷಣ ನೀಡುವುದು. ಮಾನಸ ಭೂಮಿಯ ಅಧಿಕಾರ ಕ್ಷೇತ್ರದ ಆಚೆಗಿರುವುದರಿಂದ, ಅವನನ್ನು ಕಾಣಲಾರೆವು. ಅದೇ ರೀತಿ, ಜಗತ್ತಿನ ಕಾರ್ಯಗಳಲ್ಲಿ ಮತ್ತು ಹತ್ತಿಪ್ಪತ್ತು ವಸ್ತುಗಳಂತೆ ಅವನನ್ನು ಬಳಸಿಕೊಳ್ಳಲಾರೆವು. ಆದ್ದರಿಂದ ಗ್ರಹಣ-ವರ್ಜನಗಳನ್ನೂ ಸಹ ಮಾಡುವಂತಿಲ್ಲ. ಲಕ್ಷಣಕ್ಕೆ ಸಂಬಂಧಿಸಿದ ಭೇದದ ಕಾರಣ, ವಸ್ತುಭೇದವನ್ನು

ನಿರ್ಧರಿಸಲಾಗುತ್ತದೆ. ಮನವು ಅವನ ಲಕ್ಷಣವನ್ನು ನಿರ್ಧರಿಸಲಾರದು. ಆದ್ದರಿಂದ, ಅವನು ವಸ್ತುವಲ್ಲ; ಅವಸ್ತುವೂ ಅಲ್ಲ. ಈ ತುರೀಯ ಸತ್ತೆಯು ಮಾನಸಾತೀತ ಇರುವುದರಿಂದ ಧ್ಯಾನದಲ್ಲಿಯೂ ಸಹ ಅಧಿಗಮ್ಯನಾಗನು. ಅವನ ಸ್ವರೂಪವನ್ನು ವರ್ಣಿಸಲೂ ಬಾರದು. ಏಕೆಂದರೆ, ವಸ್ತು ಭಾಷೆಯು ಅವಸ್ತುವನ್ನು ಯಾವ ಪ್ರಕಾರ ವರ್ಣಿಸಬಲ್ಲದು? ಈ ತುರೀಯ ಬ್ರಹ್ಮವು ಪ್ರತಿಯೊಂದು ವಸ್ತುವಿನ ಅಸ್ತಿತ್ವದ ಅರಿವಿನ ಸತ್ತೆಯ ಹಿಂದೆ ಸತ್-ಸ್ವರೂಪದಲ್ಲಿ ಇದೆ. ಅವನು ತತ್ತ್ವವಿಶ್ಲೇಷಣ ಮತ್ತು ತತ್ತ್ವದರ್ಶನದ ಅಂತಿಮ ಪರಿಣತಿಯಲ್ಲಿ. ಸಾರ ಸ್ವರೂಪದಲ್ಲಿ, ಇರುದ್ದಾನೆ. ಅವನು ಶಿವನು. ಭೂಮಾನಂದನು. ಅವನಿಗಾಗಿ ಯಾವುದಾದರೂ ಸಂಖ್ಯಾವಾಚಕವನ್ನು ಬಳಸುವುದಾದರೆ 'ಒಂದು' ಎನ್ನಬಹುದು. ಅವನ ಭಾವದಲ್ಲಿ ಒಂದಕ್ಕಿಂತ ಹೆಚ್ಚಿನದಕ್ಕೆ ಸ್ಥಾನವಿಲ್ಲ. ಅವನು ದ್ವೈತ ಭಾವ ರಹಿತನಾಗಿರುವುದರಿಂದ, ವಿಕಾರ ರಹಿತನಾಗಿದ್ದಾನೆ. ಏಕೆಂದರೆ, ಒಂದು ವಸ್ತುವಿನ ಮೇಲೆ ಇತರ ವಸ್ತುಗಳ ಶಕ್ತಿಯ ಪ್ರಯೋಗದ ಫಲವಾಗಿ ವಿಕಾರವು ಹುಟ್ಟಿಕೊಳ್ಳುತ್ತದೆ. ಅವನ ಭಾವವೊಂದೇ ಸಾರ್ಥಕ ಭಾವವಾಗಿದೆ. ಅಂದರೆ, ನಾಲ್ಕನೆಯ ಪಾದದ, ಮೊದಲಿನ ಮೂರು ಪಾದಗಳು ಪರಮ ಸತ್ಯವೇನಲ್ಲ. ನಾಲ್ಕನೆಯ ತುರೀಯವೊಂದೇ ಕೇವಲ ಸತ್ಯವಾಗಿದೆ. ಜಾಗ್ರತ, ಸ್ವಪ್ನ ಮತ್ತು ಸುಷುಪ್ತಿ ಅವಸ್ಥೆಗಳು, ಪಾರಮಾರ್ಥಿಕ ಸತ್ಯಗಳಲ್ಲ. ಏಕೆಂದರೆ, ಅವುಗಳಲ್ಲಿ ಗುಣಗಳ ಛಾಯೆಯಿರುತ್ತದೆ. ಇದರ ಅಸ್ತಿತ್ವಿಕ ಸತ್ತೆಯು, ಸ್ಥೂಲ, ಸೂಕ್ಷ್ಮ ಮತ್ತು ಕಾರಣ ರೂಪೀ ಜ್ಞೇಯಕ್ಕಿಂತ ಊರ್ಧ್ವದಲ್ಲಿ ನಿರ್ಧರಿಸಲ್ಪಟ್ಟಿದೆ, ಆದ್ದರಿಂದ, ಮೊದಲು ಹೇಳಿದ ಮೂರು ಅವಸ್ಥೆಗಳು ಇಲ್ಲವೆ ಆತ್ಮನ ಮೊದಲ ಮೂರು ಪಾದಗಳು, ಬೇರೆಯದನ್ನು ಅವಲಂಬಿಸಿರುವುದರಿಂದ ಆಪೇಕ್ಷಿಕ ಸತ್ಯವಾಗಿದೆ. ಮತ್ತು ನಾಲ್ಕನೆಯ ಪಾದವಾದ ತುರಿಯವು ಬೇರೆಯದನ್ನು ಅಪೇಕ್ಷಿಸದ (ಅನ್ಯ ನಿರಪೇಕ್ಷ) ಕಾರಣ ಪಾರಮಾರ್ಥಿಕ ಸತ್ಯವಾಗಿದೆ; ಪೂರ್ಣ ಸತ್ಯ (absolute truth) ವಾಗಿದೆ. ಅದರಲ್ಲಿ ನೆಲೆ ಕಂಡುಕೊಂಡು, ಅಮೃತತ್ವವನ್ನು ಅರ್ಜಿಸು. ಅವನೇ ನಿಜವಾದ ಆತ್ಮನು. ಒಂದು ವೇಳೆ ಯಾವುದಾದರೂ ಅವಸ್ಥೆಯು ಕಾಮ್ಯವಾಗಿದ್ದರೆ, ಅಂಥ ಅವಸ್ಥೆಯು ಇದೊಂದೇ ಸರಿ. ಇದುವೇ ತುರೀಯ ಅವಸ್ಥೆ. ಈ ಅವಸ್ಥೆಯಲ್ಲಿ ಜೀವಾತ್ಮ ಮತ್ತು ಪರಮಾತ್ಮರಲ್ಲಿ ಯಾವ ಭೇದವೂ ಇರಲಾರದು. ಈ ಅವಸ್ಥೆಯಲ್ಲಿ ಕರ್ಮ, ಅಕರ್ಮ ಮತ್ತು ವಿಕರ್ಮಗಳಿಗೆ ಇಂಬಿಲ್ಲ. ಇಲ್ಲಿ ಈ ಭಾವವೇ ಆತ್ಮನ ಸ್ವಭಾವವಾಗಿದೆ; ಸ್ವರೂಪವಾಗಿದೆ. ಜಾಗ್ರತ ಅವಸ್ಥೆ



ಯಲ್ಲಿ ಸಮಷ್ಟಿ ವಿರಾಟ, ವ್ಯಷ್ಟಿ, ವಿಶ್ವ, ಸ್ವಪ್ನಾವಸ್ಥೆಯಲ್ಲಿ ಸಮಷ್ಟಿ ಹಿರಣ್ಯಗರ್ಭ, ವ್ಯಷ್ಟಿ ಪ್ರಜ್ಞನಾಗಿದ್ದಾನೆ. ಆದರೆ ಈ ತುರೀಯಾವಸ್ಥೆಯಲ್ಲಿ ಗುಣ ಮತ್ತು ಗುಣಗಳ ಛಾಯೆಯು ಸಂಪೂರ್ಣವಾಗಿ ನಷ್ಟವಾಗುವುದರಿಂದ, ಈ ಪ್ರಕಾರದ ಭೇದಗಳಿಂದ ರಹಿತವಾಗಿರುವುದರಿಂದ ಸಮಷ್ಟಿ ಮತ್ತು ವ್ಯಷ್ಟಿ ಭಾವಗಳೇ ಇಲ್ಲಿ ಇರುವುದಿಲ್ಲ. ಈ ಅವಸ್ಥೆಯಲ್ಲಿ, ಅವನು ಸಮಷ್ಟಿ–ವ್ಯಷ್ಟಿಗಳೇನೂ ಉಳಿಯದು ಒಂದು ಅದ್ವಿತೀಯ ಈಶ್ವರಗ್ರಾಸವೆಂಬ ಹೆಸರಿನಿಂದ ಪರಿಚಿತನಾಗಿದ್ದಾನೆ. ಕೇವಲ ಸೂಕ್ಷ್ಮತಮ 'ನಾನು ತನ'ದಲ್ಲಿ, ಆತ್ಮದಲ್ಲಿಯೇ ಇದು ಹೊಳೆಯುತ್ತದೆ. ಇದು ಕೇವಲ ಸಾಧನೆಯ ಸಂಪದ; ತರ್ಕ–ವಿಜ್ಞಾನದಿಂದ ಅಲಭ್ಯ. ಇದರಲ್ಲಿ ನೆಲೆಸುವುದರಿಂದ ಮಾತ್ರ ಜಾಗ್ರತ, ಸ್ವಪ್ನ ಮತ್ತು ಸುಷುಪ್ತಿಗಳು ಇಲ್ಲದಂತಾಗುತ್ತವೆ. ಅರ್ಥಾತ್, ವಾಸ್ತವದಲ್ಲಿ, ಜಾಗ್ರತ, ಸ್ವಪ್ನ ಮತ್ತು ಸುಷುಪ್ತಿಗಳು ಕೇವಲ ಕಲ್ಪನೆಗಳು, ಕೇವಲ ಮೊಯೆ. ಕೇವಲ 'ಅಸತ್, ಭಾವದ 'ಸತ್' ಪ್ರತೀತಿಗಳಾಗಿವೆಯಷ್ಟೆ. ಪಂಚ ಭೂತಾತ್ಮಕವಾದ ಸಮಸ್ತ ಜಗತ್ತು ಸಕಲ ಪ್ರಪಂಚತಗಳ ಸಮ ಸಮಾನವಾಗಿದೆ. ಇದರಲ್ಲಿಯೇ ಜಾಗ್ರತ, ಸ್ವಪ್ನ ಮತ್ತು ಸುಷುಪ್ತಿ, ಜೀವಾತ್ಮ ಮತ್ತು ಪರಮಾತ್ಮ ಇವರ ಛಾಯೆಗಳನ್ನು ಜನರು ಕಾಣುತ್ತಾರೆ.

ಇದು ಈಶ್ವರ ಗ್ರಾಸವಾಗಿದೆ. ಜಾಗ್ರದಾವಸ್ಥೆಗಿಂತ ಸುಷುಪ್ತಿ ಅವಸ್ಥೆಯ ಪರಿಧಿಯು ಬೃಹತ್ತರವಾಗಿದೆ. ಮತ್ತು ಸ್ವಪ್ನಾವಸ್ಥೆಗಿಂತ ಸುಷುಪ್ತಿ ಅವಸ್ಥೆಯ ಪರಿಧಿಯು ಇನ್ನಷ್ಟು ಬೃಹತ್ತಾಗಿದೆ. ಈ ತುರೀಯ ಅವಸ್ಥೆಯು ಅದೇ ಹೆಚ್ಚು ಬೃಹತ್ತಾದ ಸುಷುಪ್ತಾವಸ್ಥೆಯನ್ನೇ ಮುಚ್ಚಿಬಿಡುತ್ತದೆ. ಆದ್ದರಿಂದ ತುರೀಯ ಅವಸ್ಥೆಯು ಸರ್ವ ಬೃಹತ್ತಾಗಿದೆ; ಸರ್ವ ಗ್ರಾಸಿಯಾಗಿದೆ. ಸುಷುಪ್ತಿಯ ಅಭಿಮಾನಿಯಾದ ಪರಮ ಪುರುಷನು (ಈಶ್ವರ) ಸಹ, ಇದರಲ್ಲಿ ಗ್ರಸ್ತನಾಗಿದ್ದಾನೆ. ಆದ್ದರಿಂದ ಇದರ ಹೆಸರು 'ಈಶ್ವರ ಗ್ರಾಸ' ಎಂದಿದೆ.

| ವ್ಯಷ್ಟಿ ಭಾವ | ಸಮಷ್ಟಿ ಭಾವ |
| --- | --- |
| ಜಾಗ್ರದಾವಸ್ಥೆ ಇಲ್ಲವೆ ಸ್ಥೂಲಾವಸ್ಥೆ | ಕ್ಷೀರಸಮುದ್ರ ಇಲ್ಲವೆ ಕ್ಷೀರಾಬ್ಧ |
| ಸ್ವಪ್ನಾವಸ್ಥೆ ಇಲ್ಲವೆ ಸೂಕ್ಷ್ಮಾವಸ್ಥೆ | ಗರ್ಭೋದಕ |
| ಸುಷುಪ್ತಾವಸ್ಥೆ ಇಲ್ಲವೆ ಕಾರಣಾವಸ್ಥೆ (ಬೀಜ) | ಕಾರಣಾರ್ಣವ |
| ಜಾಗ್ರದಾವಸ್ಥೆಯಲ್ಲಿ–ವಿಶ್ವ | ಕ್ಷೀರಸಮುದ್ರದಲ್ಲಿ ವಿರಾಟ |
| ಸ್ವಪ್ನಾವಸ್ಥೆಯಲ್ಲಿ–ತೈಜಸ | ಗರ್ಭೋದಕದಲ್ಲಿ–ಹಿರಣ್ಯಗರ್ಭ |

ಸುಷುಪ್ತಾವಸ್ಥೆಯಲ್ಲಿ–ಪ್ರಾಜ್ಞ ಕಾರಣಾರ್ಣವದಲ್ಲಿ–ಈಶ್ವರ ಇಲ್ಲವೆ ಸೂತ್ರೇಶ್ವರ

ತುರೀಯಾವಸ್ಥೆಯಲ್ಲಿ ಈಶ್ವರ ಗ್ರಾಸ.

ಈ ತುರೀಯಾವಸ್ಥೆಯು ಸರ್ವ ಗುಣಗಳಿಗೆ ಅತೀತವಾಗಿದೆ. ತುರೀಯದ ಬಣ್ಣನೆಯನ್ನು ಯಾವ ಭಾಷೆಯಿಂದಲೂ ಮಾಡಲಾರೆವು. ಶಾಸ್ತ್ರದಲ್ಲಿ ಬರೀ ಅದನ್ನು ತಿಳಿಸುವ ಪ್ರಯತ್ನವನ್ನಷ್ಟೇ ಮಾಡಿದ್ದಾರೆ. ಆದರೆ ಅದನ್ನು ತಿಳಿಸುವ ಭಾಷೆಯು ಶಾಸ್ತ್ರದ ಅಧಿಕಾರದಲ್ಲಿಲ್ಲ. ತುರೀಯ ಭಾವದಲ್ಲಿ ಅಭಿಮಾನವಂತೂ ಇರದು. ತುರೀಯದ ನಾಲ್ಕನೆಯ ಪಾದದಲ್ಲಿ, ಅರ್ಥಾತ್ ಅವಿಕಲ್ಪದಲ್ಲಿ, ಸಾಕ್ಷಿತ್ವಕ್ಕೂ ಸಹ,ತಿಲಮಾತ್ರ ಅವಕಾಶವಿಲ್ಲ. ಅಸ್ತಿನಾಸ್ತಿಗಳ ಅರಿವು ಹೊಂದಿದ ಮನವು ಈ ತುರೀಯವನ್ನು ತನ್ನ ಅಳವಿನಲ್ಲಿ ತರಲು ಎಷ್ಟೆ ತಲೆ ಹಾಕಿದರೂ ಇದನ್ನು ಗ್ರಹಿಸಲಾರದು. ಇದನ್ನು ಪಡೆಯಬೇಕಾದರೆ ಮಾಡಬೇಕಾದುದೊಂದನ್ನೇ. ಅದುವೇ ಆತ್ಮನಿವೇದನೆಯ ಸಾಧನೆ. ಇದನ್ನು ಪಡೆಯಲು ಬೇಕಾದುದೆಂದರೆ ಆತ್ಮಸಮರ್ಪಣವೊಂದೇ. ಒಂದಾಣೆಯನ್ನು ಕೈಯಲ್ಲಿ ಇರಿಸಿಕೊಂಡರೂ ಕೆಲಸವಾಗದು.

"ಶುಭಮಸ್ತು"

ಅಗ್ರಹಾಯಣ: ಪೂರ್ಣಿಮೆ ೧೯೫೬